₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಶನಿವಾರ 09.11.2024 ಸಂಪುಟ: 67 ಸಂಚಿಕೆ: 184 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಬಿಜೆಪಿ ಭೀಷ್ಮನಿಗೆ 97

ಬಿಜೆಪಿ ಹಿರಿಯ ನಾಯಕ, ಮಾಜಿ ಉಪಪ್ರಧಾನಿ ಎಲ್.ಕೆ.ಅಡ್ವಾಣಿಯವರು ಶುಕ್ರವಾರ 97ನೇ ವರ್ಷಕ್ಕೆ ಕಾಲಿಟ್ಟಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರು ಅವರ ನಿವಾಸಕ್ಕೆ ತೆರಳಿ ಶುಭಾಶಯ ಕೋರಿದರು.

ಪುಟ ತೆರೆದಂತೆ...

ಸೋರಸ್ ಬುಡಕ್ಕೆ ಬೆಂಕಿಯಿಟ್ಟ ಮಸ್ಕ್
ವೀಕೆಂಡ್ ವಿತ್ ಮೋಹನ್
ಮೋಹನ್ ವಿಶ್ವ
ಸಂ.ಪುಟ | 6

ಕಾಳುಗಳ ಮೊಳಕೆ, ನಿಷೇಧ ಇದರ ಬಳಕೆ
ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ
ಡಾ.ಸಾಧನಶ್ರೀ
ಸಂ.ಗಮ | 7

ದಾರಿದೀಪೋಕ್ತಿ

ನಮ್ಮ ಜೀವನದಲ್ಲಿ ನೆನಪಿನಲ್ಲಿ ಉಳಿಯುವ ಪಾಠಗಳನ್ನು ನಾವು ಶಾಲಾ, ಕಾಲೇಜುಗಳ ಕ್ಲಾಸ್ ರೂಮುಗಳಲ್ಲಿ ಕಲಿಯುವುದಿಲ್ಲ. ನಾವು ಮಾಡಿದ ಪ್ರಮಾದಗಳಿಂದ ಕಲಿಯುತ್ತೇವೆ. ಜೀವನದಲ್ಲಿ ಪ್ರಮಾದ ಮಾಡಿದಾಗ ಕುಗ್ಗಬೇಡಿ. ಅದರಿಂದ ಪಾಠ ಕಲಿತು, ಇನ್ನಷ್ಟು ಆತ್ಮವಿಶ್ವಾಸದಿಂದ ಮುನ್ನಡೆಯಿರಿ.

ವಕ್ರತುಂಡೋಕ್ತಿ

'ಜೀವನದಲ್ಲಿ ಯಾರನ್ನೂ ನಂಬಬೇಡಿ' ಎಂದು ಹಚ್ಚೆ ಬರೆಯಿಸಿಕೊಂಡವರನ್ನು ನಂಬಬಾರದು. ಕಾರಣ ಹಾಗೆ ಬರೆಯಿಸಿ ಕೊಂಡವರು ಹಚ್ಚೆ ಹಾಕುವವರನ್ನು ನಂಬಿರುತ್ತಾರೆ.

ಮಾತಂದ್ರೆ ಮಾತು

ಸಂವಿಧಾನದ 370ನೇ ವಿಧಿಯಡಿ ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನವನ್ನು ಮತ್ತೆ ನೀಡಲು ಜಗತ್ತಿನ ಯಾವ ಶಕ್ತಿಗೂ ಸಾಧ್ಯವಿಲ್ಲ. ಜಮ್ಮು ಮತ್ತು ಕಾಶ್ಮೀರ ಒಳಗೊಂಡಂತೆ ಭಾರತದೆಲ್ಲೆಡೆ ಅಂಬೇಡ್ಕರ್ ಅವರ ಸಂವಿಧಾನವನ್ನು ಮಾತ್ರ ಅನುಸರಿಸಲಾಗುತ್ತದೆ ಎಂಬ ಭರವಸೆಯನ್ನು ನಿಮಗೆ ನೀಡುತ್ತಿದ್ದೇನೆ.

– ನರೇಂದ್ರ ಮೋದಿ
ಪ್ರಧಾನಿ

ಮೂರೂ ಪಕ್ಷಗಳಿಗೆ ಪ್ರತಿಷ್ಠೆಯಾಗಿರುವ ಮೂರು ಕ್ಷೇತ್ರಗಳ ಉಪಚುನಾವಣೆಗೆ ನಾಲ್ಕು ದಿನಗಳಷ್ಟೇ ಬಾಕಿಯಿದೆ. ಬಹಿರಂಗ ಪ್ರಚಾರಕ್ಕೆ ಇನ್ನೆರಡು ದಿನ ಬಾಕಿಯಿದೆ. ರಾಜ್ಯ ರಾಜಕೀಯದ ಹಿರಿಯ ನಾಯಕರು ಈ ಮೂರು ಕ್ಷೇತ್ರಗಳಲ್ಲಿಯೇ ಗಿರಕಿ ಹೊಡೆಯುತ್ತಿದ್ದು, ತಮ್ಮ ತಮ್ಮ ಅಭ್ಯರ್ಥಿಗಳ ಗೆಲುವಿನ ಬಗ್ಗೆ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ತಮ್ಮ ಪಕ್ಷದ ಅಭ್ಯರ್ಥಿ ಪರ ಮತ ಯಾಚಿಸುವುದಕ್ಕಿಂತ ಹೆಚ್ಚಾಗಿ, ಎದುರಾಳಿ ಪಕ್ಷದ ವಿರುದ್ಧ ವಾಗ್ಬಾಣಗಳನ್ನು ಬಿಟ್ಟು ಮೂಲಕ ಉಪಸಮರದಲ್ಲಿ ಮುನ್ನಡೆ ಕಾಯ್ದುಕೊಳ್ಳಲು ಶತಾಯಗತಾಯ ಪ್ರಯತ್ನದಲ್ಲಿದ್ದಾರೆ.

ಕಾವೇರಿದ ಉಪಸಮರ ಕಣ

ಸಂಡೂರಿನಲ್ಲಿ ಮಾಜಿ-ಹಾಲಿಗಳ ವಾಗ್ದಾಳಿ

ಬಳ್ಳಾರಿ: ಎರಡೂ ಪಕ್ಷಗಳ ಅಭ್ಯರ್ಥಿಗಳ ಸಮಬಲ ಹಾಗೂ ದೌರ್ಬಲ್ಯವನ್ನು ಹೊಂದಿರುವ ಕ್ಷೇತ್ರ ಸಂಡೂರು. ದಶಕದ ಬಳಿಕ ಬಳ್ಳಾರಿ ಜಿಲ್ಲೆಗೆ ಜನಾರ್ದನ ರೆಡ್ಡಿ ಆಗಮನವಾಗುವ ಮೂಲಕ ಬಿಜೆಪಿಗೆ ಬಲ ಹೆಚ್ಚಾಗಿದ್ದರೆ, ಇತ್ತ ಕಾಂಗ್ರೆಸ್‌ನೊಂದಿಗೆ ಇಡೀ ರೆಡ್ಡಿ ವಿರೋಧಿ ಬಣ ನಿಂತಿದೆ. ಶುಕ್ರವಾರ ಸಂಡೂರಿಗೆ ಹಾಲಿ ಹಾಗೂ ಮಾಜಿ ಮುಖ್ಯಮಂತ್ರಿಗಳಿಬ್ಬರು ಭೇಟಿ ನೀಡುವ ಮೂಲಕ ಪರಸ್ಪರ ವಾಗ್ದಾಳಿ ನಡೆಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಸಂಡೂರಿನಲ್ಲಿ ಮಾತನಾಡಿ, ಬಳ್ಳಾರಿಯಲ್ಲಿ ಮತ್ತೆ ಜನಾರ್ದನ ರೆಡ್ಡಿ ಪಟಾಲಂ ಬೆಳೆಯಲು ಬಿಡಬೇಡಿ ಎಂದು ಮತದಾರರಿಗೆ ಮನವಿ ಮಾಡಿದ್ದಾರೆ. ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿ ಜಿಂದಾಲ್‌ಗೆ ಕಾಲಿಟ್ಟರೂ ಜಿಲ್ಲಾಮಟ್ಟದ ಅಧಿಕಾರಿಗಳು ಯಡಿಯೂರಪ್ಪ ಅವರನ್ನು ಕಾಣಲು ಬರಲಿಲ್ಲ. ಆ ಮಟ್ಟದಲ್ಲಿ ಅಧಿಕಾರಿಗಳಲ್ಲಿ ಭಯ, ಭೀತಿ ಸೃಷ್ಟಿ ಮಾಡಿದ್ದರು. ಏನಾದರೂ ಜನಾರ್ದನ ರೆಡ್ಡಿ ಪಟಾಲಂ ಬೆಳೆದರೆ ಮತ್ತೆ ಅದೇ ಭೀತಿ, ಭಯದಲ್ಲಿ ಬಳ್ಳಾರಿ ನರಳಬೇಕಾಗುತ್ತದೆ. ಆದ್ದರಿಂದ ಇದಕ್ಕೆ ಅವಕಾಶ ಕೊಡಬೇಡಿ. ಬಿಜೆಪಿಯನ್ನು ಸೋಲಿಸಿ ಬಳ್ಳಾರಿಯನ್ನು ಉಳಿಸಿ ಎಂದು ಮನವಿ ಮಾಡಿದರು.

ಸಿದ್ದರಾಮಯ್ಯ ಹೇಳಿದ್ದೇನು?

- ಪಾದಯಾತ್ರೆ ಬಂದಾಗ ನನಗೆ ಬಳ್ಳಾರಿ ಪ್ರವೇಶಿಸಲು ಬಿಡಲಿಲ್ಲ
- ಒಂದು ಮನೆಯಲ್ಲಿ ನೀರು ಕೊಡಲಿಲ್ಲ; ಆ ಪ್ರಮಾಣದಲ್ಲಿ ರೆಡ್ಡಿ ಭಯ ಸೃಷ್ಟಿಸಿದ್ದರು
- ಭಯಮುಕ್ತ ಬಳ್ಳಾರಿ ಮಾಡಿದ್ದು ಕಾಂಗ್ರೆಸ್ ಎಂಬುದು ಮರೆಯಬಾರದು
- ನಾನಿನ್ನೂ ಮೂರುವರೆ ವರ್ಷ ಸಿಎಂ ಆಗಿರುತ್ತೇನೆ; ಬಿಜೆಪಿಯ ಅಪಪ್ರಚಾರಕ್ಕೆ ಕಿವಿಕೊಡಬೇಡಿ
- ಸಂಡೂರಿನಲ್ಲಿ ಅಭಿವೃದ್ಧಿಯಾಗಿದ್ದರೆ ಅದು ಕಾಂಗ್ರೆಸ್ ಸರಕಾರದಿಂದ

ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ, ಹಣ, ಹೆಂಡ, ಅಧಿಕಾರದ ಬಲದಿಂದ ಹಾಗೂ ಜಾತಿ ವಿಷಬೀಜ ಬಿತ್ತಿ ರಾಜಕಾರಣ ಮಾಡುವ ಕಾಲ ಹೋಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರೇ, ಇವತ್ತು ಜನ ಜಾಗೃತರಾಗಿದ್ದಾರೆ. ನಿಮ್ಮ ಮೋಸಕ್ಕೆ ಬಲಿ ಆಗುವುದಿಲ್ಲ ಎಂದರು.

→ 4

ಕೊನೆಗೂ ಪ್ರಚಾರಕ್ಕೆ ಬಂದ ಯತ್ನಾಳ್

ಶಿಗ್ಗಾವಿ: ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಹಾಗೂ ಮಾಜಿ ಸಿಎಂ ಯಡಿಯೂರಪ್ಪ ವಿರುದ್ಧ ಬಾಂಡಾಯದ ಕಹಳೆ ಸಾರಿರುವ ಬಸನಗೌಡ ಪಾಟೀಲ್ ಯತ್ನಾಳ್ ಕೊನೆಗೂ ಉಪಚುನಾವಣಾ ಪ್ರಚಾರದಲ್ಲಿ ಭಾಗವಹಿಸಿದ್ದಾರೆ. ಸ್ಟಾರ್ ಪ್ರಚಾರಕರ ಪಟ್ಟಿಯಿಂದ ಯತ್ನಾಳ್ ಅವರನ್ನು ಹೊರಗಿಟ್ಟರೂ, ಬಸವರಾಜ್ ಬೊಮ್ಮಾಯಿ ಅವರು 'ವೈಯಕ್ತಿಕ'ವಾಗಿ ಯತ್ನಾಳ್ ಅವರನ್ನು ಕರೆಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ಶಿಗ್ಗಾವಿಯ ವಿವಿಧ ಭಾಗದಲ್ಲಿ ಪ್ರಚಾರ ನಡೆಸಿದ ಬಳಿಕ ಮಾತನಾಡಿದ ಅವರು, ಹಿಂದುಗಳು ಜಾತಿ ವಿಷಯದಲ್ಲಿ ಗಲಾಟೆ ಮಾಡಿಕೊಂಡಿದ್ದರೆ ಎಲ್ಲರ ಆಸ್ತಿ ವಕ್ಫ್ ಪಾಲಾಗಲಿದೆ. ಭಾರತ ದೇಶ ಹಾಗೂ ಹಿಂದು ಧರ್ಮ ಸುರಕ್ಷಿತವಾಗಿರಬೇಕೆಂದರೆ, ಜಾತಿ, ಮತ ಎನ್ನದೇ ಹಿಂದೂಗಳು ಒಟ್ಟಾಗಿ ಉಪಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳಿಗೆ ಮತ ನೀಡಬೇಕು ಎಂದು ಮನವಿ ಮಾಡಿದರು. ಕಾಂಗ್ರೆಸ್ ಸರಕಾರ ಯಾವ ರೀತಿ ಕೆಲಸ ಮಾಡು ತ್ತಿದೆ ಎನ್ನುವುದನ್ನು ನೋಡಿದ್ದೀರಿ. ಲೋಕಸಭೆ ಚುನಾವಣೆಯಲ್ಲಿ ಕೇವಲ 50-60 ಸೀಟು ಕಡಿಮೆಯಾಗಿರುವುದರಿಂದ ಮಹತ್ವದ ಒಂದು ಕಾಯಿದೆ ತಿದ್ದುಪಡಿ ಮಾಡಲು ಕಷ್ಟವಾಗಿದೆ. ನಾವು ಅವರನ್ನು ಅಣ್ಣ ತಮ್ಮಂದಿರು ಎಂದು ತಿಳಿದುಕೊಂಡಿದ್ದೇವೆ. ಆದರೆ, ಅವರ ಧರ್ಮದಲ್ಲಿ ಬೇರೆ ಧರ್ಮದವರನ್ನು ಅಣ್ಣ-ತಮ್ಮ ಎನ್ನುವ ಮಾತೇ ಇಲ್ಲ ಎಂದು ವಾಗ್ದಾಳಿ ನಡೆಸಿದರು.

ತಾತ್ಕಾಲಿಕ ಸುಖಕ್ಕೆ ಕಾಂಗ್ರೆಸ್‌ಗೆ ಮತ ಹಾಕಿದರೆ ಮುಸ್ಲಿಮರ ಕೈಯಲ್ಲಿ ಕೆಲಸಕ್ಕೆ ಹೋಗಬೇಕಾಗುತ್ತದೆ.

ಯತ್ನಾಳ್ ಹೇಳಿದ್ದೇನು?

- ಮುಸ್ಲಿಮರ ವಿರುದ್ಧ ಮಾತನಾಡಿದ್ದಕ್ಕೆ ಕಾಂಗ್ರೆಸ್ ನಮ್ಮ ವಿರುದ್ಧ ಕೇಸ್ ಹಾಕುತ್ತಿದೆ
- ಜಮೀರ್ ಅಹ್ಮದ್ ಗೋರಿ ತೋರಿಸಿ ವಕ್ಫ್ ಆಸ್ತಿ ಮಾಡಿಕೊಳ್ಳುತ್ತಿದ್ದಾರೆ
- ದೇಶ ಹಾಗೂ ಧರ್ಮ ಉಳಿಯಬೇಕೆಂದರೆ ನಾವೆಲ್ಲ ಒಂದಾಗಿರಬೇಕು
- ಜಮ್ಮು-ಕಾಶ್ಮೀರದಲ್ಲಿ 370 ವಿಧಿ ರದ್ದಾಗುವ ತನಕ ದಲಿತರು ವಿಧಾನಸಭೆ ಪ್ರವೇಶಿಸಿರಲಿಲ್ಲ
- ಜವಾಹರ್‌ಲಾಲ್ ನೆಹರು ಹಾಗೂ ಮೊಹ್ಮದ್ ಆಲಿ ಜಿನ್ನಾ ಕುತಂತ್ರದಿಂದ ದೇಶ ಇಬ್ಭಾಗವಾಯಿತು

→ 4

ಮಾಜಿ ಜೋಡೆತ್ತುಗಳಿಂದ ವಾಕ್ಸಮರ

ಚನ್ನಪಟ್ಟಣ: ಉಪಚುನಾವಣೆಯಲ್ಲಿ ಭಾರಿ ಕುತೂಹಲ ಮೂಡಿಸಿರುವ ಚನ್ನಪಟ್ಟಣ ಕ್ಷೇತ್ರ ಶುಕ್ರವಾರ ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಡುವೆ 'ಟಗ್ ಆಫ್ ವಾರ್'ಗೆ ಸಾಕ್ಷಿಯಾಯಿತು. ಬಹಿರಂಗ ಪ್ರಚಾರಕ್ಕೆ ಮೂರೇ ದಿನ ಬಾಕಿಯಿರುವ ಹಿನ್ನೆಲೆಯಲ್ಲಿ ಇಬ್ಬರೂ ನಾಯಕರು ಕ್ಷೇತ್ರದ ವಿವಿಧ ಭಾಗಗಳಿಗೆ ತೆರಳಿ ಪಕ್ಷದ ಅಭ್ಯರ್ಥಿ ಪರ ಪ್ರಚಾರ ನಡೆಸಿದರು.

ಡಿ.ಕೆ.ಶಿವಕುಮಾರ್ ಅವರು ಶುಕ್ರವಾರ ಮಾತನಾಡುತ್ತಾ, ನಾವು ನಿಮ್ಮನ್ನು ಹಾಗೂ ಈ ಜಿಲ್ಲೆ ಬಿಟ್ಟು ಹೋಗುವುದಿಲ್ಲ. ಇಡೀ ಸರಕಾರ ಯೋಗೇಶ್ವರ್ ನಿಮ್ಮ ಜತೆಗಿದೆ. ಈ ಅವಕಾಶವನ್ನು ನೀವು ಬಿಡುತ್ತೀರಾ? ಜೆಡಿಎಸ್‌ನವರು ಅತ್ತರೆ ಅಳಲಿ, ಕುಣಿದರೆ ಕುಣಿಯಲಿ, ಏನಾದರೂ ಮಾಡಿಕೊಳ್ಳಲಿ. ನಿಮ್ಮ ಕಷ್ಟ ಸುಖಕ್ಕೆ ಆಗುವವರು ನಾವು, ನಿಮ್ಮ ಋಣ ತೀರಿಸುವವರು ನಾವು. ನಾವು ನಿಮ್ಮನ್ನು ಹಾಗೂ ಈ ಜಿಲ್ಲೆ ಬಿಟ್ಟು ಹೋಗುವುದಿಲ್ಲ. ನಿಮ್ಮ ಸೇವೆ ಮಾಡುತ್ತೇವೆ. ಹೀಗಾಗಿ ನೀವು ಕಾಂಗ್ರೆಸ್ ಅಭ್ಯರ್ಥಿಗೆ ಮತ ನೀಡಿ, ಆಶೀರ್ವಾದ ಮಾಡಿ. ನಿಮ್ಮ ಜತೆಗೆ ನಾವು ನಿಂತು ನಿಮ್ಮ ಸೇವೆ ಮಾಡುತ್ತೇವೆ ಎಂದು ಭರವಸೆ ನೀಡಿದರು.

ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಮಾತನಾಡಿ, ರಾಜ್ಯ ಕಾಂಗ್ರೆಸ್ ಸರಕಾರಕ್ಕೆ ಸೌಜನ್ಯ ಇಲ್ಲ. ನಿತ್ಯ ಕೇಂದ್ರ ಸರಕಾರದ ಜತೆ ಕಾಲು ಕೆರೆದು ಜಗಳ ಮಾಡುತ್ತಿದೆ.

ಎಚ್‌ಡಿಕೆ ಹೇಳಿದ್ದೇನು?

- ಗಂಗಾ ಮತಸ್ಥರ ಬದುಕನ್ನು ಕಿತ್ತುಕೊಂಡಿದ್ದು ಡಿ.ಕೆ.ಶಿವಕುಮಾರ್
- ಚನ್ನಪಟ್ಟಣ ಅಭ್ಯರ್ಥಿ ಯೋಗೇಶ್ವರ್ ನಂಬಿದವರಿಗೆ ಮೋಸ ಮಾಡಿದರು
- ಯಡಿಯೂರಪ್ಪ ಅವರಿಗೆ ಇನ್ನಿಲ್ಲದ ಕಿರುಕುಳ ನೀಡಿ ನೀಡಿದ್ದಾರೆ
- ಕೈಗಾರಿಕೆ ಸ್ಥಾಪಿಸಲು ಉದ್ಯಮಿದಾರರು ಬಂದರೆ ಷೇರ್ ನೀಡುವಂತೆ ಡಿಮ್ಯಾಂಡ್ ಮಾಡುತ್ತಿದ್ದಾರೆ
- ದೇವೇಗೌಡರು ಕಾವೇರಿಗಾಗಿ ನಡೆಸಿದ ಹೋರಾಟವನ್ನು ಕಾಂಗ್ರೆಸ್ ಅರ್ಥ ಮಾಡಿಕೊಳ್ಳಲಿ

→ 4

ಎನ್‌ಐಎ ಚಾರ್ಜ್‌ಶೀಟ್‌ನಲ್ಲಿ ಸ್ಫೋಟಕ ಮಾಹಿತಿ ಉಲ್ಲೇಖ

ರಾಮೇಶ್ವರಂ ಕೆಫೆ ಸ್ಫೋಟಕ್ಕೆ ಪಾಕ್ ನಂಟು?

ಬೆಂಗಳೂರು: ಬೆಂಗಳೂರಿನ ರಾಮೇಶ್ವರಂ ಕೆಫೆ ಸ್ಫೋಟ ಪ್ರಕರಣ ತನಿಖೆ ಮಾಡಿದ ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಕೋರ್ಟ್‌ಗೆ ಚಾರ್ಜ್‌ಶೀಟ್ ಸಲ್ಲಿಕೆ ಮಾಡಿದೆ.

ಎನ್‌ಐಎ ಚಾರ್ಜ್‌ಶೀಟ್‌ನಲ್ಲಿ ಸ್ಫೋಟಕ ಮಾಹಿತಿ ಉಲ್ಲೇಖವಾಗಿರುವುದು ತಿಳಿದು ಬಂದಿದೆ. ರಾಮೇಶ್ವರಂ ಕೆಫೆ ಸ್ಫೋಟ ಪ್ರಕರಣಕ್ಕೆ ಪಾಕಿಸ್ತಾನದ ನಂಟಿದ್ದು, ಪಾಕ್ ಮೂಲದ ಶಂಕಿತ ಉಗ್ರ ಎ 6 ಆರೋಪಿ ಫೈಸಲ್ ಸದ್ಯ ಪಾಕಿಸ್ತಾನದಲ್ಲಿದ್ದಾನೆ. ಮಂಗಳೂರು ಕುಕ್ಕರ್ ಸ್ಫೋಟದ ಬಳಿಕ ತಾಹಾ ಮತ್ತು ಶಾಜಿಬ್ ನಾಪತ್ತೆಯಾಗಿದ್ದರು. ಕೆಲಕಾಲದ ಬಳಿಕ ಮತ್ತೆ ವಾಪಾಸ್ ಬೆಂಗಳೂರಿಗೆ ಬಂದಿದ್ದರು. ಆಗ ಮುಜಾಮಿಲ್ ಷರೀಫ್ ಜತೆಗೆ ಪರಿಚಯವಾಗಿತ್ತು. ಮುಜಾಮಿಲ್ ಮೆಜೆಸ್ಟಿಕ್ ಬಳಿಯ ಹೋಟೆಲ್ ಒಂದರಲ್ಲಿ ಕೆಲಸ ಮಾಡುತ್ತಿದ್ದ. ಇದೇ ಮುಜಾಮಿಲ್ ಷರೀಫ್‌ನ ತಾಹಾ ಮತ್ತು ಶಾಜಿಬ್ ಮನಪರಿವರ್ತಿಸಿ ಐಸಿಎಸ್‌ಗೆ ಸೇರ್ಪಡೆ ಮಾಡಿದ್ದರು. ಮೊದಲ ಹಂತದಲ್ಲಿ ಕೆಲವು ದುಷ್ಕೃತ್ಯ ನಡೆಸಲು ಮುಜಾಮಿಲ್‌ಗೆ ತಾಹಾ ಮತ್ತು ಶಾಜಿಬ್ ಟಾಸ್ಕ್ ನೀಡಿದ್ದರು.

ಉಗ್ರರು 2023 ಡಿಸೆಂಬರ್‌ನಲ್ಲಿ ಬೆಂಗಳೂರಲ್ಲಿ ಬಾಂಬ್ ಸ್ಫೋಟ ನಡೆಸಲು ಸಂಚು ಹೂಡಿದ್ದರು. ಆನ್‌ಲೈನ್ ಹ್ಯಾಂಡ್ಲರ್ ಮೂಲಕ ಈ ಸೂಚನೆ ಬಂದಿತ್ತು.

→ 4

ವಾರದಲ್ಲಿ ಬಾಂಬ್ ಸಿದ್ಧ

ಬೆಂಗಳೂರಿನ ಬಿಜೆಪಿ ಕಚೇರಿ ಹಿಂಭಾಗ ಇಟ್ಟಿದ್ದ ಬಾಂಬ್ ಸ್ಫೋಟಗೊಳ್ಳದ ಹಿನ್ನೆಲೆ ಮತ್ತೆ ಜನನಿಬಿಡ ಪ್ರದೇಶದಲ್ಲಿ ಬಾಂಬ್ ಸ್ಫೋಟಕ್ಕೆ ಪ್ಲಾನ್ ಮಾಡಿದ್ದ. ಅಂತಿಮವಾಗಿ ಫೆಬ್ರವರಿ ತಿಂಗಳಲ್ಲಿ ಐಇಡಿ ಬಾಂಬ್ ತಯಾರಿಸಿ, ಫೆ.29ರಂದು ಶಾಜಿಬ್ ಚೆನ್ನೈನಿಂದ ಬೆಂಗಳೂರಿಗೆ ಬಂದು ಕೆ.ಆರ್.ಪುರಂ ಟಿನ್ ಫ್ಯಾಕ್ಟರಿ ಬಳಿ ಇಳಿದು, ಕುಂದಲಹಳ್ಳಿಗೆ ಬಂದು ರಾಮೇಶ್ವರಂ ಕೆಫೆಯಲ್ಲಿ ಐಇಡಿ ಬಾಂಬ್ ಇಟ್ಟಿದ್ದರ ಬಗ್ಗೆ ಎನ್‌ಐಎ ಚಾರ್ಜ್‌ಶೀಟ್‌ನಲ್ಲಿ ಬಿಚ್ಚಿಟ್ಟಿದೆ.

ವಾಲಿದ್ದ ಕಟ್ಟಡ ಏಕಾಏಕಿ ಕುಸಿತ

ಕೋಲಾರ: ಮೂರು ಅಂತಸ್ತಿನ ಕಟ್ಟಡವೊಂದು ಏಕಾಏಕಿ ಕುಸಿದು ಬಿದ್ದಿರುವ ಘಟನೆಯು ಕೋಲಾರ ಜಿಲ್ಲೆಯ ಬಂಗಾರಪೇಟೆಯ ಬೂದಿಕೋಟೆ ರಸ್ತೆಯಲ್ಲಿ ಶುಕ್ರವಾರ ಮಧ್ಯಾಹ್ನ ನಡೆದಿದೆ. ಕಟ್ಟಡವು ವಾಲುತ್ತಿದೆ ಎಂದು ತಿಳಿದ ಕೂಡಲೇ ಸ್ಥಳೀಯರು ಕಟ್ಟಡದಲ್ಲಿದ್ದ ಜನರನ್ನು ತೆರವು ಮಾಡಿದ್ದಾರೆ. ಘಟನೆಯಲ್ಲಿ ಯಾವುದೇ ಹಾನಿಯಾಗಿಲ್ಲ ಎನ್ನಲಾಗಿದೆ. ರಾಜ್‌ಕುಮಾರ್ ಎಂಬುವವರಿಗೆ ಸೇರಿದ ಕಟ್ಟಡ ಇದಾಗಿದೆ.

ಕಿರುತೆರೆ ನಟ ನಿತಿನ್ ಚೌಹಾಣ್ ಆತ್ಮಹತ್ಯೆ

ಮುಂಬೈ: ಕ್ರೈಂ ಪ್ಯಾಟ್ರೋಲ್ ಖ್ಯಾತಿಯ ಕಿರುತೆರೆ ನಟ ನಿತಿನ್ ಚೌಹಾಣ್ (35) ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಗುರುವಾರ ರಾತ್ರಿ ಮುಂಬೈನ ಅಪಾರ್ಟ್‌ಮೆಂಟ್ ಒಂದರಲ್ಲಿ ಫ್ಯಾನ್‌ಗೆ ನೇಣು ಬಿಗಿದ ಸ್ಥಿತಿಯಲ್ಲಿ ನಿತಿನ್ ಅವರ ಮೃತದೇಹ ಪತ್ತೆಯಾಗಿದೆ. ಆತ್ಮಹತ್ಯೆಗೆ ಕಾರಣ ತಿಳಿದು ಬಂದಿಲ್ಲ. ಉತ್ತರ ಪ್ರದೇಶ ಆಲಿಘಡ ಮೂಲದ ನಿತಿನ್, ಹಿಂದಿಯ ದಾದಾಗಿರಿ-2 ರಿಯಾಲಿಟಿ ಶೋ ವಿಜೇತರಾಗಿದ್ದರು. ಇದಲ್ಲದೇ ಅನೇಕ ರಿಯಾಲಿಟಿ ಶೋ, ಹಿಂದಿ ಧಾರಾವಾಹಿಗಳ ಮೂಲಕ ಅವರು ಕಿರುತೆರೆಯಲ್ಲಿ ಮಿಂಚಿದ್ದರು.

ಜಮ್ಮು-ಕಾಶ್ಮೀರ ಕಲಾಪದಲ್ಲಿ ಸತತ 3ನೇ ದಿನ ಗದ್ದಲ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ಮರುಸ್ಥಾಪಿಸಲು ಒತ್ತಾಯಿಸಿ ಅಂಗೀಕರಿಸಿದ ನಿರ್ಣಯವನ್ನು ವಿರೋಧಿಸಿ ಬಿಜೆಪಿ ಶಾಸಕರು ಸತತ ಮೂರನೇ ದಿನ ಶುಕ್ರವಾರವೂ ಸದನದಲ್ಲಿ ಪ್ರತಿಭಟನೆ ನಡೆಸಿದರು. ಪರಿಣಾಮ ಸ್ಪೀಕರ್ ಸೂಚನೆಯಂತೆ ಪ್ರತಿಪಕ್ಷದ 12 ಸದಸ್ಯರು ಮತ್ತು ಅವಾಮಿ ಇತೆಹಾದ್ ಪಕ್ಷದ ಶಾಸಕ ಶೇಖ್ ಖುರ್ಷಿದ್ ಅವರನ್ನು ಮಾರ್ಷಲ್‌ಗಳು ಸದನದಿಂದ ಹೊರಹಾಕಿದ್ದಾರೆ. ಶುಕ್ರವಾರ ಕಲಾಪ ಆರಂಭವಾದಂತೆ 'ಪಾಕಿಸ್ತಾನ ಅಜೆಂಡಾ ನಡೆಯಲ್ಲ' ಎಂದು ಪ್ರತಿಪಕ್ಷದ ಸದಸ್ಯರು ಘೋಷಣೆ ಕೂಗಿದರು. ಬಿಜೆಪಿಯ ಶಾಸಕರು ಸದನದ ಬಾವಿಗಿಳಿದು ಪ್ರತಿಭಟನೆ ನಡೆಸಿದರು. ಈ ವೇಳೆ ಸ್ಪೀಕರ್ ರಾಥರ್ ಬಿಜೆಪಿ ಸದಸ್ಯರನ್ನು ಹೊರಕ್ಕೆ ಕಳುಹಿಸುವಂತೆ ನಿರ್ದೇಶನ ನೀಡಿದರು.

ಫನ್‌ತರಂಗ
- ರಘುಪತಿ ಶೃಂಗೇರಿ -

ಸಾಲುತ್ತಿಲ್ಲ ದುಡ್ಡು ಎಂದು 40000 ಕೋಟಿ ಸಾಲ ಪಡೆಯಲು ಮುಂದಾದ ರಾಜ್ಯ ಸರ್ಕಾರ
ಸುದ್ದಿ



ಮಿಷಿಗನ್‌ನಿಂದ ಎರಡನೇ ಬಾರಿಗೆ ಅಮೆರಿಕ ಸಂಸತ್ ಪ್ರವೇಶಿಸಿದ ಬೆಳಗಾವಿ ಮೂಲದ ಶ್ರೀನಿವಾಸ್ ಥಾಣೇದಾರ್

ಅಮೆರಿಕ ರಾಜಕೀಯದಲ್ಲಿ ಕನ್ನಡಿಗನ ದಿಗ್ವಿಜಯ

ಬೆಳಗಾವಿ: ಅಮೆರಿಕದ ಸಂಸತ್ತಿನ ಪ್ರತಿನಿಧಿಗಳ ಚುನಾವಣೆಯಲ್ಲಿ ಮಿಷಿಗನ್ ರಾಜ್ಯದಿಂದ ಸ್ಪರ್ಧಿಸಿದ್ದ ಬೆಳಗಾವಿ ಮೂಲದವರೊಬ್ಬರು ಗೆಲುವು ಸಾಧಿಸಿದ್ದು, ಆ ಮೂಲಕ ಅಮೆರಿಕ ರಾಜಕೀಯದಲ್ಲೂ ಕನ್ನಡ ನಾಡಿನ ಛಾಪು ಮೂಡಿಸಿದ್ದಾರೆ.

ಹೌದು..! ಕಮಲಾ ಹ್ಯಾರಿಸ್ ನೇತೃತ್ವದ ಡೆಮಾಕ್ರಟಿಕ್ ಪಕ್ಷದ ಅಭ್ಯರ್ಥಿಯಾಗಿ ಮಿಷಿಗನ್ ರಾಜ್ಯದಿಂದ ಸ್ಪರ್ಧಿಸಿದ್ದ ಶ್ರೀನಿವಾಸ್ ಥಾಣೇದಾರ್ ಗೆಲುವು ಸಾಧಿಸಿದ್ದಾರೆ. ಸಾಹಿತಿ, ವಿಜ್ಞಾನಿ ಹಾಗೂ ಅಮೆರಿಕದ ಪ್ರಖ್ಯಾತ ಉದ್ಯಮಿಯಾಗಿರುವ ಶ್ರೀನಿವಾಸ ಥಾಣೇದಾರ ಬೆಳಗಾವಿ ಮೂಲದವರು ಎಂಬುವುದು ಹೆಮ್ಮೆಯ ಸಂಗತಿ.

ಶ್ರೀನಿವಾಸ ಥಾಣೇದಾರ್ ಹಿನ್ನೆಲೆ: ಶ್ರೀನಿವಾಸ್ ಅವರು 1955ರ ಫೆ.22ರಂದು ಚಿಕ್ಕೋಡಿಯಲ್ಲಿ ಜನಿಸಿದ್ದಾರೆ. ಅವರ ತಂದೆ ಬೆಳಗಾವಿ ಕೋರ್ಟ್‌ನಲ್ಲಿ ನೌಕರಿ ಮಾಡುತ್ತಿದ್ದರು. ಹಾಗಾಗಿ, ಬೆಳಗಾವಿ ನಗರದ ಶಹಾಪುರದ ಮೀರಾಪುರ ಗಲ್ಲಿಯಲ್ಲಿ ವಾಸವಿದ್ದ ಶ್ರೀನಿವಾಸ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಮತ್ತು ಪಿಯುಸಿಯನ್ನು ಇಲ್ಲಿನ ಚಿಂತಾಮಣರಾವ್ ಸರಕಾರಿ ಪದವಿ ಪೂರ್ವ ಶಾಲೆಯಲ್ಲಿ ಪೂರ್ಣಗೊಳಿಸಿದ್ದಾರೆ. ಬಳಿಕ, ಧಾರವಾಡದಲ್ಲಿ ಬಿಎಸ್‌ಸಿ ಪದವಿ ಪಡೆದಿದ್ದಾರೆ. 1977ರಲ್ಲಿ ಬಾಂಬೆ ವಿಶ್ವವಿದ್ಯಾಲಯದಿಂದ ರಸಾಯನ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಪಡೆದ ಶ್ರೀನಿವಾಸ, 1979ರಲ್ಲಿ ಅಮೆರಿಕಕ್ಕೆ ತೆರಳಿದ್ದರು. 1982ರಲ್ಲಿ ಪಾಲಿಮರ್ ಕೆಮಿಸ್ಟ್ರಿ ವಿಷಯದಲ್ಲಿ ಅಲ್ಲೇ ಪಿಎಚ್‌ಡಿ ಪದವಿ ಗಳಿಸಿದ್ದಾರೆ. 1982ರಿಂದ 1984ರವರೆಗೆ ಮಿಷಿಗನ್ ವಿಶ್ವವಿದ್ಯಾಲಯದಲ್ಲಿ ಪ್ರೊಫೆಸರ್ ಆಗಿ ಕಾರ್ಯ ನಿರ್ವಹಿಸಿದ್ದರು. 1984ರಿಂದ 1990ರವರೆಗೆ ಪಾಲಿಮರ್ ಸಿಂಥೆಸಿಸ್ ಕೆಮಿಸ್ಟ್ ಹಾಗೂ ಪ್ರಾಜೆಕ್ಟ್ ಲೀಡರ್ ಆಗಿ ಪೆಟ್ರೋಲೈಟ್ ಕಾರ್ಪೊರೇಷನ್‌ನಲ್ಲಿ ಕಾರ್ಯ ನಿರ್ವಹಿಸಿದ್ದ ಅವರು, ಬಳಿಕ ಸ್ವಂತ ಉದ್ಯಮ ಆರಂಭಿಸಿದ್ದರು.

ಶೇ.68.6ರಷ್ಟು ಮತಗಳನ್ನು ಪಡೆದು ಗೆದ್ದಿರುವ ಶ್ರೀನಿವಾಸ್ ಥಾಣೇದಾರ್ ಮಿಚಿಗನ್ ರಾಜ್ಯದಿಂದ ಎರಡನೇ ಬಾರಿ ಅಮೆರಿಕ ಸಂಸತ್ ಪ್ರವೇಶಿಸಿದ ಹಿನ್ನೆಲೆಯಲ್ಲಿ ಅವರು ಕಲಿತ ಚಿಂತಾಮಣರಾವ್ ಶಾಲೆಯ ಶಿಕ್ಷಕರು, ವಿದ್ಯಾರ್ಥಿಗಳು ಸಂತಸ ವ್ಯಕ್ತಪಡಿಸಿದ್ದಾರೆ.

- ಅಂದು ಸರಕಾರಿ ಶಾಲೆಯಲ್ಲಿ ಕಲಿತ ಬಾಲಕನ ಕೈಗೆ ಇಂದು ಅಧಿಕಾರ
- ಡೆಮಾಕ್ರಟಿಕ್ ಪಕ್ಷದ ಅಭ್ಯರ್ಥಿಯಾಗಿ ಗೆಲುವು ಸಾಧಿಸಿದ ಶ್ರೀನಿವಾಸ್ ಥಾಣೇದಾರ್
- ಸಾಹಿತಿ, ವಿಜ್ಞಾನಿ ಹಾಗೂ ಅಮೆರಿಕದ ಉದ್ಯಮಿಯಾಗಿರುವ ಶ್ರೀನಿವಾಸ

ಬಿಜೆಪಿ ಅವಧಿಯಲ್ಲಿನ ಸುತ್ತೋಲೆಗಳನ್ನು ಪ್ರದರ್ಶಿಸಿದ ಎಂಬಿಪಿ

ವಕ್ಫ್ ರಾದ್ಧಾಂತ ಬಿಜೆಪಿ ಕೊಡುಗೆ

ವಿಜಯಪುರ: ರಾಜ್ಯದಲ್ಲಿ ಬಿಜೆಪಿ ಆಡಳಿತ ನಡೆಸಿದ ಅವಧಿಯಲ್ಲಿ ವಕ್ಫ್ ಆಸ್ತಿ ಅತಿಕ್ರಮಣ ತೆರವಿಗೆ ಅನೇಕ ಸುತ್ತೋಲೆ ಹೊರಡಿಸಿದೆ. ಈ ಸಂಬಂಧ ಟಾಸ್ಕ್ ಫೋರ್ಸ್ ಕೂಡ ರಚಿಸಿತ್ತು. ರಾಜ್ಯದಲ್ಲಿ ಈಗ ಉಂಟಾಗಿರುವ ಎಲ್ಲ ವಕ್ಫ್ ರಾದ್ಧಾಂತಗಳು ಬಿಜೆಪಿ ಕೊಡುಗೆ. ಅವರ ತಪ್ಪುಗಳನ್ನು ಕಾಂಗ್ರೆಸ್ ಸರಕಾರ ಸರಿಪಡಿಸುತ್ತಿದೆ ಎಂದು ಕೈಗಾರಿಕೆ, ಮೂಲ ಸೌಲಭ್ಯ ಅಭಿವೃದ್ಧಿ ಸಚಿವ ಎಂ.ಬಿ.ಪಾಟೀಲ ಹೇಳಿದರು.

ನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಅವಧಿಯಲ್ಲಿನ ಹತ್ತಾರು ಸುತ್ತೋಲೆಗಳನ್ನು ಪ್ರದರ್ಶಿಸಿ ಮಾತನಾಡಿದ ಅವರು, ರಾಜ್ಯ ಮತ್ತು ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾಗ ವಕ್ಫ್ ಆಸ್ತಿ ರಕ್ಷಣೆ ಕುರಿತು ಅಪಾರ ಕಾಳಜಿ ತೋರಿದ್ದ ಬಿಜೆಪಿಯವರು ವಿಶ್ವಗುರು ಬಸವಣ್ಣ ಜನಿಸಿದ, ಸೂಫಿ ಸಂತರು ನಡೆದಾಡಿದ ವಿಜಯಪುರ ನೆಲದಲ್ಲಿ ವಕ್ಫ್ ವಿವಾದವನ್ನು ಮುಂದಿಟ್ಟುಕೊಂಡು ಹಿಂದುತ್ವದ ಪ್ರಯೋಗ ಶಾಲೆ ಮಾಡಲು ಬಿಜೆಪಿ ಹೊರಟಿದೆ ಎಂದು ದೂರಿದರು.

ಕಳೆದ ಒಂದೆರಡು ವಾರಗಳಿಂದ ವಕ್ಫ್ ಆಸ್ತಿ ವಿಚಾರದಲ್ಲಿ ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಅಸತ್ಯವನ್ನು ಸತ್ಯ ಮಾಡುವ ಸುಳ್ಳು ಪ್ರಚಾರ ನಡೆಯುತ್ತಿದೆ. ಆದರೆ, ಇದೇ ಬಿಜೆಪಿ ಅಧಿಕಾರದಲ್ಲಿದ್ದಾಗ ರೈತರು, ಧಾರ್ಮಿಕ ಸ್ಥಳಗಳ ಹಾಗೂ ಎಲ್ಲ ಧರ್ಮೀಯರ ಆಸ್ತಿಯನ್ನು ವಕ್ಫ್ ಹಿಂಪಡೆದಿದೆ. – ಎಂ.ಬಿ.ಪಾಟೀಲ

ಎನ್‌ಕೌಂಟರ್‌ನಲ್ಲಿ ನಕ್ಸಲರಿಬ್ಬರ ಹತ್ಯೆ

ರಾಯಪುರ: ಛತ್ತೀಸ್‌ಗಢದ ಬಿಜಾಪುರ ಜಿಲ್ಲೆಯ ಪಾಮೆಡ್ ಗ್ರಾಮದ ಅರಣ್ಯ ಪ್ರದೇಶದಲ್ಲಿ ಬೆಳಗ್ಗೆ ಸುಮಾರು 11 ಗಂಟೆಗೆ ನಕ್ಸಲೀಯರು ಮತ್ತು ಭದ್ರತಾ ಪಡೆಗಳ ನಡುವಿನ ಎನ್‌ಕೌಂಟರ್‌ನಲ್ಲಿ ಶುಕ್ರವಾರ ಇಬ್ಬರು ನಕ್ಸಲರು ಹತರಾಗಿದ್ದಾರೆ. ಘಟನಾ ಸ್ಥಳದಿಂದ ಮೃತದೇಹಗಳನ್ನು ವಶಪಡಿಸಿಕೊಳ್ಳಲಾಗಿದೆ. ಅವರ ಬಳಿಯಿದ್ದ ಸೆಲ್ಫ್ ಲೋಡಿಂಗ್ ರೈಫಲ್ (ಎಸ್‌ಎಲ್‌ಆರ್), ಬ್ಯಾರೆಲ್ ಗ್ರೆನೇಡ್, ಲಾಂಚರ್ ಶೆಲ್‌ಗಳು ಮತ್ತು ಆಯುಧಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ರಾಜ್ಯ ಸರಕಾರ ಲ್ಯಾಂಡ್ ಜಿಹಾದ್ ಮಾಡುತ್ತಿದೆ: ಬಿಜೆಪಿ | ಹಿಂದುತ್ವದ ಪ್ರಯೋಗ ಶಾಲೆ ಮಾಡಲು ಯತ್ನ: ಕಾಂಗ್ರೆಸ್

ಉಪಚುನಾವಣೆಯಲ್ಲಿ ತಾರಕಕ್ಕೇರಿದ ವಕ್ಫ್ ವಿವಾದ

ವಿಶ್ವವಾಣಿ ವಿಶೇಷ

ಬೆಂಗಳೂರು: ಉಪಚುನಾವಣೆಗಿಂತ ವಕ್ಫ್ ಆಸ್ತಿ ವಿವಾದ ತಾರಕಕ್ಕೇರಿದ್ದು ಆಡಳಿತ ಮತ್ತು ಪ್ರತಿಪಕ್ಷದ ನಡುವೆ ವಾಕ್ಸಮರಕ್ಕೆ ಕಾರಣವಾಗಿದೆ. ರಾಜಕೀಯ ಆರೋಪ ಪ್ರತ್ಯಾರೋಪ ಒಂದೆಡೆಯಾದರೆ, ವಕ್ಫ್ ಆಸ್ತಿ ಎಂದು ಪಹಣಿಯಲ್ಲಿ ನಮೂದಾಗಿರುವುದು ರೈತರು ಹಾಗೂ ಜನ ಸಾಮಾನ್ಯರನ್ನು ಕಂಗೆಡಿಸಿದೆ. ಸಿಎಂ ಆದೇಶದಂತೆ ವಕ್ಫ್ ಹೆಸರು ಬದಲಾವಣೆಯಾದರೂ ಆಸ್ತಿ ಹೊಂದಿರುವರು ಕಾನೂನಿನ ಕುಣಿಕೆಯಲ್ಲಿ ಸಿಲುಕಿ ವರ್ಷಗಳ ಕಾಲ ಕೋರ್ಟ್ ಕಚೇರಿ ಅಲೆದಾಡಬೇಕಾದ ಪರಿಸ್ಥಿತಿ ಮುಂದೆ ಬಂದೊದಗಲಿದೆ ಎನ್ನಲಾಗಿದೆ.

ಸುಮಾರು 11-12 ಜಿಲ್ಲೆಗಳಲ್ಲಿ ಈ ವಕ್ಫ್ ಭೂತ ಆವರಿಸಿದ್ದು, ಕೆಲ ಗುರುತಿಸಲ್ಪಟ್ಟ ಆಸ್ತಿಗಳಿಗೆ ನೋಟಿಸ್ ನೀಡಿ, ಹಲವೆಡೆ ತೆರವುಗೊಳಿಸಬೇಕೆಂದು ಜಿಲ್ಲಾಧಿಕಾರಿಗಳ ಮೂಲಕ ಒತ್ತಡ ಹೇರಿದ್ದರಿಂದ ನೋಟಿಸ್ ಜಾರಿಯಾಗಿದೆ. ಇದು ಪ್ರತಿಪಕ್ಷದ ಕೈಗೆ ಕಾಂಗ್ರೆಸ್ ಸರಕಾರವೇ ಚಾಟಿ ಕೊಟ್ಟಂತಾಗಿದೆ. ಇದಲ್ಲದೆ ಸಚಿವರ ಮೂಲಕ ಲ್ಯಾಂಡ್ ಜಿಹಾದ್ ಮಾಡುತ್ತಿದೆ ಎಂದು ಬಿಜೆಪಿ ಆರೋಪಿಸಿದೆ. ರಾಜ್ಯಾದ್ಯಂತ ವಕ್ಫ್ ಮೂಲಕ ಹೊಸ ಜಿಹಾದಿ ಆರಂಭಿಸಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ನೇರವಾಗಿ ಆರೋಪಿಸಿದ್ದು, ಇದೇ ವೇಳೆ ವಕ್ಫ್ ಆಸ್ತಿ ಹೋದರೆ ಮುಂದೆ ನಾವು ಅವರ ಮನೆ ಕೆಲಸಕ್ಕೆ ಹೋಗಬೇಕಾಗುತ್ತದೆ ಎಂದು ಯತ್ನಾಳ್ ಕಿಡಿಕಾರಿದ್ದಾರೆ. ಇದಕ್ಕೆ ಪ್ರತಿಕ್ರಿಯಿಸಿರುವ ಕಾಂಗ್ರೆಸ್, ವಕ್ಫ್ ನೆಪದಲ್ಲಿ ವಿಜಯಪುರವನ್ನು ಹಿಂದುತ್ವದ ಪ್ರಯೋಗಶಾಲೆ ಮಾಡುವ ಸಂಚು ನಡೆಸುತ್ತಿದೆ ಎಂದು ಪ್ರತ್ಯಾರೋಪ ಮಾಡಿದೆ.

ಮೂರು ಕ್ಷೇತ್ರಗಳ ಉಪಚುನಾವಣೆಯಲ್ಲಿ ಅಭಿವೃದ್ಧಿ ಇಲ್ಲವೇ ಆಯಾ ಕ್ಷೇತ್ರದ ವಿಚಾರದ ಬಗ್ಗೆ ರಾಜಕಾರಣ ನಡೆಯಬೇಕಿತ್ತು. ಈ ವಿಚಾರ ಮಂಕಾಗಿದ್ದು, ಈಗ ಹೋದೆಡೆಯಲ್ಲೆಲ್ಲ ಎರಡೂ ಪಕ್ಷಗಳ ನಾಯಕರು ವಕ್ಫ್ ವಿಚಾರವೇ ಪ್ರಮುಖವಾಗಿ ಪ್ರಸ್ತಾಪವಾಗುತ್ತಿದೆ. ಉಪಚುನಾವಣೆಯಲ್ಲೀಗ ಸರಕಾರದ ಗ್ಯಾರಂಟಿಗಳು ಮಸುಕಾಗಿ, ಸ್ಥಳೀಯ ವಿಚಾರವನ್ನೂ ಬಿಟ್ಟು ಅಲ್ಲೂ ಕೂಡ ವಕ್ಫ್‌ನೊಂದಿಗೆ ಜಾತಿ ಅಂಟಿಕೊಂಡು ಚುನಾವಣೆಯ ಪ್ರಚಾರ ಬಿರುಸಾಗಿದೆ.

ತಾತ್ಕಾಲಿಕ ಸುಖಕ್ಕೆ ಕಾಂಗ್ರೆಸ್‌ಗೆ ಮತ ಹಾಕಿದರೆ ಸಾಬರ ಕೈಯಲ್ಲಿ ಕೆಲಸಕ್ಕೆ ಹೋಗಬೇಕಾಗುತ್ತದೆ. ಸಿದ್ದರಾಮಯ್ಯ ಮುಂದಿನ ಜನ್ಮದಲ್ಲಿ ಮುಸ್ಲಿಮರಾಗಿ ಹುಟ್ಟುತ್ತಾರಂತೆ. ಅದಕ್ಕಾಗಿ ಈಗಲೇ ಎಲ್ಲ ಆಸ್ತಿ ವಕ್ಫ್ ಆಸ್ತಿ ಮಾಡುತ್ತಿದ್ದಾರೆ. ಹಾಲುಮತ ಸಮಾಜದಲ್ಲಿ ಹುಟ್ಟಿದ ಸಿದ್ದರಾಮಯ್ಯ ಆ ಸಮುದಾಯಕ್ಕೆ ಕಳಂಕ ತರುತ್ತಿದ್ದಾರೆ. ಎಲ್ಲ ಹಿಂದೂಗಳು ಮತದಾನ ಮಾಡಿ.
– ಬಸನಗೌಡ ಪಾಟೀಲ್ ಯತ್ನಾಳ್

ಹತ್ತು ವರ್ಷಗಳಿಂದ ರಾಜ್ಯ ಮತ್ತು ಕೇಂದ್ರದಲ್ಲಿ ಅಧಿಕಾರ ದಲ್ಲಿದ್ದಾಗ ವಕ್ಫ್ ಆಸ್ತಿ ರಕ್ಷಣೆ ಕುರಿತು ಅಪಾರ ಕಾಳಜಿ ತೋರಿದ ಬಿಜೆಪಿ ಈಗ ವಿಜಯಪುರವನ್ನು ಹಿಂದುತ್ವದ ಪ್ರಯೋಗ ಶಾಲೆಯನ್ನಾಗಿ ಮಾಡಲು ಹೊರಟಿದೆ.
– ಎಂ.ಬಿ. ಪಾಟೀಲ

ಕೇವಲ ತುಷ್ಟೀಕರಣದ ಆಧಾರದಲ್ಲಿ ಚುನಾವಣೆ ಮಾಡಲು ಹೊರಟಿದ್ದಾರೆ. ತುಷ್ಟೀಕರಣದ ಪರಾಕಾಷ್ಠೆ ಕಾಂಗ್ರೆಸಿನದ್ದು. ಈ ಬಾರಿ ಕಾಂಗ್ರೆಸಿಗೆ ಶಾಕ್ ಕೊಟ್ಟರೆ, ಅನ್ಯಾಯಕ್ಕೆ ಒಳಗಾದ ಹಿಂದೂಗಳೂ ಜಾಗೃತರಾಗಿದ್ದಾರೆ ಎಂಬ ಸಂದೇಶ ಸಿಗಲಿದೆ. ಹೀಗಾಗಿ ಕಾಂಗ್ರೆಸ್ ಪಕ್ಷವನ್ನು ಮತದಾರರು ಸಂಪೂರ್ಣವಾಗಿ ತಿರಸ್ಕರಿಸಬೇಕು.
– ಪ್ರಲ್ಹಾದ್ ಜೋಶಿ ಕೇಂದ್ರ ಸಚಿವ

ಸಮಾಚಾರ ಸಣ್ಣದಲ್ಲ

ಬೆಳಗಿನಿಂದ ಸಂಜೆವರೆಗೆ ವಿದ್ಯುತ್ ವ್ಯತ್ಯಯ

ಹಾವೇರಿ: ವಿದ್ಯುತ್ ತುರ್ತು ನಿರ್ವಹಣಾ ಕಾಮಗಾರಿ ಕಾರಣ ನ. 10ರ ರವಿವಾರ ಹಾವೇರಿ 110 ಕೆ.ವ್ಹಿ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಡುವ ಲಕಮಾಪುರ ಮತ್ತು ಕೋಳುರು ಎನ್ ಜೆವಾಯ್ ಮಾರ್ಗಗಳಲ್ಲಿ ಬೆಳಿಗ್ಗೆ 10 ರಿಂದ ಸಾಯಂಕಾಲ 05-30ರ ವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ. ಈ ವಿದ್ಯುತ್ ವಿತರಣಾ ಕೇಂದ್ರದ ವ್ಯಾಪ್ತಿಗೆ ಬರುವ, ಸಾನು ಲೇಔಟ್. ಎಲ್ .ಐ.ಸಿ.ಕಾಲೋನಿ, ಕೋಳೂರ, ಕರಜಗಿ ರೈಲ್ವೆಸ್ಟೇಷನ್, ಗಣಜೂರ, ದೇವಗಿರಿ, ದೇವಗಿರಿಯಲ್ಲಾಪುರ, ನಾಗನೂರು, ವರದಾಹಳ್ಳಿ ಈ ಫೀಡರನ ವ್ಯಾಪ್ತಿಗೆ ಬರುವ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ. ಸಾರ್ವಜನಿಕರು ಸಹಕರಿಸಬೇಕೆಂದು ಹೆಸ್ಕಾಂ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

ಮತದಾನ ದಿನ ನಡೆಯುವ ಸಂತೆ ಮುಂದೂಡಿಕೆ

ಹಾವೇರಿ: ಶಿಗ್ಗಾಂವಿ ವಿಧಾನಸಭಾ ಕ್ಷೇತ್ರದ ಉಪ ಚುಣಾವಣೆ ಮತದಾನ ಇದೇ ನವೆಂಬರ್ 13 ರಂದು ನಡೆಯಲಿದ್ದು, ಈ ಸಮಯದದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ಹಿನ್ನಲೆಯಲ್ಲಿ ನ.13 ರಂದು ಶಿಗ್ಗಾಂವಿ ಪಟ್ಟಣದಲ್ಲಿ ನಡೆಯುವ ಸಂತೆಯನ್ನು ಮುಂದೂಡಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಅವರು ಆದೇಶ ಹೊರಡಿಸಿದ್ದಾರೆ.

ಖಾಸಗಿ ಬಸ್‌ಗೆ ಬೆಂಕಿ ; ಪ್ರಯಾಣಿಕರು ಪಾರು

ಕಾರವಾರ : ಚಲಿಸುತ್ತಿದ್ದ ಖಾಸಗಿ ಬಸ್‌ಗೆ ಆಕಸ್ಮಿಕ ಬೆಂಕಿ ಹೊತ್ತಿಕೊಂಡ ಪರಿಣಾಮ ಪ್ರಯಾಣಿಕರು ಪ್ರಾಣಪಾಯದಿಂದ ಪಾರಾದ ಘಟನೆ ನಡೆದಿದೆ.

ಕಾರವಾರ ತಾಲೂಕಿನ ವಿರ್ಜೆ ಗ್ರಾಮದ ಬಳಿ ಈ ಘಟನೆ ಸಂಭವಿಸಿದೆ. ಈ ಬಸ್ಸಿನಲ್ಲಿ ಕೈಗಾ ಟೌನ್‌ಶಿಪ್ ಉದ್ಯೋಗಿಗಳಿದ್ದರು ಎಂದು ಹೇಳಲಾಗಿದೆ. ಸಂಭವಿಸಿದ ಅವಗಡದಿಂದಾಗಿ ಬಸ್ ಸಂಪೂರ್ಣ ಸುಟ್ಟು ಕರಕಲಾಗಿದೆ. ಈ ಕುರಿತು ಮಲ್ಲಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ತನಿಖೆ ಕೈಗೊಂಡಿದ್ದಾರೆ.

ಅಧಿಕಾರಿಗಳಿಗೆ ಬೈಯುವುದೇ ಆಡಳಿತವಲ್ಲ

ಸುದ್ದಿಗಾರರೊಂದಿಗೆ ಮಾತನಾಡಿದ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಅಭಿಪ್ರಾಯ

ಕಾರವಾರ: ರಾಜ್ಯದಲ್ಲಿರುವ ಕಾಂಗ್ರೆಸ್ ಸರ್ಕಾರಕ್ಕೆ ಜಿಲ್ಲಾಡಳಿತಕ್ಕೆ ಚುರುಕು ಮುಟ್ಟಿಸಲು ಪುರುಸೊತ್ತು ಇಲ್ಲ. ಅಧಿಕಾರಿಗಳಿಗೆ ಬೈಯುವುದೇ ಆಡಳಿತ ಎಂದು ತಿಳಿದು ಕೊಂಡಿದ್ದಾರೆ ಎಂದು ಸಂಸದ ವಿಶ್ವೇಶ್ವರ ಹೆಗಡೆ ಅವರು ಹೇಳಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜಿಲ್ಲೆಯ ಸಮಸ್ಯೆ ಬಗೆ ಹರಿಸಲು ರಾಜ್ಯ ಸರ್ಕಾರ ಪ್ರಯತ್ನಿಸುತ್ತಿಲ್ಲ. ಅವರ ಆತಂಕ ದಲ್ಲಿಯೇ ಅವರಿದ್ದಾರೆ. ಯಾವಾಗ ಅಧಿಕಾರ ಕಳೆದು ಕೊಳ್ಳುತ್ತಾರೋ ಎಂಬ ಪರಿಸ್ಥಿತಿ ಅವರದ್ದಾಗಿದೆ ಎಂದು ಪರೋಕ್ಷ ವಾಗಿ ಜಿಲ್ಲಾ ಉಸ್ತುವಾರಿ ಸಚಿವರಿಗೆ ಟಾಂಗ್ ನೀಡಿ ದರು.

ರಾಜ್ಯದಲ್ಲಿ ಮನಸೋ ಇಚ್ಚೆ ಆಡಳಿತ ನಡೆಸುತ್ತ ಇದ್ದಾರೆ. ಜಿಲ್ಲೆಯಲ್ಲಿಯೂ ಅಷ್ಟೇ. ಆಡಳಿತ ಅಭಿವೃದ್ಧಿ ಪರವಾಗಿರಬೇಕು ಎಂದು ಹೇಳಿದರು.

ಶಿರಸಿ- ಕುಮಟಾ ರಸ್ತೆಯನ್ನು ತಾಂತ್ರಿಕ ಕಾರಣಗಳಿಂದ ಬಂದ್ ಮಾಡುವ ಸಂದರ್ಭ ಬಂದರೆ ಮಾತ್ರ ಮಾಡಿ ಎಂದಿದ್ದೇವೆಯೇ ಹೊರತು; ಎರಡು ಮೂರು ಬ್ರಿಜ್ ಮಾಡುವಾಗ ಯಾರಿಗೂ ತೊಂದರೆ ಕೊಡಬೇಕು ಎಂದಿಲ್ಲ ಎಂದು ಸ್ಪಷ್ಟ ಪಡಿಸಿದರು.

ಸಭೆ ನಡೆಸಲಾಗಿದೆ: ಅಕ್ಟೋಬರ್ 8 ರಂದು ಜಿಪಂ ಸಭಾಭವನದಲ್ಲಿ ಸೀಬರ್ಡ್ ನಿರಾಶ್ರಿತರಿಂದ ಅಹವಾಲುಗಳನ್ನು ಸ್ವೀಕರಿಸಲಾಗಿದೆ. ಅವುಗಳನ್ನು ಆಧರಿಸಿ ಸಭೆ ನಡೆಸಿದ್ದೇನೆ. ಪುಣೆಯ ಡಿಫೆನ್ಸ್ ಎಸ್ಟೇಟ್ ಸೇರಿ ವಿವಿಧೆಡೆ 500 ಕ್ಕೂ ಅಧಿಕ ಪ್ರಕರಣಗಳು ಬಾಕಿ ಇವೆ.

ಕಾರವಾರ ಎಸಿ ಅವರಿಗೆ ಜವಾಬ್ದಾರಿ ಇದೆ. ಶೀಘ್ರ ವಿಲೇವಾರಿಗೆ ಕ್ರಮ ವಹಿಸಲು ಅವರಿಗೆ ಸೂಚಿಸಿದ್ದೇನೆ ಎಂದು ತಿಳಿಸಿದರು.

ಶಿರಗುಂಜಿ ಭೂಮಿ ಪಡೆದಿದ್ದರು. ಈಗ ಅವರು ಭೂಮಿ ಪಡೆದಿದ್ದಾರೆ. ವಿಮಾನ ನಿಲ್ದಾಣಕ್ಕೆ ಒಪ್ಪಿಗೆ ಕೊಟ್ಟು 770 ಮೀಟರ್ ರನ್ ವೇ ವಿಸ್ತರಣೆಗೆ. ಪರಿಹಾರ ಕೊಡಲು ರಾಜ್ಯ ಸರ್ಕಾರ 70.ಕೋಟಿ ಬಿಡುಗಡೆ ಮಾಡಬೇಕಿದೆ. ಜನವರಿ ಒಳಗೆ ನೌಕಾನೆಲೆಯಲ್ಲಿ ವಿಮಾನ ನಿಲ್ದಾಣ ವಿಷಯದಲ್ಲಿ ಟೆಂಡರ್ ಕರೆಯಬಹುದು. ಜೂನ್ ಹೊತ್ತಿಗೆ ಕಾಮಗಾರಿ ಪ್ರಾರಂಭಿಸಬಹುದು ಎಂದರು.

ಸೂಚನೆ: ಸ್ಥಳೀಯವಾಗಿ ಕಾಲ್ ಫಾರ್ ಮಾಡಬೇಕು. ಕಾರವಾರದಲ್ಲೇ ನೇಮಕಾತಿ ಪರೀಕ್ಷೆ ನಡೆಯಬೇಕು ಎಂದು ಸೂಚಿಸಿದ್ದೇನೆ. ಉದ್ಯೋಗದ ಅವಕಾಶಗಳನ್ನು ಇಲ್ಲಿಯ ಜನ ಸದ್ಬಳಕೆ ಮಾಡಿಕೊಳ್ಳಬೇಕು.

ಅದಕ್ಕಾಗಿ ಇಲ್ಲಿಯ ಜನರಿಗೆ ಬೇಕಾದ ಕೌಶಲ ಒದಗಿಸಿಕೊಡಲು ಸ್ಥಳೀಯ ಐಟಿಐಗಳಲ್ಲಿ ಪ್ರಾರಂಭಿಸಲು ಚರ್ಚಿಸಿದ್ದೇನೆ ಎಂದು ತಿಳಿಸಿದರು.

ಈ ವೇಳೆ ಎಂಎಲ್ ಸಿ ಗಣಪತಿ ಉಳ್ವೇಕರ್, ನಗರಸಭೆ ಅಧ್ಯಕ್ಷ ರವಿರಾಜ ಅಂಕೋಲೇಕರ್, ಪಕ್ಷದ ಪ್ರಮುಖರಾದ ನಾಗರಾಜ ನಾಯಕ, ಮನೋಜ ಭಟ್ ಇದ್ದರು.

ಕಾರವಾರ ನಗರದ ಪತ್ರಿಕಾಭವನದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ. ಪ್ರಮುಖರಾದ ನಾಗರಾಜ ನಾಯ್ಕ, ಗಣಪತಿ ಉಳ್ವೇಕರ್ ಇದ್ದರು.



ಬಿಎಸ್‌ಎನ್ ಎಲ್ ಇನ್ನೂ 80 ಟವರ್‌ಗೆ ಅರಣ್ಯ ಅನುಮತಿ ಆಗಬೇಕು. 252 ಟವರ್ ಮಂಜೂರಾಗಿತ್ತು. ಒಎಫ್‌ಸಿಗೆ ಅರಣ್ಯ ಅನುಮತಿ ಕೊಡಬೇಕು. ಇದಕ್ಕೆ ರಾಜ್ಯ ಸರ್ಕಾರ ತ್ವರಿತಗತಿಯಲ್ಲಿ ಅನುಮತಿ ನೀಡಬೇಕು. 234 ಟವರ್ ಇದೆ. 96 ಟವರ್‌ಗಳು 4ಜಿಗೆ ಬದಲಾಗಿವೆ. 75 ಸ್ಥಳದಲ್ಲಿ ಡಿಮಾಂಡ್ ಕೊಟ್ಟಿದ್ದರು. ಜ್ಯೋತಿರಾಧಿತ್ಯ ಸಿಂಧಿಯಾ ಅವರನ್ನು ಭೇಟಿಯಾಗಿ ಟವರ್‌ಗಳ ಬೇಡಿಕೆ ಸಲ್ಲಿಸಿದ್ದೆ. ಅದಕ್ಕೆ ಒಪ್ಪಿದ್ದು, ಸ್ಥಳ ಆಯ್ಕೆಗೆ ಸ್ಥಳೀಯ ಅಧಿಕಾರಿಗಳಿಗೆ ಸೂಚಿಸಲಾಗಿದೆ.

-ವಿಶ್ವೇಶ್ವರ ಹೆಗಡೆ ಕಾಗೇರಿ ಸಂಸದರು

ಬಿಎಸ್‌ವೈ ಜತೆ ರೋಡ್ ಶೋದಲ್ಲಿ ಪಾಲ್ಗೊಂಡ ರೂಪಾಲಿ ಎಸ್. ನಾಯ್ಕ

ಕಾರವಾರ : ಸಂಡೂರಿನಲ್ಲಿ ಪಕ್ಷದ ಪರ ಬಿರುಸಿನ ಪ್ರಚಾರ ನಡೆಸುತ್ತಿರುವ ಬಿಜೆಪಿ ರಾಜ್ಯ ಉಪಾಧ್ಯಕ್ಷೆ ರೂಪಾಲಿ ಎಸ್.ನಾಯ್ಕ, ಪಕ್ಷದ ನೇತಾರ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಜತೆ ರೋಡ್ ಶೋದಲ್ಲಿ ಪಾಲ್ಗೊಂಡರು. ಗ್ರಾಮೀಣ ಪ್ರದೇಶದಲ್ಲಿ ಬಿರುಸಿನ ಪ್ರಚಾರ ನಡೆಸಿದರು.

ಸಂಡೂರಿನ ಎಚ್. ಕೆ. ಹಳ್ಳಿಯಲ್ಲಿ ಪಕ್ಷದ ಅಭ್ಯರ್ಥಿ ಬಂಗಾರು ಹನುಮಂತು ಅವರ ಪರವಾಗಿ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರೊಂದಿಗೆ ರೋಡ್ ಶೋದಲ್ಲಿ ರೂಪಾಲಿ ಎಸ್.ನಾಯ್ಕ ಪಾಲ್ಗೊಂಡರು. ಪ್ರಮುಖರಾದ ಜನಾರ್ಧನ ರೆಡ್ಡಿ, ಅಭ್ಯರ್ಥಿ ಬಂಗಾರು ಹನುಮಂತು ಮತ್ತಿತರರು ಇದ್ದರು. ಇದಕ್ಕೂ ಮುನ್ನ ಸಂಡೂರಿನಲ್ಲಿ ನಡೆಯುತ್ತಿರುವ ಚುನಾವಣಾ ಪ್ರಚಾರದ ಬಗ್ಗೆ ರೂಪಾಲಿ ಎಸ್.ನಾಯ್ಕ ಚರ್ಚೆ ನಡೆಸಿದರು. ಮಾಧ್ಯಮ ಗೋಷ್ಠಿಯಲ್ಲೂ ಪಾಲ್ಗೊಂಡು ಚುನಾವಣಾ ಪ್ರಚಾರದ ಬಗ್ಗೆ ಮಾಹಿತಿ ನೀಡಿದರು.

ಸಂಡೂರಿನ ಗ್ರಾಮೀಣ ಭಾಗವಾದ ಯಶವಂತ ನಗರ, ಮತ್ತಿತರ ಕಡೆ ರೂಪಾಲಿ ಎಸ್.ನಾಯ್ಕ ಮಹಿಳಾ ತಂಡದ ನೇತೃತ್ವ ವಹಿಸಿ ಅಬ್ಬರದ ಪ್ರಚಾರ ನಡೆಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಅಗ್ಗದ ಆಮಿಷಗಳನ್ನು ಒಡ್ಡಿ ಅಧಿಕಾರಕ್ಕೇರಿದೆ. ಅಭಿವೃದ್ಧಿ ಶೂನ್ಯವಾಗಿದೆ ಎಂದು ಕಾಂಗ್ರೆಸ್ ವಿರುದ್ಧ ಹರಿಹಾಯ್ದರು. ಅಭಿವೃದ್ಧಿ, ಜನ ಕಲ್ಯಾಣ, ಸಂಡೂರಿನ ಪ್ರಗತಿಗೆ ಬಿಜೆಪಿ ಬದ್ಧವಾಗಿದೆ. ರಾಜ್ಯವನ್ನು ದಿವಾಳಿಯತ್ತ ಕೊಂಡೊಯ್ಯುತ್ತಿರುವ ಕಾಂಗ್ರೆಸ್ ಅನ್ನು ಈ ಚುನಾವಣೆಯಲ್ಲಿ ತಿರಸ್ಕರಿಸಿ, ಬಿಜೆಪಿ ಅಭ್ಯರ್ಥಿ ಬಂಗಾರು ಹನುಮಂತು ಅವರನ್ನು ಪ್ರಚಂಡ ಬಹುಮತದಿಂದ ಗೆಲ್ಲಿಸಿ ಕಾಂಗ್ರೆಸ್ ಗೆ ತಕ್ಕ ಪಾಠ ಕಲಿಸಬೇಕೆಂದು ಮತದಾರರಲ್ಲಿ ರೂಪಾಲಿ ಎಸ್.ನಾಯ್ಕ ಮನವಿ ಮಾಡಿದರು. ಮಹಿಳಾ ಮೋರ್ಚಾ ಅಧ್ಯಕ್ಷೆ ದೀಪಾ ಘೋಡ್ಕೆ, ಗ್ರಾಪಂ ಮಾಜಿ ಅಧ್ಯಕ್ಷೆ, ಹಾಲಿ ಸದಸ್ಯೆ ಬಿ.ಜಿ.ಮಂಜುಳಾ, ಮಹಿಳಾ ಮೋರ್ಚಾ ಪದಾಧಿಕಾರಿಗಳು, ಕಾರ್ಯಕರ್ತರು ಪಾಲ್ಗೊಂಡಿದ್ದರು.

ತಾವು ಮಂಜೂರು ಮಾಡಿದ್ದ ಮನೆ ಗೃಹ ಪ್ರವೇಶ ಕಾರ್ಯಕ್ರಮಕ್ಕೆ ಬೊಮ್ಮಾಯಿ

ಹಾವೇರಿ: ಸಂಸದ ಬಸವರಾಜ ಬೊಮ್ಮಾಯಿಯವರು ಇಂದು ಶಿಗ್ಗಾವಿ ವಿಧಾನಸಭಾ ಕ್ಷೇತ್ರದ ತಿಮ್ಮಾಪುರ ಗ್ರಾಮಕ್ಕೆ ಭೇಟಿ ನೀಡಿದರು. ತಾವು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಪ್ರವಾಹದಲ್ಲಿ ಮನೆ ಕಳೆದುಕೊಂಡಿದ್ದ ಮಲ್ಲೇಶಪ್ಪ ದುರಪ್ಪನವರ ಅವರಿಗೆ ಮನೆ ನಿರ್ಮಾಣಕ್ಕೆ ಐದು ಲಕ್ಷ ರು. ನೀಡಿದ್ದರು. ಇಂದು ಅವರ ನೂತನ ಮನೆ ಗೃಹ ಪ್ರವೇಶ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಶುಭಕೋರಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ತಿಮ್ಮಾಪುರ ಗ್ರಾಮದ ಮಲ್ಲೇಶ್ವಪ್ಪ ದುರಪ್ಪನವರ ಅವರ ಮನೆ ಪ್ರವಾಹದಲ್ಲಿ ಬಿದ್ದಿತ್ತು. ನಾನು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಇಲ್ಲಿಗೆ ಭೇಟಿ ನೀಡಿ, ಐದು ಲಕ್ಷ ರು. ಮನೆ ಮಂಜೂರು ಮಾಡಿದ್ದೆ. ಅವರ ಸತತ ಪರಿಶ್ರಮದ ಫಲ ಸುಂದರ ಮನೆ ಕಟ್ಟಿಕೊಂಡಿದ್ದಾರೆ. ಸ್ವಾಭಿಮಾನದ ಬದುಕು ಕಟ್ಟಿಕೊಂಡಿದ್ದಾರೆ. ಇವತ್ತು ಅವರು ಮನೆ ಗೃಹ ಪ್ರವೇಶ ಕಾರ್ಯಕ್ರಮ ಮಾಡಿದ್ದಾರೆ. ನನಗೂ ಆಹ್ವಾನ ನೀಡಿದ್ದರು. ಶಿಗ್ಗಾವಿ ಕ್ಷೇತ್ರದಲ್ಲಿ ಈ ರೀತಿ ಸಾವಿರಾರು ಮನೆ ನಿರ್ಮಾಣ ಮಾಡಿದ್ದೇವೆ. ಒಂದೂ ಮನೆ ಕಟ್ಟಿಲ್ಲ ಎಂದು ಆರೋಪ ಮಾಡುವವರು ಹೇಳುತ್ತಿರುವುದು ಸುಳ್ಳು ಎನ್ನುವುದಕ್ಕೆ ಈ ಮನೆ ಸಾಕ್ಷಿ ಎಂದು ಹೇಳಿದರು.

ಎಂಜನೀಯರ್ ಕಾಲೇಜು ಮಾಡುವ ಕನಸಿದೆ: ಭರತ್

ಹಾವೇರಿ: ಶಿಗ್ಗಾಂವಿ ಸವಣೂರು ಕ್ಷೇತ್ರದ ಯುವಕರಿಗೆ ಒಂದು ಎಂಜನಿಯರಿಂಗ್ ಕಾಲೇಜು ಮಾಡುವ ಕನಸಿದೆ. ಬರುವ ದಿನಗಳಲ್ಲಿ ಆ ಕನಸು ನನಸು ಮಾಡುತ್ತೇನೆ ಎಂದು ಬಿಜೆಪಿ ಅಭ್ಯರ್ಥಿ ಭರತ ಬೊಮ್ಮಾಯಿ ಹೇಳಿದರು.

ಇಂದು ಶಿಗ್ಗಾಂವಿಯಲ್ಲಿ ಏರ್ಪಡಿಸಿದ್ದ ಯುವಕರ ಸಮಾವೇಶದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ನಾನು ಹಳ್ಳಿಗರ ಪರವಾಗಿ, ಯುವಕರ ಪರವಾಗಿ ಕೆಲಸ ಮಾಡುತ್ತೇನೆ. ನಮ್ಮ ತಂದೆ ಈ ಕ್ಷೇತ್ರದ ನೀರಿನ ಸಮಸ್ಯೆ ಬಗೆ ಹರಿಸಿದ್ದಾರೆ. ಊರಿನ ರಸ್ತೆಗಳು ಆಗಿದ್ದಾವೆ. ಕೇಂದ್ರ ಸರ್ಕಾರದಿಂದ ನೇರವಾಗಿ ಕಿಸಾನ್ ಸಮ್ಮಾನ್ ಯೋಜನೆ ಬರುತ್ತಿದ್. ನಮ್ಮ ತಂದೆ ರೈತರ ಮಕ್ಕಳಿಗೆ ರೈತ ವಿದ್ಯಾನಿಧಿ ಯೋಜನೆ ಜಾರಿ ಮಾಡಿದ್ದರು. ಈ ಸರ್ಕಾರ ಬಂದು ಅದನ್ನು ನಿಲ್ಲಿಸಿದ್ದಾರೆ. ಇವರಿಗೆ ಈ ಉಪ ಚುನಾವಣೆಯಲ್ಲಿ ತಕ್ಕ ಉತ್ತರ ಕೊಡಬೇಕು ಎಂದರು.

ನಮ್ಮ ತಂದೆ ನಮ್ಮ ಕ್ಷೇತ್ರದಲ್ಲಿ ಹದಿನೈದು ಸಾವಿರ ಮನೆ ಕಟ್ಟಿದ್ದಾರೆ. ಯುವಕರ ಪರವಾಗಿ, ಶಾಲೆ, ಕಾಲೇಜು, ಜಿಟಿಟಿಸಿ, ಐಟಿಐ ಕಾಲೇಜು ಕಟ್ಟಿಸಿದ್ದಾರೆ. ಅಂಬುಜಾ ಕಂಪನಿ, ಶಾಹಿ ಸಂಸ್ಥೆ ಬಂದಿದೆ. ಗಾರ್ಮೆಂಟ್ ನಲ್ಲಿ ಹತ್ತು ಸಾವಿರ ಹೆಣ್ಣುಮಕ್ಕಳು ಕೆಲಸ ಮಾಡುತ್ತಿದ್ದಾರೆ.

ಶಿಗ್ಗಾಂವಿ ಯಲ್ಲಿ 250 ಬೆಡ್ ನ ಆಸ್ಪತ್ರೆ ಆರಂಭವಾಗುತ್ತಿದೆ. ಕನಕದಾಸರ ಬಾಡ ಅಭಿವೃದ್ಧಿ, ಶಿಶುನಾಳ ಶರೀಫರ ಊರು ಅಭಿವೃದ್ಧಿ, ಜಗತ್ತಿನ ಮೊದಲ ವಿಶ್ವ ವಿದ್ಯಾಲಯ ನಮ್ಮ ಕ್ಷೇತದಲ್ಲಿ ಬಂದಿದೆ. ನಮ್ಮ ತಂದೆಯ ಕನಸು ನನಸು ಮಾಡಲು ತಂದೆಯ ಮಾರ್ಗದರ್ಶನ ನಿಮ್ಮ ಮಾರ್ಗದರ್ಶನದಲ್ಲಿ ಅಭಿವೃದ್ಧಿ ಮಾಡುತ್ತೇನೆ.

ಎಲ್ಲ ಸಮುದಾಯಗಳಿಗೆ ಸಾಮಾಜಿಕ ನ್ಯಾಯ ನೀಡಿ ನಿಮ್ಮ ಮಗನಾಗಿ ನಿಮ್ಮ ಸೇವೆ ಮಾಡುತ್ತೇನೆ. ಈ ಚುನಾವಣೆಯಲ್ಲಿ ಗೆಲ್ಲಿಸುವ ಮೂಲಕ ನಿಮ್ಮ ಸೇವೆ ಮಾಡಲು ಅವಕಾಶ ನೀಡಿ ಎಂದು ಮನವಿ ಮಾಡಿದರು.

ವಿಶ್ವವಾಣಿ
ಆರಾಮ
ಅನುದಿನವೂ ವಿರಾಮಕ್ಕೆ ಒಂದು ನೆಪ
ಪ್ರತಿದಿನ ಆರಾಮದಿಂದ ಓದಿ

ನಾಳೆಯಿಂದ ಪ್ರತಿಬಂಧಕಾಜ್ಞೆ ಜಾರಿ: ಜಿಲ್ಲಾಧಿಕಾರಿ

ಹಾವೇರಿ: ಶಿಗ್ಗಾಂವಿ ವಿಧಾನಸಭಾ ಕ್ಷೇತ್ರದ ಉಪ ಚುಣಾವಣೆ ಹಿನ್ನಲೆಯಲ್ಲಿ ನ. 13 ರಂದು ಮತದಾನ ಜರುಗಲಿದ್ದು, ಮತದಾನ ಮುಕ್ತಾಯಗೊಳ್ಳುವ ಅವಧಿಯ 48 ಗಂಟೆಗಳ ಪೂರ್ವದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ಹಾಗೂ ಮತದಾನವು ಸುಗಮವಾಗಿ ಮತ್ತು ಮುಕ್ತವಾಗಿ ಜರುಗಿಸುವ ಹಿತದೃಷ್ಟಿಯಿಂದ ಬಿ.ಎನ್.ಎಸ್.ಎಸ್.2023ರ ಕಲಂ 163ರ ಮೇರೆಗೆ ಪ್ರತಿಬಂಧಕಾಜ್ಞೆ ವಿಧಿಸಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಅವರು ಆದೇಶ ಹೊರಡಿಸಿದ್ದಾರೆ.

ಜಿಲ್ಲೆಯಾದ್ಯಂತ ನ.13-11-2024 ರಂದು ಮತದಾನ ನಡೆಯಲಿದೆ. ಮತದಾನ ಕೊನೆಗೊಳ್ಳುವ 48 ಗಂಟೆಗಳ ಪೂರ್ವದಲ್ಲಿ ಅಂದರೆ ದಿನಾಂಕ 11-11-2024 ರಂದು ಸಂಜೆ 6 ಗಂಟೆಯಿಂದ ಪ್ರಾರಂಭಿಸಿ ದಿನಾಂಕ 14 ಸಂಜೆ 6 ಗಂಟೆಯವರೆಗೆ ಬಿ.ಎನ್.ಎಸ್.ಎಸ್.2023ರ ಕಲಂ 163ರ ಮೇರೆಗೆ ಪ್ರತಿಬಂಧಕಾಜ್ಞೆ ವಿಧಿಸಲಾಗಿದೆ. ಈ ಅವಧಿಯಲ್ಲಿ ಶಿಗ್ಗಾಂವ ವಿಧಾನಸಭಾ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಐದಕ್ಕಿಂತ ಹೆಚ್ಚು ಜನರು ಗುಂಪು ಸೇರುವುದು, ಮೆರವಣ ಗೆ ಅಥವಾ ಸಭೆ ಸಮಾರಂಭ ಜರುಗಿಸುವುದನ್ನು ನಿಷೇಧಿಸಿದೆ. ಚುನಾವಣಾ ಅಭ್ಯರ್ಥಿ, ಬೆಂಬಲಿಗರು ಸೇರಿ ಐದು ಜನರಿಗಿಂತ ಹೆಚ್ಚಿನ ಸಂಖ್ಯೆಯ ಜನರು ಸೇರತಕ್ಕದ್ದಲ್ಲ. ಶಸ್ತ್ರ, ಬಡಿಗೆ, ಭರ್ಚಿ, ಖಡ್ಗ, ಗದೆ, ಬಂದೂಕು, ಚೂರಿ, ಲಾಠಿ, ಡೊಣ್ಣೆ, ಚಾಕು ಅಥವಾ ದೇಹಕ್ಕೆ ಅಪಾಯವನ್ನು ಉಂಟು ಮಾಡಬಹುದಾದ ಯಾವುದೇ ಮಾರಕಾಸ್ತ್ರಗಳನ್ನು ತೆಗೆದುಕೊಂಡು ಹೋಗುವುದನ್ನು ಮತ್ತು ಅವುಗಳೊಂದಿಗೆ ತಿರುಗಾಡುವುದನ್ನು ಪ್ರತಿಬಂಧಿಸಲಾಗಿದೆ.

ಈ ಪ್ರದೇಶ ವ್ಯಾಪ್ತಿಯಲ್ಲಿ ಬರುವ ಝುರಾಕ್ಸ್ ಅಂಗಡಿ, ಬುಕ್ ಸ್ಟಾಲ್, ಸೈಬರ್ ಕೆಫೆಗಳನ್ನು ನಿರ್ಭಂಧಿಸಲಾಗಿದೆ. ಮತದಾನ ದಿನದಂದು ಮತಗಟ್ಟೆಗಳ 100 ಮೀಟರ್ ಒಳಗೆ ಚುನಾವಣೆ ಪ್ರಚಾರ ನಿಷೇಧಿಸಿದೆ. ಸ್ಫೋಟಕ ವಸ್ತುಗಳು ಯಾವುದೇ ದಾಹಕ ವಸ್ತುಗಳು ಇತ್ಯಾದಿಗಳನ್ನು ಈ ಸ್ಥಳಕ್ಕೆ ತೆಗೆದುಕೊಂಡು ಹೋಗುವುದನ್ನು ಹಾಗೂ ಶೇಖರಿಸುವುದನ್ನು ನಿಷೇಧಿಸಲಾಗಿದೆ.

ಈ ಸ್ಥಳದಲ್ಲಿ ಬಹಿರಂಗವಾಗಿ ಘೋಷಣೆ ಮಾಡುವುದು, ಪದ ಹಾಡುವುದು, ವಾದ್ಯ ಬಾರಿಸುವುದು, ವ್ಯಾಖ್ಯಾನ ಕೊಡುವುದು, ಸನ್ನೆ ಅಥವಾ ನಕಲಿ ಪ್ರದರ್ಶನವನ್ನು ಹಾಗೂ ಸಾರ್ವಜನಿಕ ಸಭ್ಯತೆ ಅಥವಾ ನೀತಿಯನ್ನು ಆಕ್ರಮಿಸಬಹುದಾದ ಕೃತ್ಯಗಳನ್ನು ಮಾಡುವುದನ್ನು ನಿಷೇಧಿಸಲಾಗಿದೆ.

ಬಹಿರಂಗ ಪ್ರಚಾರ ದಿನಾಂಕ 11-11-2024ರ ಸಂಜೆ 6 ಗಂಟೆಗೆ ಕೊನೆಗೊಳ್ಳಲಿದೆ,ಈ ಅವಧಿಯ ನಂತರ ಶಿಗ್ಗಾಂವ ಕ್ಷೇತ್ರದ ಮತದಾರರಲ್ಲದವರು ಕ್ಷೇತ್ರದ ವ್ಯಾಪ್ತಿಯಿಂದ ಹೊರಗೆ ಹೋಗತಕ್ಕದ್ದು.

ಕಲ್ಯಾಣ ಮಂಟಪಗಳು, ಸಮುದಾಯ ಭವನಗಳು, ಹೋಟೆಲುಗಳು ಮತ್ತು ಅತಿಥಿ ಗೃಹಗಳಲ್ಲಿ ವಾಸ್ತವ್ಯ ಹೂಡಿದವರ ಪಟ್ಟಿಗಳ ಪರಿಶೀಲನೆ ಮಾಡಲಾಗುವುದು.

ಶಿಗ್ಗಾಂವಿ ವಿಧಾನಸಭಾ ಕ್ಷೇತ್ರದ ಮತದಾರರಲ್ಲದವರು ಮತಕ್ಷೇತ್ರದ ವ್ಯಾಪ್ತಿಯಿಂದ ಹೊರಗೆ ಕಳುಹಿಸಲು ಪೊಲೀಸ್ ಇಲಾಖೆ ಕ್ರಮಕೈಗೊಳ್ಳಲಿದೆ. ವಿಧಾನಸಭಾ ಕ್ಷೇತ್ರಗಳ ಗಡಿ ಪ್ರದೇಶಗಳಲ್ಲಿ ಇರುವ ಚೆಕ್ ಪೋಸ್ಟ್‌ಗಳಲ್ಲಿ ಮತಕ್ಷೇತ್ರದ ಹೊರಗಿನಿಂದ ಬರುವ ಎಲ್ಲಾ ರೀತಿಯ ವಾಹನಗಳನ್ನು ಕಡ್ಡಾಯವಾಗಿ, ಸೂಕ್ಷ್ಮವಾಗಿ ಪರಿಶೀಲಿಸಬೇಕು.

ಈ ಆದೇಶವನ್ನು ಉಲ್ಲಂಘಿಸುವವರ ವಿರುದ್ಧ ಭಾರತೀಯ ನ್ಯಾಯ ಸಂಹಿತೆಯ ಕ್ರಮವನ್ನು ಜರುಗಿಸಲಾಗುವುದು. ಈ ಆದೇಶವನ್ನು ಮತದಾನ ಸಿಬ್ಬಂದಿ ಮತ್ತು ಅಧಿಕಾರಿಗಳಿಗೆ, ಪೊಲೀಸ್ ಅಧಿಕಾರಿಗಳಿಗೆ ಹಾಗೂ ಚುನಾವಣಾ ಕಾರ್ಯನಿರತ ಸಿಬ್ಬಂದಿ ಮತ್ತು ಅಧಿಕಾರಿಗಳಿಗೆ ಹಾಗೂ ಒಬ್ಬೊಬ್ಬರಾಗಿ ಮತಗಟ್ಟೆಗಳಿಗೆ ತೆರಳಿ ಮತದಾನ ಮಾಡುವ ಮತದಾರರಿಗೆ ಅನ್ವಯಿಸುವುದಿಲ್ಲ ಎಂದು ತಿಳಿಸಿದ್ದಾರೆ.

ACRE
MAKING ASSETS WORK
ಅಸೆಟ್ಸ್ ಕೇರ್ ಮತ್ತು ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸ್ ಲಿಮಿಟೆಡ್
ಕಾರ್ಪೊರೇಟ್ ಕಚೇರಿ: ಘಟಕ ಸಂಖ್ಯೆ. 502, ಸಿ ವಿಂಗ್, ಒನ್ ಬಿಕೆಸಿ, ಪ್ಲಾಟ್ ಸಂಖ್ಯೆ. ಸಿ - 66, ಜಿ - ಬ್ಲಾಕ್, ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್, ಮುಂಬೈ - 400051. ದೂರವಾಣಿ : 022 68643101
ನೋಂದಾಯಿತ ಕಚೇರಿ: 14 ನೇ ಮಹಡಿ, ಇರಾಸ್ ಕಾರ್ಪೊರೇಟ್ ಟವರ್, ನೆಹರು ಪ್ಲೇಸ್, ನವದೆಹಲಿ - 110019
ಇಮೇಲ್ : acre.arc@acreindia.in I **ವೆಬ್‌ಸೈಟ್:** www.acreindia.in I **CIN :** U65993DL2002PLC115769

ಆರ್ಥಿಕ ಆಸ್ತಿಯ ಭದ್ರತೆ ಮತ್ತು ಪುನನಿರ್ಮಾಣ ಮತ್ತು ಬಡ್ಡಿಯ ಹಿತಾಸಕ್ತಿ ರಕ್ಷಣಾಕ್ರಮದ ಅಧಿನಿಯಮ 2002 ಸೆಕ್ಷನ್ 13 (2) ಕಾಲಂನ ಪ್ರಕಾರ ಜಾರಿ ಮಾಡುವದಕ್ಕಾಗಿ ಕೊಟ್ಟ ಸೂಚನೆ (ಅಧಿನಿಯಮ)

ಅ ನಂ.	ಸಾಲಗಾರರ ಹೆಸರು (ಎ)	ಅಡವು ಇಟ್ಟ ಆಸ್ತಿಯ ವಿವರ (ಬಿ)	ಎನ್‌ಪಿಎಯ ತಾರೀಖು (ಸಿ)	ಬಾಕಿ ಉಳಿದ ಕೊಡಬೇಕಾದಹಣ (ಡಿ)
1.	ಸಾಲ ಖಾತೆ ನಂ. S072OXXIII (ಈ ಹಿಂದೆ ಡಿಹೆಚ್‌ಎಫ್‌ಎಲ್ ನ LAN 00007255 ಮತ್ತು ಐಹೆಚ್‌ಎಫ್‌ಎಲ್ ನ LAN S800001181 / HDHLHBL00489190 (ಈಗ ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್ ಎಂದು ಕರೆಯಲಾಗುತ್ತದೆ) 1. ಶಕುಂತಲಾ ಸಿದ್ದಪ್ಪ ಬಜಂತ್ರಿ ಅಲಿಯಾಸ್ ಶಕುಂತಲಾ ಎಸ್ ಭಜಂತ್ರಿ (ಸಹ-ಸಾಲಗಾರ, ಮಗಳು ಹಾಗೂ ದಿವಂಗತ ಅಕ್ಕಮಹಾದೇವಿ ಸಿದ್ದಪ್ಪ ಭಜಂತ್ರಿಯವರ ಕಾನೂನು ಉತ್ತರಾಧಿಕಾರಿ) 2. ಫಕ್ಕೀರೇಶ್ ಸಿದ್ದಪ್ಪ ಭಜಂತ್ರಿ ಅಲಿಯಾಸ್ ಫಕ್ಕೀರೇಶ್ ಬಜಂತ್ರಿ (ಮಗ ಹಾಗೂ ದಿವಂಗತ ಅಕ್ಕಮಹಾದೇವಿ ಸಿದ್ದಪ್ಪ ಭಜಂತ್ರಿಯವರ ಕಾನೂನು ಉತ್ತರಾಧಿಕಾರಿ)	ಆಸ್ತಿ ಹೊಂದಿರುವ ವಿಪಿಸಿ ನಂ. 1326, 1326 ಎ/1 ಮತ್ತು 1326 ಎ/2, ವಿರಕ್ತಿಮಟ್ಟ ರಸ್ತೆ, ಲಕ್ಷ್ಮಿ ದೇವಸ್ಥಾನದ ಹತ್ತಿರ, ಸೌಂಶಿ ಗ್ರಾಮ, ಕುಂದಗೋಳ ತಾಲೂಕು ಧಾರವಾಡ, ಕರ್ನಾಟಕ - 581117	31.12.2020	30.09.2024ರಂದಿನಂತೆ ರೂ. 34,57,340.63/- (ರೂಪಾಯಿ ಮೂವತ್ತ ನಾಲ್ಕು ಲಕ್ಷ ಐವತ್ತ ಏಳು ಸಾವಿರದ ಮುನ್ನೂರ ನಲವತ್ತು ಮತ್ತು ಪೈಸೆ ಅರವತ್ತ ಮೂರು ಮಾತ್ರ)

ಈ ಮೇಲೆ ಹೆಸರಿಸಲಾದ ಸಾಲಗಾರ (ರು) ಆರ್ಥಿಕ ಶಿಸ್ತು ಮತ್ತು ಸಾಲದ ಖಾತೆಯ ಜವಾಬ್ದಾರಿಯ ಹೊಣೆಯನ್ನು ಸರಿಯಾಗಿ ಪಾಲಿಸದೇ ಇದ್ದುದರಿಂದ ಕಂಪನಿಯು ತಮ್ಮ ಲೆಕ್ಕಾಶಾಸ್ತ್ರ ಪುಸ್ತಕಗಳ ಆಧಾರದಿಂದ ಈ ಸಾಲ ಪಡೆದವರ ಈಗ ಕೊಡಬೇಕಾದ ಮೊತ್ತವನ್ನು ಕಾಲಮ್ ಡಿ ಸಾಮಾನ್ಯ ಉದ್ಯೋಗ ನಿರ್ವಹಣೆಯ ಪ್ರಕಾರ, ಕೊಡದೇ ವಿಫಲರಾಗಿದ್ದಾರೆ ಎಂದು ತೋರಿಸಿಕೊಟ್ಟಿದೆ.

ಪ್ರತಿಯೊಬ್ಬ ಸಾಲ ಪಡೆದವ (ರು) ಮರಳಿ ಸಾಲ ತೀರಿಸುವಬಗ್ಗೆ ದೀರ್ಘಕಾಲದ ತೀವ್ರ ಉಪೇಕ್ಷೆ ತೋರಿಸಿದುದ ರಿಂದ ಅವರ ಸಾಲದ ಖಾತೆಯನ್ನು ಕಂಪನಿಯವರು ನಿರ್ದಿಷ್ಟಪಡಿಸಲಾದ ನಿಯಮಗಳಂತೆ ಅನುತ್ಪಾದಕ ಆಸ್ತಿ (ಕಾಲಮ್ ಸಿಯಲ್ಲಿನ ತಾರೀಖಿನಂದು) ಎಂದು ವರ್ಗೀಕರಿಸಿದ್ದಾರೆ. ತತ್ಪರಿಣಾಮವಾಗಿ ಆ್ಯಕ್ಟ್‌ನ ಸೆಕ್ಷನ್ 13 (2) ಅಧಿನಿಯಮದಂತೆ ಪ್ರತಿಯೊಬ್ಬ ಸಾಲಗಾರನಿಗೆ (ರಿಗೆ) ಸೂಚನೆಗಳನ್ನು ಕೂಡಾ ನೀಡಲಾಗಿದೆ.

ಈ ಮೇಲಿನದ್ದರ ಕಾರಣ ಈ ಮೇಲೆಹೆಸರಿಸಲಾದ ಪ್ರತೀಯೊಬ್ಬ ಸಾಲಗಾರನಿಗೆ (ರಿಗ)ಕಂಪೆನಿಯು ಈ ಮೇಲೆ ಕಾಲಮ್ ಡಿಯಲ್ಲಿ ದರ್ಶಿಸಲಾದ ಬಾಕಿ ಮೊತ್ತವನ್ನು ಈ ತನಕದ ಬಡ್ಡಿ, ವೆಚ್ಚಗಳು ಮತ್ತು ಚಾರ್ಜಸ್‌ನೊಂದಿಗೆ ಈ ಸೂಚನೆ ಪ್ರಕಟವಾದ 60 ದಿನಗಳಲ್ಲಿ ಪಾವತಿಸುವ ಮೂಲಕ ಕಂಪೆನಿಯ ಮೇಲಿನ ಅವನ/ಅವಳ ಸಂಪೂರ್ಣ ಬಾಧ್ಯತೆಯನ್ನು ಪೂರ್ಣಗೊಳಿಸಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತಿದ್ದು ಇದಕ್ಕೆ ತಪ್ಪಿದಲ್ಲಿ, ಕಂಪನಿಯು ಈ ಮೇಲೆ ಕಾಲಮ್ ಬಿಯಲ್ಲಿ ನಮೂದಿಸಲಾದ ಅಡವು ಇಟ್ಟ ಆಸ್ತಿಯನ್ನು ಸ್ವಾಧೀನ ಪಡಿಸಿಕೊಳ್ಳಲು ಅರ್ಹವಾಗಿದೆ ಮತ್ತು ಕಂಪೆನಿ ಕಾನೂನಿನಲ್ಲಿ ಉಪಲಬ್ಧವಿರುವ ಇತರ ಕ್ರಮಗಳನ್ನು ಕೂಡಾ ತೆಗೆದು ಕೊಳ್ಳುತ್ತದೆ.

ಎಸ್‌ಎಆರ್‌ಎಫ್‌ಎಇಎಸ್‌ಐ (SARFAESI) ಆ್ಯಕ್ಟ್‌ನ ಸೆಕ್ಷನ್ 13ರ ಸೆಕ್ಷನ್ (8)ರ ನಿಬಂಧನೆಗಳ ವಿಶಿಷ್ಟ ಭಾಷೆಯಲ್ಲಿರುವ ಮುಂದಿನ ವಿಷಯವನ್ನು ದಯವಿಟ್ಟು ಗಮನಿಸಿರಿ: ''ಒಬ್ಬ ಸಾಲಗಾರನು ಅಡವಿನ ಆಧಾರದ ಮೇಲೆ ತನಗೆ ಸಾಲ ಕೊಟ್ಟಿರುವವನಿಗೆ, ಆತ ಸಾರ್ವಜನಿಕ ಹರಾಜಿನ ಮೂಲಕ, ಸಾರ್ವಜನಿಕರಿಂದ ಕೊಟೇಶನ್‌ಗಳನ್ನು, ಟೆಂಡರನ್ನು ಆಹ್ವಾನಿಸುವ ಮೂಲಕ ಅಥವಾ ಖಾಸಗಿ ಕರಾರಿನ ಮೂಲಕ ಅಡವಿಟ್ಟಿರುವ ಆಸ್ತಿಯನ್ನು(ಗಳನ್ನು) ಮಾರಾಟ ಮಾಡಲು ನೋಟೀಸನ್ನು ಪ್ರಕಟಿಸುವ ತಾರೀಖಿನ ತನಕ ಮಾತ್ರ, ಆತನ ಎಲ್ಲಾ ವ್ಯವಹಾರದ ವೆಚ್ಚಗಳು, ಚಾರ್ಜುಗಳು ಮತ್ತು ಖರ್ಚುಗಳೊಂದಿಗೆ ತನ್ನಿಂದ ಬಾಕಿ ಇರುವ ಹಣದ ಸಂಪೂರ್ಣ ಮೊತ್ತವನ್ನು ಸಲ್ಲಿಸಬಹುದು. ಜೊತೆಯಲ್ಲೇ ಇದನ್ನೂ ಗಮನಿಸಬಹುದು: ಸಾಲಗಾರನು ಮೇಲೆ ಹೇಳಿರುವ ಕಾಯಿದೆಬದ್ಧವಾಗಿ ಆದೇಶಿಸಿರುವ ಸಮಯದ ಚೌಕಟ್ಟಿನೊಳಗೆ ತಾನು ಅಡವಿಟ್ಟಿರುವ ಆಸ್ತಿಯನ್ನು ಬಿಡಿಸಿಕೊಳ್ಳದೆ ಹೋದರೆ, ಸಾಲಗಾರನು ಆ ಆಸ್ತಿಯನ್ನು ಬಿಡಿಸಿಕೊಳ್ಳುವ ಹಕ್ಕಿಗೆ ಅರ್ಹನಿಲ್ಲದಿರಬಹುದು''

ಎಸ್‌ಎಆರ್‌ಎಫ್‌ಎಇಎಸ್‌ಐ ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (13)ರ ನಿಬಂಧನೆ ಪ್ರಕಾರ ಒಂದೋ ಮಾರಾಟ, ಲೀಸ್ ಅಥವಾ ಅನ್ಯಥಾ (ಅವನ ವ್ಯಾಪಾರದ ಸಾಮಾನ್ಯ ವಿಧಾನದ ಹೊರತಾಗಿ)ವಿಧಾನದಿಂದ ಸೂಚನೆಯಲ್ಲಿ ಉಲ್ಲೇಖಿಸಲಾದ ಯಾವುದೇ ಸೆಕ್ಯೂರ್ಡ್ ಆಸ್ತಿಯನ್ನು ಸೆಕ್ಯೂರ್ಡ್ ಕ್ರೆಡಿಟರರ ಲಿಖಿತ ಪೂರ್ವ ಸಮ್ಮತಿ ಇಲ್ಲದೆ ನೀವು ವರ್ಗಾಯಿಸುವುದನ್ನು ಈ ಮೂಲಕ ನಿಷೇಧಿಸಲಾಗಿದೆ.

''ಯಾವುದೇ ಕುಂದುಕೊರತೆಗಾಗಿ ನೀವು ಶ್ರೀ ಮೊಹಮ್ಮದ್ ಶಾರಿಕ್ ಮಲಿಕ್, ಕುಂದುಕೊರತೆ ನಿವಾರಣಾ ಅಧಿಕಾರಿ, ದೂರವಾಣಿ ಸಂಖ್ಯೆ. **011&66115609**, ಇಮೇಲ್: **complaint@acreindia.in** ಅನ್ನು ಸಂಪರ್ಕಿಸಬಹುದು. ಸಂಸ್ಥೆಯೊಳಗಿನ ಕುಂದುಕೊರತೆ ಪರಿಹಾರ ಕಾರ್ಯವಿಧಾನದ ವಿವರವಾದ ನೀತಿಯನ್ನು **https://www.acreindia.in/compliance** ನಲ್ಲಿ ಪಡೆಯಬಹುದು.''

ಅಸೆಟ್ ಕೇರ್ ಮತ್ತು ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸ್ ಲಿ. ಗಾಗಿ
ಎ.ಸಿ.ಆರ್.ಇ 102 ಟ್ರಸ್ಟ್‌ನ ಟ್ರಸ್ಟಿಯಾಗಿ ಅದರ ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ
ಸ್ಥಳ : ಧಾರವಾಡ **ಅಧಿಕೃತ ಅಧಿಕಾರಿ**

Muthoot Finance
ಚಿನ್ನದ ಹರಾಜಿನ ಸೂಚನಾ ಪತ್ರ
GSTN - 29AABCT0343B1ZU
Registered Office: 2nd Floor, Muthoot Chambers, Banerji Road, Kochi-682 018, Kerala, India. CIN:L65910KL1997PLC011300, Ph:+91 484 2396478. 2394712, Fax:+91 484 2396506.
mails@muthootgroup.com, www.muthootfinance.com

ಈ ಮೂಲಕ ಎಚ್ಚರಿಕೆ ಮಾಹಿತಿಯನ್ನು ನೀಡುತ್ತಿದ್ದು ನೀವು ನಿಮ್ಮ ಚಿನ್ನಾಭರಣವನ್ನು ಈ ಕೆಳಕಂಡ ಶಾಖೆಗಳಲ್ಲಿ ಗಿರಿವಿ ಇಟ್ಟಿದ್ದು, ಪುನರಾವರ್ತಿತ ಪ್ರಕಟಣೆಗಳನ್ನು ನೀಡಿದ್ದರೂ ಸಹ ಪಡೆದುಕೊಂಡ ಬಾಕಿ ಮೊತ್ತವನ್ನು ನೀಡಲು ವಿಫಲರಾಗಿದ್ದಿರಿ. ಆದ್ದರಿಂದ ಕಂಪನಿಯು ಸಂಬಂಧಪಟ್ಟ ಶಾಖೆಗಳಲ್ಲಿ ದಿನಾಂಕ 16.11.2024 ರಂದು ಬೆಳಿಗ್ಗೆ 10.00 ಗಂಟೆಗೆ ಹರಾಜು ಮಾಡಲು ನಿರ್ಧರಿಸಿರುತ್ತಾರೆ. ಮೇಲ್ಕಂಡ ದಿನಾಂಕದಂದು ಯಾವುದೇ ಕಾರಣದಿಂದ ಹರಾಜು ನಡೆಯದಿದ್ದರೆ, ಹರಾಜುಗಾರರು ಹರಾಜು ಪ್ರಕ್ರಿಯೆಯನ್ನು ಮುಂದೂಡುವ ಹಕ್ಕನ್ನು ಹೊಂದಿರುತ್ತಾರೆ ಹಾಗೂ ಯಾವುದೇ ಸೂಚನಾ ಪತ್ರ ನೀಡದೆ ಎರಡನೇ ಹರಾಜಿನ ದಿನಾಂಕದಂದು ಅಥವಾ ಅನಂತರದ ದಿನಾಂಕಗಳಂದು ಹರಾಜು ಪ್ರಕ್ರಿಯೆಯನ್ನು ಈ ಕೆಳಗೆ ನೀಡಿರುವ ವಿಳಾಸದಲ್ಲಿ ನಡೆಸಲಾಗುತ್ತಾದೆ. ಹಾರಾಜು ಹಾಕುವ ದಿನಾಂಕದಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ,ಬದಲಾದ ದಿನಾಂಕವನ್ನು ಹರಾಜು ನಡೆಯುವ ಸ್ಥಳದಲ್ಲಿ, ಸೂಚಿಸಲಾಗುವುದು.

ಎರಡನೇ ಹರಾಜು ದಿನಾಂಕ : **22.11.2024,03:00PM,** ಹರಾಜು ಕೇಂದ್ರ : ಮುತ್ತೂಟ್ ಫೈನಾನ್ಸ್ ಲಿಮಿಟೆಡ್, ಶಫಿ ಕಾಂಪ್ಲೆಕ್ಸ್ ಹಳೆ ಬಸ್‌ಸ್ಟ್ಯಾಂಡ್ ಹತ್ತಿರ ನೆಲ್ಲಿಕೇರಿ, ಕುಮ್ಟಾ - (ಕಾ), ಉತ್ತರ ಕನ್ನಡ, ಕರ್ನಾಟಕ-581343 (ಉತ್ತರ ಕನ್ನಡ ಜಿಲ್ಲೆ) (3714)
ಅಂಕೋಲಾ(KA)(4160)- MAL- 5360, MHP- 101, MSL- 10888, 10914, 11093, MDD- 52, MDL- 151, MHL- 293, 439, 546, 549, 551, 643, SRS- 163, 230, TTB- 12, ಬನವಾಸಿ(3953)- MAL- 8019, MHL- 263, SRS- 223, ಭಟ್ಕಳ(KA)(1904)- MSL- 17259, MHL- 404, SRS- 280, 282, 320, ದಾಂಡೇಲಿ(KA)(3956)- MAL- 7281, 7455, 7736, 8004, 8339, 8387, 8404, MHP- 82, MSL- 16810, 16830, 17220, 17229, MDD- 51, MHL- 104, 194, 495, 697, SRS- 294, 76, 156, 168, 169, 170, 175, 217, 301, 302, TMS- 10, 9, WBP- 103, BTN- 41, BVS- 1, SBS- 10, ಹಳಿಯಾಳ(KA)(4876)- MSL- 1970, MHL- 272, SRS- 29, ಹೊನ್ನಾವರ(KA)(2411)- MSL- 8814, MDD- 3, 10, 41, MHL- 236, SRS- 45, ಕಾರವಾರ(KA)(1613)- MAL- 3594, 3854, 4107, MHP- 62, MSL- 18783, 19082, 19087, 19169, 19435, MDL- 36, 180, 305, MHL- 263, 161, 247, 253, 266, 313, 602, 840, 890, 896, 929, 958, 986, 991, 995, 1000, 1066, 1067, 1107, 1108, 1175, 1188, 1190, SRS- 156, 59, 136, 139, 178, 242, TOS- 15, TWS- 3, 2, ಕುಮಟಾ(KA)(3714)- MAL- 3163, 3197, MSL- 10171, MHL- 372, SRS- 17, 127, ಮುಂಡಗೋಡು(KA)(4902)- MAL- 1626, MHL- 149, ಮುರ್ಡೇಶ್ವರ(4030)- MSL- 11193, 11635, MHL- 380, SRS- 53, 54, 226, ಸದಾಶಿವಗಡ್(4811)- SRS- 126, TOS- 37, ಸಿದ್ದಾಪುರ - ಉತ್ತರ ಕನ್ನಡ ಡಿಟಿ(4184)- MAL- 4166, 4167, 4247, MSL- 5290, 5523, MHL- 270, WBP- 78, ಸಿರ್ಸಿ(1028)- MAL- 8116, 8368, 8484, 8498, 9436, 9469, MSL- 17860, 17871, 18063, MDD- 69, 24, MHL- 384, 111, 637, 737, SRS- 147, 72, 73, 174, TMS- 177, TOS- 133, ಯಲ್ಲಾಪುರ(KA)(3974)- MAL- 2701, 2827, 2869, 2907, MHL- 278, SBS- 2,
Low Quality/Low touch/Insufficient weight deduction accounts details- ಭಟ್ಕಳ(KA)(1904)- MAL- 5395, ಹಳಿಯಾಳ(KA)(4876)- MSL- 2073, ಸಿರ್ಸಿ(1028)- MAL- 9851, MSL- 20524,

ಎರಡನೇ ಹರಾಜು ದಿನಾಂಕ : **23.11.2024,10:00AM,** ಹರಾಜು ಕೇಂದ್ರ : ಮುತ್ತೂಟ್ ಫೈನಾನ್ಸ್ ಲಿಮಿಟೆಡ್, 1ನೇ ಮಹಡಿ, ಸಂಜನಾ ಕಾಂಪ್ಲೆಕ್ಸ್, ಪ್ಲಾಟ್ ನಂ. 8 & 9 Cts ಸಂ : 1073 ಆಜಮ್‌ನಗರ್ ಮುಖ್ಯ ರಸ್ತೆ, ಬೆಳಗಾವಿ - ಅಜಮ್ ನಗರ, ಬೆಳಗಾವಿ, ಕರ್ನಾಟಕ-591010 (ಬೆಳಗಾಂ ಜಿಲ್ಲೆ) (4081)
ಅಥಣಿ(KA)(5006)- MAL- 2179, MSL- 2104, 2105, 2107, 2108, 2544, 2563, MDD- 14, SRS- 60, ಬೈಲಹೊಂಗಲ(1515)- MAL- 10821, 11001, 13516, MSL- 25923, 26222, 27016, MDD- 93, 94, MDL- 221, MHL- 1078, 1224, SRS- 348, TMS- 52, WBP- 344, ಬೆಳಗಾವಿ - ಅಜಂ ನಗರ(4081)- MSL- 12885, MHL- 609, TMS- 7, 9, ಬೆಳಗಾವಿ-ಖಾನಾಪುರ ರಸ್ತೆ(1559)- MHL- 384, ಬೆಳಗಾವಿ(0475)- MAL- 7140, MSL- 32170, 32639, SRS- 77, ಬೆಳಗಾವಿ-ಖಾಡೆ ಬಝರ್(1396)- MAL- 6087, 6909, MSL- 18257, 18623, MHL- 392, 393, TMS- 3, 2, ಚಿಕ್ಕೋಡಿ(KA)(4807)- MSL- 2106, 2323, 2367, MHL- 200, 286, TMS- 32, ಗೋಕಾಕ(KA)(2821)- SRS- 264, ನಿಪ್ಪಾಣಿ(KA)(4460)- MAL- 2341, 2363, 2598, MSL- 4939, MHL- 302, 28, 159, 283, 303, SRS- 20, 97, ರಾಯ್ಬಾಗ್(KA)(5090)- MAL- 947, ರಾಮದುರ್ಗ(KA)(4559)- MAL- 5997, 6218, 6401, MSL- 6676, 6860, 6863, 6958, 7405, MHL- 645, SRS- 45, 65, TWS- 18, ಸಂಕೇಶ್ವರ(KA)(4403)- MSL- 6760, 6855, 7425, MHL- 253, 313, 133, 373, SRS- 44, 45, TMS- 12, TOS- 12, ಮುರ್ಡೇಶ್ವರ(KA)(4009)- MAL- 10200, 10516, 10598, MHP- 48, MSL- 12927, 13606, 14986, 14987, 14988, 15069, MDL- 393, MHL- 610, 747, 773, 1522, SRS- 35, 85, 179, 208, TMS- 2, ವಡಗಾಂವ್ -ಬೆಳಗಾವಿ(0807)- MSL- 20087, 20402, SRS- 161, 154, 184,

ಎರಡನೇ ಹರಾಜು ದಿನಾಂಕ : **23.11.2024,04:00PM,** ಹರಾಜು ಕೇಂದ್ರ : ಮುತ್ತೂಟ್ ಫೈನಾನ್ಸ್ ಲಿಮಿಟೆಡ್, 1ನೇ ಮಹಡಿ ಟಿಪಿ ನಂ-46/2 ರೈಲ್ವೆ ನಿಲ್ದಾಣದ ಹತ್ತಿರ ಬಾಗಲಕೋಟೆ-58710, ಬಿಜಾಪುರ, ಕರ್ನಾಟಕ-587101 (ಬಾಗಲಕೋಟ ಜಿಲ್ಲೆ) (3764)
ಬಾಗಲಕೋಟ(KA)(3764)- MSL- 9276, 9277, 9732, 9840, MDD- 38, 66, MHL- 494, ಬನಹಟ್ಟಿ(KA)(3579)- MAL- 12009, 12167, MHL- 243, 244, ಜಮಖಂಡಿ(KA)(3702)- MSL- 9391, MHL- 318, 276, SRS- 16, ಮಹಾಲಿಂಗಪುರ(KA)(5162)- MAL- 164, 463, 471, 558, 589, MHP- 24, MSL- 254, 255, MHL- 173, ಮುಧೋಳ(KA)(4881)- MAL- 1532, MSL- 2752, 2830, 2946, MHL- 103, 65, 319,

ಎರಡನೇ ಹರಾಜು ದಿನಾಂಕ : **23.11.2024,12:00PM ,** ಹರಾಜು ಕೇಂದ್ರ : ಮುತ್ತೂಟ್ ಫೈನಾನ್ಸ್ ಲಿಮಿಟೆಡ್, ಶಾಪ್ ನಂ Ff 7 ಮಧುರ ಪ್ಲಾಜಾ ಸೂಪರ್ ಮಾರ್ಕೆಟ್ ಲಕ್ಷ್ಮಿ ದೇವಸ್ಥಾನ ಎದುರು, ಹುಬ್ಬಳ್ಳಿ-ಸೂಪರ್ ಮಾರ್ಕೆಟ್, ಧಾರವಾಡ, ಕರ್ನಾಟಕ-580029 (ಧಾರವಾಡ ಜಿಲ್ಲೆ) (1926)
ಗಾಂಧಿನಗರ(4794)- MAL- 1676, MSL- 4179, SRS- 69, ಧಾರವಾಡ-(3074)- MHP- 399, 400, MSL- 34591, 35461, 35905, 36081, 36335, 36709, 36834, 37071, 37075, MDD- 209, MDL- 620, 826, MHL- 1541, 1603, 1860, 2584, SRS- 48, 108, 147, 304, 306, WBP- 368, TCB- 9, ಧಾರವಾಡ(0666)- MSL- 75566, 75574, 76910, 77002, 77076, MHL- 191, 567, 1683, 3160, 3185, 3313, 3319, 3389, 3411, SRS- 318, 460, 461, TMS- 44, TCB- 9, ಹುಬ್ಬಳ್ಳಿ-(4754)- MAL- 3460, MSL- 5721, MHL- 983, ಹುಬ್ಬಳ್ಳಿ-(3122)- MAL- 23980, MSL- 25300, MHL- 778, SRS- 710, ಹುಬ್ಬಳ್ಳಿ - ಉಣಕಲ್ ಕ್ರಾಸ್(4286)- MAL- 6724, 7195, MHL- 691, SRS- 224, ಹುಬ್ಬಳ್ಳಿ(0476)- MSL- 43620, 43707, MHL- 660, 684, 746, SRS- 352, ಹುಬ್ಬಳ್ಳಿ-ಶಹಬಜಾರ್ ದುರ್ಗದ ಬೈಲ್(1753)- MSL- 18261, 18555, MHL- 473, 741, ಹುಬ್ಬಳ್ಳಿ-ಸೂಪರ್ ಮಾರ್ಕೆಟ್(1926)- SRS- 193, ಕೇಶ್ವಾಪುರ(KA)(2332)- MDD- 138, MHL- 1465, 1509, 1518, TCB- 12, 13, ನವನಗರ(0770)- MAL- 11123, 11508, MSL- 25936, 26079, MDL- 353, ಹುಬ್ಬಳ್ಳಿ(0727)- MAL- 36788, MHL- 2851, 2862, 2969, 3054, SRS- 396,
Low Quality/Low touch/Insufficient weight deduction accounts details- ಧಾರವಾಡ - ಮರಾಠಾ ಕಾಲೋನಿ ಆರ್ಡಿ(5288)- MHL- 256,

ಎರಡನೇ ಹರಾಜು ದಿನಾಂಕ : **22.11.2024,11:00AM,** ಹರಾಜು ಕೇಂದ್ರ : ಮುತ್ತೂಟ್ ಫೈನಾನ್ಸ್ ಲಿಮಿಟೆಡ್ 2007, 1ನೇ ಮಹಡಿ, ರುಕ್ಮಿಣಿ ಕಾಂಪ್ಲೆಕ್ಸ್, ಮಾಬು ಸುಭಾನಿ ದರ್ಗಾ ಹಿಂದೆ, ಜವಳಿ ಬಜಾರ್, ಗದಗ (ಗದಗ ಜಿಲ್ಲೆ) (1126)
ಗದಗ್(3863)- MAL- 8425, MSL- 16340, MDL- 369, MHL- 1098, SRS- 168, 169, 113, SBS- 29, 18, 30, TOS- 31, ಗದಗ(1126)- MAL- 17895, 17919, MSL- 22938, MDL- 145, MHL- 720, 856, SRS- 235, SBS- 17, ಗಜೇಂದ್ರಗಡ(KA)(3464)- MSL- 9029, MHL- 166, 556, 601, 755, SRS- 37, 46, 94, 104, 103, 108, 18, 105, 106, 107, 131, ಲಕ್ಷ್ಮೇಶ್ವರ(KA)(4818)- MAL- 3293, MSL- 1523, 1531, 1759, ಮುಂಡರಗಿ(KA)(4856)- MAL- 1882, MSL- 3424, 3829, MDL- 86, MHL- 302, SRS- 48, 53, 140, ನರಗುಂದ(KA)(4844)- MAL- 1827, MHL- 421, 565,

ಟಿಪ್ಪಣಿ:- ಹರಾಜು ದಿನಾಂಕಕ್ಕೂ (16.11.2024) ಮೊದಲು ಚಿನ್ನದ ಆಭರಣಗಳನ್ನು ಗ್ರಾಹಕರು ಬಿಡುಗಡೆ ಮಾಡಿಕೊಳ್ಳಬಹುದು.
ಟಿಪ್ಪಣಿ:- ಐಡೆಂಟಿಟಿ ಕಾರ್ಡ್/ಪ್ಯಾನ್ (PAN) ಕಾರ್ಡ್ ಸಂ./ಜಿಎಸ್ಟಿ ಸರ್ಟಿಫಿಕೇಟ್ ಅನ್ನು ಸಲ್ಲಿಸುವಂತೆ ಬಿಡ್ದರ್ಗಳಿಗೆ ವಿನಂತಿ ಮಾಡಲಾಗಿದೆ.
(ನೋಂದಾಯಿತ ಡೀಲರ್ಗಳಾಗಿದ್ದರೆ) ಯಶಸ್ವಿಯಾದ ಬಿಡ್ಡರ್ಗಳು ಸಂಪೂರ್ಣ ಹರಾಜು ಮೊತ್ತವನ್ನು RTGS ಮೂಲಕ ವರ್ಗಾವಣೆ ಮಾಡಬೇಕು

For Muthoot Finance,
Mr. Sam George, Advocate, No 313,# 3 in 2nd Floor,Bhaskar Arcade, Opp.Durgaparameshwari Temple Arch,Narasipura Layout,Vidyaranyapura Main Road,Vidyaranyapura,Bengaluru-560097
Place : ಹುಬ್ಬಳ್ಳಿ
Date : 09.11.2024

ನ. 11ರಂದು ತಾಳಮದ್ದಳೆ

ಶಿರಸಿ: ಸಿದ್ದಾಪುರ ತಾಲೂಕಿನ ಗೋಳಗೋಡ (ಕೋಡ್ನಮನೆ) ಶ್ರೀ ಸಿದ್ಧಿವಿನಾಯಕ ದೇವಾಲಯದ ಪ್ರಾಂಗಣದಲ್ಲಿ ಹವ್ಯಾಸಿ ಯಕ್ಷಕಲಾ ಬಳಗ ಹಾಗೂ ದೇವಾಲಯದ ಆಡಳಿತ ಮಂಡಳಿಯ ಆಶ್ರಯದಲ್ಲಿ 10 ನೇ ಯಕ್ಷಗಾನ ತಾಳಮದ್ದಲೆ ಕಾರ್ಯಕ್ರಮ ನ.11 ರಂದು ಮಧ್ಯಾಹ್ನ 4 ಗಂಟೆಯಿಂದ ನಡೆಯಲಿದೆ.

ಭಕ್ತ ಮಯೂರಧ್ವಜ ಎಂಬ ಆಖ್ಯಾನ ಪ್ರದರ್ಶನಗೊಳ್ಳುತ್ತಿದ್ದು, ಹಿಮ್ಮೇಳದಲ್ಲಿ ಭಾಗವತರಾಗಿ ಮಂಜುನಾಥ ಭಟ್ಟ ದೇವದಮನೆ, ಎಂ.ಪಿ.ಹೆಗಡೆ ಉಲ್ಲಾಳಗದ್ದೆ, ಮೃದಂಗದಲ್ಲಿ ಶಿವರಾಮ ಕೋಮಾರ, ಅರ್ಥ ಧಾರಿಗಳಾಗಿ ವಿಶ್ವೇಶ್ವರ ಭಟ್ಟ ಸುಣ್ಣಂಬಳ, ವಿದ್ವಾನ್ ಹಿರಣ್ಯ ವೆಂಕಟೇಶ ಭಟ್ಟ, ವಾಸುದೇವ ರಂಗ ಭಟ್ಟ ಮಧೂರ, ಆರ್.ಟಿ.ಭಟ್ಟ ಕಬ್ಗಾಲ್, ಎಂ.ಬಿ.ಹೆಗಡೆ ಹಳೇಹಳ್ಳ ಪಾಲ್ಗೊಳ್ಳಲಿದ್ದಾರೆ.

ಕಲಾಭಿ ಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ಕಾರ್ಯಕ್ರಮ ಪ್ರೋತ್ಸಾಹಿಸಬೇಕಾಗಿ ಸಂಘಟಕರ ಪರವಾಗಿ ನಾಗಪತಿ ಹೆಗಡೆ ಕಡ್ನಮನೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಗಾಂಜಾ ಮಾರುತ್ತಿದ್ದ 6 ಜನರ ಬಂಧನ

ಹುಬ್ಬಳ್ಳಿ: ನಿಷೇಧಿತ ಗಾಂಜಾ ಮಾರಾಟ ಮಾಡುತ್ತಿದ್ದ ಓರ್ವ ಬಾಲಕ ಸೇರಿ ಆರು ಜನರನ್ನು ಬಂಧಿಸುವಲ್ಲಿ ಹುಬ್ಬಳ್ಳಿ ಸಿಇಎನ್ ಠಾಣೆಯ ಪೊಲೀಸರು ಯಶಸ್ವಿಯಾಗಿದ್ದಾರೆ. ಬಂಧಿತ ಆರೋಪಿಗಳಿಂದ ಅಂದಾಜು 2.8 ಲಕ್ಷ ರೂಪಾಯಿ ಮೌಲ್ಯದ 2.8 ಕೆಜಿ ಗಾಂಜಾ ಹಾಗೂ ಒಂದು ದ್ವಿಚಕ್ರ ವಾಹನವನ್ನು ವಶಪಡಿಸಿಕೊಂಡಿದ್ದಾರೆ. ಬಂಧಿತರು ಹುಬ್ಬಳ್ಳಿ ನಿವಾಸಿಗಳಾದ ಮಕದುಮ್ ಮೊರಬ, ತೌಸಿಫ್ ಹಾಲಬಾವಿ, ಸಾಹಿಲ್ ಶೈಖ್, ಸಾಹಿಲ್ ಚಡ್ಡಾ, ಮಹಮ್ಮದ್ ಮಿರ್ಜಿ ಹಾಗೂ ಬಲವಂತ ಸಿಂಘ್ ಡಬೋಲಾ ಎನ್ನುವರಾಗಿದ್ದಾರೆ. ಇವರೆಲ್ಲಾ ಆರೋಪಿಗಳು ಕುಸುಗಲ್ ರಸ್ತೆಯ ರೈಲ್ವೆ ಸೇತುವೆ ಮೇಲೆ ನಿಷೇಧಿತ ಗಾಂಜಾ ಮಾರಾಟ ಮಾಡುತ್ತಿದ್ದರು. ಇನ್ನೂ ಖಚಿತ ಮಾಹಿತಿ ಮೇರೆಗೆ ಸೈಬರ್ ಕ್ರೈಂ ಪೊಲೀಸರು ದಾಳಿ ನಡೆಸಿ, ಗಾಂಜಾ ವಶಪಡಿಸಿಕೊಂಡಿದ್ದಾರೆ. ಅಪ್ರಾಪ್ತ ಸೇರಿ ಆರು ಜನರನ್ನು ಬಂಧಿಸಿ ನ್ಯಾಯಾಂಗ ವಶಕ್ಕೆ ಒಪ್ಪಿಸಲಾಗಿದೆ. ಈ ಕುರಿತು ಸಿಇಎನ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶ್ರೀಕನಕದಾಸ ಜಯಂತಿ ನ. 18ರಂದು

ಧಾರವಾಡ: ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ನವೆಂಬರ 18 ರಂದು ಬೆಳಿಗ್ಗೆ 11 ಗಂಟೆಗೆ ಶ್ರೀ ಕನಕದಾಸ ಜಯಂತಿಯನ್ನು ಕರ್ನಾಟಕ ಕುಲಪುರೋಹಿತ ಆಲೂರು ವೆಂಕಟರಾವ್ ಸಾಂಸ್ಕೃತಿಕ ಭವನದಲ್ಲಿ ಆಯೋಜಿಸಲಾಗುವುದು ಎಂದು ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ. ಅವರು ಹೇಳಿದರು. ಜಿಲ್ಲಾಧಿಕಾರಿಗಳ ಕಚೇರಿಯ ನೂತನ ಸಭಾಭವನದಲ್ಲಿ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಜಯಂತಿ ಕಾರ್ಯಕ್ರಮವನ್ನು ನಾವೆಲ್ಲರೂ ವಿಜೃಂಭಣೆಯಿಂದ ಪ್ರತಿವರ್ಷದಂತೆ ಆಚರಿಸೋಣ ಎಂದು ತಿಳಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಕುಮಾರ ಬೆಕ್ಕೇರಿ ಅವರು ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಸಮಾಜದ ಮುಖಂಡರಾದ ಬಸಪ್ಪ ಗುಡೆಣ್ಣವರ, ದೇವರಾಜ ಕಂಬಳಿ, ಎನ್. ಎನ್.ಸವಣೂರ, ವಸಂತ ಹಾಗೂ ಸಾರ್ವಜನಿಕರು ಸಭೆಯಲ್ಲಿ ಉಪಸ್ಥಿತರಿದ್ದರು.

11 ಗಂಟೆಗಳ ಹನುಮಾನ್ ಚಾಲೀಸಾ ಪಾಠ

ಹುಬ್ಬಳ್ಳಿ: ಹುಬ್ಬಳ್ಳಿಯ ಗೋಕುಲ ರಸ್ತೆಯಲ್ಲಿರುವ ಮಾರುತಿ ಮಂದಿರವು ಅನೇಕ ಭಕ್ತರ ಭಕ್ತಿಭಾವಪೂರ್ಣ ಸೇವೆ- ಸಹಕಾರ- ಸಹಯೋಗದಿಂದ ಜೀರ್ಣೋದ್ಧಾರವಾಗಿ ಈಗ ಅದು ಚಿಕ್ಕದಾಗಿದ್ದರೂ ಅತ್ಯಂತ ಸುಂದರವಾಗಿ, ಮುದ್ದಾಗಿ ನಿರ್ಮಾಣವಾಗಿರುತ್ತದೆ. ಈ ದೇವಸ್ಥಾನದಲ್ಲಿ ಕಾರ್ತೀಕ ಶುಕ್ಲ ಅಷ್ಟಮಿ (ಗೋಪಾಷ್ಟಮಿ) ಶನಿವಾರ 9-11-2024 ರಂದು ಬೆಳಿಗ್ಗೆ 7 ರಿಂದ ಸಂಜೆ 6 ರವರೆಗೆ ಬೃಹತ್ ಪ್ರಮಾಣದಲ್ಲಿ ಅಖಂಡ ಹನುಮಾನ ಚಾಲೀಸಾ ಕಾರ್ಯಕ್ರಮ ನಡೆಯುತ್ತದೆ. ಈ ಕಾರ್ಯಕ್ರಮದಲ್ಲಿ ಶ್ರೀ ಕ್ಷೇತ್ರ ಹೆಬ್ಬಳ್ಳಿಯಿಂದ ಶ್ರೀ ಪಾದುಕೆಗಳ ಆಗಮನವಾಗುತ್ತದೆ. ಬೆಳಿಗ್ಗೆ 6 ಕ್ಕೆ ಕಾಕಡಾರತಿ, ಭಜನೆ ಹಾಗೂ ಸದ್ಭಕ್ತರಿಗೆ ಚಹಾ ಕೊಡಲಾಗುವದು. ನಂತರ ಸರಿಯಾಗಿ 7 ಕ್ಕೆ ಗಂಟೆಗೆ ಹನುಮಾನ ಚಾಲೀಸಾ ಪಠಣ ನಡೆಯಲಿದೆ.

ಪ್ರಸ್ತುತ ಕಾರ್ಯಕ್ರಮದ ಯೋಜನೆ ಬಹಳ ದೊಡ್ಡ ಪ್ರಮಾಣದಲ್ಲಿ ಇರುವದರಿಂದ ಸಹಸ್ರ ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ಹನುಮಾನ ಚಾಲೀಸಾ ಉಪಾಸನೆಯಲ್ಲಿ ಭಾಗವಹಿಸಿ ಶ್ರೀವೀರ ಮಾರುತಿಯ ಹಾಗೂ ಶ್ರೀ ಸದ್ಗುರುಗಳ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ತಿಳಿಸಲಾಗಿದೆ.ಹುಬ್ಬಳ್ಳಿ- ಧಾರವಾಡ ಇವರೆಲ್ಲರೂ ಜಂಟಿ ನೇತರತ್ವದಲ್ಲಿ 11 ಗಂಟೆಗಳ ಹನುಮಾನ ಚಾಲೀಸಾ ಪಾಠ ನಡೆಯಲಿದೆ. ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ಮೊಬೈಲ್ ನಂಬರಗಳನ್ನು ಸಂಪರ್ಕಿಸಲು ಪ್ರಕಟಣೆಯಲ್ಲಿ ಕೋರಲಾಗಿದೆ ಗಿರೀಶ ರಾಮದಾಸಿ - 9845277073, ಶಶಿಧರ ಕುಲಕರ್ಣಿ - 9886915251, ನರೇಶ ಶಾ - 9448283700, ರಮೇಶ ಕುಲಕರ್ಣಿ 8073994781, ದಾಮೋದರ ಪಾಟೀಲ 7829913852, ವಿನಯ ಯಾಳಗಿ - 9480572021,ರೋಹನ ವಝು 9845203252, ಗಂಗಾಧರ ಗುಮಾಸ್ತೆ - 9845677139

ಅವಳಿ ನಗರ ಕಾಡುತ್ತಿರುವ ನೀರಿನ ದಾಹ

ಮಳೆಗಾಲದಲ್ಲಿ ಭೋರ್ಗರೆದು ತುಂಬಿ ಹರಿಯುವ ನದಿ | ಕುಡಿಯುವ ನೀರಿಗೆ ತತ್ವಾರ

ಮಾಳಿಂಗರಾಯ ಪೂಜಾರ

ಗದಗ: ಜಿಲ್ಲೆಯ ಒಂದು ಕಡೆ ತುಂಗಭದ್ರಾ ನದಿ ಹಾಗೂ ಇನ್ನೊಂದು ಕಡೆ ಮಲಪ್ರಭಾ ನದಿಯು ಹರಿಯುತ್ತಿದೆ ಆದರೂ ಗದಗ ಕೇಂದ್ರ ಸೇರಿದಂತೆ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಿಸುತ್ತಿವೆ.

ಜಿಲ್ಲೆಯ ಅತ್ಯಂತ ಜನಪ್ರಿಯ ನಗರವಾದ ಗದಗ ಬೆಟಗೇರಿ ನಗರಸಭೆ ಮತ್ತು ಲಕ್ಷ್ಮೇಶ್ವರ, ಶಿರಹಟ್ಟಿ, ಮುಳಗುಂದ ಪಟ್ಟಣಗಳಲ್ಲಿ ಕುಡಿಯುವ ನೀರಿನ ಪೂರೈಕೆ ಸರಿಯಾಗಿ ಆಗದೆ ಜನ ನೀರಿಗಾಗಿ ಪರದಾಡುವ ಸ್ಥಿತಿ ಇದೆ ಇದು ಒಂದು ದಿನ ಕಥೆಯಲ್ಲ ಬಹಳ ವರ್ಷಗಳಿಂದ ಇಂತಹ ಸಮಸ್ಯೆ ಅನುಭವಿಸುತ್ತಾ ನಗರದ ನಿವಾಸಿಗಳು ಬಂದಿದ್ದಾರೆ. ಮಳೆಗಾಲದಲ್ಲಿ ನದಿಗಳು ತುಂಬಿ ಹರಿಯುತ್ತಿವೆ ಆದರೂ ಸಹ ಕುಡಿಯುವ ನೀರಿನ ಕೊರತೆಯ ಅಪಾಯವನ್ನು ನಗರ ಪ್ರದೇಶಗಳೂ ಎದುರಿಸುತ್ತಿವೆ. ಮಳೆಗಾಲದಲ್ಲಿಯೇ ಹೀಗೆ ಕುಡಿಯುವ ನೀರಿನ ಕೊರತೆಯಾದರೆ ಬೇಸಿಗೆಯಲ್ಲಿ ಹೇಗೆ ಎನ್ನುವದು ದೊಡ್ಡ ದೊಡ್ಡ ಪಟ್ಟಣ ಪ್ರದೇಶದಲ್ಲಿ ವಾಸವಾಗಿರುವ ಜನರಿಗೆ ಕಾಡುತ್ತಿರುವ ಪ್ರಶ್ನೆಯಾಗಿದೆ.

ಸರಕಾರದಿಂದ ನಗರ ನೀರು ಸರಬರಾಜು ಇಲಾಖೆಯಿಂದ ವಿವಿಧ ಯೋಜನೆಗಳನ್ನು ರೂಪಿಸಿ ಕೋಟಿ ಕೋಟಿ ಹಣವನ್ನು ಖರ್ಚು ಮಾಡಿ, ನಂತರ ನಗರಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯತಿಗಳಿಗೆ ಹಸ್ತಾಂತರ ಮಾಡಲಾಗುತ್ತದೆ. ಆದರೆ ಸ್ಥಳೀಯ ಸಂಸ್ಥೆಗಳಿಂದ ನೀರು ಪೂರೈಕೆ ಮಾಡಲು ಪ್ರತಿ ವರ್ಷ ನೀರಿನ ಕರ ತುಂಬಿಸಿಳ್ಳುತ್ತದೆ ಆದರೆ ಯಾವ ರೀತಿ ಕರ ವಸೂಲಿ ಮಾಡಲಾಗುತ್ತಿದೆ ಅದರಂತೆ ಸೌಲಭ್ಯ ನೀಡಬೇಕು ಅದನ್ನು ನೀಡಲು ಆಗುವುದಿಲ್ಲ.

ನೌಕರಿ, ವ್ಯಾಪಾರ ವಹಿವಾಟು ಸೇರಿದಂತೆ ಅನೇಕ ಕಾರಣಗಳಿಂದ ನಗರ ಪ್ರದೇಶಗಳಲ್ಲಿ ವಾಸವಾಗಬೇಕು ಎಂದು ವಲಸೆ ಬರುವವರು ಸೌಕರ್ಯಗಳು ಸರಿಯಾಗಿ ಇರುತ್ತದೆ ಎಂದು ಗ್ರಾಮವನ್ನು ತೊರೆದು ನಗರ ಪ್ರದೇಶವನ್ನು ವಾಸಕ್ಕೆ ಆಯ್ಕೆ ಮಾಡಿಕೊಳ್ಳುವ ಜನರು ಮೊದಲು ನೀರಿನ ಸಮಸ್ಯೆಯನ್ನು ಅರಿತುಕೊಳ್ಳಬೇಕಾಗಿದೆ. ಪಟ್ಟಣದಲ್ಲಿ ನಿವೇಶನವನ್ನು ಖರೀದಿಸಿ ಮನೆ ನಿರ್ಮಾಣ ಮಾಡಿದರೆ ಕುಡಿಯುವ ನೀರಿನ ಸಮಸ್ಯೆ ಗ್ಯಾರಂಟಿ ಆಗುತ್ತದೆ.

ಗದಗ ಬೆಟಗೇರಿ ಅವಳಿ ನಗರದಲ್ಲಿ ತುಂಗಭದ್ರಾ ನದಿಯಿಂದ ಕುಡಿಯುವ ನೀರು ಸರಬರಾಜು ಮಾಡಲಾಗುತ್ತದೆ ಆದರೆ ಈ ನಗರದಲ್ಲಿ ತಿಂಗಳಿಗೆ ಕೇವಲ 2 ರಿಂದ 3 ಬಾರಿ ಮಾತ್ರ ನೀರು ಪೂರೈಕೆ ಮಾಡಲಾಗುತ್ತದೆ. ಆದರೆ ನಗರದಲ್ಲಿ ಸಮಸ್ಯೆಗೆ ಶಾಶ್ವತ ಪರಿಹಾರ ನೀಡುವಲ್ಲಿ ನಗರಸಭೆಯಿಂದ ಆಗುತ್ತಿಲ್ಲ. ನಗರದ ನಿವಾಸಿಗಳು ಪ್ರತಿ ವರ್ಷ ನೀರಿನ ಕರ ತುಂಬುತ್ತಾರೆ ಆದರೆ ಇರುವ ಸೀಮಿತ ಸಂಪರ್ಕವು ನೀರಿನ ಬಿಕ್ಕಟ್ಟಿನ ಸಮಸ್ಯೆಯನ್ನು ಬಗೆ ಹರಿಸಲು ಆಗುತ್ತಿಲ್ಲ ಅದಕ್ಕೆ ಬೇರೆ ಪರಿಹಾರ ಕಂಡುಕೊಳ್ಳುವಲ್ಲಿ ಜನಪ್ರತಿನಿಧಿಗಳು ಮತ್ತು ಅಧಿಕಾರಿ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಅಲ್ಲದೆ ನಗರ ವ್ಯಾಪ್ತಿಯ ಹೊಸ ಬಡಾವಣೆಗಳಲ್ಲಿ ನೀರು ಸರಬರಾಜು ನಿರ್ವಹಿಸುವಲ್ಲಿ ಅಸಮರ್ಥತೆಯನ್ನು ಹೊಂದಿದೆ.

ಜಿಲ್ಲೆಯ ಶಿರಹಟ್ಟಿ ಹಾಗೂ ಮುಳಗುಂದ ಪಟ್ಟಣ ಪಂಚಾಯತಿಗಳಲ್ಲಿ ನೀರಿನ ಸಮಸ್ಯೆಯಂತೂ ಹೇಳತೀರದು ಏಕೆಂದರೆ ಶಿರಹಟ್ಟಿ ಮುಳಗುಂದ ಕುಡಿಯುವ ನೀರಿನ ಯೋಜನೆಯಿಂದ ತುಂಗಭದ್ರಾ ನದಿಯಿಂದ ಅನೇಕ ವರ್ಷಗಳಿಂದ ಕುಡಿಯುವ ನೀರು ಪೂರೈಕೆ ಆಗುತ್ತಿತ್ತು. ಆದರೆ ಮೂರ್ನಾಲ್ಕು ವರ್ಷಗಳಿಂದ ಗದಗ ಹೊನ್ನಾಳಿ ನೂತನ ರಾಜ್ಯ ಹೆದ್ದಾರಿ ಕಾಮಗಾರಿ ಪ್ರಾರಂಭದಲ್ಲಿದೆ ಈ ರಸ್ತೆ ಕಾಮಗಾರಿ ಮಾಡುವಾಗ ಕುಡಿಯುವ ನೀರಿನ ಪೈಪ್ ಲೈನ್ ಕಿತ್ತು ಹಾಕಿದ್ದು, ಅದನ್ನು ಸರಿ ಪಡಿಸುವ ಕಾರ್ಯವನ್ನು ಅದೇ ಹೆದ್ದಾರಿ ಮಾಡುವವರಿಗೆ ಬಿಟ್ಟಿರುವದರಿಂದ ನದಿ ನೀರು ಸರಬರಾಜು ಆಗುತ್ತಿಲ್ಲ ಅಲ್ಲದೆ ನೀರು ಸರಬರಾಜು ಮಾಡುವ ಯಂತ್ರಗಳು, ಜಾಕ್ ವೆಲ್ ಸೇರಿದಂತೆ ನೀರೆತ್ತುವ ಯಂತ್ರಗಳು ತುಕ್ಕು ಹಿಡಿಯುತ್ತಿದ್ದು, ಹೆದ್ದಾರಿಯವರು ಏನು ಪೈಪ್ ಜೋಡಣೆ ಮಾಡಬಹುದು ಆದರೆ ಜಾಕ್ ವೆಲ್ ಸೇರಿದಂತೆ ನೀರು ಪೂರೈಕೆ ಯಂತ್ರಗಳ ರಿಪೇರಿ ಮಾಡಲು ಯೋಜನೆಗೆ ಹಾಕಿದಷ್ಟು ದುಡ್ಡು ಖರ್ಚು ಮಾಡುವ ಅನಿವಾರ್ಯತೆ ಎದುರಾಗುತ್ತದೆ. ನದಿ ನೀರು ಬರದೇ ಇರುವದರಿಂದ ಎರಡು ಪಟ್ಟಣ ಪಂಚಾಯತಿಯವರು ಕೊಳವೆ ಬಾವಿಗಳ ಮೂಲಕ 8 ರಿಂದ 10 ದಿನಕ್ಕೊಮ್ಮೆ ನೀರು ಪೂರೈಕೆ ಮಾಡುತ್ತಿದ್ದಾರೆ. ಇವಾಗ ಮಳೆಗಾಲ ಕೊಳವೆಬಾವಿಗಳ ಅಂತರ್ಜಲ ಇರುತ್ತದೆ ಬೇಸಿಗೆಯಲ್ಲಿ ಅಂತರ್ಜಲ ಕುಸಿತ ಕಾಣುತ್ತದೆ ಆಗ ನೀರಿನ ಪೂರೈಕೆ ಮಾಡಲು ಪಟ್ಟಣ ಪಂಚಾಯತಿಯವರಿಗೆ ದೊಡ್ಡ ಸವಾಲಾಗುತ್ತದೆ.

ಇನ್ನೂ ಜಿಲ್ಲೆಯ ಎರಡನೇ ದೊಡ್ಡ ಪಟ್ಟಣ ಎನಿಸಿಕೊಂಡಿರುವ ಲಕ್ಷ್ಮೇಶ್ವರ ಪುರಸಭೆಯ ವ್ಯಾಪ್ತಿಯಲ್ಲಿನ ನಿವಾಸಿಗಳಿಗೆ ತಿಂಗಳಿಗೆ 2 ರಿಂದ 3 ಬಾರಿ ನೀರು ಪೂರೈಕೆ ಮಾಡಲಾಗುತ್ತಿದೆ ಏಕೆಂದರೆ ಈ ಪಟ್ಟಣಕ್ಕೆ ಸುಮಾರು 40 ಕಿಮೀ ದೂರದ ಹಾವೇರಿ ಜಿಲ್ಲೆಯ ಮೇವುಂಡಿ ಹತ್ತಿರ ತುಂಗಭದ್ರಾ ನದಿಯಿಂದ ನೀರು ಸರಬರಾಜು ಮಾಡಲಾಗುತ್ತಿದೆ. ಇದು ಸುಮಾರು 25 ವರ್ಷಗಳ ಯೋಜನೆಯಾಗಿದ್ದು, ನೀರು ಸರಬರಾಜು ಮಾಡುವ ಪೈಪ್ ಎಲ್ಲ ತುಕ್ಕು ಹಿಡಿದಿದ್ದು, ಎಲ್ಲೆಂದರಲ್ಲಿ ಪೈಪ್ ಲೈನ್ ಒಡೆಯುತ್ತಿದ್ದು, ಇದರಿಂದ ಪಟ್ಟಣಕ್ಕೆ ನೀರು ಸರಬರಾಜು ಸರಿಯಾಗಿ ಆಗುತ್ತಿಲ್ಲ. ಪೈಪ್ ಲೈನ್ ಬದಲಾವಣೆ ಮಾಡಲು ಈಗಾಗಲೇ ಪುರಸಭೆಯಿಂದ ಸಾಮಾನ್ಯ ಸಭೆಯಲ್ಲಿ ಚರ್ಚಿಸಿ ಸರಕಾರಕ್ಕೆ ಕಳುಹಿಸಲಾಗಿದೆ ಆದಷ್ಟು ಬೇಗ ಪೈಪ್ ಲೈನ್ ಬದಲಾವಣೆ ಮಾಡಬೇಕು.

ಒಟ್ಟಾರೆ ತುಂಗಭದ್ರಾ ನದಿಯು ಮಳೆಗಾಲದಲ್ಲಿ ತುಂಬಿ ಹರಿಯುತ್ತಿದೆ ಈ ಸಮಯದಲ್ಲಿ ನೀರಿನ ಸಮಸ್ಯೆಗಳನ್ನು ಪಟ್ಟಣ ಪ್ರದೇಶದಲ್ಲಿ ನೀರಿನ ಸಮಸ್ಯೆ ಎದುರಿಸುತ್ತಿವೆ. ಇನ್ನೂ ಬೇಸಿಗೆ ಸಮಯದಲ್ಲಿ ತುಂಗಭದ್ರಾ ನದಿಯಲ್ಲಿ ನೀರು ಇರುವುದಿಲ್ಲ ಭದ್ರಾ ಜಲಾಶಯದಿಂದ ನೀರು ಬಿಡುವಂತೆ ಬೇಡಿಕೆ ಇಡಬೇಕು ಒಟ್ಟಾರೆ ಜಿಲ್ಲೆಯಲ್ಲಿ ನೀರಿನ ಸಂಗ್ರಹ ಜಲಾಶಯ ಇಲ್ಲದಂತಾಗಿದೆ.

ಗದಗ ಹೊನ್ನಾಳಿ ನೂತನ ರಾಜ್ಯ ಹೆದ್ದಾರಿ ಕಾಮಗಾರಿ ಮಾಡಲು ಶಿರಹಟ್ಟಿ, ಮುಳಗುಂದ ಕುಡಿಯುವ ನೀರಿನ ಯೋಜನೆಯ ಪೈಪ್ ಲೈನ್ ಕಿತ್ತು ಹಾಕಿರುವುದು.

> **ಜಿಲ್ಲೆಯ ಶಿರಹಟ್ಟಿ ಹಾಗೂ ಮುಳಗುಂದ ಪಟ್ಟಣ ನೀರು ಸರಬರಾಜು ಮಾಡುವ ಪೈಪ್ ಲೈನ್ ಕಿತ್ತು ಹಾಕಿರುವ ಪೈಪ್ ಸರಿಪಡಿಸುವ ಕಾರ್ಯವನ್ನು ಹೆದ್ದಾರಿಯವರು ಮಾಡಬೇಕು ಅಲ್ಲದೆ ಲಕ್ಷ್ಮೇಶ್ವರ ಪಟ್ಟಣಕ್ಕೆ ನೀರು ಸರಬರಾಜು ಮಾಡುವ ಪೈಪ್ ಲೈನ್ ಪೈಪ್ ಲೈನ್ ಬದಲಾವಣೆ ಮಾಡಲು ಅಮೃತ್ ಯೋಜನೆಯಡಿ ಕಾಮಗಾರಿ ಮಾಡಲಾವುದು.**
> -ಜೆ.ಬಿ.ಹೊಸಮನಿ ಸಹಾಯಕ ಎಂಜಿಯರ್, ನಗರ ನೀರು ಸರಬರಾಜು ಇಲಾಖೆ ಗದಗ

ಸ್ಕೂಟರ್ ಪೂರೈಸಲು ಅರ್ಜಿ

ಗದಗ: ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಯೋಜನೆ ಹಂತ-4 ಶೇ. 5 ಯೋಜನೆಯ ಅಂಗವಿಕಲರ ವಿಕಲಚೇತನರ ಫಲಾನುಭವಿಗಳಿಗೆ ಗದಗ ಜಿಲ್ಲೆಯ ಗದಗ ನಗರಸಭೆ ವ್ಯಾಪ್ತಿಗೆ ಬರುವ ಅನುದಾನದಡಿ ವಿಕಲಚೇತನರ ಕ್ಷೇಮಾಭಿವೃದ್ಧಿ ಘಟಕದಡಿಯಲ್ಲಿ ವೈಯಕ್ತಿಕ ಕಾರ್ಯಕ್ರಮಗಳ ಅನುಷ್ಟಾನ ಸಂಬಅಧಿಸಿದಅತೆ ವಿಕಲಚೇತನ ಸ್ನೇಹಿ ಸ್ಕೂಟರ್ ಖರೀದಿಸಿ ಪೂರೈಸಲು ಅರ್ಜಿ ಆಹ್ವಾನಿಸಲಾಗಿದೆ. ನಿಗದಿತ ಅರ್ಜಿಗಳನ್ನು ನವೆಂಬರ್ 26 ರೊಳಗೆ ಗದಗ ಬೆಟಗೇರಿ ನಗರಸಭೆ ಕಾರ್ಯಾಲಯಕ್ಕೆ ಸಲ್ಲಿಸಬಹುದಾಗಿದೆ.

20 ರಿಂದ 60 ವರ್ಷದೊಳಗಿನವರು ಮಾತ್ರ ಅರ್ಜಿ ಸಲ್ಲಿಸಬೇಕು. ಅಂಗವಿಕಲತೆಯ ಕುರಿತು ಗುರುತಿನ ಚೀಟಿ/ ಯು.ಡಿ.ಐ.ಡಿ. ಕಾರ್ಡ್ (ದೈಹಿಕ ಶೇ.75 ಕ್ಕಿಂತ ಹೆಚ್ಚು ಕಾಲು ಅಂಗವೈಕಲ್ಯತೆ) ಹೊಂದಿದ ಅರ್ಜಿ ಮಾತ್ರ ಅರ್ಹರಾಗಿರುತ್ತಾರೆ.

ಅರ್ಜಿಯೊಂದಿಗೆ ಅಂಗವಿಕಲತೆಯ ತೋರುವ 4 ಫೋಟೋಗಳನ್ನು ಲಗತ್ತಿಸಬೇಕು. ಸ್ಥಳೀಯ ಸಂಸ್ಥೆಗಳಿಅದ ಅಥವಾ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳವರಿಂದ ಈ ಮೊದಲು ಯಂತ್ರ ಚಾಲಿತ ವಾಹನ ಪಡೆದಿಲ್ಲವೆಂದು ಪ್ರಮಾಣ ಪತ್ರ ಪಡೆದು ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಯನ್ನು ಕಚೇರಿ ವೇಳೆಯಲ್ಲಿ ಗದಗ ಬೆಟಗೇರಿ ನಗರಸಭೆ ಕಾರ್ಯಾಲಯದ ಸಂಬಂಧಿತ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ಪಡೆಯಬಹುದಾಗಿದೆ.

ದೋಷಪೂರಿತ ಲ್ಯಾಪ್‌ಟಾಪ್; ಪರಿಹಾರಕ್ಕೆ ಆದೇಶ

ಧಾರವಾಡ: ಕುಮಾರ ವ್ಯಾಸ ದೇಸಾಯಿ ಎಂಜನೀಯರ್ ವಿದ್ಯಾರ್ಥಿಯಾಗಿದ್ದು ತನ್ನ ವ್ಯಾಸಂಗಕ್ಕೆ ಅನುಕೂಲವಾಗಲೆಂದು ಎದುರುದಾರರ ಮಳಿಗೆಯಲ್ಲಿ ಡೆಲ್ ಕಂಪನಿಯ ಲ್ಯಾಪ್‌ಟಾಪ್‌ನ್ನು 23-12-2021 ರಂದು, 67,990 ಮತ್ತು ಹೆಚ್ಚಿನ 1 ವರ್ಷದ ವಾರಂಟಿಗೆ 1,999 ಸೇರಿದಂತೆ ಒಟ್ಟು 69,989 ಪಾವತಿಸಿ ಖರೀದಿಸಿದ್ದರು.

ಖರೀದಿಯ 3 ತಿಂಗಳ ಒಳಗಾಗಿ ಲ್ಯಾಪ್ ಟಾಪ್‌ನಲ್ಲಿ ದೋಷಗಳು ಕಂಡುಬಂದಿದ್ದು ಅದನ್ನು ಎದುರುದಾರರು ಸರಿಪಡಿಸಿ ಕೊಟ್ಟಿರುತ್ತಾರೆ. ಮತ್ತೆ ಪದೇ ಪದೇ ಅದರಲ್ಲಿ ನ್ಯೂನ್ಯತೆಗಳು ಕಂಡುಬಂದಿದ್ದರಿಂದ ತನಗೆ ದೋಷಪೂರಿತ ಲ್ಯಾಪ್ ಟಾಪ್‌ನ್ನು ಕೊಟ್ಟು ಎದುರುದಾರರು ಅದನ್ನು ಸರಿಯಾಗಿ ರಿಪೇರಿ ಮಾಡಿಕೊಡದೇ ಎದುರುದಾರರ ನಡಾವಳಿಕೆ ಗ್ರಾಹಕರ ರಕ್ಷಣಾ ಕಾಯ್ದೆ ಅಡಿ ಸೇವಾ ನ್ಯೂನ್ಯತೆ ಆಗುತ್ತದೆ ಅಂತಾ ಹೇಳಿ ಅವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ದೂರುದಾರ ವಿದ್ಯಾರ್ಥಿ 6-09-2023 ರಂದು ಧಾರವಾಡ ಜಿಲ್ಲಾ ಗ್ರಾಹಕರ ಆಯೋಗಕ್ಕೆ ದೂರು ಸಲ್ಲಿಸಿದ್ದರು.

ಸದರಿ ದೂರಿನ ಬಗ್ಗೆ ಕೂಲಂಕುಷವಾಗಿ ವಿಚಾರಣೆ ನಡೆಸಿದ ಆಯೋಗದ ಅಧ್ಯಕ್ಷರಾದ ಈಶಪ್ಪ. ಭೂತೆ ಹಾಗೂ ವಿಶಾಲಾಕ್ಷಿ. ಬೋಳಶೆಟ್ಟಿ ಮತ್ತು ಪ್ರಭು. ಹಿರೇಮಠ ಸದಸ್ಯರು, ದೂರುದಾರರು ತಮ್ಮ ಪ್ರಕರಣ ಸಾಬೀತು ಪಡಿಸಲು ಹಾಜರುಪಡಿಸಿದ ದಾಖಲೆಗಳನ್ನು ಪರಿಶೀಲಿಸಿ ದಾಖಲೆಗಳನ್ನು ಪರಿಶೀಲಿಸಿದಾಗ ಲ್ಯಾಪ್ ಟಾಪ್‌ನಲ್ಲಿ ಖರೀದಿಸಿದ 3 ತಿಂಗಳ ಒಳಗೆ ವಾಯ್‌ಫೈ ಸಿಸ್ಟಮ್ ತೊಂದರೆ, ಮತ್ತು ಬ್ಯಾಟರಿ ನ್ಯೂನ್ಯತೆ ಇತರೇ ಸಮಸ್ಯೆಗಳು ಇರುವುದು ಕಂಡುಬಂದಿರುತ್ತದೆ. ಅಲ್ಲದೇ ಆಯೋಗ ನೇಮಿಸಿದ ಕಮೀಷ್ನರ್ ರಿಪೋರ್ಟನಲ್ಲಿಯೂ ಸಹ ಲ್ಯಾಪ್ ಟಾಪ್‌ನ ನ್ಯೂನ್ಯತೆಗಳ ಬಗ್ಗೆ ಪ್ರಸ್ತಾಪ ಇರುತ್ತದೆ. ಈ ಎಲ್ಲ ಮೇಲಿನ ಅಂಶಗಳನ್ನು ಅವಲೋಕಿಸಿದಾಗ ಎದುರುದಾರರು ಕೊಟ್ಟಂತಹ ಲ್ಯಾಪ್ ಟಾಪ್ ದೋಷಯುಕ್ತವಾಗಿರುವುದು ಕಂಡುಬರುತ್ತದೆ.

ಎದುರುದಾರರು ದೂರುದಾರನಿಗೆ ಗ್ರಾಹಕನಿಗೆ ದೋಷಯುಕ್ತ ಲ್ಯಾಪ್ ಟಾಪ್‌ನ್ನು ಮಾರಾಟ ಮಾಡಿ ಗ್ರಾಹಕರ ಸಂರಕ್ಷಣಾ ಕಾಯ್ದೆ ಅಡಿ ಸೇವಾ ನ್ಯೂನ್ಯತೆ ಎಸಗಿರುತ್ತಾರೆ ಅಂತಾ ಅಭಿಪ್ರಾಯಪಟ್ಟು ತೀರ್ಪು ನೀಡಿ ದೂರುದಾರರಿಗೆ ಹಳೆಯ ಲ್ಯಾಪ್‌ಟಾಪ್ ಪಡೆದುಕೊಂಡು ಅದೇ ಮಾಡಲ್‌ನ ನೂತನ ಲ್ಯಾಪ್ ಟಾಪ್‌ನ್ನು ಒಂದು ತಿಂಗಳ ಒಳಗೆ ಕೊಡಲು ಆದೇಶಿಸಿದೆ. ತಪ್ಪಿದ್ದಲ್ಲಿ ಲ್ಯಾಪ್ ಟಾಪ್‌ನ ಮೊತ್ತ ₹ 69,989 19-05-2022 ರಿಂದ ಶೇ. 8 ರ ಬಡ್ಡಿ ಸಮೇತ ಪೂರ್ತಿ ಹಣ ಸಂದಾಯವಾಗುವವರೆಗೆ ದೂರುದಾರ ವಿದ್ಯಾರ್ಥಿ ವ್ಯಾಸ್ ಇವನಿಗೆ ಕೊಡಲು ಆಯೋಗ ನಿರ್ದೇಶಿಸಿದೆ. ಜತೆಗೆ ₹25,000 ಪರಿಹಾರ, ಪ್ರಕರಣದ ಖರ್ಚು ವೆಚ್ಚ ₹10,000 ಗಳನ್ನು ಕೊಡುವಂತೆ ಡೆಲ್ ಕಂಪನಿಗೆ ಆಯೋಗ ಆದೇಶಿಸಿದೆ.

ನದಾಫ್, ಪಿಂಜಾರ ಸಂಘದ ಸಂಸ್ಥಾಪನಾ ದಿನಾಚರಣೆ ನ 16ಕ್ಕೆ

ಗದಗ: ರಾಜ್ಯ ನದಾಫ್/ಪಿಂಜಾರ ಸಂಘದ 32ನೇ ಸಂಸ್ಥಾಪನಾ ದಿನಾಚರಣೆ ಹಾಗೂ ಸಮಾಜದ ರಾಜ್ಯ ಮಟ್ಟದ ಮಹಿಳಾ ಸಮಾವೇಶ ನ.16 ರಂದು ನಗರದ ಆಂಗ್ಲೋ ಉರ್ದು ಸ್ಕೂಲ್ ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು 32ನೇ ಸಂಸ್ಥಾಪನಾ ದಿನಾಚರಣೆ ಸಮಿತಿ ಅಧ್ಯಕ್ಷ ಕೆ.ಎಫ್. ಹುಲಕೋಟಿ (ರಬ್ಬಾನಿ) ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈ ಸಮಾರಂಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆಗೈದ ಸಮಾಜದ ಸಾಧಕರಿಗೆ ದಿ. ಹಾಜಿ ಎಚ್. ಇಬ್ರಾಹಿಂಸಾಬ ಜಗಳೂರ ಇಮಾಮಸಾಬ ಕರ್ನಾಟಕ ಏಕೀಕರಣಕ್ಕಾಗಿ ಹುತಾತ್ಮರಾದ ಪೈಲ್ವಾನ ಪಿಂಜಾರ ರಮಜಾನಸಾಬ ಹಾಗೂ ಪ್ರಗತಿಪರರೈತ ಈ ಹೆಸರುಗಳ ರಾಜ್ಯ ಮಟ್ಟದ ಪ್ರಶಸ್ತಿಗಳನ್ನು ನೀಡಲಾಗುತ್ತಿದೆ ಎಂದರು.

5ನೇ ಶತಮಾನದ ವರೆಗೆ ಮಹಿಳೆಯರನ್ನು ಕನಿಷ್ಠವಾಗಿ ನೋಡಿದ್ದ ಅಂದರೆ ಹೆಣ್ಣು ಮಗು ಹುಟ್ಟಿದರೆ ತಕ್ಷಣ ಜೀವಂತ ಸಮಾಧಿ ಮಾಡುತ್ತಿದ್ದರು. ಈ ಅಮಾನುಷ ಕೃತ್ಯಗಳನ್ನು ತಡೆದ ಪ್ರವಾದಿ ಮೊಹ್ಮದ ಸ್ವಲ್ಲಲ್ಲಾಹು ಅಲೈಹಿವ ಸಲ್ಲಂರವರು ಜನರಲ್ಲಿ ಮಹಿಳೆಯರ ಬಗ್ಗೆ ಇದ್ದ ಕೀಳು ಭಾವನೆಯನ್ನು ತೊಡೆದು ಹಾಕಿದರು. ಈಗ ನದಾಫ್ /ಪಿಂಜಾರ ಸಂಘವು ಮಹಿಳೆಯರನ್ನು ಪ್ರೋತ್ಸಾಹಿಸಲು ದೇಶದ ಪ್ರಥಮ ಮುಸ್ಲಿಂ ಶಿಕ್ಷಕಿ ಫಾತಿಮಾ ಶೇಖ ಅವರ ಹೆಸರಿನಲ್ಲಿ ಸಮಾಜದ ಅತ್ಯುತ್ತಮ ಶಿಕ್ಷಕಿಯನ್ನು ಗುರುತಿಸಿ ರಾಜ್ಯ ಮಟ್ಟದ ಪ್ರಶಸ್ತಿ ನೀಡಿ ಗೌರವಿಸಲಿದೆ ಎಂದರು.

ಜಿಲ್ಲಾ ಮಟ್ಟದ ಪ್ರಶಸ್ತಿಗಳನ್ನು ಗಾದಿ ಹಾಕುವವರು, ಹಗ್ಗ ತಯಾರಿಸುವವರಿಗೆ ಕಾಯಕಯೋಗಿ ಪ್ರಶಸ್ತಿ, ನಮ್ಮ ಸಮಾಜದೊಂದಿಗೆ ಅನ್ನೋನ್ಯವಾಗಿರುವ ಗಣ್ಯರೊಬ್ಬರಿಗೆ ಭಾವೈಕ್ಯ ಪ್ರಶಸ್ತಿ, ಹಾಗೂ ಎಸ್‌ಎಸ್‌ಎಲ್‌ಸಿಯಲ್ಲಿ 95% ಪಿಯುಸಿ ಯಲ್ಲಿ 90% ಕ್ಕೂ ಹೆಚ್ಚು ಅಂಕ ಗಳಿಸಿದ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮಗಳಿವೆ ಎಂದು ಮಾಹಿತಿ ನೀಡಿದರು.

ಮುಖ್ಯಮಂತ್ರಿಗಳ ಆಗಮನ: ಸಮಾವೇಶ ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸುವರು. ಸಚಿವ ಎಚ್.ಕೆ. ಪಾಟೀಲ, ಬಿ.ಝಡ್. ಜಮೀರ್ ಅಹ್ಮದ್‌ಖಾನ್, ಶಿವರಾಜ್ ತಂಗಡಗಿ, ಸಂತೋಷ ಲಾಡ್, ಸಂಸದ ಬಸವರಾಜ ಬೊಮ್ಮಾಯಿ, ರಾಜ್ಯದ ಮುಖ್ಯ ಸಚೇತಕ ಸಲಿಂ ಅಹ್ಮದ, ರಾಜ್ಯದ ಖನಿಜ ಅಭಿವೃದ್ಧಿ ನಿಗಮದ ಅಧ್ಯಕ್ಷ ಜಿ.ಎಸ್. ಪಾಟೀಲ, ನರಗುಂದ ಶಾಸಕರಾದ ಸಿ.ಸಿ. ಪಾಟೀಲ ಸೇರಿ ಹಲವರು ಆಗಮಿಸಲಿದ್ದಾರೆ.

ನದಾಫ/ಪಿಂಜಾರ ಸಮಾಜದ ಅರ್ಹ ಬಡಮಕ್ಕಳಿಗೆ ಉನ್ನತ ಶಿಕ್ಷಣಕ್ಕಾಗಿ ಧನ ಸಹಾಯ, ಲ್ಯಾಪ್ಟಾಪ್ ವಿತರಣೆ, ಕನ್ನಡ ಮಾಧ್ಯಮದ ಪ್ರಾಥಮಿಕ ಮತ್ತು ಪ್ರೌಢಶಾಲಾ, ಪ್ರಥಮ ಹಾಗೂ ದ್ವಿತಿಯ ಪಿಯುಸಿಯಲ್ಲಿ ವಿಜ್ಞಾನ ಹಾಗೂ ವಾಣಿಜ್ಯ ವಿಭಾಗದ 40 ಅರ್ಹ ವಿದ್ಯಾರ್ಥಿಗಳಿಗೆ ಪ್ರತಿ ವರ್ಷ ಉಚಿತ ಊಟ, ವಸತಿಯೊಂದಿಗೆ ಶಿಕ್ಷಣ ನೀಡುತ್ತಲಿದ್ದು, ಗದಗ ಜಿಲ್ಲಾ ಘಟಕವು ಕೈ ಜೋಡಿಸಿದೆ ಎಂದು ಅವರು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಶೌಕತಅಲಿ ಅಣ್ಣಿಗೇರಿ, ಅಬ್ದುಲಶರೀಪ ನೂರಭಾಷಾ, ಖಾದರಸಾಬ್ ಹಳ್ಯಾಳ, ಎಂ.ಬಿ ನದಾಫ್, ರಾಜೇಸಾಬ ಶಿಶುವಿನಹಳ್ಳಿ, ಆರ್.ವಾಯ್ ನದಾಫ್, ಎ.ಎಚ್ ಹೊಸಳ್ಳಿ, ಮಹಮ್ಮದರಫಿ ಅಣ್ಣಿಗೇರಿ, ಮೈನುದ್ದಿನ್ ನಲವಡಿ, ರಾಜೇಸಾಬ ಅಣ್ಣಿಗೇರಿ, ಜಾಕೀರ ಬಾಗಲಕೋಟ ಇದ್ದರು.ಅಲ್ಲಿಂದ ವೀರರಾಣಿ ಕಿತ್ತೂರ ಚನ್ನಮ್ಮಳ ಪ್ರತಿಮೆ, ವಾಲ್ಮೀಕಿ ವೃತ್ತದಲ್ಲಿ ಮಹರ್ಷಿ ವಾಲ್ಮೀಕಿ ಭಾವಚಿತ್ರಕ್ಕೆ ಮಾಲಾರ್ಪಣೆ, ಬಳಿಕ ಮಹ್ಮದಅಲಿ ವೃತ್ತದಲ್ಲಿ ಭಾವಚಿತ್ರವಿಟ್ಟು ಗೌರವಿಸಲಾಗುತ್ತದೆ. ಅಲ್ಲಿಂದ ಬಸವೇಶ್ವರ ವೃತ್ತದಲ್ಲಿ ಮಾಲಾರ್ಪಣೆ ಮಾಡಿ, ಬಳಿಕ ಟಿಪ್ಪು ಸರ್ಕಲ್‌ಗೆ ತೆರಳಿ ಅಲ್ಲಿಂದ ಕೆ. ಎಚ್. ಪಾಟೀಲ ವೃತ್ತಕ್ಕೆ ಆಗಮಿಸಿ, ಮಾಲಾರ್ಪಣೆ ಮಾಡಿ, ಅಲ್ಲಿಂದ ಭೂಮರಡ್ಡಿ ವೃತ್ತಕ್ಕೆ ಆಗಮಿಸಿ, ಅಲ್ಲಿ ಕನಕದಾಸರು ಹಾಗೂ ಸಹಕಾರಿ ರಂಗದ ಪಿತಾಮಹ ಸಿದ್ದನಗೌಡ ಪಾಟೀಲರ ಭಾವಚಿತ್ರವಿಟ್ಟು ಮಾಲಾರ್ಪಣೆ ಮಾಡಿ, ನಂತರ ಪುಟ್ಟರಾಜರ ಪ್ರತಿಮೆಗೆ ಗೌರವಿಸುವ ಕಾರ್ಯ ನಡೆಯಲಿದೆ. ಇದಾದ ಬಳಿಕ ಭೂಮರಡ್ಡಿ ವೃತ್ತದಿಂದ ಸಮಾವೇಶ ನಡೆಯುವ ಆಂಗ್ಲೋ ಸ್ಕೂಲ್ ಮೈದಾನದವರೆಗೆ ಹೆಜ್ಜೆ ಮೇಳ, ಜಾಂಜ್ ಮೇಳ, ಕರಡಿ ಮಜಲುಗಳ ಮೂಲಕ ಮೆರವಣಿಗೆಯು ನಡೆಯಲಿದೆ.

> **ಪ್ರತಿಮೆಗಳಿಗೆ ಮಾಲಾರ್ಪಣೆ**
> **ರಾಜ್ಯ ನದಾಫ್ / ಪಿಂಜಾರ ಸಂಘದ 32 ನೇ ಸಂಸ್ಥಾಪನಾ ದಿನಾಚರಣೆ ಹಾಗೂ ಸಮಾಜದ ರಾಜ್ಯಮಟ್ಟದ ಮಹಿಳಾ ಸಮಾವೇಶ ಅಂಗವಾಗಿ ನ.16 ರಂದು ಬೆಳಗ್ಗೆ 8 ಕ್ಕೆ ಬೈಕ್ ರ್‍ಯಾಲಿ ಆಯೋಜಿಸಲಾಗಿದೆ. ಬೈಕ್ ರ್‍ಯಾಲಿಯು ಜಾಮೀಯಾ ಮಸ್ಜೀದ್‌ದಿಂದ ಪ್ರಾರಂಭಗೊಳ್ಳಲಿದೆ. ಬೈಕ್ ರ್‍ಯಾಲಿಸಾಗುವ ಮಾರ್ಗ ಮಧ್ಯೆ ಮಹಾತ್ಮ ಗಾಂಧಿ ಪ್ರತಿಮೆ, ನಗರಸಭೆ ಆವರಣದಲ್ಲಿರುವ ಡಾ.ಅಂಬೇಡ್ಕರ್, ಸಂಗೊಳ್ಳಿ ರಾಯಣ್ಣ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಬಳಿಕ ಜಗದ್ಗುರು ತೋಂಟದಾರ್ಯ ಮಠಕ್ಕೆ ಭೇಟಿ, ಲಿಂಗೈಕ್ಯ ತೋಂಟದ ಶ್ರೀಗಳ ಗದ್ದುಗೆಗೆ ಮಾಲಾರ್ಪಣೆ ಗೌರವ ನೀಡಲಾಗುವುದೆಂದು ತಿಳಿಸಲಾಗಿದೆ.**

ಪ್ರಿಯಾಂಕ್ ಖರ್ಗೆ ಕೇಸ್ ಹಾಕೋದೇ ಕೆಲಸ ಮಾಡಿಕೊಂಡಿದ್ದಾರೆ: ಸಂಸದ

ಹುಬ್ಬಳ್ಳಿ: ಪ್ರಿಯಾಂಕ್ ಖರ್ಗೆಗೆ ಶಾಸಕರಾದರೂ ಸಹ ಏನು ಕೆಲಸ ಇಲ್ಲಾ ಅನ್ಸುತ್ತೆ. ಎಫ್‌ಐಆರ್ ಗಳನ್ನು ಹುಡುಕಿ ಹುಡುಕಿ ಹಾಕಿಸುವ ಕೆಲಸ ಮಾಡ್ತಾರೆ. ಅವರು ಹಾಕಿರೋ ಕೇಸ್ ಗಳಿಗೆ ಸುಪ್ರೀಂ ಕೋರ್ಟ್ ಛೀಮಾರಿ ಹಾಕಿ ವಾಪಸ್ ಕಳಿಸ್ತಾರೆ. ಸಚಿವ ಪ್ರಿಯಾಂಕ್ ಖರ್ಗೆ ಕೇಸ್ ಹಾಕೋದನ್ನೇ ಫುಲ್ ಟೈಮ್ ಕೆಲಸ ಮಾಡಿಕೊಂಡಿದ್ದಾರೆ ಎಂದು, ಸಂಸದ ತೇಜಸ್ವಿ ಸೂರ್ಯ ಸಚಿವ ಪ್ರಿಯಾಂಕ ಖರ್ಗೆ ಮೇಲೆ ವಾಗ್ದಾಳಿ ನಡೆಸಿದರು.

ಎಫ್‌ಐಆರ್ ದಾಖಲಾದ ವಿಚಾರದಲ್ಲಿ ಹುಬ್ಬಳ್ಳಿಯಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ತೇಜಸ್ವಿ ಸೂರ್ಯ, ಹುಬ್ಬಳ್ಳಿಯಲ್ಲಿ ಜೆಪಿಸಿ ಬಂದಾಗ ಹಾವೇರಿಯ ರೈತನ ಅಹವಾಲು ಪಡೆದಿದ್ದಿವಿ. ಅದರಲ್ಲಿ ರೈತನ ಜಮೀನು ವಕ್ಫ್ ಎಂದು ಬದಲಾಯಿಸಿದ ಕಾರಣ ರುದ್ರಪ್ಪ ಎಂಬ ರೈತ ಆತ್ಮಹತ್ಯೆ ಮಾಡಿಕೊಂಡಿದ್ದ. ಆ ಬಗ್ಗೆ



ಮಾಧ್ಯಮಗಳಲ್ಲೂ ಕೂಡ ವರದಿ ಬಂದಿದೆ. ರೈತನ ಕುಟುಂಬಸ್ಥರು ಮಾಧ್ಯಮದ ಎದುರು ಮಾತನಾಡಿದ್ದು ಪ್ರಸಾರ ಆಗಿದೆ. ಒಂದು ವೆಬ್ ಈ ಸುದ್ದಿಯನ್ನು ಪ್ರಸಾರ ಮಾಡಿರತಾರೆ. ಅದನ್ನ ನಾನು ಸರಕಾರ ಎಚ್ಚೆತ್ತುಕೊಳ್ಳಬೇಕು ಅಂತ ರೀ ಟ್ವಿಟ್ ಹಾಕ್ತೇನೆ.ಎಸ್.ಪಿ ಹಾವೇರಿ ಅಕೌಂಟ್ ಈ ರೀತಿ ಆಗಿಲ್ಲ ಅಂತ ಟ್ವಿಟ್ ಮಾಡಿದ್ದೆ. ನಾನು ಕಾನೂನು ವ್ಯವಸ್ಥೆಗೆ ಗೌರವ ಇರೋದ್ರಿಂದ ಟ್ವಿಟ್ ಡಿಲೀಟ್ ಮಾಡಿದೆ ಅನಂತರ ನಾನು ವೆರಿಫೈ ಮಾಡಿ ಹಾಕಬೇಕಿತ್ತೇನೋ ಅಂತ ಅದನ್ನ ರೀ ಟ್ವಿಟ್ ಮಾಡ್ತೇನೆ. ಅದು ಸರಿಯಾದ ಮಾಹಿತಿ ಇಲ್ಲದೇ ವೆಬ್ ಹಾಕಿರಬಹುದು ಅನ್ಕೊಂಡೆ. ಎಫ್‌ಐಆರ್ ಹಾಕ್ತೇನೆ ಅಂತ ಹೇಳ್ತಾರೆ. ನಂತರ ಎಫ್ ಐಆರ್ ನನಗೆ ಬರುತ್ತೆ ಎಂದರು.

ಕೋರ್ಟ್ ನಲ್ಲಿ ನಿಲ್ಲಲ್ಲ ಅಂತ ಗೊತ್ತಿರೋದಕ್ಕೆ ನಾನು ಸುಮ್ಮನಿದ್ದೆ. ಆತ್ಮಹತ್ಯೆ ಮಾಡಿಕೊಂಡ ಕುಟುಂಬ ನನ್ನನ್ನ ಹಾಗೂ ಮಾಧ್ಯಮ ಸಂಪರ್ಕ ಮಾಡಿದ್ದಾರೆ. ನನ್ನ ಮಗ ಆತ್ಮಹತ್ಯೆ ಮಾಡಿಕೊಂಡಿದ್ದಾನೆ, ಪಹಣಿಯಲ್ಲಿ ಇದೆ ಅಂತ ಕಳಿಸಿದ್ದಾರೆ . ಪಹಣಿಯ ಪ್ರಿಂಟ್ ತಗೆದುಕೊಡ್ತೇನೆ. ಅವರ ತಂದೆ ಅವರ ಮಗ ಆತ್ಮಹತ್ಯೆ

ಮಾಡಿಕೊಂಡಿದ್ದಾನೆ ಅಂತ ಅವರೇ ಹೇಳಿದ್ದಾರೆ. ಮಾಧ್ಯಮ ಕೂಡ ಅದನ್ನ ವರದಿ ಮಾಡಿದ್ದೀರಿ. ಮಾಧ್ಯಮದ ಸ್ವಾತಂತ್ರ್ಯ ಹತ್ತಿಕುವ ಕೆಲಸ ನಡೀತಾ ಇದೆ. ಆದ್ರೆ ಪೊಲೀಸರು ಒತ್ತಡಕ್ಕೆ ಒಳಗಾಗಿ ಮುಚ್ಚಿಹಾಕೋ ಕೆಲಸ ಮಾಡ್ತಾ ಇದ್ದಾರೆ. ಹೀಗಾದ್ರೆ ಇದು ದೊಡ್ಡ ಅಕ್ಷಮ್ಯ ಅಪರಾಧ, ಬಹಳ ಗಂಭೀರವಾದ ವಿಷಯ ನಾನು ಜವಾಬ್ದಾರಿ ಸ್ಥಾನದಲ್ಲಿದ್ದವನು ಹೀಗಾಗಿ ಟ್ವಿಟ್ ಡಿಲೀಟ್ ಮಾಡಿದೆ. ರಾಜ್ಯದಲ್ಲಿ ರೈತರ ಜಾಗ ಕಬಳಿಸೋದಕ್ಕೆ ವಕ್ಫ್ ಬೋರ್ಡ್ ಗೆ ಸರಕಾರ ಬೆಂಬಲ ನೀಡ್ತಾ ಇದೆ.

ವಕ್ಫ್ ನ ಹಳೆಯ ತಪ್ಪುಗಳನ್ನು ಮುಚ್ಚಿಹಾಕ್ತಿದ್ದಾರೆ. ಅವರ ಕುಟುಂಬಸ್ಥರು ಕೂಡ ಮುಂದೆ ಬಂದು ಮಾತನಾಡ್ತಾರೆ. ಪ್ರಿಯಾಂಕ್ ಖರ್ಗೆ ಹಾಗೂ ರಾಜ್ಯ ಸರಕಾರ ರಾಜ್ಯದ ಎದುರು ಕ್ಷಮೆ ಕೇಳಬೇಕು. ಸತ್ಯವನ್ನು ಮುಚ್ಚಿ ಹಾಕುವ ಪ್ರಯತ್ನದ ಬಗ್ಗೆ ರಾಜ್ಯದ ಜನಕ್ಕೆ ಜಗತ್ ಜಾಹೀರು ಮಾಡಬೇಕು. ನನ್ನನ್ನ ಎ1 ಮಾಡಿ, ಮಾಧ್ಯಮದವರನ್ನ ಎ2 ಮಾಡಿದ್ದಾರೆ. ಮಾಧ್ಯಮದವರು ಮನೆಯಲ್ಲಿ ಕೂತು ಕಾದಂಬರಿ ಬರೆದದ್ದಲ್ಲ. ಜೆಪಿಸಿ ವರದಿ ಆಧಾರದ ಮೇಲೆ ಮಾಧ್ಯಮಗಳು ವರದಿ ಮಾಡಿದ್ದವು. ಇದರ ಹಿಂದೆ ಮುಚ್ಚಿ ಹಾಕುವ ಷಡ್ಯಂತ್ರ ಇದೆ. ರಾಜ್ಯ ಸರಕಾರ ವಕ್ಫ್ ಬಳಸಿಕೊಂಡು ತನ್ನ ಓಟ್ ಬ್ಯಾಂಕ್ ಗಾಗಿ ಸಾವಿರಾರು ಎಕರೆ ರೈತರ ಜಮೀನು ಮಾರಿಕೊಡಬೇಕು ಅನ್ನೋ ಹುನ್ನಾರ ನಡೆಸಿದೆ ಎಂದು ಸಂಸದ ತೇಜಸ್ವಿ ಸೂರ್ಯ ಗಂಭೀರ ಆರೋಪ ಮಾಡಿದರು.

ಅಹವಾಲು ಸ್ವೀಕಾರ

ಧಾರವಾಡ: ಉಪಲೋಕಾಯುಕ್ತ ನ್ಯಾಯಮೂರ್ತಿ ಕೆ.ಎನ್ .ಫಣೀಂದ್ರ ಅವರು ನವೆಂಬರ 21 ರಿಂದ 23

ವರೆಗೆ ಧಾರವಾಡ ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ. ನವೆಂಬರ 21 ರಂದು ಬೆಳಿಗ್ಗೆ 10 ರಿಂದ 1.30 ರವರೆಗೆ ಮತ್ತು ಮಧ್ಯಾಹ್ನ 2.30 ರಿಂದ 5 ರವರೆಗೆ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಸಾರ್ವಜನಿಕರ ಕುಂದುಕೊರತೆ ಅಹವಾಲುಗಳನ್ನು ಸ್ವೀಕರಿಸಿ, ವಿಚಾರಣೆ ನಡೆಸಲಿದ್ದಾರೆ.

ಸರಕಾರಿ ಅಧಿಕಾರಿ, ನೌಕರರಿಂದ ಕಾನೂನು ರೀತ್ಯಾ ಆಗಬೇಕಾದ ಕೆಲಸದಲ್ಲಿ ವಿಳಂಬವೇನಾದರೂ ಆಗಿದ್ದಲ್ಲಿ ಅಥವಾ ಅಧಿಕಾರಿ, ನೌಕರರು ನ್ಯಾಯಯುತವಾಗಿ ಮಾಡಿಕೊಡಬೇಕಾದ ಕೆಲಸಗಳಲ್ಲಿ ವೃಥಾ ತೊಂದರೆ ಕೊಡುವುದು ಅಥವಾ ಇನ್ಯಾವುದೇ ತರಹದ ದುರಾಡಳಿತದಲ್ಲಿ ತೊಡಗಿದ್ದರೆ, ಅದರಿಂದ ತೊಂದರೆಗೊಳಗಾದ ಸಾರ್ವಜನಿಕರು ತಮ್ಮ ಅಹವಾಲುಗಳನ್ನು ಲಿಖಿತ ರೂಪದಲ್ಲಿ ದಾಖಲೆ ಸಾಕ್ಷಾಧಾರಗಳೊಂದಿಗೆ ಸಲ್ಲಿಸಬಹುದು.

ನ.22 ರಂದು ಬೆಳಗ್ಗೆ 10 ರಿಂದ 1.30 ರವರೆಗೆ ಮತ್ತು ಮಧ್ಯಾಹ್ನ 2.30 ರಿಂದ 5 ರವರೆಗೆ ಆಲೂರು ವೆಂಕಟರಾವ್ ಸಾಂಸ್ಕೃತಿಕ ಭವನದಲ್ಲಿ ಜಿಲ್ಲೆಗೆ ಸಂಬಂಧಪಟ್ಟಂತೆ ಲೋಕಾಯುಕ್ತ ಸಂಸ್ಥೆಯಲ್ಲಿ ದಾಖಲಾಗಿರುವ (ಉಪಲೋಕಾಯುಕ್ತರ ಕಾರ್ಯವ್ಯಾಪ್ತಿಗೆ ಒಳಪಡುವ ಪ್ರಕರಣಗಳಲ್ಲಿ) ತನಿಖೆ, ವಿಚಾರಣೆಗೆ ಬಾಕಿಯಿರುವ ಪ್ರಕರಣಗಳಿಗೆ ಸಂಬಂಧಿಸಿದ ದೂರುದಾರರು ಹಾಗೂ ಎದುರುದಾರರ ಸಮ್ಮುಖದಲ್ಲಿ ಕಾನೂನು ರೀತ್ಯಾ ವಿಚಾರಣೆ ನಡೆಸಲಾಗುವುದು.

ದೂರುದಾರರು ನಿಗದಿತ ಸಮಯದಲ್ಲಿ ಹಾಜರಿದ್ದು, ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕು ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ಹಾಗೂ ಕರ್ನಾಟಕ ಲೋಕಾಯುಕ್ತ ಧಾರವಾಡ ಜಿಲ್ಲಾ ಅಧೀಕ್ಷಕರು ಜಂಟಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

17780 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಹಾನಿ; ಜಂಟಿ ಸಮೀಕ್ಷೆಯ ವರದಿ ಪ್ರಕಟ

ಕುಂದಗೋಳ: ಕುಂದಗೋಳ ತಾಲ್ಲೂಕಿನಲ್ಲಿ ಅಕ್ಟೋಬರ್ ತಿಂಗಳಲ್ಲಿ ಮಾಹೇಯ ಬೆಳೆ ಹಾನಿಯ ಜಂಟಿ ಸಮೀಕ್ಷಾ ಪ್ರಾಥಮಿಕ ವರದಿ ಬಂದಿದ್ದು ವಿವಿಧ ಬೆಳೆಗಳು ಹೆಕ್ಟೇರ್ ನಲ್ಲಿ ಹಾನಿಯಾಗಿವೆ.

ತಾಲ್ಲೂಕಿನಲ್ಲಿ ಕೃಷಿ ಬೆಳೆಗಳಾದ ಶೇಂಗಾ 3650 ಹೆಕ್ಟೇರ್, ಮೆಕ್ಕೆಜೋಳ 6250 ಹೆಕ್ಟೇರ್, ಹತ್ತಿ 5200 ಹೆಕ್ಟೇರ್, ಸೋಯಾಬೀನ 800 ಹೆಕ್ಟೇರ, ಹಾಗೂ ತೋಟಗಾರಿಕೆ ಬೆಳೆಗಳಾದ ಮೆಣಸಿನಕಾಯಿ 1800 ಹೆಕ್ಟೇರ್, ಈರುಳ್ಳಿ 70 ಹೆಕ್ಟೇರ ಹಾಗೂ ತರಕಾರಿ 10 ಹೆಕ್ಟೇರ್ ಹೀಗೆ ಒಟ್ಟು 17780 ಹೆಕ್ಟೇರ್ ಭೂಮಿಯಲ್ಲಿ ಬೆಳೆ ಹಾನಿಯಾಗಿದೆ ಎಂದು ತಹಶೀಲ್ದಾರ ರಾಜು ಕೆ. ಮಾವರಕರ ಹೇಳಿದರು.

ಪಟ್ಟಣದ ತಹಸೀಲ್ದಾರ ಕಚೇರಿ ಸಭಾಭವನದಲ್ಲಿ ತಹಶೀಲ್ದಾರ ಅಧ್ಯಕ್ಷತೆಯಲ್ಲಿ ರೈತರೊಂದಿಗೆ ನಡೆದ ಬೆಳೆಹಾನಿ ಸಮೀಕ್ಷೆ ಕುರಿತು ಮಾತನಾಡಿದ ಅವರು, ತಾಲೂಕಿನ ಬೆಳೆ ಹಾನಿಯಾದ ಜಂಟಿ ಸಮೀಕ್ಷೇ ವರದಿಯನ್ನು ಈಗಾಗಲೇ ಕೃಷಿ, ಇಲಾಖೆ ತೋಟಗಾರಿಕೆ ಇಲಾಖೆ ಕಂದಾಯ ಇಲಾಖೆ ಹಾಗೂ ತಾಲ್ಲೂಕಿನ ಆಯಾ ಗ್ರಾಮಗಳ ಗ್ರಾಮ ಪಂಚಾಯತಿಗಳಲ್ಲಿ ಪ್ರಕಟಿಸಲಾಗಿದ್ದು ಇದರಲ್ಲಿ ರೈತರಿಗೆ ಬೆಳೆ ಹಾನಿ ಸರ್ವೆ ಆಗದೆ ಏನಾದರೂ ಸಮಸ್ಯೆಗಳಿದ್ದರೆ ಹಾಗೂ ರೈತರ ತಮ್ಮ ಹೆಸರು ಸಮೀಕ್ಷೆ ವರದಿಯಲ್ಲಿ ಇರದಿದ್ದರೆ ಅದನ್ನು ಪರಿಶೀಲಿಸಿ ಏನಾದರೂ ರೈತರ ಆಕ್ಷೇಪಗಳಿದ್ದರೆ ನ. 11 ರ ಒಳಗಾಗಿ ಆಕ್ಷೇಪಣೆ ಅರ್ಜಿಯನ್ನು ತಮ್ಮ ಗ್ರಾಮ ಪಂಚಾಯತಿ ಅಥವಾ ಕೃಷಿ ಇಲಾಖೆ ತೋಟಗಾರಿಕೆ ಇಲಾಖೆ ಕಂದಾಯ ಇಲಾಖೆಯಲ್ಲಿ ಸಲ್ಲಿಸಬೇಕೆಂದು ಹೇಳಿದರು.

ಸಭೆಯಲ್ಲಿ ಕೃಷಿಕ ಸಮಾಜ ನವದೆಹಲಿ ರಾಜ್ಯಾಧ್ಯಕ್ಷರಾದ ಮಾಣಿಕ್ಯ ಚಿಲ್ಲೂರ ಮಾತನಾಡಿದರು.

ರೈತ ಮುಂಖಡರಾದ ಬಸವರಾಜ ಸಂಬೋಜಿ ವೆಂಕನಗೌಡ ಕಂಟೇಪ್ಪಗೌಡ್ರ, ಗುರುಪಾದಪ್ಪ ಬಂಕದ, ತಾಲೂಕು ಕರವೇ ಅಧ್ಯಕ್ಷ ಕಲ್ಲಪ್ಪ ಹರ್ಕುಣಿ ಜಂಟಿಯಾಗಿ ಮಾತನಾಡಿ, ತಾಲ್ಲೂಕಿನಲ್ಲಿ ಬೆಳೆ ಹಾನಿ ಸಮೀಕ್ಷೆ ಸರಿಯಾದ ರೀತಿಯಲ್ಲಿ ನಡೆದಿರುವದಿಲ್ಲ ಇನ್ನೊಂದು ಬಾರಿ ಸಮೀಕ್ಷೆ ಮಾಡಿ ರೈತರಿಗೆ ಅನೂಕೂಲ ಮಾಡಿಕೊಡಬೇಕೆಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಕೃಷಿ ಇಲಾಖೆಯ ಸಹಾಯಕ ನಿರ್ದೇಶಕಿ ಭಾರತಿ ಮೆಣಸಿನಕಾಯಿ, ಕಂದಾಯ ನಿರೀಕ್ಷಕರಾದ ಅಶೋಕ ಮಲ್ಲೂರ ಹೇಮನಗೌಡ, ಬಸನಗೌಡ್ರ, ವೆಂಕನಗೌಡ ಕಂಟೇಪ್ಪಗೌಡ್ರ, ಅಶೋಕ ಘೋರ್ಪಡೆ, ಪಕ್ಕೀರಪ್ಪ ಪೂಜಾರ ಪ್ರಕಾಶಗೌಡ ಪಾಟೀಲ್ ನಿರಂಜನಯ್ಯ ಮಣಕಟ್ಟಿಮಠ, ಬಸವರಾಜ ಹರವಿ, , ದೇವೇಂದ್ರಪ್ಪ ಇಚ್ಚಂಗಿ, ಮಂಜುನಾಥ್ ಹಾದಿಮನಿ ಬಸವರಾಜ ಯೋಗಪ್ಪನವರ, ರಾಜು ಮಲ್ಲಿಗವಾಡ, ಮಂಜು ಹಾದಿಮನಿ ಭಾಗವಹಿಸಿದ್ದರು.

ಎತ್ತಿನಹೊಳೆ ಗುಂಡಿಗೆ ಬಿದ್ದು ಇಬ್ಬರ ಸಾವು

ತುಮಕೂರು: ತಿಪಟೂರು ತಾಲೂಕಿನ ಹುಚ್ಚನಹಟ್ಟಿಯಲ್ಲಿ ಕಾಣೆಯಾಗಿದ್ದ ಇಬ್ಬರು ಮಕ್ಕಳು ಸಮೀಪ ನಡೆಯುತ್ತಿರುವ ಎತ್ತಿನಹೊಳೆ ಕಾಮಗಾರಿ ಗುಂಡಿಯಲ್ಲಿ ಶವವಾಗಿ ಪತ್ತೆಯಾಗಿದ್ದಾರೆ. ಎರಡನೇ ತರಗತಿಯ ಯದುವೀರ್ (8 ವರ್ಷ) ಮತ್ತು ನಾಲ್ಕನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ಮನೋಹರ್ (9) ಮೃತ ಬಾಲಕರು. ಇಬ್ಬರೂ ಗುರುವಾರ ಸಂಜೆಯಿಂದ ಕಾಣೆಯಾಗಿದ್ದರು. ಶುಕ್ರವಾರ ಬೆಳಗ್ಗೆ ಎತ್ತಿನಹೊಳೆ ಗುಂಡಿಯಲ್ಲಿ ಶವಗಳು ಸಿಕ್ಕಿವೆ. ಮಕ್ಕಳ ಶವಗಳನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಲಾಗಿದೆ. ತಿಪಟೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಂಗಳೂರು ವಿಮಾನ ನಿಲ್ದಾಣ ಬಳಿ ಚಿರತೆ ಪ್ರತ್ಯಕ್ಷ

ಮಂಗಳೂರು: ಮಂಗಳೂರು ವಿಮಾನ ನಿಲ್ದಾಣ ಪರಿಸರದಲ್ಲಿ ಶುಕ್ರವಾರ ಮುಂಜಾನೆ ಚಿರತೆ ಪ್ರತ್ಯಕ್ಷಗೊಂಡಿದ್ದು ಏರ್‌ಪೋರ್ಟ್ ಅಧಿಕಾರಿ ನೋಡುತ್ತಿರುವಂತೆ ಕಣ್ಣೆದುರಲ್ಲೇ ರಸ್ತೆ ದಾಟಿ ಸಾಗಿದೆ. ವಿಮಾನ ನಿಲ್ದಾಣ ಪರಿಸರದಲ್ಲಿ ಚಿರತೆ ಕಾಣಿಸಿಕೊಂಡ ಕುರಿತು ಅಧಿಕಾರಿಗಳು ನೀಡಿದ ಮಾಹಿತಿ ಮೇರೆಗೆ ಅರಣ್ಯ ಅಧಿಕಾರಿಗಳು ಸ್ಥಳದಲ್ಲಿ ಪರಿಶೀಲನೆ ನಡೆಸುತ್ತಿದ್ದಾರೆ. ಅಧಿಕಾರಿ ಮೊಬೈಲ್‌ನಲ್ಲಿ ಚಿರತೆ ಸಾಗುತ್ತಿದ್ದ ದೃಶ್ಯ ಸೆರೆಹಿಡಿದಿದ್ದಾರೆ. ಬಳಿಕ ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದು ಸ್ಥಳಕ್ಕೆ ಬಂದ ಅರಣ್ಯ ಅಧಿಕಾರಿಗಳು ವಿಮಾನ ನಿಲ್ದಾಣ ಪರಿಸರದಲ್ಲಿ ಕಾರ್ಯಾಚರಣೆ ನಡೆಸುತ್ತಿದ್ದಾರೆ.

ರೈತರ, ಮಠ-ಮಂದಿರಗಳ ಒಂದಿಂಚೂ ಭೂಮಿ ವಕ್ಫ್ ಆಸ್ತಿಯಾಗಲ್ಲ: ಎಂಬಿಪಿ

ವಕ್ಫ್ ವಿರುದ್ಧದ ಬಿಜೆಪಿ ಹೋರಾಟ ರಾಜಕೀಯ ದುರುದ್ದೇಶದ ಒಂದು ನಾಟಕ

ವಿಜಯಪುರ: ಜಿಲ್ಲೆಯಲ್ಲಿ ಒಂದೇ ಒಂದು ಇಂಚು ರೈತರ, ಹಿಂದೂಗಳ, ಮಠಗಳ ಆಸ್ತಿ ವಕ್ಫ್ ಆಸ್ತಿ ಆಗಿಲ್ಲ. ಈಗಾಗಲೇ ಈ ಬಗ್ಗೆ ಸಿಎಂ ಸ್ಪಷ್ಟ ನಿರ್ದೇಶನ ನೀಡಿದ್ದಾರೆ. ನಾನು ಹಾಗೂ ಕಂದಾಯ, ವಕ್ಫ್ ಸಚಿವರು ಸ್ಪಷ್ಟಪಡಿಸಿದ್ದೇವೆ. ಬಿಜೆಪಿಯವರು ತಮ್ಮ ಅವಧಿಯಲ್ಲಿ ವಕ್ಫ್‌ಗೆ ಎಲ್ಲಾ ರೀತಿಯ ಅನುಕೂಲ ಮಾಡಿಕೊಟ್ಟು ಈಗ ರಾಜಕೀಯ ದುರುದ್ದೇಶಕ್ಕೆ, ಹಿಂದೂ-ಮುಸ್ಲಿಂ ಕಾರಣಕ್ಕೆ ಧರಣಿ, ಹೋರಾಟದ ನಾಟಕ ಮಾಡುತ್ತಿದ್ದಾರೆ ಎಂದು ಸಚಿವ ಡಾ.ಎಂ.ಬಿ. ಪಾಟೀಲ್ ಆರೋಪಿಸಿದ್ದಾರೆ.

ಬಿಜೆಪಿ ಅವಧಿಯಲ್ಲಿ ಆದ ಭೂಪರಿವರ್ತನೆ ಸಂಬಂಧ ವಕ್ಫ್ ದಾಖಲೆಗಳನ್ನು ಸುದ್ದಿಗೋಷ್ಠಿಯಲ್ಲಿ ಬಿಡುಗಡೆಗೊಳಿಸಿದ ಸಚಿವರು, ವಕ್ಫ್ ವಿರುದ್ಧದ ಹೋರಾಟ, ಧರಣಿ ಎಲ್ಲ ಬಿಜೆಪಿಯ ನಾಟಕ. ವಿಜಯಪುರದಲ್ಲಿ ಅನಿರ್ದಿಷ್ಟ ಧರಣಿ ನಡೆಸಲು ಕಾರಣ ಬಿಜೆಪಿಯ ಆಂತರಿಕ ಕಚ್ಚಾಟ. ಇದು ಬಿಜೆಪಿ ವರ್ಸಸ್ ಬಿಜೆಪಿ ಎನ್ನುವಂತಾಗಿದೆ. ಪ್ರತಿಭಟನೆಯಲ್ಲಿ ಭಾಗಿಯಾದ ಸ್ವಾಮೀಜಿಗಳಿಗೆ ಈ ನಾಟಕದ ಬಗ್ಗೆ ಅರ್ಥವಾಗಿಲ್ಲ. ನಾನು ನಿಜಾಂಶ ವಿವರಿಸಿದ ಬಳಿಕ ಬಿಜೆಪಿ ಬಗ್ಗೆ ಸ್ವಾಮೀಜಿಗಳೇ ಮಾತಾಡುತ್ತಾರೆ ಎಂದು ಎಚ್ಚರಿಕೆ ಕೊಟ್ಟರು.

ವಕ್ಫ್ 2010ರ ಏಪ್ರಿಲ್‌ನಲ್ಲಿ ಅಂದಿನ ಬಿಜೆಪಿ ಸರಕಾರ ನೋಟಿಫಿಕೇಷನ್ ಮಾಡಿ, ವಕ್ಫ್ ಆಸ್ತಿ ನೋಟಿಸ್ ನೀಡುವ ಬಗ್ಗೆ ಸುತ್ತೋಲೆ ಹೊರಡಿಸಿತ್ತು. 2011ರಲ್ಲೂ ಬಿಜೆಪಿ ಅವಧಿಯಲ್ಲಿ ವಕ್ಫ್ ಆಸ್ತಿ ರಕ್ಷಣೆ ಹಾಗೂ ದಾಖಲೆ ಕ್ರಮಬದ್ಧ ಮಾಡುವ ಬಗ್ಗೆ ಸುತ್ತೋಲೆ ಹೊರಡಿಸಿತ್ತು. 29-8-2020 ರಲ್ಲಿ ಬಿಜೆಪಿ ವಕ್ಫ್ ಆಸ್ತಿ ಫ್ಲ್ಯಾಗಿಂಗ್ ಮಾಡುವ ಬಗ್ಗೆ ಸುತ್ತೋಲೆ ಹೊರಡಿಸಿತ್ತು. ವಕ್ಫ್ ಆಸ್ತಿ ರಕ್ಷಣೆಗಾಗಿ ಕಾರ್ಯಪಡೆ ರಚಿಸಿದ್ದರು. 27-01-2021 ರಲ್ಲಿ ಗ್ರಾಮೀಣ ಭಾಗದ ವಕ್ಫ್ ಆಸ್ತಿಗಳನ್ನು ತಂತ್ರಾಂಶಗಳಲ್ಲಿ ಫ್ಲ್ಯಾಗ್ ಮಾಡುವ ಬಗ್ಗೆ ಸುತ್ತೋಲೆ. 8-1-2021 ರಲ್ಲಿ ರಾಜ್ಯದಲ್ಲಿ ಇನಾಮು ರದ್ದತಿ ಕಾಯ್ದೆ ಅಡಿಯಲ್ಲಿ ವಕ್ಫ್ ಆಸ್ತಿ ಇತರರ ಪಾಲಾಗಿವೆ. ಸರ್ವೋಚ್ಚ ನ್ಯಾಯಾಲಯ ಆದೇಶದಂತೆ ಅವುಗಳನ್ನು ರಕ್ಷಿಸಬೇಕಾಗಿದೆ ಎಂದು ಬಿಜೆಪಿ ಅವಧಿಯಲ್ಲಿ ಸುತ್ತೋಲೆ ಮಾಡಿದ್ದರು ಎಂದು ಸಚಿವ ಎಂ.ಬಿ. ಪಾಟೀಲ್ ದಾಖಲೆ ಸಮೇತ ಮಾಹಿತಿ ನೀಡಿದರು.

ಇನ್ನಷ್ಟು ದಾಖಲೆ ಬಿಡುಗಡೆ

ಇವು ಕೇವಲ ಉದಾಹರಣೆ ಮಾತ್ರ. ಮುಂದಿನ ದಿನಗಳಲ್ಲಿ ಬುಕ್‌ಲೆಟ್ ಮಾಡಿ ಬಿಡುಗಡೆ ಮಾಡುತ್ತೇನೆ. ಹಿಂದೂಗಳ ಆಸ್ತಿ ರಕ್ಷಣೆ ಮಾಡಲು ನಾವು ಬದ್ಧ. ನಾವು ಕೂಡಾ ಹಿಂದೂಗಳೇ, ಮನುವಾದ ವಿರುದ್ಧ ಮಾತ್ರ ನಮ್ಮ ಹೋರಾಟ. ಪ್ರಧಾನಿ ನರೇಂದ್ರ ಮೋದಿಯವರು 2014 ರ ಚುನಾವಣೆಯ ತಮ್ಮ ಬಿಜೆಪಿ ಪ್ರಣಾಳಿಕೆಯಲ್ಲಿ ವಕ್ಫ್‌ಆಸ್ತಿ ಅತಿಕ್ರಮಣ ತೆಗೆಯುವ ಬಗ್ಗೆ ಪ್ರಸ್ತಾಪ ಮಾಡಿತ್ತು. ಪ್ರಣಾಳಿಕೆಯಲ್ಲಿ ವಕ್ಫ್ ಬಗ್ಗೆ ಹಾಕುವಾಗ ಈಗ ಹೋರಾಟ ಮಾಡುತ್ತಿರುವ ತೇಜಸ್ವಿ ಸೂರ್ಯ, ಶೋಭಾ ಕರಂದ್ಲಾಜೆ ಏನು ಮಾಡುತ್ತಿದ್ದರು ಎಂದು ಎಂ.ಬಿ.ಪಾಟೀಲ್ ಪ್ರಶ್ನಿಸಿದರು.

ಮಾಜಿ ಜೋಡೆತ್ತುಗಳಿಂದ ಪರಸ್ಪರ ವಾಕ್ಸಮರ

← ಮೊದಲಪುಟದಿಂದ

ಹಾಗೆ ಮಾಡಿದರೆ ಅಭಿವೃದ್ಧಿ ಸಾಧ್ಯವೇ? ಕೇಂದ್ರ ಸರಕಾರದಿಂದ ನಾವು ಎಲ್ಲ ರೀತಿಯ ಸಹಕಾರ ನೀಡಲು ತಯಾರಿದ್ದೇವೆ. ಆದರೆ, ನಮ್ಮ ಜತೆ ಹೊಂದಿಕೊಂಡು ಕೆಲಸ ಮಾಡಲು ರಾಜ್ಯ ಸರಕಾರ ತಯಾರಿಲ್ಲ. ಪ್ರತಿಯೊಂದಕ್ಕೂ ರಾಜಕೀಯ ತಂದು ರಾಜ್ಯ ಪ್ರಗತಿಯನ್ನು ಹಾಳು ಮಾಡುತ್ತಿದೆ ಎಂದು ವಾಗ್ದಾಳಿ ನಡೆಸಿದರು.

ಡಿ.ಕೆ.ಶಿವಕುಮಾರ್ ಹೇಳಿದ್ದೇನು?

- ಕನಕಪುರದಲ್ಲಿ ಶಾಲೆಗಳಿಗೆ ನಾನು 25 ಎಕರೆ ಜಾಗ ದಾನ ಮಾಡಿದ್ದೇನೆ
- ದೇವೇಗೌಡರ ಕುಟುಂಬದವರು ಒಂದು ಗುಂಟೆ ಜಾಗ ದಾನ ಮಾಡಿದ್ದಾರಾ?
- ಎಚ್‌ಡಿಕೆ ಕ್ಷೇತ್ರಕ್ಕೆ ಏನು ಮಾಡಿದ್ದಾರೆ? ಇಲ್ಲವಾದರೆ, ಮತ್ತೆ ಏಕೆ ನೀವು ಮತ ಕೇಳುತ್ತಿದ್ದೀರಿ?
- ದೇವೇಗೌಡರು ಅವರ ಮೊಮ್ಮಗನ ಪಟ್ಟಾಭಿಷೇಕ ಮಾಡಲಿ; ಆದರೆ ನಿಮಗಾಗಿ ದುಡಿದ ಕಾರ್ಯಕರ್ತರ ಸ್ಥಿತಿಯೇನು?
- ಐದು ವರ್ಷಕ್ಕೊಮ್ಮೆ ಮತ ಕೇಳಲು ಕ್ಷೇತ್ರಕ್ಕೆ ಬಂದರೆ ಮತ ಯಾರು ನೀಡುತ್ತಾರೆ?

..ಪ್ರಚಾರದಲ್ಲಿ ಯತ್ನಾಳ್

← ಮೊದಲಪುಟದಿಂದ

ಇಲ್ಲ, ಮುಸ್ಲಿಮರಾಗಬೇಕಾಗುತ್ತದೆ. ಸಿಎಂ ಸಿದ್ದರಾಮಯ್ಯ, ಜಮೀರ್ ಅವರಿಗೆ ಎಲ್ಲ ವಕ್ಫ್ ಆಸ್ತಿ ಸಮೀಕ್ಷೆ ಮಾಡಲು ಹೇಳಿದ್ದರು. ಭಾರತ ದೇಶ, ಹಿಂದು ಧರ್ಮ ಉಳಿಯಬೇಕೆಂದರೆ ಎಲ್ಲರೂ ಒಗ್ಗಟ್ಟಾಗಿ ಇರಬೇಕು. ಕಾಂಗ್ರೆಸ್‌ನವರು ದಲಿತ ಸಮುದಾಯಕ್ಕೆ ಏನು ಮಾಡಿಲ್ಲ ಎಂದು ಟೀಕಿಸಿದರು.

ಮತದಾರರು ತಮ್ಮ ಹಕ್ಕನ್ನು ಸರಿಯಾದ ವ್ಯಕ್ತಿಗೆ ಮಾಡಿದರೆ ಸಾಕು. ಯಾರನ್ನು ಎಲ್ಲಿಡಬೇಕು ಎನ್ನುವುದು ನೋಡಿಕೊಳ್ಳಲು ದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಇದ್ದಾರೆ. ಅವರು ಬಂದ ಮೇಲೆ ಜಮ್ಮು ಕಾಶ್ಮೀರದಲ್ಲಿ ಶಾಂತಿ ನೆಲೆಸಿದೆ. ರಾಮ ಮಂದಿರ ನಿರ್ಮಾಣ ಆಗಿದೆ. ಭಾರತ ಐದನೇ ದೊಡ್ಡ ಆರ್ಥಿಕ ಶಕ್ತಿಯಾಗಿದೆ.

– ಬಸನಗೌಡ ಪಾಟೀಲ್ ಯತ್ನಾಳ್

ಸಂಡೂರಿನಲ್ಲಿ ಮಾಜಿ-ಹಾಲಿಗಳ ವಾಗ್ದಾಳಿ

ಯಡಿಯೂರಪ್ಪ ಹೇಳಿದ್ದೇನು?

- ಕಾಂಗ್ರೆಸ್‌ನವರು ಹಣ-ಹೆಂಡ- ಅಧಿಕಾರದ ಬಲದಲ್ಲಿ ಉಪಚುನಾವಣೆ ನಡೆಸುತ್ತಿದ್ದಾರೆ
- ಮುಖ್ಯಮಂತ್ರಿಗಳು ಜೈಲಿಗೆ ಹೋಗುವ ಕಾಲ ದೂರವಿಲ್ಲ
- ಮುಡಾದಲ್ಲಾಗಿರುವ ಬ್ರಹ್ಮಾಂಡ ಭ್ರಷ್ಟಾಚಾರದ ತನಿಖೆ ಸಿಬಿಐನಿಂದ ನಡೆಸಬೇಕು
- ರಾಜ್ಯ ಸರಕಾರದ ವಿರುದ್ಧ ಜನ ಜಾಗೃತರಾಗಿದ್ದಾರೆ; ಉಪಚುನಾವಣೆಯಲ್ಲಿ ಬಿಜೆಪಿ ಗೆಲ್ಲುವುದು ನಿಶ್ಚಿತ
- ಬಂಗಾರು ಹನುಮಂತು ಅವರನ್ನು ಗೆಲ್ಲಿಸಬೇಕು; ಇದಕ್ಕಾಗಿ ನಾನು ಇಲ್ಲಿಗೆ ಬಂದಿದ್ದೇನೆ

ರಾಮೇಶ್ವರಂ ಕೆಫೆ ಸ್ಫೋಟಕ್ಕೆ ಪಾಕ್ ನಂಟು?

← ಮೊದಲಪುಟದಿಂದ

ಜನವರಿ 22, 2024ರಂದು ಆಯೋಧ್ಯೆಯಲ್ಲಿ ರಾಮಮಂದಿರ ಉದ್ಘಾಟನೆ ಇದೆ. ಅಂದೇ ಸ್ಫೋಟ ನಡೆಸಿ ಎಂಬ ಸೂಚನೆ ಇತ್ತು. ಈ ಹಿನ್ನೆಲೆಯಲ್ಲಿ ಮಲ್ಲೇಶ್ವರಂ ಬಿಜೆಪಿ ಕಚೇರಿ ಟಾರ್ಗೆಟ್ ಮಾಡಿದ್ದ ಶಾಜಿಬ್, ಹೀಗಾಗಿ ಬೆಂಗಳೂರಿನಿಂದ ಚೆನ್ನೈಗೆ ಶಿಫ್ಟ್ ಆಗಿದ್ದ. ಟ್ರಿಪ್ಲಿಕೇನ್ ಎಂಬಲ್ಲಿ ಬಾಡಿಗೆ ಮನೆಯಲ್ಲಿದ್ದುಕೊಂಡೇ ಐಇಡಿ ಬಾಂಬ್ ತಯಾರಿಕೆ ಮಾಡಿದ್ದ. 2024 ಜನವರಿ 22ರಂದು ಬೆಳಗ್ಗೆ ಐಇಡಿ ಬಾಂಬ್ ಹಿಡ್ಕೊಂಡು ಬೆಂಗಳೂರಿಗೆ ಬಂದಿದ್ದ ಶಾಜಿಬ್, ಬಿಜೆಪಿ ಕಚೇರಿ ಮುಂಭಾಗದಲ್ಲಿ ಬಾಂಬ್ ಇಡಲು ಸಂಚು ಹೂಡಿದ್ದ. ಹೆಚ್ಚಿನ ಭದ್ರತೆ ಹಿನ್ನೆಲೆ ಬಿಜೆಪಿ ಕಚೇರಿ ಹಿಂಭಾಗದಲ್ಲಿ ಬಾಂಬ್ ಇಟ್ಟಿದ್ದ. 90 ನಿಮಿಷಕ್ಕೆ ಟೈಮರ್ ಸೆಟ್ ಮಾಡಿದ್ದ. ಬಾಂಬ್ ಬ್ಲಾಸ್ಟ್ ಆಗಲಿಲ್ಲ. ಬಾಂಬ್ ಇಟ್ಟವನೇ ಚೆನ್ನೈಗೆ ಪರಾರಿಯಾಗಿದ್ದ. ಬಾಂಬ್ ಸ್ಫೋಟವಾಗುವುದಿರಲಿ, ಕನಿಷ್ಠಪಕ್ಷ ಆ ಬಾಂಬ್ ಪತ್ತೆಯೂ ಆಗಲಿಲ್ಲ.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಹರಿಹರ. ದಾವಣಗೆರೆ (ಜಿಲ್ಲೆ)
ದೂ.ಸಂ:08192-241317 E-mail: apmcharihara@rediffmail.com
ಸಂಖ್ಯೆ:ಕೃಮಾಇ/ಕೃಉಮಾಸ(ದಾ)/279/2024-25 ದಿನಾಂಕ:07-10-2024

ಸಂಕ್ಷಿಪ್ತ ಇ-ಟೆಂಡರ್ ಪ್ರಕಟಣೆ

ಕಾರ್ಮಿಕ ಇಲಾಖೆಯಲ್ಲಿ ನೊಂದಾಯಿತ ಗುತ್ತಿಗೆದಾರರಿಂದ ಹರಿಹರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಭದ್ರತಾ ಸಿಬ್ಬಂದಿ ನೇಮಕಾತಿಗಾಗಿ ಇ-ಟೆಂಡರ್‌ನ್ನು ಆಹ್ವಾನಿಸಲಾಗಿದ್ದು, ಇ-ಪೋರ್ಟಲ್‌ನ ಮೂಲಕ ಭರ್ತಿ ಮಾಡಿ ಸಲ್ಲಿಸಲು ಕೊನೆಯ ದಿನಾಂಕ:-21-11-2024 ರ ಸಂಜೆ 4.00 ಗಂಟೆಗೆ ಇ.ಎಂ.ಡಿ. ಹಾಗೂ ಪ್ರೊಸೆಸಿಂಗ್ ಫೀಯನ್ನು ಇ-ಪೇಮೆಂಟ್ ಮೂಲಕ ಇ-ಪ್ರೋಕ್ಯೂರ್‌ಮೆಂಟ್ ಇವರಿಗೆ ಪಾವತಿಸತಕ್ಕದ್ದು, ಹೆಚ್ಚಿನ ಮಾಹಿತಿಯನ್ನು ಈ ಕಛೇರಿಯಿಂದ ಕಛೇರಿ ಸಮಯದಲ್ಲಿ [ರಜಾದಿನ ಹೊರತುಪಡಿಸಿ] ಅಥವಾ ವೆಬ್ ಸೈಟ್ https://kppp.karnataka.gov.in/ ನಲ್ಲಿ ಹಾಗೂ ದೂರವಾಣಿ ಸಂಖ್ಯೆ: 08192-241317 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಹರಿಹರ ಇಲ್ಲಿ ಪಡೆಯಬಹುದಾಗಿದೆ.

ಸಹಿ/- ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಹರಿಹರ.
ಸಹಿ/- ಆಡಳಿತಾಧಿಕಾರಿಗಳು. ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಹರಿಹರ.
ವಾಸಾಇ/ದಾವಣಗೆರೆ/482/ಕೆಎಸ್‌ಎಂಸಿಎ/2024-25

ತುಮಕೂರು ಮಹಾನಗರ ಪಾಲಿಕೆ, ತುಮಕೂರು
ದೂ-2278480, ಫ್ಯಾಕ್ಸ್: 2275106, ಇ-ಮೇಲ್: itstaff_ulb_tumkur@yahoo.com ವೆಬ್‌ಸೈಟ್:www.tumkur city. mrc. gov.in
ಸಂ:ತುಮಪಾ/ತಾಂಶಾ/ಸಿವಿಲ್ ಶಾಖೆ/ಸಿಆರ್/09/2024-25
ದಿನಾಂಕ: 07.11.2024

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999-2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಮಹಾನಗರ ಪಾಲಿಕೆ ನಿಧಿ ಅನುಧಾನದಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು ಸ್ಟ್ಯಾಂಡರ್ ಟೆಂಡರ್ ಡಾಕ್ಯುಮೆಂಟ್‌ನ ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ನ್ನು ಈ ಕೆಳಕಂಡ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ದರ್ಜೆ ಗುತ್ತಿಗೆದಾರರು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಲು ಆಹ್ವಾನಿಸಲಾಗಿದ್ದು, ಹೆಚ್ಚಿನ ವಿವರಗಳಿಗೆ ಈ ಕಛೇರಿಯ www.tumkurcity.mrc.gov.in ವೆಬ್‌ಸೈಟ್‌ನಲ್ಲಿ ನೋಡಬಹುದು.
ಇ-ಪ್ರಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಷೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ.
1. ಇ-ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ :07-11-2024 ರಿಂದ ದಿನಾಂಕ:14-11-2024 ರವರೆಗೆ. 2. ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ:14-11-2024 ರಂದು ಸಾಯಂಕಾಲ 4.30 ಗಂಟೆವರೆಗೆ. 3. ಭರ್ತಿ ಮಾಡಿದ ಟೆಂಡರ್‌ಗಳನ್ನು ತೆರೆಯುವ ದಿನಾಂಕ: 15-11-2024ರ ಸಾಯಂಕಾಲ 4.35 ಗಂಟೆ ನಂತರ

ಸಹಿ/- ಕಾರ್ಯಪಾಲಕ ಅಭಿಯಂತರರು
ತುಮಕೂರು ಮಹಾನಗರ ಪಾಲಿಕೆ, ತುಮಕೂರು
DIPR/TUM/420/KSMCA/2024-25

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ,
ನಂ.7, ಹೇಮಾವತಿ ಎಡದಂಡೆ ನಾಲಾ ವಿಭಾಗ,
ಕಾವೇರಿ ನೀರಾವರಿ ನಿಗಮ, (ನಿ), ನಾಗಮಂಗಲ.
ದೂರವಾಣಿ ಸಂಖ್ಯೆ: 08234-200058 ಫ್ಯಾಕ್ಸ್ : 08234-286019
ಇ-ಮೇಲ್: eeno7nag@gmail.com

ಇ-ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:03/2024-25 ದಿನಾಂಕ:16.10.2024.
ಅಲ್ಪಾವಧಿ ಟೆಂಡರ್ ಮುಂದೂಡಿಕೆ ಪ್ರಕಟಣೆ ಸಂಖ್ಯೆ:03-1/2024-25 ದಿನಾಂಕ:06.11.2024

(ರಸ್ತೆ ಹಾಗೂ ಕೆರೆ ಅಭಿವೃದ್ಧಿ ಕಾಮಗಾರಿಗಳಿಗಾಗಿ)

ರಸ್ತೆ ಹಾಗೂ ಕೆರೆಅಭಿವೃದ್ಧಿ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಣಿಯಾಗಿರುವ 2ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಂದ ಐಟಂವಾರು ಅಲ್ಪಾವಧಿ ಟೆಂಡರ್‌ನ್ನು (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ) ಆಹ್ವಾನಿಸಲಾಗಿದೆ. ಒಟ್ಟು 02 ಕಾಮಗಾರಿಯ ಟೆಂಡರ್‌ನ್ನು ಹಾಗೂ ಇ.ಎಂ.ಡಿ ಠೇವಣಿಯನ್ನು ಆನ್‌ಲೈನ್ ಮೂಲಕ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಸ್ವೀಕರಿಸುವ **ದಿನಾಂಕ:08.11.2024** ರಿಂದ ಡೌನ್‌ಲೋಡ್ ಮಾಡಿಕೊಂಡು ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ 16.11.2024** ರ ಸಂಜೆ 16.00 ಘಂಟೆಯವರೆಗೆ, **Pre bid Meeting ದಿನಾಂಕ: 12.11.2024** ರಂದು ಮುಖ್ಯ ಇಂಜಿನಿಯರ್‌ರವರ ಕಛೇರಿ ಗೊರೂರು, ಹಾಸನ ಇಲ್ಲಿ ಬೆಳಿಗ್ಗೆ 12.00 ಗಂಟೆಗೆ. ಟೆಂಡರ್‌ಗಳ ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 19.11.2024** ರ ಬೆಳಿಗ್ಗೆ 11.00 ಘಂಟೆಗಳು. ನಂತರ ತಾಂತ್ರಿಕ ಬಿಡ್‌ನಲ್ಲಿ ಅರ್ಹತೆ ಪಡೆದ ಗುತ್ತಿಗೆದಾರರ ಆರ್ಥಿಕ ಬಿಡ್ ತೆರೆಯುವ **ದಿನಾಂಕ: 22.11.2024** ರ ಬೆಳಿಗ್ಗೆ 11.00 ಘಂಟೆಗೆ. ಟೆಂಡರ್ ಆಹಾನಿಸಿರುವ ಕಾಮಗಾರಿಯ ಗರಿಷ್ಠ ಟೆಂಡರ್‌ಗಿಟ್ಟ ಮೊತ್ತ **ರೂ.379.24** ಲಕ್ಷಗಳು ಹಾಗೂ ಕಾಮಗಾರಿಯ ಕನಿಷ್ಠ ಟೆಂಡರ್‌ಗಿಟ್ಟ ಮೊತ್ತ **ರೂ.209.68** ಲಕ್ಷಗಳು ಮತ್ತು ಕಾಮಗಾರಿಯ ಗರಿಷ್ಠ **ಇ.ಎಂ.ಡಿ** ಮೊತ್ತ **ರೂ.5,69,000.00/-** ಗಳು ಮತ್ತು ಕಾಮಗಾರಿಯ ಕನಿಷ್ಠ **ಇ.ಎಂ.ಡಿ** ಮೊತ್ತ **ರೂ.3,15,000.00/-** ಗಳಾಗಿದ್ದು, ಸದರಿ ಕಾಮಗಾರಿಯ ವಿವರ, ಅಂದಾಜು ಮೊತ್ತ, ಇ.ಎಂ.ಡಿ ಮೊತ್ತ, ಟೆಂಡರ್ ಫಾರಂ ಬೆಲೆ ಹಾಗೂ ಕಾಲಮಿತಿ ಮುಂತಾದ ಇತರೆ ಮಾಹಿತಿಗಳನ್ನು ಸದರಿ ಕಛೇರಿಯಿಂದ ಕಛೇರಿಯ ವೇಳೆಯಲ್ಲಿ ಪಡೆಯಬಹುದು. ಹೆಚ್ಚಿನ ವಿವರಗಳು **https://kppp.karnataka.gov.in** ನಲ್ಲಿ ಲಭ್ಯವಿರುತ್ತದೆ.

ಸಹಿ/- ಕಾರ್ಯಪಾಲಕ ಇಂಜಿನಿಯರ್, ನಂ.7,
ಹೇಮಾವತಿ ಎಡದಂಡೆ ನಾಲಾ ವಿಭಾಗ, ನಾಗಮಂಗಲ
DIPR/ADMDY-422/2024-25

ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ
ನವನಗರ ಹುಬ್ಬಳ್ಳಿ – 580025
0836-29566097, 2224195, 2224274, 2222161
ಸಂ. ಹು.ಧಾ.ನ.ಪ್ರಾ/ಅವಿ/.ಟೆ.ನೋ.ನಂ.12/2024-25/3162 ದಿನಾಂಕ: 06-11-2024

ಇ-ಟೆಂಡರ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999-2000 ರ ನಿಯಮದಂತೆ ಸ್ಟ್ಯಾಂಡರ್ಡ ಟೆಂಡರ್ ಬಿಡ್ ಡಾಕ್ಯುಮೆಂಟ್‌ರನ್ವಯ ಈ ಕೆಳಕಂಡ ಕಾಮಗಾರಿಗೆ ಟೆಂಡರನ್ನು ಆಹ್ವಾನಿಸಲಾಗಿದೆ. ನೊಂದಾಯಿತ ಅರ್ಹ ಗುತ್ತಿಗೆದಾರರು / ಏಜನ್ಸಿದಾರರು ಕೆ.ಪಿ.ಪಿ.ಪಿ **(www.kppp.karnataka.gov.in)** ಮುಖಾಂತರ ಟೆಂಡರನಲ್ಲಿ ಈ ಕೆಳಗೆ ನಿಗದಿಪಡಿಸಿರುವ ದಿನಾಂಕ ಹಾಗೂ ಸಮಯದೊಳಗಾಗಿ ಭಾಗವಹಿಸಬಹುದು.
1) ಟೆಂಡರ ದಾಖಲೆಗಳನ್ನು ಕರ್ನಾಟಕ ಸರಕಾರದ ಕೆ.ಪಿ.ಪಿ.ಪಿ ಪೋರ್ಟಲನಲ್ಲಿ ದಿನಾಂಕ : 07-12-2024ರ ನಂತರ ನೋಡಬಹುದಾಗಿದೆ. 2) ಟೆಂಡರನ್ನು ಸಲ್ಲಿಸಲು ಕಡೆಯ ದಿನಾಂಕ : 21-11-2024ರಂದು ಸಾಯಂಕಾಲ 16.00 ಘಂಟೆ 3) ಟೆಂಡರನ್ನು ತೆರೆಯುವ ದಿನಾಂಕ : 22-11-2024 ರಂದು ಸಾಯಂಕಾಲ 16.30 ಘಂಟೆಗೆ, ಆಗದಿದ್ದಲ್ಲಿ ಗೊತ್ತುಪಡಿಸಿದ ದಿನಾಂಕದಂದು ತೆರೆಯಲಾಗುವುದು, a) Indent No18
ಎಲ್ಲ ವಿವರಗಳನ್ನು ಹಾಗೂ ನಿಯಮಗಳನ್ನು ಮಾದರಿ ಗುತ್ತಿಗೆ ಸ್ಟ್ಯಾಂಡರ್ಡ ಟೆಂಡರ್ ಬಿಡ್ ಡಾಕ್ಯುಮೆಂಟ್‌ದಲ್ಲಿ ವಿವರಿಸಲಾಗಿದ್ದು, ಗುತ್ತಿಗೆದಾರರು/ಏಜನ್ಸಿದಾರರುಗುತ್ತಿಗೆ ನಿಯಮಾವಳಿಗಳನ್ನು ಸಂಪೂರ್ಣವಾಗಿ ಅಭ್ಯಸಿಸಿ ಅರ್ಥೈಸಿಕೊಳ್ಳಲು ಸೂಚಿಸಲಾಗಿದೆ. ಹೆಚ್ಚಿನ ಮಾಹಿತಿಯನ್ನು ಇಚ್ಚಿಸಿದಲ್ಲಿ ಪ್ರಾಧಿಕಾರದ ಅಭಿವೃದ್ಧಿ ವಿಭಾಗದಲ್ಲಿ ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/- ಆಯುಕ್ತರು,
ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ, ಹುಬ್ಬಳ್ಳಿ
ವಾ.ಸಾ.ಇ./ಧಾರವಾಡ/586/ಮಣಿಪಾಲ್/2024-25

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕನೀನಿನಿ. ಮಎಕಾನಿ, ವಿಭಾಗ ನಂ.1 ರಾಮದುರ್ಗ.
ಉಲ್ಲೇಖ:- ಕಾ.ಇಂ/ಕನೀನಿನಿ/ಮಎಕಾನಿ, ವಿ-1/ಡಿ.ಬಿ/ಟೆಂಡರ್/ಎಸ್.ಎಲ್.ಆಯ್.ಎಸ್/ಕೆ.ಆರ್.ಬಿ.ಸಿ ಪ್ರಕಟಣೆ ಸಂಖ್ಯೆ: 1110 ದಿನಾಂಕ:06/11/2024

“ಅಲ್ಪಾವಧಿ ಟೆಂಡರ್ ಪಕಟಣೆ” (ಕೆಪಿಪಿ – ಪೋರ್ಟಲ್ ಮುಖಾಂತರ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ.ಬೆಂಗಳೂರು ಇವರ ಪರವಾಗಿ ಕೆಳಗೆ ಸಹಿ ಮಾಡಿದವರಿಂದ ಮಲಪ್ರಭಾ ಎಡದಂಡೆ ಕಾಲುವೆ ವಿಭಾಗ ನಂ 1, ರಾಮದುರ್ಗ ಲೆಕ್ಕ ಶೀರ್ಷಿಕೆ 4701 ಅಡಿಯಲ್ಲಿ ಬರುವ 32 ಕಾಮಗಾರಿಗಳಿಗೆ ಕೆ.ಡಬ್ಲ್ಯೂ- 2,3&4ರ ಕೆ.ಪಿ.ಪಿ ಪೋರ್ಟಲ್‌ನಲ್ಲಿ ದ್ವಿಲಕೋಟೆ ಮೂಲಕ ಟೆಂಡರ ಕರೆಯಲಾಗಿದ್ದು, ಈ ಕಾಮಗಾರಿಗಳ ಟೆಂಡರಗಿಟ್ಟ ಮೊತ್ತವು ರೂ.33.30 ಲಕ್ಷಗಳಿಂದ 909.60 ಲಕ್ಷಗಳವರೆಗೆ ಇದ್ದು ಇ.ಎಂ.ಡಿ. ಮೊತ್ತ.ರೂ.33,500/- ರಿಂದ 13,65,000/- ಇರುತ್ತದೆ. ಅ.ನಂ.12 ಮತ್ತು 31ನೇ ಕಾಮಗಾರಿಗಳು (ಒಟ್ಟು 02 ಕಾಮಗಾರಿಗಳು) ಪರಿಶಿಷ್ಟ ಜಾತಿಗೆ ಸೇರಿದ ಗುತ್ತಿಗೆದಾರರಿಗೆ ಮೀಸಲಿರಿಸಲಾಗಿದ್ದು, ಇ.ಎಂ.ಡಿ ಮೊತ್ತ ರೂ.76,000 ಮತ್ತು ರೂ. 58,000 ಹಾಗೂ ಅನುಕ್ರಮ ಸಂಖ್ಯೆ:-30ನೇಯ ಕಾಮಗಾರಿಯು (ಒಟ್ಟು 1 ಕಾಮಗಾರಿ) ಪರಿಶಿಷ್ಟ ಪಂಗಡಕ್ಕೆ ಸೇರಿದ ಗುತ್ತಿಗೆದಾರರಿಗೆ ಮೀಸಲಿರಿಸಲಾಗಿದ್ದು, ಇ.ಎಂ.ಡಿ.ಮೊತ್ತ ರೂ.34,000/- ಹಾಗೂ ಇನ್ನೂಳಿದ ಅನುಕ್ರಮ ಸಂಖ್ಯೆಗಳು ಅರ್ಹ ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಇಎಂಡಿ ಮೊತ್ತವು ಕೆ.ಪಿ.ಪಿ. ಪೋರ್ಟಲ್ ನಲ್ಲಿ ಪ್ರಕಟಿಸಲಾಗಿರುತ್ತದೆ.

1. ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸುವ ದಿನಾಂಕ: 12/11/2024 ರಿಂದ 26/11/2024 ರವರೆಗೆ 16.00 ಗಂಟೆಗೆ ಸಾಯಂಕಾಲ. 2. ಪ್ರೀ ಬಿಡ್ ಮೀಟಿಂಗ್ ದಿನಾಂಕ (ಕಾನಿಇಂ ಕನೀನಿನಿ, ಮಎಕಾನಿ ವಿಭಾಗ ನಂ.1 ರಾಮದುರ್ಗ): 16/11/2024 16.00 ಗಂಟೆಗೆ ಸಾಯಂಕಾಲ. 3. ಟೆಂಡರ ಪ್ರಶ್ನೆಗಳು/ಸ್ಪಷ್ಟೀಕರಣಗಳಿಗೆ ದಿನಾಂಕ: 19/11/2024 ರವರೆಗೆ 16.00 ಗಂಟೆಗೆ ಸಾಯಂಕಾಲ. 4. ತಾಂತ್ರಿಕ ಬಿಡ್‌ತೆರೆಯುವ ದಿನಾಂಕ: 28/11/2024 ಮುಂಜಾನೆ 16:00 ಗಂಟೆಯ ನಂತರ. 5. ಆರ್ಥಿಕ ಬಿಡ್‌ತೆರೆಯುವ ದಿನಾಂಕ: ದಿ: 30/11/2024 ತಾಂತ್ರಿಕ ಬಿಡ್ ಅನುಮೋದನೆ ದೊರೆತ ನಂತರ. 6. ಕಾಲಾವಧಿ: 04 ರಿಂದ 11 ತಿಂಗಳು(ಮಳೆಗಾಲ ಸಹಿತ). 7. ಟೆಂಡರಿಗಿಟ್ಟ ಮೊತ್ತ: ರೂ. 33.30 ಲಕ್ಷದಿಂದ 909.60 ಲಕ್ಷ. 8. ಇ.ಎಂ.ಡಿ ಮೊತ್ತ: ರೂ. 33,500/- ರಿಂದ 13,65,000/- ರವರೆಗೆ

ಸೂಚನೆಗಳು ಹಾಗೂ ಹೆಚ್ಚಿನ ವಿವರಗಳಿಗಾಗಿ **http://kppp.karnataka.gov.in** ಅನ್ನು ವೀಕ್ಷಿಸಿ ಹಾಗೂ ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಫೋನ್:- 08335- 242143

ಸಹಿ/- (ಎಸ್.ಎಮ್.ಬಾಲದಾರ)
ಕಾರ್ಯಪಾಲಕ ಇಂಜಿನಿಯರ್,
ಕನೀನಿನಿ., ಮಎಕಾನಿ, ವಿಭಾಗನಂ.1 ರಾಮದುರ್ಗ
ವಾಸಾಸಂಇ/ಬೆಳಗಾವಿ/1094/ಮಣಿಪಾಲ್/2024-25

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ.
ಕುಲಸಚಿವರ ಕಛೇರಿ, ಜ್ಞಾನ-ಶಕ್ತಿ ಆವರಣ (ತೊರವಿ)
ದೂರವಾಣಿ : 08352-229051,
ಇ-ಮೇಲ್: registrar@kswu.ac.in
ಸಂಖ್ಯೆ: ಕರಾಅಮವಿವಿ/ಉಗ್ರಾಣ/2024-25/2026 ದಿನಾಂಕ: 06.11.2024

ಅಲ್ಪಾವಧಿ ಇ-ಟೆಂಡರ್ ಅಧಿಸೂಚನೆ ಪ್ರಕಟಣೆ
(ದ್ವಿ-ಲಕೋಟೆ ಪದ್ದತಿ) (ಇ-ಪ್ರಾಕ್ಯೂರ್‌ಮೆಂಟ್)

ಕರ್ನಾಟಕ ಸರ್ಕಾರದ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1992-2000 ರ ಪ್ರಕಾರ ಅಧಿನಿಯಮ 2000ರ ನಿಯಮದಂತೆ ನೊಂದಾಯಿತ ಏಜೆನ್ಸಿಗಳಿಂದ ಇ-ಪ್ರಾಕ್ಯೂರ್‌ಮೆಂಟ್ ಪೋರ್ಟಲ್ (KG-2) ಮುಖಾಂತರ ಟೆಂಡರ್‌ನ್ನು ದ್ವಿ-ಲಕೋಟೆ ಪದ್ದತಿಯಲ್ಲಿ ಈ ಕೆಳಕಂಡ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಉಳಿದ ವಿವರಗಳನ್ನು ಗುತ್ತಿಗೆ ದಸ್ತಾವೇಜುಗಳಲ್ಲಿ ನೋಡಬಹುದು.
ಕಾಮಗಾರಿಯ ಹೆಸರು: Supply and Fixing of Furniture's (Rack, Desk and Cot) to various departments at KSAWU Vijayapura. **ಸೇವೆ ಪಡೆದುಕೊಳ್ಳುವ ಅಂದಾಜು ಮೊತ್ತ ರೂ.99,89,857/-ಗಳು. ಟೆಂಡರ್ ಪ್ರೋಸೆಸಿಂಗ್ ಫೀ: As per E-Procurement Portal.** ಬಡ್ಡಿ ರಹಿತ ಇ.ಎಂ.ಡಿ. ರೂ. 5,00,000/- ಗಳು. ಟೆಂಡರ್ ಕಾಮಗಾರಿಗಳನ್ನು ಪೂರೈಸುವ ಕಾಲಾವಕಾಶ: 30 ದಿನಗಳು. ವರ್ಕ್ ಇಂಡೆಂಟ್ ಸಂಖ್ಯೆ: KSWU/2024-25/IND0018
ಹೆಚ್ಚಿನ ವಿವರ ಇ-ಪ್ರೊಕ್ಯೂರ್‌ಮೆಂಟ್‌ನ http://kppp.karnataka.gov.in ನಿಂದ ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಏಜೆನ್ಸಿದಾರರ ಅರ್ಹತೆ/ ಟೆಂಡರಿನ ನಿಯಮ/ ಟೆಂಡರ್ ಪ್ರೋಸೆಸಿಂಗ್ ಶುಲ್ಕ, ತುಂಬುವ ವಿಧಾನ ಇತ್ಯಾದಿ, ವಿವರಗಳಿಗೆ http://kppp.karnataka.gov.in ಮೂಲಕ ಮಾಹಿತಿ ಪಡೆಯಬಹುದು. ಹೆಚ್ಚಿನ ಮಾಹಿತಿಯನ್ನು ಸದರಿ ಕಛೇರಿಯಿಂದ ಹಾಗೂ ಸಹಾಯಕ ದೂರವಾಣಿ ಸಂಖ್ಯೆ:080-25501216, 080-25501227 ರಿಂದ ಪಡೆಯಬಹುದು.

ಸಹಿ/- ಕುಲಸಚಿವರು,
ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ
ವಾಸಾಸಂಇ/ವಿಜಯಪುರ/383/ಕೆಎಸ್‌ಎಂಸಿಎ/2024-25

ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಕಾ ಮತ್ತು ಪಾ ವೃತ್ತ, ಕುಂಜಿಬೆಟ್ಟು, ಉಡುಪಿ-576102
ದೂರವಾಣಿ: 0820-2525040, 2535040, CIN: U40109 KA 2002 SGC 030425
ಕ್ರಮಾಂಕ : ಅಇಂ(ವಿ.)/ಉವೃ/ಕಾನಿಇಂ(ವಿ)(ಕ)/ಸಕಾನಿ(ಸಿ)/2024-25/3874 ದಿನಾಂಕ: 29.10.2024

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ. ಮಾದರಿಯಲ್ಲಿ ಮಾತ್ರ)

ಉಡುಪಿ ವೃತ್ತದ ವ್ಯಾಪ್ತಿಯಲ್ಲಿನ ಮೆಸ್ಕಾಂ ಸ್ವಂತ ಕಟ್ಟಡಗಳಿಗೆ ಸೌರಶಕ್ತಿ ಮೇಲ್ಛಾವಣಿ ಘಟಕ ಸ್ಥಾಪಿಸುವ ಕಾಮಗಾರಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ.

No	Name of Work	Indent No.
1.	Design, Supply, Installation & Commissioning of Solar RTPV Grid connected power plants on the Roof-tops of various owned buildings of MESCOM under its jurisdiction of Udupi District including operation & maintenance for a period of Five years.	MESCOM/2024-25/OW/WORK_INDENT245/Call-2

ಟೆಂಡರನ್ನು ವಿದ್ಯುನ್ಮಾನ ಟೆಂಡರಿಂಗ್ (ಇ-ಟೆಂಡರ್) ಮೂಲಕ ಮಾತ್ರ ಸ್ವೀಕರಿಸಲಾಗುವುದು. ಗುತ್ತಿಗೆದಾರರು www.kppp.karnataka.gov.in ಗೆ ದಿನಾಂಕ 09.11.2024 ರಂದು ಬೆಳಿಗ್ಗೆ 11.00 ಗಂಟೆಗೆ ಲಾಗ್ ಆನ್ ಮಾಡಿ ವಿವರ ಪಡೆಯಬಹುದು. ಈ ಬಗ್ಗೆ ಯಾವುದೇ ವಿವರಗಳು ಬೇಕಾದಲ್ಲಿ ಈ ಕೆಳಸಹಿದಾರರ ಕಛೇರಿಯಿಂದ ಪಡೆಯಬಹುದಾಗಿದೆ.

DIPR/MNG/782/MPL/24-25 ಸಹಿ/- ಅಧೀಕ್ಷಕ ಇಂಜಿನಿಯರ್ (ವಿ), ಕಾ ಮತ್ತು ಪಾ. ವೃತ್ತ, ಉಡುಪಿ.
ವಿದ್ಯುತ್ ಸಂಬಂಧಿತ ದೂರು ಮತ್ತು ಸಹಾಯಕ್ಕಾಗಿ ಉಚಿತ ದೂರವಾಣಿ ಸಂಖ್ಯೆ : 1912ಕ್ಕೆ ಕರೆ ಮಾಡಿ

ಕಂದಾಯ ಇಲಾಖೆ
ಭೂಮಿ ಉಸ್ತುವಾರಿ ಕೋಶ
ಕಂದಾಯ ಆಯುಕ್ತಾಲಯ, 1ನೇ ಮಹಡಿ, ಎಸ್.ಎಸ್.ಎಲ್.ಆರ್ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು-560001. ದೂರವಾಣಿ ಸಂ: 080-22113255
No: BMC/2024-25/IND0012 Date: 08.11.2024

ಇ-ಟೆಂಡರ್ ಅಧಿಸೂಚನೆ

ರಾಜ್ಯದ ಎಲ್ಲಾ ತಾಲ್ಲೂಕು ಕಛೇರಿ ಹಾಗೂ ಜಿಲ್ಲಾಧಿಕಾರಿಗಳ ಕಛೇರಿಗಳಿಗೆ 573 Printers with refill units ಗಳನ್ನು ಸರಬರಾಜು ಮಾಡಲು ಇ-ಟೆಂಡರ್ ಆಹ್ವಾನಿಸಲಾಗಿದೆ. ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ದಿನಾಂಕ: **07.12.2024 ಸಂಜೆ 5.30 ಗಂಟೆಯೊಳಗೆ** ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬಹುದಾಗಿದೆ. ಟೆಂಡರ್ ಷರತ್ತು ಮತ್ತಿತರ ವಿವರಗಳನ್ನು **https://kppp.karnataka.gov.in** ರಲ್ಲಿ ಪಡೆಯಬಹುದಾಗಿದೆ.

ಸಹಿ/- ಸಹಾಯಕ ಆಯುಕ್ತರು,
ಭೂಮಿ ಉಸ್ತುವಾರಿ ಕೋಶ, ಕಂದಾಯ ಇಲಾಖೆ.
DIPR/CP/SPAN/3118/2024-25

ನಗರಸಭಾ ಕಾರ್ಯಾಲಯ, ಶಿರಸಿ (ಉ.ಕ.)
ದೂರವಾಣಿ: 08384-226338 ವೆಬ್‌ಸೈಟ್: www.sirsicity.mrc.gov.in
ಇ-ಮೇಲ್: comm_srs@yahoo.com
ನಂ. ನಸಶಿ/ನೈವಿ/ಸಾಮಗ್ರಿ/ಟೆಂಡರ/ವಿವ-/2024-25 ದಿನಾಂಕ: 06.11.2024

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಸಾರ್ವಜನಿಕ ಪಾರದರ್ಶಕತೆ ಕಾಯ್ದೆ 1999 ಹಾಗೂ ನಿಯಮಾವಳಿ-2000 ರಂತೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ನೋಂದಾಯಿತ ಏಜೆನ್ಸಿದಾರರು/ಅಧೀಕೃತ ಪೂರೈಕೆದಾರರಿಂದ ಟೆಂಡರ್ ಡಾಕ್ಯುಮೆಂಟ್ KGರ ನಿಬಂಧನೆಗೊಳಪಟ್ಟಂತೆ, **KPP Portal** ನಲ್ಲಿ ರಜಿಸ್ಟ್ರೇಷನ್ ಮಾಡಿಸಿದ ಅರ್ಹ ನೋಂದಾಯಿತ ಏಜೆನ್ಸಿದಾರರು/ಅಧೀಕೃತ ಪೂರೈಕೆದಾರರಿಂದ **(1) DMA/2024-25/IND3830** (ಅಂದಾಜು ಮೊತ್ತ ರೂ. 2.50 ಲಕ್ಷಗಳು) **(2) DMA/2024-25/IND3832** (ಅಂದಾಜು ಮೊತ್ತ ರೂ. 2.99 ಲಕ್ಷಗಳು) **(3) DMA/2024-25/IND3833** (ಅಂದಾಜು ಮೊತ್ತ ರೂ. 2.95 ಲಕ್ಷಗಳು) ಕಾಮಗಾರಿಗೆ ಟೆಂಡರಗಳನ್ನು, **KPP Portal** ಮೂಲಕ ಕರೆಯಲಾಗಿದ್ದು, **KPP Portal** ನಿಯಮಗಳ ಮತ್ತು ಟೆಂಡರು ಕರಾರುಗಳ ಅನ್ವಯ ಟೆಂಡರ್ ಫಾರ್ಮಗಳನ್ನು ಪಡೆಯುವುದು, ಭರ್ತಿ ಮಾಡುವುದು ಮತ್ತು ಸಲ್ಲಿಸುವುದು.
(1) **KPP Portal** ಮೂಲಕ ಟೆಂಡರಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 20.11.2024 (ಸಂಜೆ 16.00 ಗಂಟೆವರೆಗೆ) (2) **KPP Portal** ಮೂಲಕ ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ: 22.11.2024 (ಸಂಜೆ 16.00 ಗಂಟೆಗೆ) (ರಜಾ ಇದ್ದಲ್ಲಿ ಬೇರೆ ದಿನಾಂಕ ತಿಳಿಸಲಾಗುವುದು)
ಟೆಂಡರನಲ್ಲಿಯ ನಿಬಂಧನೆಗಳನ್ನು ಹಾಗೂ ಷರತ್ತುಗಳ ವಿವರಗಳನ್ನು **KPP Portal** ಪ್ಲಾಟ್ ಫಾರಂನಲ್ಲಿ www.kppp.karnataka.gov.in ರಲ್ಲಿ ಪಡೆಯಬಹುದು ಹಾಗೂ ಕಚೇರಿಯಲ್ಲಿ ಹೆಚ್ಚಿನ ಮಾಹಿತಿಗಳನ್ನು ಪಡೆಯತಕ್ಕದ್ದು.

ಸಹಿ/- ಅಧ್ಯಕ್ಷರು, ನಗರಸಭೆ, ಶಿರಸಿ.
ಸಹಿ/- ಪೌರಾಯುಕ್ತರು, ನಗರಸಭೆ, ಶಿರಸಿ.
DIPR/ADK/KSMCA/488/24-25 dt.08.11.2024

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ತಿಪಟೂರು ಉಪ ವಿಭಾಗ (ಪ್ರಾದೇಶಿಕ),
ವಿದ್ಯಾನಗರ, ಕಲ್ಪತರು ಕಾಲೇಜು ಎದುರ, ಬಿ.ಹೆಚ್.ರಸ್ತೆ ತಿಪಟೂರು-572201
ಇ-ಮೇಲ್: acftipaturu@gmail.com
ದಿನಾಂಕ: 04-11-2024

ಮರು ಇ-ಟೆಂಡರ್ ಪ್ರಕಟಣೆ

2024-25 ನೇ ಸಾಲಿನಲ್ಲಿ ಕಾಂಪಾ ಯೋಜನೆಯಡಿ ತುಮಕೂರು ಪ್ರಾದೇಶಿಕ ವಿಭಾಗ, ತಿಪಟೂರು ಉಪ ವಿಭಾಗದ ಬುಕ್ಕಾಪಟ್ಟಣ ವಲಯದ ಚಿಂಕಾರ ವನ್ಯಜೀವಿ ಅಭಯಾರಣ್ಯದ ಪ್ರದೇಶದಲ್ಲಿ ಲಂಟಾನ/ಕಳೆಗಿಡಗಳನ್ನು ತೆಗದು ಹಾಕುವ ಕಾಮಗಾರಿ ಹಾಗೂ ಇನ್ನಿತರೆ ಮುಂದುವರೆದ ಕಾಮಗಾರಿಗಳನ್ನು ಕೈಗೊಳ್ಳಲು 2024-25ನೇ ಸಾಲಿಗೆ ಅರಣ್ಯ ಗುತ್ತಿಗೆದಾರರಾಗಿ ನೋಂದಾವಣೆಯಾಗಿರುವ ಗುತ್ತಿಗೆದಾರರಿಂದ ಪ್ರತ್ಯೇಕವಾಗಿ ಇ-ಟೆಂಡರ್‌ಗಳನ್ನು ದಾಖಲಿಸಲು ಕೋರಿ ಮರು ಟೆಂಡರ್ ಆಹ್ವಾನಿಸಲಾಗಿದೆ. ಒಟ್ಟು 05 ಕಾಮಗಾರಿಗಳ ಪೈಕಿ ಗರಿಷ್ಠ ಅಂದಾಜು ಮೊತ್ತ ರೂ.16,25,000/- ಗಳಿಗೆ ಇ.ಎಂ.ಡಿ ಮೊತ್ತ ರೂ.40,625/-ಗಳಾಗಿರುತ್ತದೆ. ಮತ್ತು ಕನಿಷ್ಠ ಅಂದಾಜು ಮೊತ್ತ ರೂ.2,97,600/-ಗಳಿಗೆ ಇ.ಎಂ.ಡಿ ಮೊತ್ತ ರೂ.7,440/- ಗಳಾಗಿರುತ್ತದೆ. ದಿನಾಂಕ: 13-11-2024ರ ಅಪರಾಹ್ನ 3-00 ಗಂಟೆಯವರೆಗೆ ಟೆಂಡರ್ ಸಲ್ಲಿಸಬಹುದಾಗಿದೆ ಹಾಗೂ ದಿನಾಂಕ: 14-11-2024ರಂದು ಅಪರಾಹ್ನ 3-00 ಗಂಟೆಗೆ ತಾಂತ್ರಿಕ ಬಿಡ್ಡುಗಳನ್ನು ತೆರೆಯಲಾಗುವುದು. ಪರಿಮಾಣ, ಇ.ಎಂ.ಡಿ ಹಾಗೂ ಇನ್ನಿತರೆ ಹೆಚ್ಚಿನ ವಿವರಗಳಿಗೆ ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ ಮತ್ತು ಅಂತರ್ಜಾಲದ ಮೂಲಕ ಪಡೆಯಬಹುದಾಗಿದೆ.
ವೆಬ್‌ಸೈಟ್ ವಿಳಾಸ-http://www.kppp.karnataka.gov.in

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ತಿಪಟೂರು ಉಪ ವಿಭಾಗ, ತಿಪಟೂರು.
DIPR/TUM/421/KSMCA/2024-25

ಕರ್ನಾಟಕ ಸರ್ಕಾರ
ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ,
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಸಮಗ್ರ ಶಿಕ್ಷಣ ಕರ್ನಾಟಕ,
ನಂ.205, ಜಿಲ್ಲಾ ಆಡಳಿತ ಭವನ, 2ನೇ ಮಹಡಿ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ.
ದೂರವಾಣಿ: 08226 224429 ಫ್ಯಾಕ್ಸ್: 08226 224429
ಇ-ಮೇಲ್ : dpocham@gmail.com
ಸಂಖ್ಯೆ : ಸಶಿಕ/ಸಿ2/ಕೆಜಿಬಿವಿ.ಟೈಪ್-1&4,ಕೆಕೆಜಿಬಿವಿ.ವ.ಶಾ.ನಿ.ಆ.ಪೂ.ಅ.ಟೆಂ/01/2024-25
ದಿನಾಂಕ: 05.11.2024

: ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಇ-ಟೆಂಡರ್ :

ಸಮಗ್ರ ಶಿಕ್ಷಣ ಕರ್ನಾಟಕ ಕಾರ್ಯಕ್ರಮ ಯೋಜನೆಯಡಿ 2024-25ನೇ ಸಾಲಿಗೆ ಕೆ.ಜಿ.ಬಿ.ವಿ ಟೈಪ್-1(6 ರಿಂದ 8ನೇ ತರಗತಿ) ವಸತಿ ಶಾಲೆ ಮೆಲ್ಲಹಳ್ಳಿ, ಯಳಂದೂರು ತಾಲ್ಲೂಕು, ಕೆಜಿಬಿವಿ ಟೈಪ್-4 ಚಾಮರಾಜನಗರ, ಗುಂಡ್ಲುಪೇಟೆ, ಕೊಳ್ಳೇಗಾಲ ಮತ್ತು ಯಳಂದೂರು (9 ರಿಂದ 12ನೇ ತರಗತಿ) ಮತ್ತು ಕೆಕೆಜಿಬಿವಿ ವಸತಿ ನಿಲಯ ಚಾಮರಾಜನಗರ ಟೌನ್ ಮತ್ತು ಗುಂಡ್ಲುಪೇಟೆ (6 ರಿಂದ 10ನೇ ತರಗತಿ) ವಸತಿ ನಿಲಯಗಳಿಗೆ ಪ್ರತಿ ವಸತಿ ನಿಲಯಕ್ಕೆ 100 ವಿದ್ಯಾರ್ಥಿಗಳಿಗೆ ಆಹಾರ ಪೂರೈಕೆಗೆ ಏಜೆನ್ಸಿಯನ್ನು ಆಯ್ಕೆ ಮಾಡುವ ಸಂಬಂಧ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ನ್ನು ನೊಂದಾಯಿತ ಅರ್ಹ ಸಂಸ್ಥೆಗಳಿಂದ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ನ ಮೊತ್ತ ರೂ.66.00 ಲಕ್ಷಗಳಿಗೆ ಅಲ್ಪಾವಧಿ ಟೆಂಡರ್ ಬಿಡ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್‌ನ ಎಲ್ಲಾ ಬಿಡ್‌ಗಳನ್ನು ಸ್ವೀಕರಿಸುವ ಮತ್ತು ತಿರಸ್ಕರಿಸುವ ಹಕ್ಕನ್ನು ಟೆಂಡರ್ ಪ್ರಾಧಿಕಾರಿಯು ಹೊಂದಿರುತ್ತಾರೆ. ಆಸಕ್ತ ಮತ್ತು ಅರ್ಹ ಗುತ್ತಿಗೆದಾರರು ಹಾಗೂ ಶೈಕ್ಷಣಿಕವಾಗಿ ತೊಡಗಿಸಿಕೊಂಡಿರುವ ಸ್ತ್ರೀಶಕ್ತಿ ಸ್ವಸಹಾಯ ಸಂಘಗಳವರು ಸದರಿ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು. ಆನ್‌ಲೈನ್ ಮೂಲಕ ದಿನಾಂಕ: 05.11.2024 ರಿಂದ 16.11.2024ರೊಳಗೆ ಸಾಯಂಕಾಲ 4.00 ಗಂಟೆಯೊಳಗೆ ಟೆಂಡರನ್ನು ದ್ವಿ-ಲಕೋಟೆ ಪದ್ಧತಿಯಲ್ಲಿ ಅಪ್ಲೋಡ್ ಮಾಡಬಹುದಾಗಿದೆ. ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಾಂತ್ರಿಕ ಕಾರಣಗಳಿಂದಾಗಿ ಟೆಂಡರ್ ತೆರೆಯುವ ದಿನಾಂಕವನ್ನು ಮುಂದೂಡಪಟ್ಟಲ್ಲಿ ಸದರಿ ದಿನಾಂಕವನ್ನೇ ಪರಿಗಣಿಸುವುದು. ಹೆಚ್ಚಿನ ಮಾಹಿತಿಗಾಗಿ www.eproc.karnataka.gov.in ನಲ್ಲಿ ನೋಡಬಹುದಾಗಿದೆ.

ಸಹಿ/-
ಉಪನಿರ್ದೇಶಕರು ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು,
ಸಮಗ್ರ ಶಿಕ್ಷಣ ಕರ್ನಾಟಕ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ
ಸಂ: ವಾಸಾಸಂಇ/ಚಾನಗರ/380/2024-25

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)
ಸಂ: ಅಇಂ(ವಿ)/ಪ್ರ(ನಿ)/ಬೆಂಮಕ್ಷೇವ(ದ)/ಸಕಾನಿಇಂ(ಕಾ)/2024-25/5597-99 ದಿ: 06.11.2024

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (KPP ಪೋರ್ಟಲ್ ಮುಖಾಂತರ)

ಕವಿಪ್ರನಿನಿಯು ಅರ್ಹ ಬಿಡ್ಡರ್‌ಗಳಿಂದ ವಿವಿಧ ಸಿವಿಲ್ ಕಾಮಗಾರಿಗಳನ್ನು ಹೂಡಿ ಮತ್ತು ಸೋಮನಹಳ್ಳಿ ವಿಭಾಗದ ವ್ಯಾಪ್ತಿಯಲ್ಲಿ ನಿರ್ವಹಿಸಲು KPP ಪೋರ್ಟಲ್ ಮೂಲಕ ಟೆಂಡರ್ ಕರೆಯಲಾಗಿದೆ.
ಟೆಂಡರ್‌ನಲ್ಲಿ ಭಾಗವಹಿಸಲು ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ **https://kppp.karnataka.gov.in** ನಲ್ಲಿ **ದಿನಾಂಕ: 08.11.2024ರ** ನಂತರ ಲಾಗಿನ್ ಮಾಡುವ ಮೂಲಕ ಪಡೆಯಬಹುದು.

ಸಹಿ/- ಅಧೀಕ್ಷಕ ಇಂಜಿನಿಯರ್(ವಿ), ಪ್ರಸರಣ (ನಿರ್ವಹಣೆ),
ಬೆಂ.ಮ.ಕ್ಷೇ.ವ. ದಕ್ಷಿಣ ವೃತ್ತ, ನೆಲಮಹಡಿ, ಕವಿಪ್ರನಿನಿ ಕಚೇರಿ ಸಂಕೀರ್ಣ,
ಆನಂದರಾವ್ ವೃತ್ತ, ಬೆಂಗಳೂರು-560 009. ದೂ: 080-22386686/85.

ಕರ್ನಾಟಕ ಸರ್ಕಾರ
ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ,
ಆಯುಕ್ತರವರ ಕಛೇರಿ, ಪಶುಪಾಲನಾ ಭವನ, ಮೊದಲನೇ ಮಹಡಿ,
ಸಿ.ಬಿ.ಐ ಕಛೇರಿ ಮುಂಭಾಗ, ಬಳ್ಳಾರಿ ಮುಖ್ಯರಸ್ತೆ, ಹೆಬ್ಬಾಳ, ಬೆಂಗಳೂರು-560024.
ಇ-ಮೇಲ್: commissionerahvs@gmail.com ಫೋನ್: 080-23412767
No: CAH/VMS/Nutritional Supplements/Tender/2024-25 Date: 08.11.2024

ಟೆಂಡರ್ ನೋಟಿಫಿಕೇಷನ್
(ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)

2024-25 ನೇ ಸಾಲಿನಲ್ಲಿ ರಾಜ್ಯದಲ್ಲಿರುವ ಪಶುವೈದ್ಯಕೀಯ ಸಂಸ್ಥೆಗಳಿಗೆ ಅವಶ್ಯವಿರುವ ಫೀಡ್ ಸಪ್ಲಿಮೆಂಟ್‌ಗಳನ್ನು ಖರೀದಿಸಿ, ಸರಬರಾಜು ಮಾಡುವ ಸಂಬಂಧ ಕೆಪಿಪಿ ಪೋರ್ಟಲ್ ನ ಮೂಲಕ ಒಂದು ವರ್ಷದ ಅವಧಿಗೆ ಟೆಂಡರ್‌ನ್ನು ಕರೆಯಲಾಗಿದೆ. ಟೆಂಡರ್‌ಗೆ ನಿಗದಿಪಡಿದ ಮೊತ್ತ ರೂ. 1028.90 ಲಕ್ಷಗಳು.
ಪೂರ್ಣ ಟೆಂಡರ್ ದಾಖಲೆಯನ್ನು ಮೇಲಿನ ಅಂತರ್ಜಾಲ ವಿಳಾಸದಲ್ಲಿ ದಿನಾಂಕ:08.11.2024 ರಿಂದ ವೀಕ್ಷಿಸಬಹುದಾಗಿದ್ದು, ಟೆಂಡರುದಾರರು ಕೆಪಿಪಿ ಪೋರ್ಟಲ್ ನಲ್ಲಿ ದಿನಾಂಕ: 08.11.2024 ರಿಂದ 09.12.2024 ರವರೆಗೆ 17.30 ಗಂಟೆಯೊಳಗೆ ಅಪ್‌ಲೋಡ್ ಮಾಡಬಹುದಾಗಿದೆ.
ಹೆಚ್ಚಿನ ವಿವರಗಳಿಗಾಗಿ ಕೆಪಿಪಿ ಪೋರ್ಟಲ್ ಹಾಗೂ ಕಛೇರಿ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/- ಉಪ ನಿರ್ದೇಶಕರು, ಪಶುವೈದ್ಯಕೀಯ ಔಷಧಿ ಭಂಡಾರ,
DIPR/CP/3131/Zen/2024-25 ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ,

ಟ್ವೀಟೂ-ಖಾರಾ

ಆರ್. ಅಶೋಕ, ಪ್ರತಿಪಕ್ಷ ನಾಯಕ

ರಾಜ್ಯದ ಎಲ್ಲ ಸರಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಆರು ದಿನ ಮಕ್ಕಳಿಗೆ ಮೊಟ್ಟೆ ವಿತರಿಸಲು ಅಜೀಮ್ ಪ್ರೇಮ್‌ಜಿ ಪ್ರತಿಷ್ಠಾನದ ವತಿಯಿಂದ 1,500 ಕೋಟಿ ರು. ನೀಡಿದ್ದರೂ ಸರಕಾರ ಮೊಟ್ಟೆ ವಿತರಿಸದೇ ಕೇವಲ ಬಾಳೆಹಣ್ಣು ವಿತರಿಸುತ್ತಿರುವ ವಿಷಯ ಬೆಳಕಿಗೆ ಬಂದಿದೆ. ದೇವರು ಕೊಟ್ಟರೂ ಪೂಜಾರಿ ಕೊಡಲಿಲ್ಲ ಎಂಬಂತೆ ಕಾಂಗ್ರೆಸ್ ಸರಕಾರ ತನ್ನ ಅನುದಾನದಿಂದ ಮಕ್ಕಳಿಗೆ ಪೌಷ್ಟಿಕ ಆಹಾರ ಕೊಡುವುದಿರಲಿ, ಕನಿಷ್ಠ ಪಕ್ಷ ದಾನಿಗಳು ಕೊಟ್ಟಿರುವ ಹಣವನ್ನೂ ಸರಿಯಾಗಿ ವಿನಿಯೋಗಿಸುವ ಯೋಗ್ಯತೆ ಇಲ್ಲ.

ಯೋಗೇಶ್ ಪಟೇಲ್, ಬೆಂಗಳೂರು

ಬರೀ ಸಾಮಾಜಿಕ ಜಾಲತಾಣದಲ್ಲೇ ಕುಟ್ಟುತ್ತಾ ಇರು...ನಿನ್ನ ಯಾರಪ್ಪ ವಿರೋಧ ಪಕ್ಷದ ನಾಯಕನಾಗಿ ಮಾಡಿದ್ದು, ನಿನ್ನ ಮಾತಲ್ಲಿ ಶಕ್ತಿ ಇಲ್ಲ...ವಿರೋಧ ಪಕ್ಷದ ನಾಯಕನೆಂದರೆ ಆಡಳಿತ ಪಕ್ಷದಲ್ಲಿ ಒಂದು ಭಯ ಇರಬೇಕು. ಅದು ನಿನ್ನಲ್ಲಿ ಕಾಣಿಸ್ತಿಲ್ಲ ಅಶೋಕ..

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ : ಬೆಳಗಾವಿ**

ಸಮಸ್ಯೆಯೇನು..?

- ಬೆಳಗಾವಿಯ ಸುವರ್ಣ ಸೌಧದ ಆವರಣದಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ಮೂರ್ತಿಯ ಬಗ್ಗೆ ಸಮಸ್ಯೆ.
- **ಇಲಾಖೆ:** ಲೋಕೋಪಯೋಗಿ ಇಲಾಖೆ
- **ಪರಿಹಾರ:** ಭಾರಿ ಮಳೆ, ಹವಾಮಾನದ ವಿಲಿತ ಕಾರಣದಿಂದ ಮೂರ್ತಿಯ ಎರಡು, ಮೂರು ಸ್ಥಳಗಳಲ್ಲಿ ಬಣ್ಣ ಹಾಳಾಗಿದ್ದರ ಬಗ್ಗೆ ಗಮನಹರಿಸಲಾಗಿದೆ. ಈ ಮೂರ್ತಿಯನ್ನು ಸ್ವಚ್ಛಗೊಳಿಸಲಾಗಿದ್ದು, ಅದರ ಮೇಲೆ ಪ್ರೈಮರಿ ಕೋಟಿಂಗ್ ಅಳವಡಿಸಲಾಗಿದೆ.

ಸಮಾಚಾರ ಸಣ್ಣದಲ್ಲ

ವಕ್ಫ್: ರಾಜ್ಯಕ್ಕೆ ಜೆಪಿಸಿ ಭೇಟಿ ಅನಧಿಕೃತ

ಬೆಳಗಾವಿ: ಉಪಚುನಾವಣೆಯಲ್ಲಿ ನಾಟಕ ಮಾಡಲು ವಕ್ಫ್ ಬೋರ್ಡ್ ಆಸ್ತಿ ತನಿಖೆಗೆ ಕೇಂದ್ರದ ಜಂಟಿ ಸಂಸದೀಯ ಸಮಿತಿ ರಾಜ್ಯಕ್ಕೆ ಅನಧಿಕೃತವಾಗಿ ಬಂದಿದೆ ಎಂದು ಕಾನೂನು ಸಂಸದೀಯ, ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ್ ಹೇಳಿದರು. ಶುಕ್ರವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೇಂದ್ರ ಸರಕಾರ ತನಿಖಾ ಸಂಸ್ಥೆಯನ್ನು ದುರುಪಯೋಗ ಮಾಡಿಕೊಂಡಿದೆ. ಈಗ ಜೆಪಿಸಿಯನ್ನು ದುರುಪಯೋಗ ಪಡೆಸಿಕೊಳ್ಳುತ್ತಿರುವ ನಿಮ್ಮ ನೀತಿ ಏನು ಎಂಬುದಕ್ಕೆ ಪ್ರಧಾನಿ ಉತ್ತರಿಸಬೇಕು ಎಂದರು. ಜೆಪಿಸಿ ದುರುಪಯೋಗ ಪಡಿಸಿಕೊಳ್ಳುವ ಬದಲು ರಾಜ್ಯ ಸರಕಾರಕ್ಕೆ ಪತ್ರ ಬರೆದು ಮಾಹಿತಿ ಕೇಳಬಹುದಿತ್ತು. ಜೆಪಿಸಿಯನ್ನು ಅನಧಿಕೃತವಾಗಿ ಬಳಕೆ ಮಾಡಿಕೊಂಡಿದ್ದು ದುರದೃಷ್ಟಕರ ಎಂದು ಸಚಿವರು ಟೀಕಿಸಿದರು.

ಕಾಂಗ್ರೆಸ್‌ಗೆ ಗೆಲುವು ನಿಶ್ಚಿತ: ರಾಜ್ಯದಲ್ಲಿ ಶಿಗ್ಗಾವಿ, ಸಂಡೂರು, ಚನ್ನಪಟ್ಟಣ ಕ್ಷೇತ್ರಗಳಲ್ಲಿ ಉಪಚುನಾವಣೆ ನಡೆಯುತ್ತಿವೆ. ಮೂರೂ ಕಡೆ ಕಾಂಗ್ರೆಸ್ ಅಲೆ ಕಾಣುತ್ತಿದೆ. ಕಾರ್ಯಕರ್ತರು ಅತ್ಯಂತ ಉತ್ಸಾಹದಿಂದ ಕೆಲಸ ಮಾಡುತ್ತಿದ್ದಾರೆ. ನಮ್ಮ ಅಭ್ಯರ್ಥಿಗಳು ಗೆಲುವಿನ ನಗೆ ಬೀರಲಿದ್ದಾರೆ ಎಂಬ ವಿಶ್ವಾಸ ಇದೆ ಎಂದು ಎಚ್.ಕೆ.ಪಾಟೀಲ್ ತಿಳಿಸಿದರು. ಉಪಚುನಾವಣೆ ವೇಳೆ ಬಿಜೆಪಿಯವರು ವಕ್ಫ್ ಹೆಸರಿನಲ್ಲಿ ಸಾಕಷ್ಟು ಸುಳ್ಳು ಪ್ರಚಾರ ನಡೆಸಿ ದ್ದಾರೆ. ಧರ್ಮ, ಜಾತಿಗಳ ನಡುವೆ ದ್ವೇಷ ಮೂಡಿ ಸುವ ಪ್ರಯತ್ನ ಮಾಡುತ್ತಿದ್ದಾರೆ. ಅವರ ಸುಳ್ಳು ಪ್ರಚಾರಕ್ಕೆ ಜನರು ಸೊಪ್ಪು ಹಾಕುವುದಿಲ್ಲ. ಕಾಂಗ್ರೆಸ್ ಪಕ್ಷ ಮೂರೂ ಕ್ಷೇತ್ರಗಳಲ್ಲಿ ಗೆಲುವು ಸಾಧಿಸುತ್ತಾರೆ ಎಂದರು.

{ ಸಿಎಂ ಇಬ್ರಾಹಿಂ } ಮಾಜಿ ಸಚಿವ

ನಾನು ವಕ್ಫ್ ಭೂಮಿ ಕಬಳಿಸಿದ್ದೇನೆ ಎಂದು ವಿಜಯಪುರದ ಬಿಜೆಪಿ ಶಾಸಕ ಯತ್ನಾಳ್ ಆರೋಪಿಸಿದ್ದಾರೆ. ನಾನು ಎಲ್ಲಿ, ಎಷ್ಟು ಆಸ್ತಿ ಕಬಳಿಸಿದ್ದೇನೆ ಎಂದು ತಿಳಿಸಬೇಕು, ಇಲ್ಲವೇ ಬೇಷರತ್ ಕ್ಷಮೆ ಕೇಳಬೇಕು. ಇಲ್ಲವಾದರೆ, ಯತ್ನಾಳ್ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡುತ್ತೇನೆ.

ದೇವೇಗೌಡರ ಕುಟುಂಬದವರು ಒಂದು ಗುಂಟೆ ಜಾಗ ದಾನ ಮಾಡಿದ್ದಾರಾ? | ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಾಗ್ದಾಳಿ

ಶಾಲೆಗಳಿಗೆ 25 ಎಕರೆ ಭೂಮಿ ಕೊಟ್ಟವರು ನಾವು

ಚನ್ನಪಟ್ಟಣ: ಗ್ರಾಮೀಣ ಭಾಗದ ಮಕ್ಕಳಿಗೆ ಶಿಕ್ಷಣ ಸಿಗಬೇಕು ಎಂಬ ಕಾರಣಕ್ಕೆ ನಾವು ಕನಕಪುರದ ಮೂರು ಕಡೆ ದೊಡ್ಡಆಲಹಳ್ಳಿ ಕೆಂಪೇಗೌಡರ 25 ಎಕರೆ ಜಮೀನು ದಾನ ಮಾಡಿದ್ದೇವೆ. ದೇವೇಗೌಡರ ಕುಟುಂಬದವರು ಹಾಸನ, ರಾಮನಗರ, ಚನ್ನಪಟ್ಟಣದಲ್ಲಿ ಒಂದೇ ಒಂದು ಗುಂಟೆ ಜಾಗ ದಾನ ಮಾಡಿದ್ದಾರಾ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ವಾಗ್ದಾಳಿ ನಡೆಸಿದ್ದಾರೆ.

ಚನ್ನಪಟ್ಟಣ ಉಪಚುನಾವಣೆಯ ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ. ಯೋಗೇಶ್ವರ್ ಪರವಾಗಿ ಶುಕ್ರವಾರ ಚಕ್ಕೆರೆ, ಹೊನ್ನನಾಯಕನಹಳ್ಳಿ ಮತ್ತಿತರ ಚುನಾವಣೆ ಪ್ರಚಾರ ಸಭೆ ನಡೆಸಿದರು.

ಯಾರು ಬೇಕಾದರೂ ವಿಚಾರಿಸಿ: ದೇವೇಗೌಡರು ನಿನ್ನೆ ಚುನಾವಣೆ ಪ್ರಚಾರ ಮಾಡುತ್ತಾ ಡಿ.ಕೆ. ಸಹೋದರರು ಜಮೀನು ಕಬ್ಜ ಮಾಡಿಕೊಂಡಿದ್ದು, ಶಾಲೆ ಕಟ್ಟಲು ಜಾಗ ನೀಡುತ್ತಿಲ್ಲ. ಜಾಗ ಕೇಳಿದರೆ ದುಡ್ಡು, ದುಡ್ಡು ಅಂತಾರೆ ಎಂದು ಆರೋಪ ಮಾಡಿದ ಬಗ್ಗೆ ಮಾಧ್ಯಮಗಳಲ್ಲಿ ನೋಡಿದೆ. ನಿಮಗೆ ಕನಕಪುರದಲ್ಲಿ ಸಂಬಂಧಿಕರಿದ್ದರೆ ಕೇಳಿ ನೋಡಿ. ಹಳ್ಳಿಮಕ್ಕಳಿಗೆ ಶಿಕ್ಷಣ ಸಿಗಬೇಕು ಎಂದು ಶಾಲೆಗಳ ನಿರ್ಮಾಣಕ್ಕೆ ನಾವು ಮೂರು ಕಡೆ ನಮ್ಮ ತಂದೆಗೆ ಸೇರಿದ 25 ಎಕರೆ ಜಾಗವನ್ನು ದಾನ ಮಾಡಿದ್ದೇವೆ. ಯಾರು ಬೇಕಾದರೂ ಹೋಗಿ ನೋಡಬಹುದು. ಕುಮಾರಸ್ವಾಮಿ ಹಾಗೂ ದೇವೇಗೌಡರೇ, ನೀವು ಎಲ್ಲಾದರೂ ಒಂದು ಎಕರೆ ಜಾಗ ದಾನ ಮಾಡಿದ್ದೀರಾ? ನಾನು ನಿಮ್ಮ ಹಾಗೂ ನಿಮ್ಮ ಜಮೀನಿನ ವಿಚಾರ ಈಗ ಮಾತನಾಡಲು ಹೋಗುವುದಿಲ್ಲ. ಚುನಾವಣೆಗಾಗಿ ನಿಮ್ಮನ್ನು ಟೀಕಿಸುವುದಿಲ್ಲ. ನಿಮ್ಮ ವಯಸ್ಸಿಗೆ ನಾನು ಗೌರವ ನೀಡುತ್ತೇನೆ. ಬಡವರಿಗೆ ಆಗಿರುವ ಮೋಸದ ಬಗ್ಗೆ ಧ್ವನಿ ಎತ್ತಲು ನಾನು ಈ ಪ್ರಶ್ನೆ ಕೇಳಬೇಕಾಗಿದೆ. ಹಾಸನ, ರಾಮನಗರ, ಚನ್ನಪಟ್ಟಣದಲ್ಲಿ ನೀವು ಹಾಗೂ ನಿಮ್ಮ ಕುಟುಂಬದವರು ಒಂದು ಗುಂಟೆ ಜಮೀನನ್ನು ನೀಡಿದ್ದೀರಾ? ಎಂದು ಪ್ರಶ್ನಿಸಿದರು.

ಚನ್ನಪಟ್ಟಣ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಯೋಗೇಶ್ವರ್ ಪರ ಪ್ರಚಾರ ಕೈಗೊಂಡ ಡಿಸಿಎಂ ಡಿ.ಕೆ.ಶಿವಕುಮಾರ್. ಸಚಿವ ರಾಮಲಿಂಗಾರೆಡ್ಡಿ, ಇತರ ನಾಯಕರು ಇದ್ದರು.

ಜನರಿಗೆ ನೆರವಾಗಿದ್ದು ನಾವಲ್ಲವೇ..?: ಕುಮಾರಸ್ವಾಮಿ ಅವರೇ ನೀವು ಹಾಗೂ ನಿಮ್ಮ ಪತ್ನಿ ರಾಮನಗರ ಹಾಗೂ ಚನ್ನಪಟ್ಟಣದಲ್ಲಿ ಶಾಸಕರಾಗಿದ್ದವರು. ನೀವು ಕೋವಿಡ್ ಸಮಯದಲ್ಲಿ ಜನರಿಗೆ ನೆರವಾಗಿದ್ದೀರಾ? ಡಿ.ಕೆ. ಸುರೇಶ್ ಜನರಿಗೆ ನೆರವಾಗಲಿಲ್ಲವೇ? ಅನಾಥ ಶವಗಳಿಗೆ ಅಂತ್ಯಸಂಸ್ಕಾರ ಮಾಡಲಿಲ್ಲವೇ? ಇಂತಹ ಒಂದು ಕೆಲಸವನ್ನು ನೀವು ಮಾಡಲಿಲ್ಲ. ಮನೆಯಲ್ಲಿ ಅವಿತು ಕುಳಿತಿದ್ರಿ. ಕಷ್ಟಕ್ಕೆ ಆಗಲಿಲ್ಲವಾದರೆ ಮತ್ತೆ ಯಾವಾಗ ಜನರ ಜೊತೆ ನಿಲ್ಲುತ್ತೀರಾ ಎಂದು ಡಿಸಿಎಂ ತೀಕ್ಷ್ಣವಾಗಿ ಪ್ರಶ್ನಿಸಿದರು.

ಕಾರ್ಯಕರ್ತರ ಪರಿಸ್ಥಿತಿ ಏನು?: ನನ್ನ ಮೊಮ್ಮಗನ ಪಟ್ಟಾಭಿಷೇಕ ಮಾಡುವವರೆಗೂ ನಾನು ಬದುಕಿರುತ್ತೇನೆ ಎಂದು ದೇವೇಗೌಡರು ಹೇಳಿದ್ದಾರೆ. ಬಹಳ ಸಂತೋಷ, ನೀವು ನಿಮ್ಮ ಮೊಮ್ಮಗನ ಪಟ್ಟಾಭಿಷೇಕ ಮಾಡಿ. ಆದರೆ ನಿಮಗಾಗಿ ದುಡಿದ ಕಾರ್ಯಕರ್ತರ ಪರಿಸ್ಥಿತಿ ಏನಾಗಬೇಕು ಎಂದು ನಿಮ್ಮನ್ನು ಕೇಳಲು ಬಯಸುತ್ತೇನೆ. ಕುಮಾರಸ್ವಾಮಿ ಅವರು ಕ್ಷೇತ್ರದ ಯಾವುದಾದರೂ ಒಬ್ಬ ಕಾರ್ಯಕರ್ತನಿಗೆ ಅಧಿಕಾರ ಕೊಟ್ಟಿದ್ದಾರಾ? ಇಲ್ಲ. ಈ ಕ್ಷೇತ್ರದ ಬಡವರನ್ನು ಮೇಲೆತ್ತಲು ನಾವಿದ್ದೇವೆ, ಯೋಗೇಶ್ವರ್ ಇದ್ದಾರೆ ಎಂದು ಹೇಳಿದರು.

ಕುಮಾರಸ್ವಾಮಿ ಅವರು ಸಂಸದರಾಗಬೇಕು ಎಂದು ಈ ಕ್ಷೇತ್ರ ಬಿಟ್ಟು ಹೋದರು. ಈ ಕ್ಷೇತ್ರದ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಕೇಂದ್ರ ಮಂತ್ರಿಯಾದ ನಂತರ ಮತ್ತೆ ನಿಮ್ಮ ಬಳಿ ಬಂದು ಈ ಭಾಗದಲ್ಲಿ ಕೈಗಾರಿಕೆ, ಕಾರ್ಖಾನೆ ಮಾಡುತ್ತೇವೆ, ನಿಮಗೆ ಉದ್ಯೋಗ ನೀಡುತ್ತೇವೆ ಎಂದು ಜನರಿಗೆ ಭರವಸೆ ನೀಡಬಹುದಿತ್ತು. ಆದರೆ ಆ ಕೆಲಸ ಮಾಡಲಿಲ್ಲ.

ಕುಮಾರಸ್ವಾಮಿ ಕೈಗಾರಿಕೆ ಮಾಡುವುದಾದರೆ ಜಾಗ ನೀಡಲು ಸಿದ್ಧ: ನಾನು ಈ ಕ್ಷೇತ್ರದಲ್ಲಿ ಉದ್ಯೋಗ ಮೇಳ ನಡೆಸಿದ ಬಳಿಕ, ಕುಮಾರಸ್ವಾಮಿ ಅವರು ಮಂಡ್ಯದಲ್ಲಿ ಉದ್ಯೋಗ ಮೇಳ ನಡೆಸಿದರು. ಅದೇ ಕೆಲಸವನ್ನು ರಾಮನಗರ ಹಾಗೂ ಚನ್ನಪಟ್ಟಣ ಕ್ಷೇತ್ರದಲ್ಲಿ ಯಾಕೆ ಮಾಡಲಿಲ್ಲ? ನಾವು ಕೈಗಾರಿಕೆ ಮಾಡಲು ಡಿ.ಕೆ. ಶಿವಕುಮಾರ್ ಜಮೀನು ನೀಡುತ್ತಿಲ್ಲ ಎಂದು ಸುಳ್ಳು ಆರೋಪ ಮಾಡಿದ್ದಾರೆ. ಒಂದು ವೇಳೆ ಅವರು ಕೈಗಾರಿಕೆ, ಕಾರ್ಖಾನೆ ಮಾಡಲು ಅನುಮತಿ ನೀಡಿದರೆ, ಕೇತಗಾನಹಳ್ಳಿಯಲ್ಲಿ 200-300 ಎಕರೆ ಸೇರಿದಂತೆ ಇರುವ ಜಮೀನು ನೀಡಲು ಸಿದ್ಧರಿದ್ದೇವೆ. ಬಡವರಿಗೆ ಅನುಕೂಲ ಮಾಡುವ ಕೆಲಸಕ್ಕೆ ನಾವು ಎಂದಿಗೂ ಬೇಡ ಎನ್ನುವುದಿಲ್ಲ ಎಂದು ಡಿಕೆಶಿ ಸ್ಪಷ್ಟಪಡಿಸಿದರು.

ಎಚ್‌ಡಿಕೆ-ಎಚ್‌ಡಿಡಿಗೆ ಸವಾಲು: ಯೋಗೇಶ್ವರ್ ಕೆರೆಗೆ ನೀರು ತುಂಬಿಸಿ ರೈತರಿಗೆ ನೆರವಾಗಿದ್ದಾರೆ. ಸತ್ತೇಗಾಲದಿಂದ ನೀರು ತರುವ ಯೋಜನೆ ಮಾಡುತ್ತಿದ್ದೇವೆ. ಇಂತಹ ಒಂದೇ ಒಂದು ಕಾರ್ಯಕ್ರಮವನ್ನು ಮಾಡಿದ್ದೇವೆ ಎಂದು ಕುಮಾರಸ್ವಾಮಿ ಹಾಗೂ ದೇವೇಗೌಡರು ಹೇಳಿದರೇ ಈ ಕೂಡಲೇ ನಾನು ಈ ಚುನಾವಣಾ ಪ್ರಚಾರ ನಿಲ್ಲಿಸಿ ಇಲ್ಲಿಂದ ಹೊರಟುಹೋಗುತ್ತೇನೆ ಎಂದು ಡಿಕೆಶಿ ಘೋಷಿಸಿದರು.

ಚನ್ನಪಟ್ಟಣಕ್ಕೆ ಕುಮಾರಸ್ವಾಮಿ ಏನು ಮಾಡಿದ್ದಾರೆ?

ಯೋಗೇಶ್ವರ್ ಅವರು 4-5 ಕೋಟಿ ರೂ. ವೆಚ್ಚ ಮಾಡಿ ಬಿಸಿಲಮ್ಮ ದೇವಾಲಯ ಅಭಿವೃದ್ಧಿ ಮಾಡಿದ್ದಾರೆ. ಮಹದೇಶ್ವರ ದೇವಾಲಯ ಅಭಿವೃದ್ಧಿ ಮಾಡಿದ್ದಾರೆ. ಅದನ್ನು ನೋಡಿ ಸಂತೋಷವಾಗಿದೆ. ಕುಮಾರಸ್ವಾಮಿ ಅವರು ರಾಮನಗರ, ಚನ್ನಪಟ್ಟಣ ಕ್ಷೇತ್ರದಲ್ಲಿ ಒಂದು ದೇವಾಲಯ ಅಭಿವೃದ್ಧಿ ಮಾಡಿದ್ದಾರಾ? ಒಂದೇ ಒಂದು ಶುದ್ಧ ಕುಡಿಯುವ ನೀರಿನ ಘಟಕ ನೀಡಿದ್ದಾರಾ? ನೀವು ಒಂದೊಂದು ಮತಕ್ಕೆ 2-3 ಸಾವಿರ ರುಪಾಯಿ ನೀಡಬಹುದು. ಆದರೆ ನಮ್ಮ ಸರ್ಕಾರ ಗ್ಯಾರಂಟಿ ಯೋಜನೆಗಳ ಮೂಲಕ ಬಡವರು ಬದುಕು ಕಟ್ಟಿಕೊಳ್ಳಲು ದಾರಿದೀಪವಾಗಿದೆ. ಇದಕ್ಕಾಗಿ 56 ಸಾವಿರ ಕೋಟಿ ನೀಡುತ್ತಿದ್ದೇವೆ ಎಂದು ಡಿ.ಕೆ. ಶಿವಕುಮಾರ್ ವಿವರಿಸಿದರು.

ಸಂಡೂರು ಮತದಾರರಿಗೆ ಸಿಎಂ ಸಿದ್ದರಾಮಯ್ಯ ಮನವಿ

ರೆಡ್ಡಿ ಪಟಾಲಂ ರಾಜಕೀಯವಾಗಿ ಮತ್ತೆ ಬೆಳೆಯದಂತೆ ನೋಡಿಕೊಳ್ಳಿ

ಬಳ್ಳಾರಿ: ನಿಮಗೆ ಕೈ ಮುಗಿದು ಕೇಳುತ್ತೇನೆ, ಜನಾರ್ದನ ರೆಡ್ಡಿ ಪಟಾಲಂ ರಾಜಕೀಯವಾಗಿ ಮತ್ತೆ ಬೆಳೆಯದಂತೆ ಮಾಡಬೇಕು. ಇದು ಸಂಡೂರು ಉಪಚುನಾವಣೆ ಪ್ರಚಾರದ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತದಾರರಿಗೆ ಮಾಡಿದ ಮನವಿ..

ಬನ್ನಿಹಟ್ಟಿ ಸಮಾವೇಶದಲ್ಲಿ ಶುಕ್ರವಾರ ಭಾಷಣ ಮಾಡಿದ ಅವರು, ಇದು ಉಪಚುನಾವಣೆ ಆದರೂ ಬಹಳ ಮಹತ್ವದ ಚುನಾವಣೆ. ಬಿಜೆಪಿಯವರು ಸುಳ್ಳು ಹೇಳಿ, ಹಣ ಖರ್ಚುಮಾಡಿ ಸಂಡೂರು ಗೆಲ್ಲಲು ಯೋಜನೆ ಮಾಡಿದ್ದಾರೆ ಎಂದು ಆರೋಪಪಿಸಿಸಿದರು.

ಗಣಿ ಲೂಟಿಕೋರರು: ಜನಾರ್ದನ ರೆಡ್ಡಿ ಯಾರು, ಏನು ಎಂದು ನಿಮಗೆಲ್ಲಾ ಗೊತ್ತಿದೆ. ಬಳ್ಳಾರಿಯನ್ನು ರಿಪಬ್ಲಿಕ್ ಬಳ್ಳಾರಿ ಮಾಡಿದವರು. ಅಕ್ರಮ ಗಣಿಗಾರಿಕೆ ಮಾಡಿ ಲೂಟಿ ಮಾಡಿದವರು. ಈ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯನ್ನು ಗೆಲ್ಲಿಸುತ್ತೇವೆಂದು ಜವಾಬ್ದಾರಿ ತಗೊಂಡಿದ್ದಾರೆ. ರೆಡ್ಡಿ ಬ್ರದರ್ಸ್, ರಾಮುಲು ಸೇರಿ ಇಲ್ಲಿ ಬಡತನ ಇದೆ, ಶೋಷಣೆ ಇತ್ತು. ಅವರ ಪಟಾಲಂ ಬಳ್ಳಾರಿ ಜಿಲ್ಲೆಯನ್ನು ಹಾಳುಮಾಡಿದ್ದಾರೆ, ಇವರ ಕಪಿ ಮುಷ್ಠಿಯಿಂದ ಬಳ್ಳಾರಿಯನ್ನು ತಪ್ಪಿಸಬೇಕಿತ್ತು. ಗುಡ್ಡಗಳನ್ನು ನೆಲಸಮ ಮಾಡುತ್ತಿದ್ದಾರೆಂದು ಬೆಂಗಳೂರಿನಿಂದ ಬಳ್ಳಾರಿಗೆ ಪಾದಯಾತ್ರೆ ಮಾಡಿದ್ದೆವು ಎಂದು ಸಿಎಂ ಸಿದ್ದರಾಮಯ್ಯ ರೆಡ್ಡಿ ಪಟಾಲಂ ವಿರುದ್ಧ ಕೆಂಡಕಾರಿದರು.

ಸಂಡೂರು ಕ್ಷೇತ್ರದ ಬನ್ನಿಹಟ್ಟಿಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪರ ಸಿಎಂ ಚುನಾವಣಾ ಪ್ರಚಾರ ನಡೆಸಿದರು.

ನಾನೊಮ್ಮೆ ಬಳ್ಳಾರಿ ಜಿಲ್ಲೆಯ ಅಲ್ಲಿಪುರಕ್ಕೆ ಬಂದಿದ್ದೆ. ಯಾರದೋ ಮನೆಯಲ್ಲಿ ನೀರು ಕುಡಿಯಲು ಹೋಗಿದ್ದೆ. ಆಗ ಆ ಮನೆಯವರು, ನೀವು ಬಂದಿದ್ದು ಯಾರಿಗೂ ಹೇಳಬೇಡಿ ಸರ್ ಎಂದಿದ್ರು. ಅಷ್ಟೊಂದು ಭಯವನ್ನು ಅವರು ಸೃಷ್ಟಿಸಿದ್ದರು. ಇಂತಹವರು ಬಳ್ಳಾರಿ ಜಿಲ್ಲೆಗೆ ಮತ್ತೆ ಬೇಕೇ..? ಅವರ ಅಭ್ಯರ್ಥಿ ಗೆಲ್ಲಬೇಕಾ..?

- ಸಿದ್ದರಾಮಯ್ಯ, ಸಿಎಂ

ಅನ್ನಪೂರ್ಣ ಗೆದ್ದರೆ ನಾನೇ ಗೆದ್ದಂತೆ

ನಾವಿನ್ನೂ ಮೂರುವರೆ ವರ್ಷ ಅಧಿಕಾರದಲ್ಲಿ ಇರುತ್ತೇವೆ. ಅಲ್ಲಿಯವರೆಗೂ ನಾವು ಗ್ಯಾರಂಟಿಗಳನ್ನು ಯಶಸ್ವಿಯಾಗಿ ಮುಂದುವರಿಸುತ್ತೀವಿ. ಬಿಜೆಪಿ ಅಪಪ್ರಚಾರವನ್ನು ನಂಬಬೇಡಿ. ಸುಳ್ಳುಗಳಿಗೆ ಮೋಸ ಹೋಗಬೇಡಿ. ಹೃದಯದ ಮಾತು ಕೇಳಿ ಅಭಿವೃದ್ಧಿಗೆ ನಿಮ್ಮ ಮತ ನೀಡಿ. ಅನ್ನಪೂರ್ಣಮ್ಮ ಗೆದ್ದರೆ ನಾನೇ ಗೆದ್ದ ಹಾಗೆ. ಅನ್ನಪೂರ್ಣಮ್ಮ ಅವರಿಗೆ ಬೀಳುವ ಪ್ರತಿ ಮತ ನನಗೆ ಮತ್ತು ಸಂತೋಷ್ ಲಾಡ್ ಅವರಿಗೆ ಹಾಕಿದಂತೆ ಎಂದು ಮುಖ್ಯಮಂತ್ರಿಯವರು ಮನವಿ ಮಾಡಿದರು.

ಸುರೇಶ್ ಆಡಿಯೋ ಬಿಡುಗಡೆ

ಚನ್ನಪಟ್ಟಣ: ಚುನಾವಣೆಗೆ ಮೊದಲು ಡಿ.ಕೆ. ಸಹೋದರರು ಹಾಗೂ ಕಾಂಗ್ರೆಸ್ ಅಭ್ಯರ್ಥಿ ಹಾದಿಬೀದಿಯಲ್ಲಿ ಬೈದಾಡಿಕೊಂಡಿದ್ದರು. ಈಗ ಪರಸ್ಪರ ಅಪ್ಪಿಕೊಂಡು ನಾಟಕ ಮಾಡುತ್ತಿದ್ದಾರೆ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ವಾಗ್ದಾಳಿ ನಡೆಸಿದ್ದಾರೆ. ಮಾಜಿ ಸಂಸದ ಡಿ.ಕೆ. ಸುರೇಶ್ ಅವರು ಸಿ.ಪಿ. ಯೋಗೇಶ್ವರ್‌ಗೆ ಈ ಹಿಂದೆ ವಾಚಾಮಗೋಚರವಾಗಿ ನಿಂದಿಸಿದ್ದ ಆಡಿಯೊವನ್ನು ಎಚ್.ಡಿ.ಕೆ. ಬಿಡುಗಡೆ ಮಾಡಿದ್ದಾರೆ. ಈ ಆಡಿಯೋದಲ್ಲಿ ಯೋಗೇಶ್ವರ್, ಅವನು ರಿಯಲ್ ಎಸ್ಟೇಟ್‌ನಲ್ಲಿ ಯಾರ‍್ಯಾರಿಗೆ ಟೋಪಿ ಹಾಕಿದ್ದಾನೆ ಎಂದು ಬಿಡದಿಯಲ್ಲಿ ಕೇಳಿದ್ರೆ ಎಲ್ಲಾ ಹೇಳ್ತಾರೆ . ಹೇಳಿದ್ನಲ್ಲಪ್ಪಾ.. ಬಿಡದಿಯಲ್ಲಿ ಎಲ್ಲರಿಗೂ ಮೆಗಾಸಿಟಿ ಮಾಡ್ತೀನಿ ಅಂತ ಟೋಪಿ ಹಾಕಿದ್ನಲ್ಲಾ.. ಮರೆತೋಗಿದ್ದಾನಾ ಎನ್ನುವ ಸಂಭಾಷಣೆ ಇದೆ. ಎಲ್ಲರನ್ನೂ ಬ್ರದರ್ ಅಂತಲೇ ಕರೆಯುತ್ತೇನೆ. ಅದರಲ್ಲೇನಿದೆ? ಇವರೇನು? ಇವರ ಅಸಲಿ ಬಂಡವಾಳ ಎಲ್ಲರಿಗೂ ಗೊತ್ತಿದೆ ಎಂದರು.

ಮದ್ಯ ಮಾರಾಟ ನಿಷೇಧ

ಹೊಸಪೇಟೆ: ನ.13ರಂದು ಸಂಡೂರು ವಿಧಾನಸಭಾ ಕ್ಷೇತ್ರದ ಉಪ ಚುನಾವಣೆ ನಡೆಯುವ ಹಿನ್ನೆಲೆಯಲ್ಲಿ ನ.11ರ ಸಂಜೆ 6ರಿಂದ ನ.13ರ ಸಂಜೆ 6ರ ವರೆಗೆ ಸಂಡೂರಿಗೆ ಹೊಂದಿಕೊಂಡ ಹೊಸಪೇಟೆ ಮತ್ತು ಕೂಡ್ಲಿಗಿಯ ಗಡಿಭಾಗದ 5 ಕಿ.ಮೀ ವ್ಯಾಪ್ತಿಯ ಒಳಗಡೆ ಮದ್ಯ ತಯಾರಿಕೆ, ಸಾಗಾಣಿಕೆ ಹಾಗೂ ಮದ್ಯ ಮಾರಾಟವನ್ನು ವಿಜಯನಗರ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ನಿಷೇಧಿಸಿದ್ದಾರೆ. ಬಾರ್ ಮತ್ತು ರೆಸ್ಟೋರೆಂಟ್, ಕ್ಲಬ್, ಹೋಟೆಲ್, ಡಾಬಾಗಳಲ್ಲಿ ಮತ್ತು ಸಾರ್ವಜನಿಕ ಹಾಗೂ ಖಾಸಗಿ ಸ್ಥಳಗಳಲ್ಲಿ ಮದ್ಯ ತಯಾರಿಕೆ, ಸಾಗಾಣಿಕೆ ಹಾಗೂ ಮಾರಾಟ ನಿಷೇಧಿಸಲಾಗಿದೆ.

ಸಿಎಂ, ಡಿಸಿಎಂ ಸಚಿವರ ದಂಡೇ ಕ್ಷೇತ್ರಕ್ಕೆ ಚನ್ನಪಟ್ಟಣಕ್ಕೆ | ಕಾಂಗ್ರೆಸ್ ವಿರುದ್ಧ ಎಚ್‌ಡಿಕೆ ವಾಗ್ದಾಳಿ

ಒಬ್ಬ ಯುವಕನ ಕಟ್ಟಿಹಾಕಲು ಸರಕಾರವೇ ದಂಡೆತ್ತಿ ಬಂದಿದೆ

ರಾಮನಗರ: ಕೇವಲ ಒಬ್ಬ ಯುವಕನನ್ನು ಕಟ್ಟಿ ಹಾಕಲು ಚನ್ನಪಟ್ಟಣದಲ್ಲಿ ಸರಕಾರದ ಸಚಿವರ ದಂಡು ದಂಡೆತ್ತಿ ಬಂದಿದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರಚಾರದ ನಡುವೆ ಕಲ್ಲಾಪುರದಲ್ಲಿ ಭಾಷಣ ಮಾಡಿದ ಅವರು, ನಿಖಿಲ್ ಕುಮಾರಸ್ವಾಮಿ ಕಣದಲ್ಲಿ ಇದ್ದಾರೆ. ಅವರನ್ನು ಕಟ್ಟಿಹಾಕಲು ಮುಖ್ಯಮಂತ್ರಿ, ಡಿಸಿಎಂ ಕೂಡ ಬಂದಿದ್ದಾರೆ, ಹದಿನೈದಕ್ಕೂ ಹೆಚ್ಚು ಸಚಿವರು, ಮೂವತ್ತಕ್ಕೂ ಹೆಚ್ಚು ಶಾಸಕರು ದಂಡೆತ್ತಿ ಬಂದಿದ್ದಾರೆ. ಆದರೆ, ಜನರು ನಮ್ಮ ಜತೆ ಇದ್ದಾರೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು. ಕ್ಷೇತ್ರಕ್ಕೆ ನಾನು ಮಾಡಿರುವ ಕೆಲಸಗಳ ಬಗ್ಗೆ ಕಾಂಗ್ರೆಸ್ ನಾಯಕರು ಪ್ರಶ್ನೆ ಮಾಡುತ್ತಾರೆ. ಅವರಿಗೆ ಕಣ್ಣಿಲ್ಲವೇ? ಪ್ರತಿ ಹಳ್ಳಿಯಲ್ಲಿಯೂ 8ರಿಂದ 10 ಕೋಟಿ ಮೌಲ್ಯದ ಅಭಿವೃದ್ಧಿ ಕಾರ್ಯಗಳು ಆಗಿವೆ. ಇವೆಲ್ಲವನ್ನೂ ಕಣ್ಣಿಗೆ ಕಾಣುತ್ತಿಲ್ಲವೇ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ಜನರ ಮೇಲೆ ಸರಕಾರದಿಂದ ಹೊರೆ: ಕಾಂಕ್ರೀಟ್ ರೋಡ್, ಹೈಮಾಸ್ಕ್ ಲೈಟ್ ಸೇರಿದಂತೆ ಸಾಕಷ್ಟು ಮೂಲಸೌಕರ್ಯ ಕಲ್ಪಿಸಿದ್ದೇನೆ. ಬೆಂಗಳೂರಿನಲ್ಲೂ ಇಂತಹ ಉತ್ತಮ ರಸ್ತೆಗಳು ಇಲ್ಲ. ಕೇವಲ 8-10 ಹಳ್ಳಿಗೆ ಅಷ್ಟೇ ಕೆಲಸ ಆಗಿಲ್ಲ. ಇಡೀ ಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸ ಆಗಿದೆ. ಎಷ್ಟು ಕೊಳವೆಬಾವಿ ಕೊಟ್ಟಿದ್ದೇವೆ ಎನ್ನುವುದಕ್ಕೆ ಲೆಕ್ಕ ಇದೆ. ಇವರ ಕಥೆ ಹೇಳುವ ಹಾಗೆಯೇ ಇಲ್ಲ. ದಲಿತ ಸಮುದಾಯದ ಅಭಿವೃದ್ಧಿಗೆ ಇಟ್ಟ ಹಣವನ್ನು ಗ್ಯಾರಂಟಿಗೆ ಹಾಕೊಂಡಿದ್ದಾರೆ. ಹೊಸದಾಗಿ 1.05 ಲಕ್ಷ ಕೋಟಿ ಸರ್ಕಾರ ಸಾಲಮಾಡಿ ಜನರ ಮೇಲೆ ಹೊರೆಹಾಕುತ್ತಿದೆ. ಇದನ್ನು ಸೇರಿಸಿದರೆ ರಾಜ್ಯದ ಒಟ್ಟು ಸಾಲ 7.5. ಲಕ್ಷ ಕೋಟಿ ಆಗುತ್ತದೆ. ಅದನ್ನು ತೀರಿಸೋಕೆ ಜನರ ಜೇಬಿಗೆ ಕೈ ಹಾಕುತ್ತಿದ್ದಾರೆ ಎಂದು ಕುಮಾರಸ್ವಾಮಿ ಕಿಡಿಕಾರಿದರು.

ನನ್ನಿಂದ ನಿಮಗೆ ಅನ್ಯಾಯ ಆಗಿಲ್ಲ. ಒಬ್ಬ ರೈತನ ಜಮೀನಲ್ಲಿ ಇದ್ದ ಬಂಡೆ ಹೊಡೆದು ಅವನಿಗೆ ಅನ್ಯಾಯ ಮಾಡಿದರು ಅವರು ಎಂದು ಡಿಕೆ ಸಹೋದರರ ಮೇಲೆ ಹರಿಹಾಯ್ದ ಕುಮಾರಸ್ವಾಮಿ, ನಾನು ಅವರ ಹಾಗೆ ಮಾಡಿಲ್ಲ. ನಿಖಿಲ್‌ಗೆ ಒಂದು ಅವಕಾಶ ಕೊಡಿ. ಈ ಕೆಟ್ಟ ಕಾಂಗ್ರೆಸ್ ಆಡಳಿತಕ್ಕೆ ಅಂಕುಶ ಹಾಕಬಹುದು ಎಂದು ಮನವಿ ಮಾಡಿದರು.

ಕಲ್ಲಾಪುರದಲ್ಲಿ ಕೇಂದ್ರ ಸಚಿವ ಕುಮಾರಸ್ವಾಮಿ ನಿಖಿಲ್ ಪರ ಪ್ರಚಾರ ಕೈಗೊಂಡರು.

ಅವಳಿ ನಗರ ದಿನ ದೂರವಿಲ್ಲ

ಚನ್ನಪಟ್ಟಣ - ರಾಮನಗರ ಅವಳಿ ನಗರ ಆಗುವ ದಿನ ದೂರವಿಲ್ಲ. ಬೃಹತ್ ಕಾರ್ಖಾನೆ ತಂದು ಸ್ಥಳೀಯ ಯುವಜನರಿಗೆ ಉದ್ಯೋಗ ಕೊಡುವ ಕೆಲಸ ಮಾಡುತ್ತೇನೆ. ಈ ಬಗ್ಗೆ ನಾನು ಹಲವರ ಜತೆ ಸಮಾಲೋಚನೆ ನಡೆಸಿದ್ದೇನೆ. ಮಂಡ್ಯ, ಚನ್ನಪಟ್ಟಣ, ರಾಮನಗರ ಭಾಗದಲ್ಲಿ ಕೈಗಾರಿಕೆಗಳನ್ನು ತರುವ ಬಗ್ಗೆ ಪ್ರಯತ್ನ ಮಾಡುತ್ತೇನೆ ಎಂದು ಸಚಿವ ಎಚ್‌ಡಿಕೆ ಭರವಸೆ ನೀಡಿದರು.

ಇದು ನನ್ನ ಅನಿರೀಕ್ಷಿತ ಚುನಾವಣೆ: ನಿಖಿಲ್

ರಾಮನಗರ: ಈ ಚುನಾವಣೆ ಅನುಕಂಪದ ಮೇಲೆ ನಡೆಯುವ ಚುನಾವಣೆ ಅಲ್ಲ, ಅಭಿವೃದ್ಧಿ ಮೇಲೆ ನಡೆಯುವ ಚುನಾವಣೆ. ನಾವು ರಾಜ್ಯದಿಂದ ಅನುದಾನ ನಿರೀಕ್ಷೆ ಮಾಡಲು ಸಾಧ್ಯವಿಲ್ಲ, ಆದರೂ ಕೇಂದ್ರದಿಂದ ಅನುದಾನ ತಂದು ಕೆಲಸ ಮಾಡುತ್ತೇವೆ ಎಂದು ಎನ್‌ಡಿಎ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಎಂದು ಹೇಳಿದರು.

ಚನ್ನಪಟ್ಟಣದ ವಕೀಲರ ಸಂಘ ಆಯೋಜಿಸಿದ್ದ ಸಭೆಯಲ್ಲಿ ತಾಲ್ಲೂಕಿನ ವಕೀಲರ ಬಳಿ ಮತಯಾಚನೆ ಮಾಡಿ ಮಾತನಾಡಿದ ಅವರು, ಇದು ನನ್ನ ಅನಿರೀಕ್ಷಿತ ಚುನಾವಣೆ, ಇನ್ನು ಮೂರೂವರೆ ವರ್ಷ ಮಾತ್ರ ಬಾಕಿ ಇದೆ. ನನಗೆ ಒಂದು ಅವಕಾಶ ಕೊಟ್ಟು ನೋಡಿ, ಪಕ್ಷಾತೀತವಾಗಿ ನಾನು ಮನವಿ ಮಾಡುತ್ತಿದ್ದೇನೆ, ನಿಮ್ಮ ಸಹಕಾರ ನನ್ನ ಮೇಲೆ ಇರಲಿ ಎಂದು ಮನವಿ ಮಾಡಿದರು.

ಎಸ್‌ಟಿ ಮೀಸಲಾತಿಗೆ ಗೌಡರ ಹೋರಾಟ: ಮಂಡ್ಯದಲ್ಲಿ ಉದ್ಯೋಗ ಮೇಳ ಮಾಡಿದ್ದೆವು, ಇಡೀ ರಾಜ್ಯದ ಯುವಕರು ಉದ್ಯೋಗ ಮೇಳಕ್ಕೆ ಬಂದಿದ್ದರು. 1200 ಜನರಿಗೆ ಕೆಲಸ ಕೊಡಿಸಿದ್ದೇವೆ. ಇದನ್ನು ಮುಂದುವರಿಸುತ್ತೇವೆ ಎಂದ ಅವರು, ಎಸ್.ಟಿ. ಸಮುದಾಯಕ್ಕೆ ಮೀಸಲಾತಿ ಕೊಡಿಸಲು ದೇವೇಗೌಡರು ಹೋರಾಟ ಮಾಡುತ್ತಿದ್ದಾರೆ. ಪ್ರಧಾನಿ ಮೋದಿ ಅವರ ಜೊತೆ ದೇವೇಗೌಡರು ಮಾತನಾಡಿದ್ದಾರೆ. ಎಲ್ಲಾ ಸಮುದಾಯಗಳು ಮುಖ್ಯವಾಹಿನಿಗೆ ಬರಬೇಕು. ಈ ನಿಟ್ಟಿನಲ್ಲಿ ನಾವು ಕೆಲಸ ಮಾಡುತ್ತೇವೆ, ಈ ಬಾರಿ ನನ್ನ ಕೆಲಸ ನೋಡಲು ನನಗೆ ಒಂದು ಅವಕಾಶ ಕೊಡಿ ಎಂದು ವಕೀಲರಲ್ಲಿ ನಿಖಿಲ್ ಕುಮಾರಸ್ವಾಮಿ ಅವರು ಮನವಿ ಮಾಡಿದರು. ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ಎ.ಪಿ.ರಂಗನಾಥ್, ಚನ್ನಪಟ್ಟಣ ವಕೀಲರ ಸಂಘದ ಅಧ್ಯಕ್ಷ ಟಿ.ವಿ.ಗಿರೀಶ್ ಮೊದಲಾದವರು ಹಾಜರಿದ್ದರು.

ಹೊರಗಿನವರು ನ.11 ರ ಸಂಜೆ ಕ್ಷೇತ್ರ ಬಿಡಬೇಕು | ರಾಮನಗರ ಜಿಲ್ಲಾ ಚುನಾವಣಾಧಿಕಾರಿ ಸೂಚನೆ

ಚನ್ನಪಟ್ಟಣ: ನ.13ರಂದು ಮತದಾನಕ್ಕೆ ಸಜ್ಜು

ರಾಮನಗರ: ಚನ್ನಪಟ್ಟಣ ಕ್ಷೇತ್ರದ ಉಪ ಚುನಾವಣೆಗೆ ನ.13ರಂದು ಮತದಾನ ನಡೆಯಲಿದ್ದು, ನೀತಿಸಂಹಿತೆ ಜಾರಿಯಲ್ಲಿರುವ ಕಾರಣ ಕ್ಷೇತ್ರದ ಮತದಾರರಲ್ಲದವರು ನ.11ರ ಸೋಮವಾರ ಸಂಜೆ 5.30ರ ನಂತರ ಕ್ಷೇತ್ರ ಬಿಟ್ಟು ಹೊರಹೋಗಬೇಕು, ಇದು ಚನ್ನಪಟ್ಟಣ ಕ್ಷೇತ್ರದ ವ್ಯಾಪ್ತಿಗೆ ಮಾತ್ರ ಅನ್ವಯವಾಗುತ್ತದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಯಶವಂತ್ ಗುರುಕರ್ ತಿಳಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಪತ್ರಿಕಾಗೋಷ್ಠಿ ನಡೆಸಿದ ಅವರು, ಕ್ಷೇತ್ರದ ಮತದಾರರಲ್ಲದವರು ನ.11ರ ಸಂಜೆ 5.30ರ ನಂತರ ಕ್ಷೇತ್ರದ ವ್ಯಾಪ್ತಿಯಲ್ಲಿ ಇರುವಂತಿಲ್ಲ, ಆ ವೇಳೆಗೆ ಬಹಿರಂಗ ಪ್ರಚಾರ ಅಂತ್ಯಗೊಳ್ಳುವ ಕಾರಣ ಕ್ಷೇತ್ರ ವ್ಯಾಪ್ತಿಯಲ್ಲಿನ ಹೋಟೆಲ್‌ಗಳು, ರೆಸಾರ್ಟ್ಸ್, ಹೋಂಸ್ಟೇ, ಕಲ್ಯಾಣ ಮಂಟಪಗಳ ಮಾಲೀಕರಿಗೆ ಈ ಬಗ್ಗೆ ಮಾಹಿತಿ ನೀಡಿದ್ದು, ಅವರಿಂದ ಕ್ಷೇತ್ರದ ಮತದಾರರಲ್ಲದವರು ಅಥವಾ ಕ್ಷೇತ್ರದ ಚುನಾವಣಾ ಗುರುತಿನ ಚೀಟಿ ಇಲ್ಲದವರ ವಾಸ್ತವ್ಯಕ್ಕೆ ಅವಕಾಶ ನೀಡುವುದಿಲ್ಲ ಎಂದು ಪ್ರಮಾಣಪತ್ರ ಪಡೆಯಲಾಗುತ್ತಿದೆ ಎಂದರು.

ಮನೆಮನೆಗೆ ಪ್ರಚಾರಕ್ಕೆ ಅಡ್ಡಿಯಿಲ್ಲ: ಬಹಿರಂಗ ಪ್ರಚಾರ ಅಂತ್ಯಗೊಂಡ ನಂತರ ಮನೆ ಮನೆಗೆ ತೆರಳಿ ಪ್ರಚಾರ ಮಾಡಬಹುದು. ಮಾದರಿ ನೀತಿ ಸಂಹಿತೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು 16 ಎಸ್‌ಎಸ್‌ಟಿ ತಂಡ ಮತ್ತು 9 ಎಫ್‌ಎಸ್‌ಟಿ ತಂಡಗಳನ್ನು ನಿಯೋಜಿಸಲಾಗಿದೆ. ಚನ್ನಪಟ್ಟಣ ಕ್ಷೇತ್ರ ವ್ಯಾಪ್ತಿಯಲ್ಲಿ 276 ಮತಗಟ್ಟೆಗಳನ್ನು ರಚಿಸಲಾಗಿದ್ದು, ವೆಬ್ ಕಾಸ್ಟಿಂಗ್‌ಗೆ ಪ್ರಕ್ರಿಯೆಗೆ ವ್ಯವಸ್ಥೆ ಮಾಡಿಕೊಳ್ಳಲಾಗಿದೆ. 119 ಮೈಕ್ರೋ ವೀಕ್ಷಕರನ್ನು ನಿಯೋಜಿಸಲಾಗಿದೆ. ಅವರು ಚುನಾವಣಾ ವೀಕ್ಷಕರ ನಿರ್ದೇಶನದಂತೆ ಕಾರ್ಯನಿರ್ವಹಿಸುತ್ತಾರೆ ಎಂದು ಜಿಲ್ಲಾಧಿಕಾರಿ ಮಾಹಿತಿ ನೀಡಿದರು. ನ.11ರ ಸೋಮವಾರ ಸಂಜೆ 6 ಗಂಟೆಯಿಂದ ನ.14ರ ಗುರುವಾರ ಬೆಳಗ್ಗೆ 6 ಗಂಟೆಯವರೆಗೆ ಮದ್ಯ ಮಾರಾಟ ನಿಷೇಧಿಸಿ ಶುಷ್ಕ ದಿನ (ಡ್ರೈಡೇ) ಎಂದು ಘೋಷಿಸಲಾಗಿದೆ ಎಂದು ತಿಳಿಸಿದರು.

ಚನ್ನಪಟ್ಟಣ ಉಪಚುನಾವಣೆ ಸಂಬಂಧ ರಾಮನಗರ ಜಿಲ್ಲಾಧಿಕಾರಿ ಯಶವಂತ ಗುರುಕರ್ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ನೀತಿಸಂಹಿತೆ ಜಾರಿಯಲ್ಲಿರುವುದರಿಂದ ವ್ಯಕ್ತಿಯೊಬ್ಬರು ಗರಿಷ್ಠ 50,000 ರು. ಗಳ ನಗದು ಸಾಗಿಸಬಹುದು. ಅದಕ್ಕೂ ಹೆಚ್ಚಿನ ಮೊತ್ತ ಕೊಂಡೊಯ್ಯಬೇಕಾದರೆ ಸೂಕ್ತ ದಾಖಲೆ ಹೊಂದಿರಬೇಕು.

-ಯಶವಂತ್ ಗುರುಕರ್, ರಾಮನಗರ ಜಿಲ್ಲಾ ಚುನಾವಣಾಧಿಕಾರಿ

ಅರೆಸೈನಿಕ ಪಡೆಗಳ ಆಗಮನ

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಾರ್ತಿಕ್‌ರೆಡ್ಡಿ ಮಾತನಾಡಿ, ಚನ್ನಪಟ್ಟಣ ಕ್ಷೇತ್ರಕ್ಕೆ ಈಗಾಗಲೇ 8 ಪ್ಯಾರಾ ಮಿಲಿಟರಿ ತಂಡ ಆಗಮಿಸಿದೆ, ಅದರಲ್ಲಿ 7 ಪಡೆಗಳನ್ನು 197 ಮತಗಟ್ಟೆಗಳ ಬಂದೋಬಸ್ತ್‌ಗೆ ನಿಯೋಜಿಸಲಾಗಿದೆ, 119 ಸೂಕ್ಷ್ಮ ಮತಗಟ್ಟೆಗಳನ್ನು ಸ್ಥಾಪಿಸಲಾಗಿದ್ದು, ಅದರಲ್ಲಿ ಒಬ್ಬರು ಪೊಲೀಸ್ ಹಾಗೂ ಒಬ್ಬರು ಗೃಹ ರಕ್ಷಕರು ಇರುತ್ತಾರೆ. ಸಾಮಾನ್ಯ ಮತಗಟ್ಟೆಗಳಿಗೆ ಪೊಲೀಸ್ ಸಿಬ್ಬಂದಿ ಹಾಗೂ 54 ಕ್ಲಸ್ಟರ್ ಮತಗಟ್ಟೆಗಳಿಗೆ ಎಎಸ್‌ಐ ಱ್ಯಾಂಕ್ ಅಧಿಕಾರಿಗಳನ್ನು ಭದ್ರತೆಗಾಗಿ ನಿಯೋಜಿಸಲಾಗಿದೆ ಎಂದು ವಿವರಿಸಿದರು. ನೀತಿ ಸಂಹಿತೆ ಉಲ್ಲಂಘನೆಯ ಒಟ್ಟು 14 ಪ್ರಕರಣಗಳನ್ನು ದಾಖಲಿಸಲಾಗಿದ್ದು, ಆ 14 ಪ್ರಕರಣಗಳನ್ನು ಎಫ್‌ಐಆರ್ ಮಾಡಲಾಗಿದೆ ಎಂದರು.

ಕೊತ್ವಾಲ್ ಬಳಿ ಕೆಲಸಕ್ಕಿದ್ದ ಡಿಕೆಶಿ

ಪಾಂಡವಪುರ: ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸರಿಸಾಟಿಯಾಗುವ ನಾಯಕ ಇಂಡಿಯಾ ಒಕ್ಕೂಟದಲ್ಲಿ ಒಬ್ಬ ನಾಯಕನಿಲ್ಲ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಆಕ್ರೋಶ ಹೊರಹಾಕಿದರು. ಚಿನಕುರಳಿಯ ರಾಮೇಶ್ವರ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದ ನಂತರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು. ಚುನಾವಣೆಯ ಪ್ರಚಾರದ ವೇಳೆ ನಿಖಿಲ್ ಭಾವುಕರಾದ ವಿಚಾರವಾಗಿ ಮಾತನಾಡುವ ಡಿ.ಕೆ.ಶಿವಕುಮಾರ್ ಎಂದಾದರೂ ಕಣ್ಣೀರು ಹಾಕಿದ್ದಾರಾ.. ರೌಡಿ ಕೊತ್ವಾಲ್ ರಾಮಚಂದ್ರನ ಹತ್ತಿರ ನೂರು ರುಪಾಯಿಗೆ ಕೆಲಸ ಮಾಡುತ್ತಿದ್ದ ಡಿ.ಕೆ.ಶಿವಕುಮಾರ್ ಇವತ್ತು ನೆಹರು, ಇಂದಿರಾಗಾಂಧಿ ಆಳಿದ ಪಕ್ಷದ ಅಧ್ಯಕ್ಷನಾಗಿದ್ದಾನೆ. ದೇಶಕ್ಕೆ ಅನ್ನ ನೀಡುವ ರೈತನಿಗೆ ನೋವಾದಾಗ ಹೃದಯ ಮರುಗಿ ನಮಗೆ ಕಣ್ಣೀರು ಬರುತ್ತಿದೆ. ರೈತನಿಗೆ ನೋವಾದರೆ ನಮ್ಮ ವಂಶ ಕಣ್ಣೀರು ಹಾಕುತ್ತಿದೆ. ನಮಗೆ ಬಡವರ ಬಗ್ಗೆ ನೋವಿದೆ. ಕಣ್ಣೀರು ಹಾಕುವುದು ನಮ್ಮ ತಂದೆಯಿಂದಲೇ ಬಂದಿದೆ ಎಂದು ಗೌಡರು ತಿಳಿಸಿದರು.

ಸಂಡೂರು: 18 ಕಡೆ ಸಿಎಂ ಪ್ರಚಾರ

ಸಂಡೂರು: ಸಿಎಂ ಸಿದ್ದರಾಮಯ್ಯ ಸಂಡೂರು ಕ್ಷೇತ್ರದ 18 ಸ್ಥಳಗಳಲ್ಲಿ ಪ್ರಚಾರ ನಡೆಸಲಿದ್ದಾರೆ. ಅವರು ಕ್ಷೇತ್ರದಲ್ಲೇ ಉಳಿದು ಪ್ರಚಾರ ಮಾಡುತ್ತಾರೆ, ರಾಜ್ಯದ ಪ್ರತಿಯೊಬ್ಬ ನಾಯಕರೂ ಸಹ ಆಗಮಿಸಿ ಪ್ರಚಾರ ನಡೆಸುವ ಮೂಲಕ ಅಭ್ಯರ್ಥಿ ಅನ್ನಪೂರ್ಣ ಅವರನ್ನು ಗೆಲ್ಲಿಸುತ್ತಾರೆ ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ತಿಳಿಸಿದ್ದಾರೆ. ಪಕ್ಷದ ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ಜನತೆಗೆ ತಲುಪಿಸುತ್ತೇವೆ. ಪ್ರಮುಖವಾಗಿ ಬಳ್ಳಾರಿ ಜಿಲ್ಲೆಗೆ ಕೆಪಿಟಿಸಿಎಲ್ ಜಾರಿಗೆ ತಂದಿದ್ದು, ಇಂದು ಜಿಂದಾಲ್ ಕಂಪನಿ ಪ್ರಾರಂಭಿಸಲು ಕಾರಣವಾಗಿದ್ದು ಕಾಂಗ್ರೆಸ್ ಪಕ್ಷ ಎಂದರು.

ವಿಶ್ವವಾಣಿ

ಸಂಪಾದಕೀಯ

ನೌಕರರ ಆತ್ಮಹತ್ಯೆ ಕಳವಳಕಾರಿ

ಕಳೆದ ಮಂಗಳವಾರ ಬೆಳಗಾವಿಯ ತಹಸೀಲ್ದಾರ್ ಕಚೇರಿಯಲ್ಲೇ ದ್ವಿತೀಯ ದರ್ಜೆ ಸಹಾಯಕ ರುದ್ರಣ್ಣ ಯಡವಣ್ಣವರ ಆತ್ಮಹತ್ಯೆ ಮಾಡಿಕೊಂಡಿರುವುದು ಇಡೀ ನೌಕರರ ವಲಯದಲ್ಲಿ ಆತಂಕ ಮೂಡಿಸಿದೆ. ಇತ್ತೀಚಿನ ದಿನಗಳಲ್ಲಿ ರಾಜ್ಯ ಸರಕಾರದ ಅಧಿಕಾರಿಗಳ ಆತ್ಮಹತ್ಯೆ ಘಟನೆಗಳು ಹೆಚ್ಚುತ್ತಿರುವುದು ತೀವ್ರ ಕಳವಳಕಾರಿ. ಅಧಿಕಾರಿಗಳಿಗೆ ಕೆಲಸಕ್ಕೆ ಪೂರಕವಲ್ಲದ ವಾತಾವರಣ ಸೃಷ್ಟಿಯಾಗಿರುವುದು ಈ ಘಟನೆಗಳಿಂದ ಸ್ಪಷ್ಟವಾಗುತ್ತಿದೆ. ಅಧಿಕಾರಿಗಳ ಆತ್ಮಹತ್ಯೆ ಪ್ರಕರಣಗಳ ಪೈಕಿ ಪೊಲೀಸ್ ಇಲಾಖೆಯ ಉದ್ಯೋಗಿಗಳ ಪ್ರಮಾಣ ಜಾಸ್ತಿ ಇದೆ. ಯಾದಗಿರಿಯ ಎಸ್ಐ ಪರಶುರಾಮ್, ಬೆಂಗಳೂರಿನ ಸಿಸಿಬಿ ಇನ್ಸ್‌ಪೆಕ್ಟರ್ ತಿಮ್ಮೇಗೌಡ ಆತ್ಮಹತ್ಯೆಗೆ ಶರಣಾಗಿರುವುದು ಅದಕ್ಕೆ ಇತ್ತೀಚಿನ ಉದಾಹರಣೆಗಳು. ಈ ಆತ್ಮಹತ್ಯೆಗಳಿಗೆ ಕೆಲಸದಲ್ಲಿ ಹೆಚ್ಚಿನ ಒತ್ತಡ, ಹಣಕಾಸಿನ ಅಕ್ರಮಗಳು, ಕೌಟುಂಬಿಕ/ಬಾಹ್ಯ ಸಂಬಂಧಗಳು ಮುಂತಾಗಿ ಹಲವು ಕಾರಣಗಳಿರಬಹುದು. ಆದರೆ ಇವರೆಲ್ಲ ಪ್ರಾಣ ಕಳೆದುಕೊಳ್ಳುವ ಹಂತಕ್ಕೆ ಹೋಗುತ್ತಿರುವುದು ಖಂಡಿತ ಅಪೇಕ್ಷಣೀಯವಲ್ಲ. ಆಡಳಿತಶಾಹಿಯನ್ನು ಚುರುಕುಗೊಳಿಸುವುದೆಂದರೆ ಕೇವಲ ನೌಕರರನ್ನು ತರಾಟೆಗೆ ತೆಗೆದುಕೊಳ್ಳುವುದಲ್ಲ ಅಥವಾ ಅವರ ಮೇಲೆ ಅತಿಯಾದ ಒತ್ತಡ ಹೇರುವುದಲ್ಲ. ಸರಕಾರಿ ಇಲಾಖೆಗಳಲ್ಲಿ ಉತ್ತರದಾಯಿತ್ವದ ಕೊರತೆ ಇದ್ದು, ಕೊನೆಯ ಕ್ಷಣದಲ್ಲಿ ತಪ್ಪನ್ನು ನೌಕರರ ತಲೆಗೆ ಕಟ್ಟಲಾಗುತ್ತದೆ. ಇಲ್ಲವೆ, ಉಸಿರುಗಟ್ಟಿಸುವಂಥ ವಾತಾವರಣ ಸೃಷ್ಟಿಯಾಗುವುದರಿಂದ ಸಿಬ್ಬಂದಿ ಕೈಚೆಲ್ಲುವಂತಾಗುತ್ತದೆ. ಅದೆಷ್ಟೋ ಬಾರಿ ಸಮಸ್ಯೆಗಳನ್ನು ಸಂಬಂಧಪಟ್ಟವರ ಗಮನಕ್ಕೆ ತಂದರೂ ಸೂಕ್ತ ಸ್ಪಂದನೆ ಸಿಗುವುದಿಲ್ಲ. ಅಂಥ ಸಂದರ್ಭದಲ್ಲಿ ಹತಾಶೆಗೆ ಒಳಗಾಗಿ, ಆತ್ಮಹತ್ಯೆಯಂಥ ನಿರ್ಧಾರ ತಳೆಯುತ್ತಾರೆ. ಆತ್ಮಹತ್ಯೆ ನಡೆದ ಬಳಿಕ ತನಿಖೆಯ ಪ್ರಹಸನ ನಡೆಸುವ ಬದಲು, ಸಮಸ್ಯೆಯನ್ನು ಆರಂಭಿಕ ಹಂತದಲ್ಲೇ ಪರಿಹರಿಸಲು ಯತ್ನಿಸಬೇಕು. ಈ ದೃಷ್ಟಿಯಲ್ಲಿ ಅಧಿಕಾರಿಗಳನ್ನು ವಿಶ್ವಾಸಕ್ಕೆ ಪಡೆದುಕೊಳ್ಳಬೇಕು. ಆತ್ಮಹತ್ಯೆ ಘಟನೆಗಳು ಹೆಚ್ಚುತ್ತಿರುವ ಇಂಥ ಸಂದರ್ಭದಲ್ಲಿ ನೌಕರರು ಧೃತಿಗೆಡುವಂತಾಗಬಾರದು. ಈ ನಿಟ್ಟಿನಲ್ಲಿ ರಾಜ್ಯ ಸರಕಾರ ತನ್ನ ನೌಕರರು ಮತ್ತು ಅಧಿಕಾರಿಗಳ ಮನೋಸ್ಥೈರ್ಯವನ್ನು ಹೆಚ್ಚಿಸಲು ಮುಂದಾಗಬೇಕು. ಅದಕ್ಕಾಗಿ, ಸೂಕ್ತ ಸ್ಪಂದನೆ, ಕೌನ್ಸೆಲಿಂಗ್ ಮತ್ತು ಮಾನಸಿಕ ಆರೋಗ್ಯ ಕಾಪಾಡುವ ಕ್ರಮಗಳನ್ನು ಅನುಷ್ಠಾನಕ್ಕೆ ತರಬೇಕು. ಮುಂದಿನ ದಿನಗಳಲ್ಲಿ ಮತ್ತೆ ಅಧಿಕಾರಿ ಅಥವಾ ನೌಕರರ ಆತ್ಮಹತ್ಯೆಯಂಥ ಕಹಿಘಟನೆಗಳು ನಡೆಯದಂತೆ ಕಾಳಜಿ ವಹಿಸಬೇಕು.

ಸೊಂಪಾದಕೀಯ

ಸಿಕ್ಕಿಬಿದ್ದ ಸಿಕ್ಕಿಂ 'ದಂ'ಪತಿ

ಬೆಂಗಳೂರು ಅಂದ್ರೆ ಅದಕ್ಕೆ ಗಾರ್ಡನ್ ಸಿಟಿ ಎಂಬ ಹೆಸರಿದೆ ಅನ್ನೋದು ಎಲ್ಲರಿಗೂ ಗೊತ್ತು. ನಮ್ಮ ನಗರ ಟ್ರಾಫಿಕ್ ಜಾಮ್‌ಗೆ ಎಷ್ಟೇ ಹೆಸರುವಾಸಿಯಾಗಿದ್ದರೂ ಅದೇ ಟ್ರಾಫಿಕ್ ಜಾಮಿನಲ್ಲಿ ಅತ್ತಿತ್ತ ಕಣ್ಣಾಡಿಸಿದರೆ ಹಸಿರು ಗಿಡಗಳು ಕಾಣಿಸುವುದು ಗ್ಯಾರಂಟಿ. ಇದೇ ಕಾರಣಕ್ಕೆ ಅದೆಷ್ಟೇ ವೆಹಿಕಲ್‌ಗಳು ರಸ್ತೆ ತುಂಬಾ ಓಡಾಡಿದರೂ ಬೆಂಗಳೂರಿನ ವಾತಾವರಣ ದೆಹಲಿಯಷ್ಟು ಕಲುಷಿತಗೊಂಡಿಲ್ಲ. ಇನ್ನು ಕೇವಲ ರಸ್ತೆಗಳ

ಅಕ್ಕ ಪಕ್ಕದಲ್ಲಿ ಅಷ್ಟೇ ಅಲ್ಲದೆ ಬೆಂಗಳೂರಿನ ಜನ ತಮ್ಮ ಮನೆಗಳಲ್ಲಿ ಕೂಡ ಗಿಡಗಳನ್ನು ಬೆಳೆಸುತ್ತಾರೆ. ಎಷ್ಟೇ ಆಧುನಿಕ ಮನೆಗಳಾದರೂ ಕನಿಷ್ಠಪಕ್ಷ ಟೆರೇಸಿನ ಮೇಲೆ, ಬಾಲ್ಕನಿಯಲ್ಲಿ ಪಾಟ್‌ಗಳಲ್ಲಿ ಗಿಡಗಳನ್ನು ಬೆಳೆಸುತ್ತಾರೆ. ಆದರೆ ಸಿಕ್ಕಿಂ ಮೂಲದ ಈ ದಂಪತಿ ಈಗ ಗಿಡಗಳನ್ನು ಬೆಳೆಸಿ ಪೊಲೀಸರ ಕೈಗೆ ಸಿಕ್ಕಿ ಬಿದ್ದಿದ್ದಾರೆ. 'ಗಿಡ ಬೆಳೆಸಿದರೆ ಪೊಲೀಸರು ಅರೆಸ್ಟ್ ಮಾಡ್ತಾರಾ?' ಅಂತ ನೀವು ಕೇಳಬಹುದು. ಆದರೆ ಈ ದಂಪತಿ ಬೆಳೆಸಿದ್ದು ಮಾಮೂಲಿ ಗಿಡ ಅಲ್ಲ, ಅದು ಗಾಂಜಾ ಗಿಡ. 'ಫಾಸ್ಟ್ ಫುಡ್' ವ್ಯವಹಾರ ಮಾಡುವ ಈ ದಂಪತಿ 'ಫಾಸ್ಟ್ ದುಡ್' ಮಾಡುವ ಸಲುವಾಗಿ, ಗಾಂಜಾ ಗಿಡ ಮಾರಿ ಹಣ ಸಂಪಾದನೆ ಮಾಡಲು ಈ ಕೆಲಸ ಮಾಡಿದ್ದಾಗಿ ಒಪ್ಪಿಕೊಂಡಿದ್ದಾರೆ. ಅಷ್ಟೇ ಮಾಡಿದ್ದರೆ ಈ ದಂಪತಿ ಬಹುಶಃ ಪೊಲೀಸರ ಅತಿಥಿಗಳಾಗುತ್ತಿರಲಿಲ್ಲ. ಬಾಲ್ಕನಿಯಲ್ಲಿ ಬೆಳೆಸಿರುವ ಗಿಡಗಳನ್ನು ವಿಡಿಯೋ ಮಾಡಿ ಅದನ್ನು ಸೋಶಿಯಲ್ ಮೀಡಿಯಾದಲ್ಲಿ ಹಾಕಿದ್ದರಿಂದ ಅಲ್ಲಿದ್ದ ಗಾಂಜಾ ಗಿಡ ಕೂಡ ಅನೇಕರ ಕಣ್ಣಿಗೆ ಬಿದ್ದಿದೆ. ಅದನ್ನು ನೋಡಿದ ಕೆಲವರು ಪೊಲೀಸರಿಗೆ ಈ ಬಗ್ಗೆ ಮಾಹಿತಿ ಕೊಟ್ಟಿದ್ದಾರೆ. ಹಾಗಾಗಿ ಪೊಲೀಸರು ಕೂಡ ಈ ದಂಪತಿಯ ಮನೆಗೆ ಭೇಟಿ ಕೊಟ್ಟಿದ್ದಾರೆ. ಪೊಲೀಸರು ಬರುವ ಮುನ್ನ ಸಂಬಂಧಿಕರೊಬ್ಬರಿಂದ ಮಾಹಿತಿ ಗೊತ್ತಾಗಿ ಗಾಂಜಾ ಗಿಡಗಳನ್ನು ಕಿತ್ತು ಬೇರೆಡೆ ಹಾಕಿದ್ದರು ಕೂಡ ಪಾಟ್‌ನಲ್ಲಿದ್ದ ಕೆಲವು ಎಲೆಗಳು ಅಲ್ಲಲ್ಲೇ ಬಿದ್ದಿದ್ದರಿಂದ ಈ ದಂಪತಿ ಅರೆಸ್ಟ್ ಆಗಿದ್ದಾರೆ. ಒಟ್ಟಿನಲ್ಲಿ ಈ ದಂಪತಿ ಕಿಕ್ ಕೊಡುವ 'ದಂ' ಆಸೆಗೆ ಬಿದ್ದು ಪೊಲೀಸರಿಂದ ಬಂಧನಕ್ಕೆ ಒಳಗಾಗಿರುವುದು ಸದ್ಯದ ಸುದ್ದಿ.

ಸಂಪಾದಕರ ಸದ್ಯಶೋಧನೆ

ಉತ್ತಮ ನಾಯಕ ಯಾರು?

ದೊಡ್ಡ ದೊಡ್ಡ ಸಂಸ್ಥೆಗಳಲ್ಲಿ ನೂರಾರು ಸಣ್ಣ ಸಣ್ಣ ತಂಡಗಳಿರುತ್ತವೆ. ಅವು ಪ್ರತ್ಯೇಕವಾದ ಕೆಲಸಗಳಲ್ಲಿ ನಿರತವಾಗಿರುತ್ತವೆ. ಒಂದು ತಂಡ ಮತ್ತೊಂದರ ಜತೆ ಕೂಡಿ ಕೆಲಸ ಮಾಡಬೇಕಾಗುತ್ತದೆ. ಪ್ರತಿ ತಂಡಕ್ಕೂ ಒಬ್ಬ ನಾಯಕನಿರುತ್ತಾನೆ. ಆತ ತನ್ನ ಮೇಲಿನ ನಾಯಕನಿಗೆ ವರದಿ ಮಾಡಿಕೊಳ್ಳುತ್ತಾನೆ. ಆತ ಇನ್ನೊಬ್ಬರಿಗೆ ವರದಿ ಮಾಡಿಕೊಳ್ಳುತ್ತಾನೆ. ಕೊನೆಯಲ್ಲಿ ಎಲ್ಲರೂ ಮುಖ್ಯಸ್ಥರಿಗೆ ಅಥವಾ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗೆ ವರದಿ ಮಾಡಿಕೊಳ್ಳುತ್ತಾರೆ. ಸಾಮಾನ್ಯವಾಗಿ ಎಲ್ಲ ದೊಡ್ಡ ಸಂಸ್ಥೆಗಳು ಕಾರ್ಯನಿರ್ವಹಿಸುವುದೇ ಹೀಗೆ. ಒಂದು ತಂಡದ ನಾಯಕನ ಯಶಸ್ಸು ಅವನ ಜತೆಯಲ್ಲಿ ಕೆಲಸ ಮಾಡುವ ಸಿಬ್ಬಂದಿಯ ಕಾರ್ಯಕ್ಷಮತೆಯನ್ನು ಅವಲಂಬಿಸಿರುತ್ತದೆ. ಉತ್ತಮ ಟೀಮ್ ಲೀಡರ್ ಯಾವತ್ತೂ ತನ್ನ ತಂಡದ ಯಶಸ್ಸನ್ನು ತಾನು ತೆಗೆದುಕೊಳ್ಳುವುದಿಲ್ಲ. ಅದರ ಸಿಂಹಪಾಲನ್ನು ತನ್ನ ಸಹೋದ್ಯೋಗಿಗಳಿಗೆ ನೀಡುತ್ತಾನೆ. ಇದು ಒಬ್ಬ ಉತ್ತಮ ಟೀಮ್ ಲೀಡರ್‌ನ ಲಕ್ಷಣ. ಆದರೆ ಕೆಲವು ಟೀಮ್ ಲೀಡರುಗಳು, ಯಶಸ್ಸನ್ನು ಬೇರೆಯವರಿಗೆ ಕೊಡುವುದೇ ಇಲ್ಲ. ಫೋರ್ಡ್ ಕಾರು ಕಂಪನಿಯಲ್ಲಿ ಡೊನಾಲ್ಡ್ ಪೀಟರ್ಸನ್ ಎಂಬ ಟೀಮ್ ಲೀಡರ್ ಇದ್ದ. ಆತ ಕಾರಿನ ಬೇರಿಂಗ್ ತಯಾರಿಕೆಯ ವಿಭಾಗದ ಮುಖ್ಯಸ್ಥನಾಗಿದ್ದ. ಕಾರು ತಯಾರಿಕೆಯಲ್ಲಿ ಇತರ ಘಟಕಗಳಿಗೆ ಹೋಲಿಸಿದರೆ ಇದು ಅತಿ ಸಣ್ಣ, ಆದರೆ ಅತಿ ಮಹತ್ವದ ವಿಭಾಗ. ಆ ವಿಭಾಗದಲ್ಲಿ ಹೆಚ್ಚು ಕಾಲ ಕೆಲಸ ಮಾಡಲು ಯಾರೂ ಸಿದ್ಧರಿರುವುದಿಲ್ಲ. ಹೆಚ್ಚೆಂದರೆ ಎರಡು ವರ್ಷ ಕೆಲಸ ಮಾಡಿ ಬೇರೆ ವಿಭಾಗಗಳನ್ನು ಬಯಸುತ್ತಾರೆ. ಆದರೆ ಡೊನಾಲ್ಡ್ ಅದೊಂದೇ ವಿಭಾಗದಲ್ಲಿ ಸುಮಾರು ಎಂಟು ವರ್ಷ ಕೆಲಸ ಮಾಡಿದ. ಆತನ ಜತೆಯಲ್ಲಿ ಕೆಲಸ ಮಾಡಲು ಎಲ್ಲರೂ ಇಷ್ಟಪಡುತ್ತಿದ್ದರು. ಕಾರಣ ಆತ ಎಲ್ಲರನ್ನೂ ಕೆಲಸಕ್ಕೆ ಹುರಿದುಂಬಿಸುತ್ತಿದ್ದ ಮತ್ತು ತನ್ನ ತಂಡದ ಶ್ರೇಯಸ್ಸಿನಲ್ಲಿ ಎಲ್ಲವನ್ನೂ ಯಾರಿಗೆ ಸಲ್ಲಬೇಕೋ ಅವರಿಗೆ ಸಲ್ಲಿಸುತ್ತಿದ್ದ. ತನ್ನ ಮೇಲಧಿಕಾರಿಗಳ ಮುಂದೆ ತನ್ನ ಸಹೋದ್ಯೋಗಿಗಳನ್ನು ಬಾಯ್ತುಂಬ ಹೊಗಳುತ್ತಿದ್ದ. ಈ ದಕ್ಷತೆಗೆ ತನ್ನ ತಂಡದ ಸದಸ್ಯರೇ ಕಾರಣ ಎಂದು ಹೇಳುತ್ತಿದ್ದ. ತಾನು ನಿಮಿತ್ತ ಮಾತ್ರ ಎಂದು ಯಶಸ್ಸಿನ ಸರ್ವಪಾಲನ್ನು ತಂಡದ ಸದಸ್ಯರಿಗೆ ಸಮರ್ಪಿಸುತ್ತಿದ್ದ. ಈ ದೊಡ್ಡ ಗುಣದಿಂದ ಡೊನಾಲ್ಡ್ ಎಲ್ಲರ ಪ್ರೀತಿಗೆ ಪಾತ್ರನಾಗಿದ್ದ. ಇಡೀ ಸಂಸ್ಥೆಯಲ್ಲಿ ಎಲ್ಲ ವಿಭಾಗಗಳ ಮುಖ್ಯಸ್ಥರ ದಕ್ಷತೆಯ ಸೂಚ್ಯಂಕದಲ್ಲಿ ಡೊನಾಲ್ಡ್ ಅಗ್ರಗಣ್ಯನಾಗಿದ್ದ. ಯಾರೇ ಕಂಪನಿಯ ಮುಖ್ಯಸ್ಥರಾಗಿ ಬಂದರೂ ಡೊನಾಲ್ಡ್‌ನ ಬಗ್ಗೆ ಮೆಚ್ಚುಗೆಯ ಮಾತುಗಳನ್ನು ಆಡುತ್ತಿದ್ದರು. ಒಮ್ಮೆ ಆ ಕಂಪನಿಗೆ ಒಬ್ಬ ಹೊಸ ಸಿಇಒ ಬಂದ. ಆತ ಡೊನಾಲ್ಡ್ ರಜೆ ಹೋದಾಗ, ಆತನ ವಿಭಾಗದ ಸದಸ್ಯರನ್ನು ಕರೆಯಿಸಿ, ಡೊನಾಲ್ಡ್‌ನಲ್ಲಿ ನಿಮಗೆ ಇಷ್ಟವಾಗದ ಗುಣ ಯಾವುದು ಎಂದು ಕೇಳಿದ. ಒಬ್ಬನೇ ಒಬ್ಬ ಆತನ ಬಗ್ಗೆ ನಕಾರಾತ್ಮಕವಾಗಿ ಮಾತಾಡಲಿಲ್ಲ. ಇಂಥ ಸಂದರ್ಭದಲ್ಲಿ ಕನಿಷ್ಠ ಒಬ್ಬರಾದರೂ ಅಪಸ್ವರ ಎತ್ತುತ್ತಾರೆ. ಆದರೆ ಡೊನಾಲ್ಡ್ ವಿಷಯದಲ್ಲಿ ಯಾರೂ ಚಕಾರ ಎತ್ತಲಿಲ್ಲ. ಸಂಸ್ಥೆಯ ಮುಖ್ಯಸ್ಥನಿಗೆ ಆಶ್ಚರ್ಯವಾಯಿತು. ಡೊನಾಲ್ಡ್‌ನನ್ನು ಕರೆಯಿಸಿದ ಮುಖ್ಯಸ್ಥ, ಆತನ ಅನುಪಸ್ಥಿತಿಯಲ್ಲಿ ನಡೆದುದನ್ನು ವಿವರಿಸಿದ. ಅದಕ್ಕೆ ಡೊನಾಲ್ಡ್ ಹೇಳಿದ, 'ಯಸ್ ಸರ್, ನನ್ನ ಯಶಸ್ಸಿನ ಸಿಂಹಪಾಲನ್ನು ನಾನು ನನ್ನ ಸಹೋದ್ಯೋಗಿಗಳಿಗೆ ನೀಡುತ್ತೇನೆ. ಅವರೇ ನನ್ನ ಶಕ್ತಿ. ನಾನು ನನ್ನ ಕೆಲಸದಲ್ಲಿ ಪ್ರೇರಣೆಯನ್ನು ಅವರಿಂದ ಪಡೆಯುತ್ತೇನೆ' ಎಂದ. ಮುಂದೆ ಆತ ಫೋರ್ಡ್ ಕಂಪನಿಯ ಸಿಇಒ ಮತ್ತು ಚೇರ್ಮನ್ ಆದ. ಯಾರು ತನ್ನ ಯಶಸ್ಸಿನಲ್ಲಿ ಬೇರೆಯವರಿಗೂ ಪಾಲು ಕೊಡುತ್ತಾರೋ, ಅವರು ಉತ್ತಮ ನಾಯಕರಾಗುತ್ತಾರೆ.

ಸೋರಸ್ ಬುಡಕ್ಕೆ ಬೆಂಕಿಯಿಟ್ಟ ಮಸ್ಕ್

ವೀಕೆಂಡ್ ವಿತ್ ಮೋಹನ್

ಮೋಹನ್ ವಿಶ್ವ

camohanbn@gmail.com

ಅಮೆರಿಕದ ಅಧ್ಯಕ್ಷೀಯ ಚುನಾವಣೆಯನ್ನು ಇಡೀ ಜಗತ್ತೇ ನೋಡುತ್ತಿತ್ತು. ಈ ಚುನಾವಣೆಯಲ್ಲಿ ರಾಷ್ಟ್ರೀಯವಾದಿ ಟ್ರಂಪ್ ಎರಡನೇ ಬಾರಿಗೆ ಜಯಗಳಿಸಿದ್ದಾರೆ. ಜಗತ್ತಿನ ಹಳೆಯ ಪ್ರಜಾಪ್ರಭುತ್ವ ದೇಶ ವೆಂಬ ಹೆಗ್ಗಳಿಕೆಯಿರುವ ಅಮೆರಿಕದ ಚುನಾವಣೆ ಭಾರತದ ಚುನಾವಣೆಯಂತಿರುವುದಿಲ್ಲ, ಅದನ್ನು ಅರ್ಥಮಾಡಿಕೊಳ್ಳುವುದು ಅಷ್ಟು ಸುಲಭವಲ್ಲ.

2ನೇ ಮಹಾಯುದ್ಧದ ನಂತರ ಜಗತ್ತಿನ ದೊಡ್ಡಣ್ಣನಾಗಿ ಹೊರಹೊಮ್ಮಿದ ಅಮೆರಿಕ, ಸತತ 8 ದಶಕಗಳ ಕಾಲ ಈ ಸ್ಥಾನವನ್ನು ಉಳಿಸಿಕೊಂಡಿದೆ. ಅಮೆರಿಕದಲ್ಲಿ ನಡೆಯುವ ಅನೇಕ ವಿದ್ಯಮಾನಗಳು ಜಾಗತಿಕವಾಗಿ ಹಲವು ವಿಷಯಗಳ ಮೇಲೆ ಪರಿಣಾಮ ಬೀರುತ್ತವೆ. ಅಮೆರಿಕದ ಚುನಾವಣೆ ಜಗತ್ತಿನ ಪ್ರಬಲ ಸಂಘಟನೆಗಳ ಮೇಲೂ ದೊಡ್ಡ ಮಟ್ಟದಲ್ಲಿ ಪ್ರಭಾವ ಬೀರುವುದಿದೆ. ಜಗತ್ತನ್ನು ತನ್ನ ಹತೋಟಿಯಲ್ಲಿಟ್ಟುಕೊಳ್ಳಲು ಕಳೆದ 8 ದಶಕಗಳಿಂದ ಅನೇಕ ಸಂಘಟನೆಗಳನ್ನು ಹುಟ್ಟುಹಾಕಿರುವ ಅಮೆರಿಕ, ತನ್ನ ಪಾಲುದಾರ ದೇಶಗಳ ನೀತಿಗಳನ್ನು ಅನೇಕ ಬಾರಿ ನಿಯಂತ್ರಿಸುತ್ತದೆ. ಅಮೆರಿಕದ ಇತಿಹಾಸವನ್ನು ಗಮನಿಸಿದರೆ, ಚುನಾವಣೆಯಲ್ಲಿ ಗೆದ್ದು ಗದ್ದುಗೆಯೇರಿದ ಅಧ್ಯಕ್ಷರು ತಮ್ಮ ಅಧಿಕಾರಾವಧಿಯಲ್ಲಿ ಒಮ್ಮೆಯಾದರೂ ಯುದ್ಧಮಾಡಿರುವುದು ಕಂಡುಬರುತ್ತದೆ. ಆದರೆ, ಯುದ್ಧ ಮಾಡದೇ 5 ವರ್ಷಗಳ ಆಡಳಿತ ಕೊಟ್ಟಂಥ ಮೊದಲ ಅಧ್ಯಕ್ಷ ಡೊನಾಲ್ಡ್ ಟ್ರಂಪ್. ಚುನಾವಣೆಯಲ್ಲಿ 2ನೇ ಬಾರಿಗೆ ಗೆದ್ದಿರುವ ಟ್ರಂಪ್ ತಮ್ಮ ನಿಲುವನ್ನು ಪುನರುಚ್ಚರಿಸಿದ್ದು, 'ಹೊಸ ಯುದ್ಧವನ್ನು ಪ್ರಾರಂಭಿಸುವುದಿಲ್ಲ' ಎಂದಿದ್ದಾರೆ. ಆದರೆ, ಈಗಾಗಲೇ ಜಾಗತಿಕ ಮಟ್ಟದಲ್ಲಿ ನಡೆಯುತ್ತಿರುವ ಯಾವ ಯುದ್ಧವನ್ನು ನಿಲ್ಲಿಸುತ್ತೇನೆ ಎಂದು ಅವರು ಹೇಳಲಿಲ್ಲ. ಇಸ್ರೇಲ್ ಮತ್ತು ಪ್ಯಾಲೆಸ್ತೀನ್ ಯುದ್ಧದಲ್ಲಿ ಇಸ್ರೇಲ್ ಪರವಾಗಿ ಅಮೆರಿಕ ನಿಂತಿದೆ. ಇಸ್ರೇಲ್ ಮೇಲೆ ಇರಾನ್ ದಾಳಿಮಾಡಿದ ಮರುಕ್ಷಣ ಅಮೆರಿಕ ತನ್ನ ಸೇನೆಯನ್ನು ಇಸ್ರೇಲ್ ಬೆಂಬಲಕ್ಕೆ ಕಳುಹಿಸಿತ್ತು. ಅತ್ತ ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧದಲ್ಲಿ, ಉಕ್ರೇನ್ ಪರವಾಗಿ ನ್ಯಾಟೋ ಪಡೆಗಳಿಗೆ ಬೇಕಾಗಿರುವ ಶಸ್ತ್ರಾಸ್ತ್ರಗಳನ್ನು ಅಮೆರಿಕ ಪೂರೈಸಿತ್ತು.

2024ರ ಅಮೆರಿಕ ಅಧ್ಯಕ್ಷೀಯ ಚುನಾವಣೆಯಲ್ಲಿ ಅನೇಕ ನಾಟಕೀಯ ಬೆಳವಣಿಗೆಗಳಾದವು. ಚುನಾವಣಾ ಪ್ರಚಾರದ ವೇಳೆ ಟ್ರಂಪ್ ಮೇಲೆ ಹತ್ಯೆಯ ಯತ್ನ ನಡೆಯಿತು. ನಂತರ, ಟ್ರಂಪ್ ತಮ್ಮ ರೆಸಾರ್ಟ್‌ನಲ್ಲಿ ಗಾಲ್ಫ್ ಆಡುವಾಗ 2ನೇ ಬಾರಿಗೆ ಅವರ ಹತ್ಯೆಯ ಯತ್ನವಾಯಿತು. ಟ್ರಂಪ್ ಅವರ ಪ್ರಚೋದನಕಾರಿ ಟ್ವೀಟ್‌ನಿಂದ ತೊಂದರೆಯಾಗುತ್ತಿದೆಯೆಂಬ ಕುಂಟುನೆಪ ಹೇಳಿ ಟ್ವಿಟರ್ ಸಂಸ್ಥೆ 2021ರ ಜನವರಿಯಲ್ಲಿ ಟ್ರಂಪ್ ಖಾತೆಯನ್ನು ಶಾಶ್ವತವಾಗಿ ರದ್ದುಗೊಳಿಸಿತ್ತು. 2019ರ ಚುನಾವಣೆಯಲ್ಲಿ ಅಕ್ರಮ ನಡೆಸಲು ಮುಂದಾಗಿದ್ದರೆಂಬ ಆರೋಪದ ಮೇರೆಗೆ ಟ್ರಂಪ್‌ರನ್ನು 2023ರ ಆಗಸ್ಟ್‌ನಲ್ಲಿ ಬಂಧಿಸಲಾಯಿತು. 2019ರ ಚುನಾವಣಾ ಸೋಲಿನ ಬಳಿಕ, ಅಮೆರಿಕದ 'ಕ್ಯಾಪಿಟಲ್' ಕಟ್ಟಡದ ಮೇಲಾದ ದಾಳಿಯ ಪ್ರಕರಣದಲ್ಲಿ ಟ್ರಂಪ್‌ರನ್ನು ಬಂಧಿಸಲಾಗಿತ್ತು.

ಅಮೆರಿಕದ ಅಧ್ಯಕ್ಷರಾಗಿದ್ದ ಜೋ ಬೈಡನ್, 2024ರ ಚುನಾವಣಾ ಪ್ರಚಾರದಲ್ಲಿ ಹೆಚ್ಚಿನ ಪ್ರಭಾವ ಬೀರಲಿಲ್ಲ, ಅವರು ಮತ್ತೊಮ್ಮೆ ಅಧ್ಯಕ್ಷರಾಗುವುದು ಕಷ್ಟ ಎಂದು ಡೆಮಾಕ್ರಟಿಕ್ ಪಕ್ಷಕ್ಕೆ ಅನಿಸಿತ್ತು. ಆಗ ಚುನಾವಣಾ ಅಖಾಡಕ್ಕೆ ಕಮಲಾ ಹ್ಯಾರಿಸ್ ಧುಮುಕಿದರು. ಭಾರತದಲ್ಲಿ 2024ರ ಚುನಾವಣಾ ಪ್ರಚಾರದಲ್ಲಿ ಬಳಸಿದ ತಂತ್ರಗಾರಿಕೆಯನ್ನೇ ಡೆಮಾಕ್ರಟಿಕ್ ಪಕ್ಷ ಬಳಸುತ್ತಿರುವುದು ಕಂಡುಬಂತು. 'ಮೋದಿ ಅಧಿಕಾರಕ್ಕೆ ಬಂದರೆ ಸಂವಿಧಾನವನ್ನು ಬದಲಾಯಿಸುತ್ತಾರೆ' ಎಂಬ ಸುಳ್ಳನ್ನು 2024ರ ಚುನಾವಣೆಯಲ್ಲಿ ಕಾಂಗ್ರೆಸ್ ದೇಶದೆಲ್ಲೆಡೆ ಹಬ್ಬಿಸಿದ ರೀತಿಯಲ್ಲೇ, ಟ್ರಂಪ್ ವಿರುದ್ಧ ಡೆಮಾಕ್ರಟಿಕ್ ಪಕ್ಷ ಅಮೆರಿಕದಲ್ಲಿ ತಂತ್ರಗಾರಿಕೆಗೆ ಮುಂದಾಗಿತ್ತು. ಅಮೆರಿಕದ ಬಹುತೇಕ ಎಡಚರ ಬೆಂಬಲಿತ ಮಾಧ್ಯಮಗಳು 'ಚುನಾವಣೆಯಲ್ಲಿ ಕಮಲಾ ಹ್ಯಾರಿಸ್ ಜಯಗಳಿಸುತ್ತಾರೆ' ಎಂದಿದ್ದವು.

ಅಮೆರಿಕದ ಶತಕೋಟ್ಯಧಿಪತಿ ಜಾರ್ಜ್ ಸೋರಸ್, ಜಗತ್ತಿನ ಅನೇಕ ದೇಶಗಳ ಚುನಾವಣೆಯಲ್ಲಿ ತನ್ನ ಸಂಸ್ಥೆಯ ಮೂಲಕ ಪ್ರಭಾವ ಬೀರುವ ವಿಷಯ ಹೊಸದೇನಲ್ಲ. ತನ್ನ ಹಿತಾಸಕ್ತಿಗೆ ತಕ್ಕಂತೆ ದೇಶ ನಡೆಯಬೇಕೆಂಬ ಏಕೈಕ ಉದ್ದೇಶದಿಂದ ಈತ ಸಾವಿರಾರು ಕೋಟಿ ಹಣವನ್ನು ವಿವಿಧ ದೇಶಗಳ ಸಂಘ-ಸಂಸ್ಥೆಗಳಿಗೆ ನೀಡಿ, ಚುನಾವಣಾ ಪ್ರಕ್ರಿಯೆಯಲ್ಲಿ ನೇಪಥ್ಯದಲ್ಲಿ ಕೆಲಸ ಮಾಡುತ್ತಾನೆ. ಭಾರತದ 2024ರ ಚುನಾವಣೆಯಲ್ಲಿ ಸ್ಯಾಮ್ ಪಿತ್ರೋಡ ಮೂಲಕ ರಾಹುಲ್ ಗಾಂಧಿಯವರನ್ನು ಬಳಸಿಕೊಂಡು, ಮೋದಿಯವರನ್ನು ಸೋಲಿಸಲು ಆತ ಯತ್ನಿಸಿದ್ದ ವಿಷಯ ಚರ್ಚೆಗೆ ಬಂದಿತ್ತು. ಅಮೆರಿಕದ ಚುನಾವಣೆಯಲ್ಲಿ ಟ್ರಂಪ್‌ರನ್ನು ಸೋಲಿಸಿ ಡೆಮಾಕ್ರಟಿಕ್ ಪಕ್ಷವನ್ನು ಅಧಿಕಾರಕ್ಕೆ ತರಲು ಸೋರಸ್ ಹಲವು ತಿಂಗಳಿಂದ ತೆರೆಮರೆಯಲ್ಲಿ ಯತ್ನಿಸಿದ್ದ ಎಂದು ಅಲ್ಲಿನ ಮಾಧ್ಯಮಗಳು ವರದಿಮಾಡಿವೆ. ಸೋರಸ್ ತನ್ನ ಸಂಸ್ಥೆಯ ಮೂಲಕ, ಅಮೆರಿಕದ ಎಡಚರ ಬೆಂಬಲಿತ ಮಾಧ್ಯಮಗಳ ಮೇಲೆ ಸಂಪೂರ್ಣ ಹಿಡಿತ ಸಾಧಿಸುವಲ್ಲಿ ಯಶಸ್ವಿಯಾಗಿದ್ದ ಎನ್ನಲಾಗುತ್ತಿದೆ. ಸಮಾಜವಾದದ ಹೆಸರಿನಲ್ಲಿ ಕಮ್ಯುನಿಸ್ಟ್ ಸಿದ್ಧಾಂತವನ್ನು ಬೆಂಬಲಿಸಿಕೊಂಡಿರುವ ಈತ, 'ಭಾರತದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ದೇಶದ ಜನರ ಆಸ್ತಿಯನ್ನು ಲೆಕ್ಕ ಮಾಡಿಸಿ ಎಲ್ಲರಿಗೂ ಹಂಚುತ್ತೇವೆ' ಎಂದು ರಾಹುಲ್ ಗಾಂಧಿ ಹೇಳಿದ್ದರ ಸಿದ್ಧಾಂತದ ಹಿಂದಿನ 'ಮಾಸ್ಟರ್ ಮೈಂಡ್'. ಈತ ಅಮೆರಿಕದಲ್ಲೂ ಇದೇ ರಾಗವನ್ನು ಹಾಡಿದ್ದ.

ರಾಷ್ಟ್ರೀಯವಾದದ ವಿರೋಧಿಯಾದ ಜಾರ್ಜ್ ಸೋರಸ್, ಬಂಡವಾಳಶಾಹಿವಾದವಿಲ್ಲದೆ ಸಮಾಜವಾದವಿಲ್ಲವೆಂಬ ಕಲ್ಪನೆಯಿಲ್ಲದ ವ್ಯಕ್ತಿ. ಆಸ್ತಿಯನ್ನು ಸಂಪಾದಿಸಿದರಷ್ಟೇ ಸಮಾಜದಲ್ಲಿ ಹಂಚಲು ಸಾಧ್ಯವೆಂಬ ಕನಿಷ್ಠ ಅರಿವೂ ಈತನಿಗಿಲ್ಲ. ಅಮೆರಿಕದ ಅಧ್ಯಕ್ಷೀಯ ಚುನಾವಣೆಯಲ್ಲಿ ಟ್ರಂಪ್ ಅಧಿಕಾರಕ್ಕೆ ಬರುವುದನ್ನು ತನ್ನ ಹಣಬಲದ ಮೂಲಕ ತಡೆಯಲು ಸೋರಸ್ ತನ್ನ ಸಂಸ್ಥೆಯ ಮೂಲಕ ಅನೇಕ ಷಡ್ಯಂತ್ರಗಳನ್ನು ಮಾಡಿಸಿದ್ದಾನೆಂಬ ಚರ್ಚೆಗಳು ಬಹಳ ದಿನಗಳಿಂದ ನಡೆಯುತ್ತಿವೆ. ಇಂಥ ತಂತ್ರಗಾರಿಕೆಯ ವಿರುದ್ಧ ಬಹಿರಂಗವಾಗಿ ತಿರುಗಿಬಿದ್ದವರು ಎಲಾನ್ ಮಸ್ಕ್. ವಿದ್ಯುತ್‌ಚಾಲಿತ ವಾಹನಗಳ ಮೂಲಕ ವಿಶ್ವಾದ್ಯಂತ ಛಾಪು ಮೂಡಿಸಿರುವ ಮಸ್ಕ್, ಸೋರಸ್ ವಿರುದ್ಧ ಬಹಿರಂಗವಾಗಿಯೇ ಮಾತನಾಡತೊಡಗಿದರು. ಸೋರಸ್‌ನ ಸ್ವಹಿತಾಸಕ್ತಿಯ ಚಿಂತನೆಗಳು ಅಮೆರಿಕವನ್ನು ಮುಂದೊಂದು ದಿನ ದೊಡ್ಡ ಅಪಾಯಕ್ಕೆ ತಳ್ಳುತ್ತವೆಯೆಂಬ ಸ್ಪಷ್ಟ ಕಲ್ಪನೆ ಮಸ್ಕ್‌ಗಿತ್ತು. ಹೀಗಾಗಿ ಮಾಧ್ಯಮ ಸಂದರ್ಶನಗಳಲ್ಲಿ ಅವರು ನೇರವಾಗಿ ಸೋರಸ್ ಮತ್ತು ಅವನ ಯೋಚನೆಗಳ ವಿರುದ್ಧವೇ ಮಾತನಾಡುತ್ತಿದ್ದರು. ಎಲಾನ್ ಮಸ್ಕ್ ಒಡೆತನದ ಟೆಸ್ಲಾ ಕಂಪನಿಯಲ್ಲಿ ಸೋರಸ್ ತನ್ನ ಸಂಸ್ಥೆಯ ಮೂಲಕ 1,32,000 ಷೇರುಗಳನ್ನು ಹೊಂದಿದ್ದ. ಹೂಡಿಕೆದಾರರ ವಿರುದ್ಧ ಮಾತನಾಡಿದರೆ ತಪ್ಪಾಗುತ್ತದೆಯೆಂದು ತಿಳಿದು ಎಲಾನ್ ಮಸ್ಕ್ ಮೊದಮೊದಲು ಮಾತನಾಡಿರಲಿಲ್ಲ. ಆದರೆ 2022ರ ಅಂತ್ಯದಲ್ಲಿ, ಟೆಸ್ಲಾ ಕಂಪನಿಯಲ್ಲಿನ ತನ್ನ ಷೇರುಗಳನ್ನು ಮಾರಿಕೊಂಡು ಸೋರಸ್ ಹೊರಬಂದಾಕ್ಷಣ, ಆತನ ವಿರುದ್ಧ ಮಾತನಾಡಲು ಎಲಾನ್ ಮಸ್ಕ್‌ಗೆ ವೇದಿಕೆ ಸಿಕ್ಕಂತಾಯಿತು.

ಎಲಾನ್ ಮಸ್ಕ್ ಪ್ರಕಾರ, ಸೋರಸ್ ನಡೆಸುವ ಸಂಸ್ಥೆಯ ಹಿಂದೆ ಕೇವಲ ಒಬ್ಬ 'ಮಾಸ್ಟರ್ ಮೈಂಡ್' ಇಲ್ಲ, ಅವನ ಐವರು ಮಕ್ಕಳಿದ್ದಾರೆ. ಅಮೆರಿಕದ ಅಧ್ಯಕ್ಷೀಯ ಚುನಾವಣೆಯಲ್ಲಿ ಸೋರಸ್ ಕುಟುಂಬವೇ ನೇಪಥ್ಯದಲ್ಲಿದ್ದುಕೊಂಡು ತಂತ್ರಗಾರಿಕೆ ಹೆಣೆಯುತ್ತಿತ್ತೆಂಬ ವಿಷಯ ಚರ್ಚೆಯಲ್ಲಿದೆ. ಅಮೆರಿಕದಲ್ಲಿ ನಡೆಯುವ ವ್ಯವಹಾರಗಳನ್ನು 'ಲೈಸೆನ್ಸ್ ರಾಜ್' ಮೂಲಕ ಸರಕಾರವು ನಿಯಂತ್ರಿಸುವಂತಾಗಬೇಕೆಂಬುದು ಸೋರಸ್ ಸಂಸ್ಥೆಯ ಚಿಂತನೆ. ದಶಕಗಳ ಹಿಂದೆ ಭಾರತದಲ್ಲಿ ಕಾಂಗ್ರೆಸ್ ಅಧಿಕಾರಾವಧಿಯಲ್ಲಿ ಲೈಸೆನ್ಸ್ ರಾಜ್ ಚಾಲ್ತಿಯಲ್ಲಿದ್ದ ಕಾರಣ, ಜಗತ್ತಿನ ಮುಂದುವರಿದ ದೇಶಗಳ ಪಟ್ಟಿಯಲ್ಲಿ ಭಾರತ ನಿಲ್ಲಲಿಕ್ಕಾಗಿರಲಿಲ್ಲ, ನಂತರದ ಉದಾರೀಕರಣ ನೀತಿಯಿಂದಾಗಿ ಭಾರತದ ಆರ್ಥಿಕತೆಯು ಜಗತ್ತಿಗೆ ತೆರೆದುಕೊಳ್ಳುವಂತಾಯಿತು. ಸೋರಸ್ ಮಾತನ್ನು ಕೇಳಿಕೊಂಡು ರಾಹುಲ್ ಗಾಂಧಿಯವರು ತಮ್ಮದೇ ಪಕ್ಷದ ಉದಾರೀಕರಣ ನೀತಿಯ ವಿರುದ್ಧ ನಿಂತು, ದೇಶವನ್ನು ಮತ್ತೊಮ್ಮೆ ಲೈಸೆನ್ಸ್ ರಾಜ್ ಯುಗಕ್ಕೆ ಕೊಂಡೊಯ್ಯಲು ನಿರ್ಧರಿಸಿದ್ದ ವಿಷಯ 2024ರ ಚುನಾವಣಾ ಪ್ರಚಾರದಲ್ಲಿ ಬಹಿರಂಗವಾಗಿತ್ತು.

ಅಮೆರಿಕದಲ್ಲಿ ಸೋರಸ್ ತನ್ನ ಪ್ರಭಾವದ ಮೂಲಕ ಲೈಸೆನ್ಸ್ ರಾಜ್ ಜಾರಿಗೆ ತರಲೆಂದು ಡೆಮಾಕ್ರಟಿಕ್ ಪಕ್ಷದ ಪರವಾಗಿ ಕೆಲಸ ಮಾಡುತ್ತಿದ್ದಾರೆಂದು ಚುನಾವಣಾ ಸಮಯದಲ್ಲಿ ಚರ್ಚೆಗಳು ನಡೆದಿದ್ದವು. ಮುಂದುವರಿದ ತಂತ್ರಜ್ಞಾನದ ಮೂಲಕ ಮಾನವ ಜನಾಂಗವನ್ನು ಮುಂದಿನ ಪೀಳಿಗೆಗೆ ಮತ್ತಷ್ಟು ಸಜ್ಜುಗೊಳಿಸಿ, ಪ್ರಾಕೃತಿಕ ಸಂಪತ್ತುಗಳನ್ನು ಉಳಿಸಬೇಕೆಂಬುದು ಎಲಾನ್ ಮಸ್ಕ್ ಉದ್ದೇಶ. ಆಡಳಿತಾರೂಢ ಸರಕಾರಗಳು ಲೈಸೆನ್ಸ್ ರಾಜ್ ಅಡಿಯಲ್ಲಿ ಇಲ್ಲಸಲ್ಲದ ನಿಯಂತ್ರಣ ಹೇರಿ, ಮುಂದುವರಿಯುತ್ತಿರುವ ದೇಶವನ್ನು ಹಿಂದಕ್ಕೆ ಎಳೆಯುತ್ತವೆ ಎಂಬುದು ಎಲಾನ್ ಮಸ್ಕ್ ಚಿಂತನೆ. 2024ರ ಅಮೆರಿಕ ಚುನಾವಣೆಯಲ್ಲಿ, ಕಮಲಾ ಹ್ಯಾರಿಸ್ ಪರವಾಗಿ ಸೋರಸ್ ತೆರೆಮರೆಯಲ್ಲಿ ತಂತ್ರಗಾರಿಕೆ ಮಾಡಿದ್ದರೆ, ಟ್ರಂಪ್ ಪರವಾಗಿ ಎಲಾನ್ ಮಸ್ಕ್ ಬಹಿರಂಗವಾಗಿ ಪ್ರಚಾರ ಮಾಡಿದರು. ಪ್ರತಿಷ್ಠಿತ ಟ್ವಿಟರ್ (ಎಕ್ಸ್) ಮಾಧ್ಯಮವು ಸಾಮಾಜಿಕ ಜಾಲತಾಣದಲ್ಲಿ ಅತ್ಯಂತ ಪ್ರಭಾವ ಬೀರುವ ವೇದಿಕೆ. ಜಗತ್ತಿನ ಬಲಿಷ್ಠ ದೇಶಗಳ ಪ್ರತಿನಿಧಿಗಳು ಇದರ ಮೂಲಕ ಹಲವು ವಿಷಯಗಳನ್ನು ಹಂಚಿಕೊಳ್ಳುತ್ತಾರೆ. ಟ್ವಿಟರ್ ಮೂಲಕ ಅನೇಕ ವಿಷಯಗಳ ನಿರೂಪಣೆ ಬದಲಾಗುತ್ತದೆ, ದೊಡ್ಡ ಚಳವಳಿಗಳು ನಡೆಯುತ್ತವೆ. ಹೀಗೆ, ಪ್ರತಿಷ್ಠಿತವಾಗಿದ್ದರೂ ಲಾಭದಾಯಕವಾಗಿರದ ಟ್ವಿಟರ್ ಸಂಸ್ಥೆಯನ್ನು ಎಲಾನ್ ಮಸ್ಕ್ 2022ರ ಅಕ್ಟೋಬರ್‌ನಲ್ಲಿ ಬರೋಬ್ಬರಿ 44 ಬಿಲಿಯನ್ ಡಾಲರ್ ಹಣ ನೀಡಿ ಖರೀದಿಸಿಬಿಟ್ಟರು. ಟ್ರಂಪ್ ಅವರ ಟ್ವಿಟರ್ ಖಾತೆಯನ್ನು 2021ರಲ್ಲಿ ರದ್ದುಗೊಳಿಸಿದ್ದರಿಂದಾಗಿ ತಮ್ಮ ಸ್ನೇಹಿತನಿಗಾದ ಅವಮಾನಕ್ಕೆ ಪ್ರತೀಕಾರ ತೀರಿಸಿಕೊಳ್ಳಲೆಂದು ಆ ಸಂಸ್ಥೆಯನ್ನೇ ಎಲಾನ್ ಮಸ್ಕ್ ಖರೀದಿಸಿದರು ಎನ್ನುತ್ತಾರೆ ಅನೇಕರು. ಈ ಖರೀದಿಯ ನಂತರ, ಎಡಚರರು ಸಾಮಾಜಿಕ ಜಾಲತಾಣದಲ್ಲಿ ನಡೆಸುತ್ತಿದ್ದ ಸುಳ್ಳು ನಿರೂಪಣೆಗಳು ಕಡಿಮೆಯಾಗಿವೆ. ಟ್ವಿಟರ್ ಸಂಸ್ಥೆಯನ್ನು ಎಲಾನ್ ಮಸ್ಕ್ ಖರೀದಿಸಿದ ನಂತರ, ಸೋರಸ್ ತನ್ನ ಪ್ರಭಾವ ಬಳಸಿ ಅಮೆರಿಕದ 40 ಪ್ರತಿಷ್ಠಿತ ಕಂಪನಿಗಳ ಜಾಹೀರಾತುಗಳ ನೀಡಿಕೆಯನ್ನು ನಿಲ್ಲಿಸಿದ್ದನೆಂಬ ಚರ್ಚೆಗಳು ಚುನಾವಣಾ ಸಮಯದಲ್ಲಿ ನಡೆದಿದ್ದವು. ಮಾರುಕಟ್ಟೆ ಬೆಲೆಗಿಂತಲೂ ದುಪ್ಪಟ್ಟು ಹಣ ನೀಡಿ ಖರೀದಿಸಿದ್ದ ಟ್ವಿಟರ್ ಕಂಪನಿಯ ಆದಾಯದ ಮೂಲವನ್ನು ಕತ್ತರಿಸಿ, ಅಧ್ಯಕ್ಷೀಯ ಚುನಾವಣೆಯಲ್ಲಿ ಮೇಲುಗೈ ಸಾಧಿಸಬೇಕೆಂಬುದು ಸೋರಸ್ ಸಂಸ್ಥೆಯ ಹುನ್ನಾರವಾಗಿತ್ತು. ಆದರೆ ಇದರಿಂದ ಟ್ವಿಟರ್‌ಗೆ ಏನೂ ಬಾಧಕವಾಗಲಿಲ್ಲ, ಚುನಾವಣಾ ಫಲಿತಾಂಶದ ದಿನದವರೆಗೂ ಟ್ರಂಪ್ ಪರವಾಗಿ ಎಲಾನ್ ಮಸ್ಕ್ ಪ್ರಚಾರ ಮಾಡಿದರು.

ಜಾಗತಿಕ ಮಟ್ಟದಲ್ಲಿ ತೈಲಗಳ ಬಳಕೆಯಿಂದ ಉಂಟಾಗುತ್ತಿದ್ದ ಮಾಲಿನ್ಯವನ್ನು ವಿದ್ಯುತ್ ಚಾಲಿತ ತಂತ್ರಜ್ಞಾನದ ವಾಹನಗಳ ಮೂಲಕ ತಡೆಗಟ್ಟುವಲ್ಲಿ ಎಲಾನ್ ಮಸ್ಕ್ ಯಶಸ್ವಿಯಾಗಿದ್ದಾರೆ. ಅಮೆರಿಕದ ಪ್ರತಿಷ್ಠಿತ ಸಂಸ್ಥೆಯ ಮಾಲೀಕನಾಗಿ, ಚುನಾವಣೆಯಲ್ಲಿ ಬಹಿರಂಗವಾಗಿ ಒಬ್ಬರ ಪರವಾಗಿ ನಿಲ್ಲುವಷ್ಟು ಅಪಾಯಕಾರಿ ಅಂಶ ಮತ್ತೊಂದಿಲ್ಲ, ಇದರ ಅರಿವಿದ್ದರೂ ಎಲಾನ್ ಮಸ್ಕ್ ಟ್ರಂಪ್ ಪರ ಪ್ರಚಾರ ಮಾಡಿ, ಚುನಾವಣೆಯಲ್ಲಿ ಅವರನ್ನು ಗೆಲ್ಲಿಸಿ, ಅಪಾಯಕಾರಿ ಕುಳ ಸೋರಸ್‌ನ ಬುಡಕ್ಕೆ ಬೆಂಕಿ ಇಟ್ಟಿದ್ದಾರೆ!

ಭಾರತವನ್ನು ಭರವಸೆಯ ತಾಣವಾಗಿಸಿದ 'ರತ್ನ'

ಗುಣಗಾನ

ನರೇಂದ್ರ ಮೋದಿ

vveditoped@gmail.com

ರತನ್ ಟಾಟಾ ಅವರು ನಮ್ಮನ್ನು ಅಗಲಿ ಒಂದು ತಿಂಗಳು ಕಳೆದಿದೆ. ಜನನಿಬಿಡ ನಗರಗಳು ಮತ್ತು ಪಟ್ಟಣಗಳಿಂದ ಹಳ್ಳಿಗಳವರೆಗೆ, ಸಮಾಜದ ಪ್ರತಿಯೊಂದು ವರ್ಗದಲ್ಲೂ ಅವರ ಅನುಪಸ್ಥಿತಿಯು ಎದ್ದು ಕಾಣುತ್ತಿದೆ. ಅವರ ಅಗಲಿಕೆಯಿಂದ ಅನುಭವಿ ಕೈಗಾರಿಕೋದ್ಯಮಿಗಳು, ಉದಯೋನ್ಮುಖ ಉದ್ಯಮಿಗಳು ಮತ್ತು ಶ್ರಮಜೀವಿಗಳು ದುಃಖಿತರಾಗಿದ್ದಾರೆ. ಪರಿಸರ ಮತ್ತು ಪರೋಪಕಾರಕ್ಕೆ ಸಮರ್ಪಿತರಾದ ಜನರು ಸಹ ಅಷ್ಟೇ ನೋವಿನಲ್ಲಿದ್ದಾರೆ. ಅವರ ಅನುಪಸ್ಥಿತಿಯು ಇಡೀ ದೇಶದಲ್ಲಿ ಮಾತ್ರವಲ್ಲದೆ ಪ್ರಪಂಚದಾದ್ಯಂತ ಗೋಚರಿಸುತ್ತಿದೆ.

ರತನ್ ಟಾಟಾ ಅವರು ಯುವಜನತೆಗೆ ಸ್ಫೂರ್ತಿಯಾಗಿದ್ದರು. ಕನಸುಗಳನ್ನು ಕಾಣುವುದು ಯೋಗ್ಯನಡೆ; ಸಹಾನುಭೂತಿ ಮತ್ತು ವಿನಮ್ರತೆಯಿಂದ ಯಶಸ್ಸನ್ನು ಸಾಧಿಸಬಹುದು ಎಂದು ಅವರು ತೋರಿಸಿಕೊಟ್ಟರು. ಅವರು ಭಾರತೀಯ ಉದ್ಯಮದ ಅತ್ಯುತ್ತಮ ಪರಂಪರೆ ಮತ್ತು ಸಮಗ್ರತೆ, ಶ್ರೇಷ್ಠತೆ ಮತ್ತು ಸೇವೆಯ ಮೌಲ್ಯಗಳೆಡೆಗಿನ ದೃಢವಾದ ಬದ್ಧತೆಯ ಪ್ರತಿನಿಧಿಯಾಗಿದ್ದರು. ಅವರ ನಾಯಕತ್ವದಲ್ಲಿ, ಟಾಟಾ ಗ್ರೂಪ್ ಪ್ರಪಂಚದಾದ್ಯಂತ ಗೌರವ, ಪ್ರಾಮಾಣಿಕತೆ ಮತ್ತು ವಿಶ್ವಾಸಾರ್ಹತೆಯನ್ನು ಸಾಕಾರಗೊಳಿಸುವ ಮೂಲಕ ಹೊಸ ಉತ್ತುಂಗಕ್ಕೆ ಏರಿತು. ಇದರ ಹೊರತಾಗಿಯೂ, ಅವರು ವಿನಮ್ರತೆ ಮತ್ತು ದಯಾಪರತೆಯಿಂದ ತಮ್ಮ ಸಾಧನೆಗಳನ್ನು ಲಘುವಾಗಿ ಪರಿಗಣಿಸಿದರು.

ಇತರರ ಕನಸುಗಳಿಗೆ ರತನ್ ಟಾಟಾ ನೀಡುತ್ತಿದ್ದ ಅಚಲವಾದ ಬೆಂಬಲವು ಅವರ ಶ್ರೇಷ್ಠ ಗುಣಗಳಲ್ಲಿ ಒಂದಾಗಿತ್ತು. ಇತ್ತೀಚಿನ ವರ್ಷಗಳಲ್ಲಿ, ಅವರು ಭಾರತದ 'ಸ್ಟಾರ್ಟ್ ಅಪ್' ಪೂರಕ ವ್ಯವಸ್ಥೆಗೆ ಮಾರ್ಗದರ್ಶನ ನೀಡಿದ್ದರು ಮತ್ತು ಅನೇಕ ಭರವಸೆಯ ಉದ್ಯಮಗಳಲ್ಲಿ ಹೂಡಿಕೆ ಮಾಡಿದ್ದರು. ಅವರು ಯುವ ಉದ್ಯಮಿಗಳ ಭರವಸೆ ಮತ್ತು ಆಕಾಂಕ್ಷೆಗಳನ್ನು ಅರ್ಥಮಾಡಿಕೊಂಡರು ಹಾಗೂ ಭಾರತದ ಭವಿಷ್ಯವನ್ನು ರೂಪಿಸುವ ಅವರ ಸಾಮರ್ಥ್ಯವನ್ನು ಗುರುತಿಸಿದರು. ಯುವ ಜನತೆಯ ಪ್ರಯತ್ನಗಳನ್ನು ಬೆಂಬಲಿಸುವ ಮೂಲಕ, ಅಪಾಯಗಳನ್ನು ಎದುರಿಸಲು ಮತ್ತು ಗಡಿಗಳನ್ನು ಮೀರಲು ಕನಸುಗಾರರ ಪೀಳಿಗೆಯನ್ನು ಉತ್ತೇಜಿಸಿದರು. ಇದು ನಾವೀನ್ಯ ಮತ್ತು ಉದ್ಯಮಶೀಲತೆಯ ಸಂಸ್ಕೃತಿಯನ್ನು ನಿರ್ಮಿಸುವಲ್ಲಿ ಬಹಳ ದೂರ ಸಾಗಿದೆ, ಇದು ಮುಂದಿನ ದಶಕಗಳಲ್ಲಿ ಭಾರತದ ಮೇಲೆ ಸಕಾರಾತ್ಮಕ ಪರಿಣಾಮ ಬೀರುತ್ತದೆ ಎಂದು ನನಗೆ ವಿಶ್ವಾಸವಿದೆ.

ಅವರು ಯಾವಾಗಲೂ ಶ್ರೇಷ್ಠತೆಯನ್ನು ಪ್ರತಿಪಾದಿಸಿದರು ಮತ್ತು ಜಾಗತಿಕ ಮಾನದಂಡಗಳನ್ನು ಸ್ಥಾಪಿಸಲು ಭಾರತೀಯ ಉದ್ಯಮಗಳನ್ನು ಒತ್ತಾಯಿಸಿದರು. ಈ ದೃಷ್ಟಿಯು ಭಾರತವನ್ನು ವಿಶ್ವ ದರ್ಜೆಯ ಗುಣಮಟ್ಟಕ್ಕೆ ಸಮಾನಾರ್ಥಕವಾಗಿಸಲು ನಮ್ಮ ಭವಿಷ್ಯದ ನಾಯಕರಿಗೆ ಸ್ಫೂರ್ತಿಯಾಗುತ್ತದೆ ಎಂದು ನಾನು ಭಾವಿಸುತ್ತೇನೆ.

ಅವರ ಹಿರಿಮೆಯು ಬೋರ್ಡ್ ರೂಮಿಗೆ ಅಥವಾ ಇತರ ವ್ಯಕ್ತಿಗಳಿಗೆ ಸಹಾಯ ಮಾಡಲು ಮಾತ್ರ ಸೀಮಿತವಾಗಿರಲಿಲ್ಲ. ಅವರ ಕರುಣೆ ಸಕಲ ಜೀವರಾಶಿಗಳಿಗೂ ವ್ಯಾಪಿಸಿತ್ತು. ಪ್ರಾಣಿಗಳ ಮೇಲಿನ ಅವರ ಆಳವಾದ ಪ್ರೀತಿಯು ಸುಪ್ರಸಿದ್ಧವಾಗಿತ್ತು ಮತ್ತು ಪ್ರಾಣಿ ಕಲ್ಯಾಣವನ್ನು ಕುರಿತ ಪ್ರತಿಯೊಂದು ಪ್ರಯತ್ನವನ್ನು ಅವರು ಬೆಂಬಲಿಸಿದರು. ಅವರು ಆಗಾಗ್ಗೆ ತಮ್ಮ ಶ್ವಾನಗಳ ಫೋಟೋಗಳನ್ನು ಹಂಚಿಕೊಳ್ಳುತ್ತಿದ್ದರು, ಅವುಗಳು ಇತರ ವ್ಯವಹಾರ ಉದ್ಯಮದಂತೆ ಅವರಿಗೆ ಜೀವನದ ಭಾಗವಾಗಿದ್ದವು. ನಿಜವಾದ ನಾಯಕತ್ವವನ್ನು ಒಬ್ಬರ ಸಾಧನೆಗಳಿಂದ ಮಾತ್ರ ಅಳೆಯಲಾಗುವುದಿಲ್ಲ, ಅತ್ಯಂತ ದುರ್ಬಲರ ಬಗ್ಗೆ ಅವರು ತೋರುವ ಕಾಳಜಿಯಿಂದ ಅಳೆಯಲಾಗುತ್ತದೆ ಎಂಬುದಕ್ಕೆ ಅವರ ಜೀವನವು ನಮಗೆಲ್ಲರಿಗೂ ಒಂದು ಮಾದರಿ.

ರತನ್ ಟಾಟಾ ಅವರ ದೇಶಭಕ್ತಿ ಕೋಟ್ಯಂತರ

ಭಾರತೀಯರಿಗೆ ಬಿಕ್ಕಟ್ಟಿನ ಸಮಯದಲ್ಲಿ ಉಜ್ವಲವಾದ ಬೆಳಕಾಯಿತು. 26/11ರ ಭಯೋತ್ಪಾದಕ ದಾಳಿಯ ನಂತರ ಮುಂಬೈನಲ್ಲಿ ಪ್ರಸಿದ್ಧ ತಾಜ್ ಹೋಟೆಲ್ ಅನ್ನು ಶೀಘ್ರವಾಗಿ ಪುನರಾರಂಭಿಸುವ ಮೂಲಕ ಭಾರತವು ಒಗ್ಗಟ್ಟಾಗಿದೆ, ಭಯೋತ್ಪಾದನೆಗೆ ಮಣಿಯುವುದಿಲ್ಲ ಎಂದು ರಾಷ್ಟ್ರಕ್ಕೆ ಕರೆ ನೀಡಿದರು.

ವೈಯಕ್ತಿಕವಾಗಿ, ನಾನು ಅವರನ್ನು ಅನೇಕ ವರ್ಷಗಳಿಂದ ಬಹಳ ಹತ್ತಿರದಿಂದ ತಿಳಿದುಕೊಳ್ಳುವ ಅವಕಾಶ ಪಡೆದಿದ್ದೆ. ನಾವು ಗುಜರಾತಿನಲ್ಲಿ ಒಟ್ಟಿಗೆ ಕೆಲಸ ಮಾಡಿದ್ದೇವೆ, ಅಲ್ಲಿ ಅವರು ಬಹಳ ಆಸಕ್ತಿ ಹೊಂದಿದ್ದ ಹಲವಾರು ಯೋಜನೆಗಳಲ್ಲಿ ವ್ಯಾಪಕವಾಗಿ ಹೂಡಿಕೆ ಮಾಡಿದ್ದರು. ಕೆಲವೇ ವಾರಗಳ ಹಿಂದೆ, ನಾನು ಸ್ಪೇನ್ ಅಧ್ಯಕ್ಷ ಪೆಡ್ರೊ ಸ್ಯಾಂಚೆಜ್ ಅವರೊಂದಿಗೆ ವಡೋದರಾದಲ್ಲಿದ್ದೆ. ನಾವು ಜಂಟಿಯಾಗಿ ಭಾರತದಲ್ಲಿ ಸಿ-295 ವಿಮಾನಗಳನ್ನು ತಯಾರಿಸುವ ವಿಮಾನ ಸಂಕೀರ್ಣವನ್ನು ಉದ್ಘಾಟಿಸಿದೆವು. ಇದರ ಕೆಲಸವನ್ನು ಪ್ರಾರಂಭಿಸಿದವರು ರತನ್ ಟಾಟಾ. ಆ ಸಂದರ್ಭದಲ್ಲಿ ರತನ್ ಟಾಟಾ ಅವರ ಅನುಪಸ್ಥಿತಿಯು ಬಹಳವಾಗಿ ಕಾಡಿತು.

ರತನ್ ಟಾಟಾ ಅವರು ಒಬ್ಬ ಪತ್ರಗಳ ವ್ಯಕ್ತಿಯಾಗಿ ನನಗೆ ನೆನಪಾಗುತ್ತಾರೆ- ಅವರು ಆಡಳಿತದ ವಿಷಯವಾಗಿರಲಿ, ಸರಕಾರದ ಸಹಾಯಕ್ಕಾಗಿ ಮೆಚ್ಚುಗೆ ವ್ಯಕ್ತಪಡಿಸುವ ಅಥವಾ ಚುನಾವಣಾ ವಿಜಯದ ನಂತರ ಅಭಿನಂದನಾ ಸಂದೇಶಗಳನ್ನು ಕಳುಹಿಸುವುದಾಗಲಿ, ವಿವಿಧ ವಿಷಯಗಳ ಬಗ್ಗೆ ನನಗೆ ಆಗಾಗ್ಗೆ ಪತ್ರ ಬರೆಯುತ್ತಿದ್ದರು.

ನಾನು ಕೇಂದ್ರಕ್ಕೆ ತೆರಳಿದಾಗ, ನಮ್ಮ ನಿಕಟ ಸಂವಹನಗಳು ಮುಂದುವರಿದವು ಮತ್ತು ಅವರು ನಮ್ಮ ರಾಷ್ಟ್ರ ನಿರ್ಮಾಣ ಪ್ರಯತ್ನಗಳಲ್ಲಿ ಬದ್ಧತೆಯ ಪಾಲುದಾರರಾಗಿ ಉಳಿದರು. ಸ್ವಚ್ಛ ಭಾರತ ಅಭಿಯಾನಕ್ಕೆ ರತನ್ ಟಾಟಾ ಅವರು ನೀಡಿದ ಬೆಂಬಲ ನನ್ನ ಹೃದಯಕ್ಕೆ ತುಂಬಾ ಹತ್ತಿರವಾಗಿತ್ತು. ಅವರು ಈ ಜನಾಂದೋಲನದ ಬೆಂಬಲಿಗರಾಗಿದ್ದರು, ಭಾರತದ ಪ್ರಗತಿಗೆ ಸ್ವಚ್ಛತೆ ಮತ್ತು ನೈರ್ಮಲ್ಯವು ಬಹಳ ಮುಖ್ಯ ಎಂದು ಅವರು ಅರ್ಥಮಾಡಿಕೊಂಡಿದ್ದರು. ಅಕ್ಟೋಬರ್ ಆರಂಭದಲ್ಲಿ ಸ್ವಚ್ಛ ಭಾರತ ಅಭಿಯಾನದ ಹತ್ತನೇ ವಾರ್ಷಿಕೋತ್ಸವಕ್ಕಾಗಿ ಅವರು ನೀಡಿದ ಹೃತ್ಪೂರ್ವಕ ವಿಡಿಯೊ ಸಂದೇಶವನ್ನು ನಾನು ಇನ್ನೂ ನೆನಪಿಸಿಕೊಳ್ಳುತ್ತೇನೆ. ಇದು ಅವರು ಕೊನೆಯ ಬಾರಿಗೆ ಸಾರ್ವಜನಿಕವಾಗಿ ಕಾಣಿಸಿಕೊಂಡದ್ದು.

ಅವರ ಹೃದಯಕ್ಕೆ ಹತ್ತಿರವಾದ ಮತ್ತೊಂದು ವಿಷಯವೆಂದರೆ ಆರೋಗ್ಯ ರಕ್ಷಣೆ ಮತ್ತು ವಿಶೇಷವಾಗಿ ಕ್ಯಾನ್ಸರ್ ವಿರುದ್ಧದ ಹೋರಾಟ. ಎರಡು ವರ್ಷಗಳ ಹಿಂದೆ ಅಸ್ಸಾಂನಲ್ಲಿ ಆಯೋಜಿಸಿದ್ದ ಕಾರ್ಯಕ್ರಮ ನನಗೆ ನೆನಪಿದೆ, ಅಲ್ಲಿ ನಾವು ಒಟ್ಟಾಗಿ ರಾಜ್ಯದ ವಿವಿಧ ಕ್ಯಾನ್ಸರ್ ಆಸ್ಪತ್ರೆಗಳನ್ನು ಉದ್ಘಾಟಿಸಿದೆವು. ಆ ಸಮಯದಲ್ಲಿ ಅವರು ತಮ್ಮ ಭಾಷಣದಲ್ಲಿ, ತಮ್ಮ ಕೊನೆಯ ವರ್ಷಗಳನ್ನು ಆರೋಗ್ಯಕ್ಕಾಗಿ ಮೀಸಲಿಡಲು ಬಯಸುವುದಾಗಿ ಸ್ಪಷ್ಟವಾಗಿ ಹೇಳಿದ್ದರು. ಆರೋಗ್ಯ ಮತ್ತು ಕ್ಯಾನ್ಸರ್ ಆರೈಕೆಯನ್ನು ಪ್ರವೇಶಿಸಲು ಮತ್ತು ಕೈಗೆಟುಕುವಂತೆ ಮಾಡುವ ಅವರ ಪ್ರಯತ್ನವು ಕಾಯಿಲೆಗಳ ವಿರುದ್ಧ ಹೋರಾಡುವವರ ಬಗೆಗಿನ ಆಳವಾದ ಸಹಾನುಭೂತಿಯಲ್ಲಿ ಬೇರೂರಿತ್ತು. ನ್ಯಾಯಯುತ ಸಮಾಜವು ತನ್ನ ಅತ್ಯಂತ ದುರ್ಬಲರೊಂದಿಗೆ ನಿಲ್ಲುತ್ತದೆ ಎಂದು ಅವರು ನಂಬಿದ್ದರು.

ನಾವು ಇಂದು ಅವರನ್ನು ಸ್ಮರಿಸುವಾಗ, ಅವರು ಕಲ್ಪಿಸಿಕೊಂಡ ಸಮಾಜವನ್ನು ನೆನಪಿಸಿಕೊಳ್ಳುತ್ತೇವೆ, ಅಲ್ಲಿ ವ್ಯಾಪಾರವು ಒಳ್ಳೆಯದಕ್ಕಾಗಿ ಒಂದು ಶಕ್ತಿಯಾಗಿ ಕಾರ್ಯನಿರ್ವಹಿಸುತ್ತದೆ. ಅಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಸಾಮರ್ಥ್ಯಕ್ಕೂ ಮೌಲ್ಯವಿರುತ್ತದೆ ಮತ್ತು ಪ್ರಗತಿಯನ್ನು ಎಲ್ಲರ ಯೋಗಕ್ಷೇಮ ಮತ್ತು ಸಂತೋಷದಿಂದ ಅಳೆಯಲಾಗುತ್ತದೆ. ಅವರು ಬದಲಾವಣೆ ತಂದ ಜನರ ಜೀವನದಲ್ಲಿ ಮತ್ತು ಅವರು ಬೆಳೆಸಿದ ಕನಸುಗಳಲ್ಲಿ ಅವರು ಬದುಕುತ್ತಾರೆ. ಭಾರತವನ್ನು ಉತ್ತಮ, ದಯಾಪರ ಮತ್ತು ಹೆಚ್ಚು ಭರವಸೆಯ ತಾಣವನ್ನಾಗಿ ಮಾಡಿದ್ದಕ್ಕಾಗಿ ಹಲವು ತಲೆಮಾರುಗಳು ಅವರಿಗೆ ಕೃತಜ್ಞರಾಗಿರುತ್ತವೆ.

(ಲೇಖಕರು ಭಾರತದ ಪ್ರಧಾನಮಂತ್ರಿ)

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಒಪ್ಪಲು ಸಾಧ್ಯವಿಲ್ಲ

ಪರಸ್ಪರ ಮಿತ್ರರೂ ಬಲಿಷ್ಠರೂ ಆಗಿರುವ ನರೇಂದ್ರ ಮೋದಿ ಮತ್ತು ಡೊನಾಲ್ಡ್ ಟ್ರಂಪ್ ಒಟ್ಟುಗೂಡಿ, ರಷ್ಯಾ-ಉಕ್ರೇನ್ ಹಾಗೂ ಇಸ್ರೇಲ್-ಇರಾನ್ ಕದನವನ್ನು ನಿಲ್ಲಿಸಿದರೆ, ಆಗ ಇವರಿಬ್ಬರನ್ನೂ ಜಾಗತಿಕ ನಾಯಕರೆಂದು ಒಪ್ಪಬಹುದು. ಇಲ್ಲವಾದರೆ, ಅವರಿಬ್ಬರೂ ತಮ್ಮನ್ನು ಪರೋಕ್ಷವಾಗಿ ಬಿಂಬಿಸಿಕೊಳ್ಳುತ್ತಿರುವಂಥ ಮಟ್ಟದ ನಾಯಕರೆಂದು ಸ್ವೀಕರಿಸಲು ಮನಸ್ಸು ಒಪ್ಪುವುದಿಲ್ಲ.

ವಲಸೆ ನೀತಿ, ಆಮದು ವಸ್ತುಗಳಿಗೆ ವಿಧಿಸಲಾಗುವ ಸುಂಕ, ಅರ್ಥವ್ಯವಸ್ಥೆ, ಪರಿಸರ ಸಂರಕ್ಷಣೆ ಮೊದಲಾದ ವಿಷಯಗಳಲ್ಲಿ ಟ್ರಂಪ್ ತರಬಹುದಾದ ಬದಲಾವಣೆಗಳು ಭಾರತದ ಹಿತಾಸಕ್ತಿಗೆ ಮಾರಕವಾಗುವ ಸಾಧ್ಯತೆಯಿದೆ. ಹೀಗಾಗದಂತೆ ನೋಡಿಕೊಳ್ಳುವಲ್ಲಿ ನಮ್ಮ ಪ್ರಧಾನಿಯು ಯಶಸ್ವಿಯಾದರೆ, ಆಗ ಅಮೆರಿಕವನ್ನು ಭಾರತದ ಮಿತ್ರನೆಂದೂ, ಟ್ರಂಪ್ ಅವರನ್ನು ಮೋದಿಯವರ ಸ್ನೇಹಿತನೆಂದೂ ಒಪ್ಪಬಹುದು. ಇಲ್ಲದಿದ್ದರೆ ಒಪ್ಪಲು ಸಾಧ್ಯವಿಲ್ಲ.

- ಎಚ್.ಆನಂದರಾಮ ಶಾಸ್ತ್ರೀ, ಬೆಂಗಳೂರು

ಕಣ್ಣು ತೆರೆಸುವಂತಿತ್ತು

ವಿಶ್ವೇಶ್ವರ ಭಟ್ಟರು 'ನೂರೆಂಟು ವಿಶ್ವ' ಅಂಕಣದಲ್ಲಿ (ವಿಶ್ವವಾಣಿ ನ.7) ಬರೆದ 'ಮಧು ಬಂಗಾರಪ್ಪ ಕನ್ನಡವೂ.....' ಲೇಖನ ನಿಜಕ್ಕೂ ಪ್ರಾಥಮಿಕ ಶಿಕ್ಷಣ ಸಚಿವರ ಕಣ್ಣು ತೆರೆಸುವಂತಿತ್ತು. ಮಾಜಿ ಮುಖ್ಯಮಂತ್ರಿ ಎಸ್. ಬಂಗಾರಪ್ಪನವರ ಮಗ ನಾಗಿ, ಅದರಲ್ಲೂ ಮನೆಮಾತು ಕನ್ನಡ ಭಾಷೆಯಾಗಿದ್ದರೂ ಅದನ್ನೇ ನೆಟ್ಟಗೆ ಓದಲು ಬಾರದೆ (ಇನ್ನು ಬರವಣಿಗೆ ಎಷ್ಟರ ಮಟ್ಟಿಗಿದೆಯೋ ದೇವರೇ ಬಲ್ಲ!), ಅದರ ಕಗ್ಗೊಲೆ ಮಾಡುತ್ತಿರುವುದು ನಿಜಕ್ಕೂ ಕನ್ನಡಿಗರ ದೌರ್ಭಾಗ್ಯ. ಇಂಥವರಿಗೆ ಸಚಿವ ಸಂಪುಟದಲ್ಲಿ ಸ್ಥಾನ ನೀಡಿರುವುದು, ಅದರಲ್ಲೂ ಪ್ರಾಥಮಿಕ ಶಿಕ್ಷಣ ಮತ್ತು ಗ್ರಂಥಾಲಯ ಇಲಾಖೆಯ ಸಚಿವರನ್ನಾಗಿ ಮಾಡಿರುವುದು ಎಂಥ ಹಾಸ್ಯಾಸ್ಪದ ಸಂಗತಿ! ಅಂಕಣದಲ್ಲಿ ವಿಶ್ವೇಶ್ವರ ಭಟ್ಟರು ಹೇಳಿರುವಂತೆ, ಬಿಡದಿಯ ಬಳಿ ಟೊಯೋಟಾ ಕಾರ್ಖಾನೆಯಲ್ಲಿ ಕಳೆದ 10 ವರ್ಷಗಳಿಂದ ಕೆಲಸ ಮಾಡುತ್ತಿರುವ ಜಪಾನಿಯರೇ ಇವರಿಗಿಂತ ಸ್ವಚ್ಛವಾಗಿ, ಚೆಂದವಾಗಿ, ನಿರರ್ಗಳವಾಗಿ ಕನ್ನಡವನ್ನು ಓದುತ್ತಿದ್ದರು ಎಂಬುದು ನಿಜ. ಸಚಿವರು ಇನ್ನಾದರೂ ಆತ್ಮಾವಲೋಕನಕ್ಕೆ ಮುಂದಾಗಲಿ.

- ಬೆಂ.ಮು.ಮಾರುತಿ, ಬೆಂಗಳೂರು

ಅಂತೂ ಸಿಕ್ತು ಮಾನ್ಯತೆ

ರಾಷ್ಟ್ರೀಕೃತ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಕರ್ನಾಟಕದಲ್ಲಿನ ತನ್ನ ಶಾಖೆಗಳಲ್ಲಿ ಕಾರ್ಯನಿರ್ವಹಿಸಲು 300 'ಲೋಕಲ್ ಬ್ಯಾಂಕ್ ಆಫೀಸರ್ಸ್' ಹುದ್ದೆಗಳ ಭರ್ತಿಗೆ ಕನ್ನಡ ಓದಲು-ಬರೆಯಲು-ಮಾತಾಡಲು ಬರುವವರಿಂದ ಅರ್ಜಿ ಆಹ್ವಾನಿಸಿದೆ. 'ಬ್ಯಾಂಕುಗಳಲ್ಲಿ ಕನ್ನಡದಲ್ಲಿ ಸಂವಹಿಸುವ ಸಿಬ್ಬಂದಿಯ ನೇಮಕಾತಿ ಆಗಬೇಕು' ಎಂಬ ಕನ್ನಡಿಗರ ದಶಕಗಳ ಕೂಗು (ಕೊರಗು) ಅಂತೂ ಇಂತೂ ಬ್ಯಾಂಕಿನ ಆಡಳಿತ ಮಂಡಳಿಗಳಿಗೆ ಮತ್ತು ಸರಕಾರಕ್ಕೆ ಕೇಳಿದಂತೆ ಭಾಸವಾಗುತ್ತಿದೆ.

ಭಾಷಾ ಗೊಂದಲದಿಂದಾಗಿ ವ್ಯವಹಾರ ಮಾಡುವುದು ಕಷ್ಟವಾಗುತ್ತಿದ್ದು, ಗ್ರಾಹಕರು ಸ್ಥಳೀಯ ಭಾಷೆಗಳಲ್ಲಿ ವ್ಯವಹರಿಸುವ ಸಹಕಾರಿ ಮತ್ತು ಅರ್ಬನ್ ಬ್ಯಾಂಕುಗಳತ್ತ ಮುಖ ಮಾಡುತ್ತಿದ್ದಾರೆ ಎಂಬುದಾಗಿ ಬ್ಯಾಂಕ್ ಮ್ಯಾನೇಜರುಗಳು ಸಹ ಅಲವತ್ತುಕೊಳ್ಳುತ್ತಿದ್ದರು. ಇದು ಹಣಕಾಸು ಮಂತ್ರಾಲಯದ ಗಮನಕ್ಕೆ ಬಂದಂತೆ ತೋರುತ್ತಿದೆ. ಉಳಿದ ಬ್ಯಾಂಕುಗಳೂ ಈ ಮೇಲ್ಪಂಕ್ತಿಯನ್ನು ಅನುಸರಿಸಲಿ ಎಂಬುದು ಕರ್ನಾಟಕದಲ್ಲಿನ ಬ್ಯಾಂಕ್ ಗ್ರಾಹಕರ ಆಶಯ ಮತ್ತು ನಿರೀಕ್ಷೆ.

- ರಮಾನಂದ ಶರ್ಮಾ, ಬೆಂಗಳೂರು

ಹೊಟ್ಟೆಗಿಲ್ಲ ಮೊಟ್ಟೆ

ಪ್ರಧಾನಮಂತ್ರಿ ಪೋಷಣ್' ಯೋಜನೆಯಡಿ ಇದುವರೆಗೂ ಶಾಲಾ ಮಕ್ಕಳಿಗೆ ವಾರದಲ್ಲಿ 2 ದಿನ ಮೊಟ್ಟೆ ಕೊಡಲಾಗುತ್ತಿತ್ತು. ಇದನ್ನು ವಾರದ ಆರೂ ದಿನಗಳಲ್ಲಿ ಕೊಡಲು ಉದ್ದೇಶಿಸಿ ದಾನಿ ಅಜೀಂ ಪ್ರೇಮ್‌ಜೀ ಅವರು ತಮ್ಮ ಪ್ರತಿಷ್ಠಾನದ ಮೂಲಕ 1,500 ಕೋಟಿ ರು. ಅನುದಾನ ನೀಡಿದ್ದಾರೆ. ಆದರೆ ನಮ್ಮ ಆಡಳಿತ ವ್ಯವಸ್ಥೆಯು, ಮೊಟ್ಟೆ ಕೇಳದ, ಕೇಳಿದ ಎಲ್ಲರಿಗೂ ಕೇವಲ ಒಂದು ಬಾಳೆಹಣ್ಣು ನೀಡುತ್ತಿರುವುದು ಬೆಳಕಿಗೆ ಬಂದಿದ್ದು, 98 ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ನೋಟಿಸ್ ನೀಡಲಾಗಿದೆ. ಅಲ್ಲದೆ ಚಿಕ್ಕಿಯ ತೂಕದಲ್ಲೂ ಗಣನೀಯ ವ್ಯತ್ಯಾಸ ಕಂಡುಬಂದಿದೆ. ಅಜೀಂ ಪ್ರೇಮ್‌ಜೀ ಪ್ರತಿಷ್ಠಾನ ತಂಡದ ತನಿಖಾ ವರದಿಯಿಂದ ಬೆಳಕಿಗೆ ಬಂದಿರುವ ಈ ಅಪಸವ್ಯವು ಶಿಕ್ಷಣ ಇಲಾಖೆಯಲ್ಲಿ ಕೋಲಾಹಲ ಉಂಟುಮಾಡಿದೆ. ಈ ಪ್ರಕರಣದಲ್ಲಿ ಇನ್ನೂ ಅದೆಷ್ಟು ಜನರ ಕೈವಾಡವಿದೆ? ಎಷ್ಟು ಹಣ ಗುಳುಂ ಆಗಿದೆ? ಎಂಬುದರ ಕುರಿತು ಇನ್ನೂ ವರದಿ ಬರಬೇಕಿದೆ. ಒಟ್ಟಿನಲ್ಲಿ, ಯಾರದ್ದೋ ಹಣದಾಹಕ್ಕೆ, ಹಪಾಹಪಿಗೆ ಬಡಮಕ್ಕಳ ಹೊಟ್ಟೆಗೆ ಮೊಟ್ಟೆ ಇಲ್ಲದಂತಾಯಿತಲ್ಲ?

- ಕೆ.ಶ್ರೀನಿವಾಸರಾವ್, ಹರಪನಹಳ್ಳಿ

ಹೀಗೊಬ್ಬ 'ಅಮಲು'ದಾರ!

ಮದ್ಯ ಸೇವಿಸಿ ರೋಗಿಯೊಬ್ಬರಿಗೆ ಚಿಕಿತ್ಸೆ ನೀಡಿದ ಆರೋಪದಡಿ ಬೆಂಗಳೂರಿನ ಕುಮಾರಸ್ವಾಮಿ ಲೇಔಟ್ ವ್ಯಾಪ್ತಿಯ ಖಾಸಗಿ ಆಸ್ಪತ್ರೆಯ ವೈದ್ಯ ಹಾಗೂ ವಾರ್ಡ್‌ಬಾಯ್ ವಿರುದ್ಧ 'ಎನ್‌ಸಿಆರ್' ದಾಖಲಾಗಿರುವುದು ವರದಿಯಾಗಿದೆ. ಇಂಥ ನಡವಳಿಕೆ ಇರುವವರ ಬಳಿ ರೋಗಿಗಳು ಯಾವ ಧೈರ್ಯ ಹೊತ್ತು ಹೋಗಲಾದೀತು? 'ವೈದ್ಯೋ ನಾರಾಯಣೋ ಹರಿಃ' ಎಂಬ ಮಾತನ್ನು ಸುಳ್ಳಾಗಿಸುವ ರೀತಿಯಲ್ಲಿ ಇಂಥ ಕೆಲವರು ನಡೆದುಕೊಳ್ಳುತ್ತಿರುವುದರಿಂದ ವೈದ್ಯ ವೃತ್ತಿಗೇ ಕಳಂಕ ಒದಗಿದಂತಾಗಿದೆ. ಧೂಮಪಾನ, ಮದ್ಯಪಾನದಂಥ ದುಶ್ಚಟಗಳಿಂದ ದೂರವಿರಿ ಎಂಬ ಸಂದೇಶ ನೀಡಿ ಜನರಿಗೆ ಮಾದರಿ ಆಗಬೇಕಾದ ವೈದ್ಯರೇ ಹೀಗೆ ಬುದ್ಧಿಗೇಡಿಗಳಂತೆ ವರ್ತಿಸಿದರೆ, ಜನರಿಗೆ ಒಳ್ಳೆಯ ದಾರಿ ತೋರುವವರು ಯಾರು?

ಮದ್ಯಪಾನ ಮಾಡಿ ವಾಹನ ಚಾಲಿಸಿದರೆ ಅಂಥವರ ಚಾಲನಾ ಪರವಾನಗಿಯೇ ಅಮಾನತುಗೊಳ್ಳುವಂಥ ಕಾನೂನಿದೆ. ಮೇಲೆ ಉಲ್ಲೇಖಿಸಿದ ನಿದರ್ಶನದಲ್ಲಿರುವ ವೈದ್ಯರು ಮಾಡಿದ ಕೆಲಸ ಅದಕ್ಕಿಂತ ಘನಘೋರ. ಇಂಥವರ ಪರವಾನಗಿ ಮುಟ್ಟುಗೋಲು ಹಾಕಿಕೊಳ್ಳುವುದರ ಜತೆಗೆ, ವೈದ್ಯಕೀಯ ಪದವಿಯ ಪ್ರಮಾಣಪತ್ರವನ್ನೂ ಹಿಂಪಡೆಯಬೇಕು ಮತ್ತು ಇಂಥವರ ಭಾವಚಿತ್ರವನ್ನು ಸಾರ್ವಜನಿಕವಾಗಿ ಪ್ರದರ್ಶಿಸಬೇಕು. ಜತೆಗೆ ಇಂಥವರು ಕಾರ್ಯನಿರ್ವಹಿಸುವ ಆಸ್ಪತ್ರೆಯ ಆಡಳಿತ ಮಂಡಳಿಗೂ ನಿಷ್ಠುರ ಎಚ್ಚರಿಕೆಯನ್ನು ನೀಡಬೇಕು. ಆಗ ಮಾತ್ರವೇ ಇಂಥವರು ಬುದ್ಧಿ ಕಲಿತಾರು.

- ಪತ್ತಂಗಿ ಎಸ್.ಮುರಳಿ, ಬೆಂಗಳೂರು

ಆಪ್ತವೆನಿಸುವ ಬರಹ

ಶಶಿಧರ ಹಾಲಾಡಿ ಅವರ 'ಶಶಾಂಕಣ' ಉತ್ತಮವಾಗಿ ಮೂಡಿಬರುತ್ತಿದೆ. ಬಹುತೇಕವಾಗಿ ಬಾಲ್ಯ, ಓದಿದ ಶಾಲೆ, ಹಳ್ಳಿಯ ಪರಿಸರ ಮತ್ತು ಅಲ್ಲಿನ ಸಾಮಾಜಿಕ-ಆರ್ಥಿಕ ಸ್ಥಿತಿಗತಿ ಇತ್ಯಾದಿಗಳ ಮೇಲೆ ಬೆಳಕು ಚೆಲ್ಲುವಂಥ ಬರಹಗಳನ್ನು ಈ ಅಂಕಣ ಒಳಗೊಂಡಿರುತ್ತದೆ. ಇದರಿಂದಾಗಿ ಓದುವಾಗ ಅವು ಆಹ್ಲಾದದ ಅನುಭವ ನೀಡುತ್ತವೆ ಎಂದರೆ ಅತಿಶಯೋಕ್ತಿಯಲ್ಲ. ಈ ಬಾರಿಯ 'ಕಲ್ಲೇಟಿಗೆ ಉದುರುವ ಮಾಹಿನಕಾಯಿ' ಎಂಬ ಬರಹವೂ ಇದೇ ಅನುಭೂತಿಯನ್ನು ಕಟ್ಟಿಕೊಡುತ್ತದೆ. ಇಂಥ ಬರಹಗಳು ಪತ್ರಿಕೆಯಲ್ಲಿ ಹೆಚ್ಚೆಚ್ಚು ಮೂಡಿಬರಲಿ.

- ಸ್ವಾಮಿನಾಥನ್ ಎಂ.ಆರ್., ಮೈಸೂರು

ಭಟ್ಟರ್ ಸ್ಕಾಚ್

- **ರಾಜಶೇಖರ ಹೆಗಡೆ, ಶಿರಸಿ**
ಭಟ್ರೇ, ಚುನಾವಣೆ ಸಂದರ್ಭದಲ್ಲಿ ಬಂಡಾಯ ಶಮನ ಮಾಡುವುದೇ ದೊಡ್ಡ ಕೆಲಸವಲ್ಲ?
– **ಎಲ್ಲ ಪಕ್ಷಗಳಲ್ಲೂ ಅಗ್ನಿಶಾಮಕ ದಳದ ಘಟಕವನ್ನೇ ತೆರೆಯೋದು ಬಾಕಿ!**

- **ರಮ್ಯಾ ನಾಡಿಗ್, ಬೆಂಗಳೂರು**
ಸರ್, ನನ್ನ ಗಂಡನ ಪಾಸ್‌ವರ್ಡ್ ಏನಿರಬಹುದು?
– **ಅವನ ಮಾಜಿ ಪ್ರೇಯಸಿಯ ಹೆಸರನ್ನು ತಿಳಿಸಬಾರದಿತ್ತಾ?!**

- **ರಾಜೇಶ ನಾಮಪಿಲ್ಲ, ದಾವಣಗೆರೆ**
ಭಟ್ರೇ, ಗಣಿತ ಬಹಳ ಒಳ್ಳೆಯ ವಿಷಯ ಅಂತಾರಲ್ಲ?
– **ವಿಷಯವೇನೋ ಒಳ್ಳೆಯದು, ಆದರೆ ಉತ್ತರ ತಪ್ಪಾಗಿರುತ್ತದಲ್ಲ?!**

- **ಅಮಾಸೆ ಸುಬ್ಬು, ಮೈಸೂರು**
ಮಾನವ ಸರಪಳಿ ನಿಮಿತ್ತ ಪರಿಚಯವಾದ ಹುಡುಗಿಯೊಂದಿಗೆ ನನ್ನ ಮದುವೆ ಫಿಕ್ಸ್. ನೀವು ಏನೆಂದು ಹಾಡಿ ಹರಸುವಿರಿ ಭಟ್ರೇ?
– **ಸರಪಳಿಯೇ ಕುಣಿಕೆ ಆಯಿತಲ್ಲೋ, ಮನುಜ!**

- **ಶ್ರೀಲತಾ ಮಂಜುನಾಥ, ತುಮಕೂರು**
ಭಟ್ರೇ, ಪರಚುವುದು ಹೆಣ್ಣಿನ ವರ್ತನೆ, ಆದರೆ ಆ ಕೆಲಸವನ್ನು ಗಂಡು ಮಾಡಿದರೆ?
– **ಅವನಿಗೆ 'ಪರಚುರಾಮ' ಎನ್ನಬಹುದು!**

- **ಎಸ್.ರಾಘವೇಂದ್ರ, (ಇಮೇಲ್ ಮೂಲಕ)**
ಭಟ್ರೇ, ನಾನು ಮತ್ತು ನನ್ನ ಹೆಂಡತಿ ಎಲ್ಲ ವಿಷಯಗಳಲ್ಲೂ ರಾಜಿ ಆಗ್ತೇವೆ, ಸರಿನಾ?
– **ಜಗಳವಾಡಿದ ನಂತರ ಕೊನೆಗುಳಿಯುವುದು ಅದೊಂದೇ ದಾರಿ!**

- **ಹರಿಓಂ ಶಾಸ್ತ್ರಿ, ಶಂಕರಪುರ**
ಮದುವೆಯಲ್ಲಿ ಮದುಮಕ್ಕಳನ್ನು ಬಿಟ್ಟರೆ ಬೇರೆ ಯಾರಲ್ಲಿ ಭಾವನೆಗಳು ಮಡುಗಟ್ಟಿರುತ್ತದೆ?
– **ಸಂ'ಭಾವನೆ' ಪಡೆಯುವ ಪುರೋಹಿತರಲ್ಲಿ!**

- **ನಿಂಗರಾಜು ಆರ್.,(ಇಮೇಲ್ ಮೂಲಕ)**
ಭಟ್ರೇ, ಹೆಂಡತಿಗೂ, ಅಮ್ಮನ ಪ್ರೀತಿಗೂ ಏನ್ ವ್ಯತ್ಯಾಸ?
– **ಹೆಂಡತಿಯೂ ಮುಂದೆ ಅಮ್ಮ ಆಗ್ತಾಳಲ್ಲ!**

- **ರಾಜಾರಾಮ ಹೆಗಡೆ, ಬೆಂಗಳೂರು**
ಭಟ್ರೇ, ಒಬ್ಬಳಿಗಿಂತ ಹೆಚ್ಚು ಹೆಂಡತಿ ಇದ್ರೆ ಏನು ಪ್ರಯೋಜನ?
– **ಆಗ ಒಂದಕ್ಕಿಂತ ಹೆಚ್ಚು ಮನೆ ಇರುತ್ತದಲ್ಲ?!**

- **ವಿ.ಹೇಮಂತಕುಮಾರ, ಬೆಂಗಳೂರು**
ಭಟ್ರೇ, ಹೆಂಡತಿ 'ರೀ' ಅಂದ್ರೆ ಗಂಡನಿಗೆ ಯಾವುದರ ಮುನ್ಸೂಡಿ?
– **ಸಿಡಿಲು ಹೊಡೆಯುವ ಮುನ್ಸೂಚನೆ!**

ಕಾಳುಗಳ ಮೊಳಕೆ, ನಿಷೇಧ ಇದರ ಬಳಕೆ

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ
ಡಾ.ಸಾಧನಶ್ರೀ
vveditoped@gmail.com

ಇನ್‌ಸ್ಟಾಗ್ರಾಂ ಈಗ ಎಲ್ಲರ 'ಆರೋಗ್ಯ ಗುರು'. ಇದರಲ್ಲಿ ಹೇಳುವ ವಿವಿಧ ರೀತಿಯ ಚಾಲೆಂಜ್‌ಗಳನ್ನು ಶಿರಸಾವಹಿಸಿ ಪಾಲಿಸುವ ಅನೇಕರು ಈಗ ನಮ್ಮ ಕ್ಲಿನಿಕ್‌ನಲ್ಲಿ ಪೇಷೆಂಟ್‌ಗಳು. ಅದು ಬೇರೆ ವಿಷಯ ಬಿಡಿ. ಕೆಲವು ತಿಂಗಳುಗಳಿಂದ ಬಹಳ ಪ್ರಚಲಿತದಲ್ಲಿರುವ ಒಂದು ಚಾಲೆಂಜ್ ಬಗ್ಗೆ ನಿಮ್ಮೊಂದಿಗೆ ವಿಚಾರ ವಿನಿಮಯ ಮಾಡಿಕೊಳ್ಳಲು ಬಯಸುತ್ತೇನೆ. ಅದುವೇ– '21 ಡೇಸ್ ಬೌಲ್ ಚಾಲೆಂಜ್'. ಅಂದರೆ, ಸತತವಾಗಿ 21 ದಿನಗಳ ಕಾಲ ಯಾವುದಾದರೊಂದು ಬಹಳ 'ಆರೋಗ್ಯಕರ'ವಾದಂಥ ಆಹಾರವನ್ನು ಆಯ್ಕೆಮಾಡಿಕೊಂಡು ಪ್ರತಿನಿತ್ಯ ಬಿಡದೆ ಬಳಸುವುದು. ನನ್ನ ಪೇಷೆಂಟ್ ಒಬ್ಬರು, ಅಂದರೆ ಈ 21 ದಿನಗಳ ಹಿಂದೆ ಆರೋಗ್ಯವಾಗಿದ್ದು ಚಾಲೆಂಜ್ ಮುಗಿದ ಮೇಲೆ ಅನಾರೋಗ್ಯಕ್ಕೆ ಒಳಗಾದವರು, ಈ ಚಾಲೆಂಜ್‌ಗೆ ಆಯ್ಕೆಮಾಡಿಕೊಂಡಿದ್ದು 'ಮೊಳಕೆ ಕಾಳು'ಗಳನ್ನು (Sprouts).

ಹಿಂದಿನ ದಿನ ವಿವಿಧ ರೀತಿಯ ಕಾಳುಗಳನ್ನು ನೆನೆಸಿ ಮೊಳಕೆ ಬರಿಸಿ, ಅದನ್ನು ಮರುದಿನ ಸಾಮಾನ್ಯವಾಗಿ ಸೇವಿಸುವ ತಿಂಡಿಯ ಬದಲು ಹೊಟ್ಟೆ ತುಂಬುವಷ್ಟು ಸೇವಿಸುವುದು. ಇದು ಇವರು ಸ್ವೀಕರಿಸಿದ ಪಂಥ. ಇದನ್ನಿವರು ಪ್ರಾರಂಭಿಸಿದ್ದು, ವಾತಾವರಣದಲ್ಲಿ ಹೆಚ್ಚಾಗಿ ಮೋಡವಿದ್ದ, ಪ್ರತಿದಿನವೂ ಮಳೆಯಾಗುತ್ತಿದ್ದ ಸಂದರ್ಭದಲ್ಲಿ. ಇವರದ್ದು ಹೆಚ್ಚಾಗಿ ಟೇಬಲ್ ವರ್ಕ್, ಅಷ್ಟೇನೂ ವ್ಯಾಯಾಮವಿಲ್ಲದ ಶರೀರ. ಇಂಥ ಪರಿಸ್ಥಿತಿಯಲ್ಲಿ ಈ ಚಾಲೆಂಜನ್ನು ಪ್ರಾರಂಭಿಸಿದರು. ಆರಂಭದಲ್ಲಿ ತಕ್ಕಮಟ್ಟಿಗೆ ಲಾಭವೆನಿಸಿದ್ದು ನಿಜವಾದರೂ, ಒಂದು ವಾರದ ನಂತರ ಆರೋಗ್ಯದಲ್ಲಿ ಸ್ವಲ್ಪ ಏರುಪೇರಾಯಿತು. ಆದರೆ ನಿತ್ಯವೂ ಇನ್‌ಸ್ಟಾಗ್ರಾಂನಲ್ಲಿ ಹುರಿದುಂಬಿಸುವ ಗುಂಪಿನ ಸಂಪರ್ಕದಲ್ಲಿದ್ದ ಕಾರಣ, ಶತಾಯಗತಾಯ ಈ ಚಾಲೆಂಜನ್ನು ಪೂರ್ಣಗೊಳಿಸಬೇಕೆಂಬ ಹಠಕ್ಕೆ ಇವರು ಬಿದ್ದರು. ಆಹಾರ ಬದಲಾದ ಕಾರಣ ಜೀರ್ಣಕ್ರಿಯೆಯಲ್ಲಿ ಕೊಂಚ ವ್ಯತ್ಯಾಸ ಸಹಜವೆಂದು ಭಾವಿಸಿ ಈ ಚಾಲೆಂಜನ್ನು ಮುಂದುವರಿಸಿದರು. ದೇಹಕ್ಕೆ ಇಂಥ ಕಟ್ಟುನಿಟ್ಟು ಒಗ್ಗಲು ಸಮಯ ಬೇಕೆಂದು ಇವರೇ ನಿರ್ಧರಿಸಿ, ಶರೀರದಲ್ಲಿ ಕಾಣಿಸಿಕೊಂಡ ಸಂಧಿಶೂಲಗಳನ್ನು ನಿರ್ಲಕ್ಷಿಸಿದರು. 'ವರ್ಕ್ ಸ್ಟ್ರೆಸ್' ಇರಬಹುದೆಂದು ಭಾವಿಸಿ ಅತಿಯಾದ ತಲೆನೋವನ್ನೂ, ಕಣ್ಣಿನ ಭಾಗದಲ್ಲಿನ ನೋವನ್ನೂ ಉಪೇಕ್ಷಿಸಿದರು. ಹೊಟ್ಟೆಯುಬ್ಬರ ಮತ್ತು ಹುಳಿತೇಗುಗಳನ್ನು, ಸಾಮಾನ್ಯವಾಗಿ ಕಾಡುವ 'ಗ್ಯಾಸ್ಟ್ರಿಕ್ ಟ್ರಬಲ್' ಎಂದು ತೀರ್ಮಾನಿಸಿಬಿಟ್ಟರು. ಅತಿಯಾಗಿ ಒಡೆಯತೊಡಗಿದ ಚರ್ಮ, ಕೂದಲುದುರುವಿಕೆ, ಬಾಯಾರಿಕೆಗಳನ್ನು 'ಹೊರಗಿನ ವಾತಾವರಣದ ಪ್ರಭಾವವಿರಬಹುದು' ಎಂದುಕೊಂಡು ಆ ಲಕ್ಷಣಗಳನ್ನು ಇವರು ಹೆಚ್ಚಾಗಿ ಗಮನಿಸಲಿಲ್ಲ.

'ಪ್ರತಿನಿತ್ಯ ಮೊಳಕೆಕಾಳುಗಳ ಸೇವನೆ ಒಳ್ಳೆಯದು. ಅದು ಆರೋಗ್ಯಕರ, ಬಹಳ ಪುಷ್ಟಿಕರ' ಎಂದು ಸೋಷಿಯಲ್ ಮೀಡಿಯಾಗಳಲ್ಲಿ ಸಾರಿಹೇಳುತ್ತಿದ್ದ ವಿಡಿಯೋ/ಪೋಸ್ಟ್‌ಗಳನ್ನು ನೋಡಿ, 'ಮೊಳಕೆಕಾಳುಗಳನ್ನು ತಿಂದರೆ ಆರೋಗ್ಯಕ್ಕೆ ಖಂಡಿತ ತೊಂದರೆಯಾಗುವುದಿಲ್ಲ' ಎಂಬ ಮನೋಭಾವದಲ್ಲೇ ಇದ್ದ ಇವರಿಗೆ, ತಮ್ಮ ಆರೋಗ್ಯದಲ್ಲಾಗುತ್ತಿರುವ ಏರುಪೇರುಗಳಿಗೆ ಆ ಮೊಳಕೆಕಾಳೇ ಕಾರಣವಿರಬಹುದೇ ಎಂಬ ಆಲೋಚನೆ ಒಮ್ಮೆಯೂ ಬರಲಿಲ್ಲ. ಯಾಕೆಂದರೆ, ಅವುಗಳ ಸೇವನೆಯಿಂದ ಆರೋಗ್ಯ ಉತ್ತಮವಾಗಬಹುದೇ ಹೊರತು ಹದಗೆಡಲು ಸಾಧ್ಯವಿಲ್ಲ ಎಂಬುದು ಇವರ ನಿಶ್ಚಿತ ಅಭಿಪ್ರಾಯವಾಗಿತ್ತು. ಹಾಗಾಗಿ, 21 ದಿನಗಳಲ್ಲಿ ಶರೀರಕ್ಕೆ ತೊಂದರೆಯಾಗುತ್ತಿದ್ದರೂ, ಚಾಲೆಂಜನ್ನು ಮುಗಿಸುವ ತನಕ ಬಿಡುವುದಿಲ್ಲ ಎಂದು ಸಂಕಲ್ಪಿಸಿ ಆ ಪಂಥವನ್ನು ಪೂರ್ಣಗೊಳಿಸಿದರು. 21 ದಿನಗಳ ನಂತರವೂ ಆರೋಗ್ಯ ಸುಧಾರಿಸಲಿಲ್ಲ, ಹಾಗೆಯೇ, ಮೇಲೆ ಹೇಳಿದ ಲಕ್ಷಣಗಳ ಜತೆಗೆ ಇನ್ನಷ್ಟು ವಿವಿಧ ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳತೊಡಗಿದವು. ಆದರೂ ಮೊಳಕೆಕಾಳಿನ ಬಳಕೆಯನ್ನು ಇವರು ಮುಂದುವರಿಸಿಕೊಂಡೇಹೋದರು. ಯಾವ ರೀತಿಯ ಮದ್ದುಗಳಿಂದಲೂ ಆರೋಗ್ಯ ಉತ್ತಮವಾಗದಿದ್ದಾಗ ಒಮ್ಮೆ ಆಯುರ್ವೇದ ವೈದ್ಯರ ಸಲಹೆ ಪಡೆಯೋಣವೆಂದು ಕ್ಲಿನಿಕ್‌ಗೆ ಬಂದರು. ಆರೋಗ್ಯವನ್ನು ಸುಧಾರಿಸಬೇಕಾಗಿದ್ದ ಒಂದು 'ಫಿಟ್ನೆಸ್ ಚಾಲೆಂಜ್', ಆರೋಗ್ಯವಂತರೊಬ್ಬರನ್ನು ವೈದ್ಯರಲ್ಲಿಗೆ ಹೋಗುವಂತೆ ಮಾಡಿದ ಸನ್ನಿವೇಶವಿದು. ಹಾಗಾದರೆ ಇವರು ತಪ್ಪಿದ್ದೆಲ್ಲಿ? ಮೊಳಕೆಕಾಳು ಒಳ್ಳೆಯದಲ್ಲವೇ? ಅದನ್ನು ಸೇವಿಸಬಾರದೆ? ಸೇವಿಸುವ ಪರಿ ಹೇಗೆ? ಎಂಬ ಪ್ರಶ್ನೆಗಳಿಗೆ ಆಯುರ್ವೇದದಲ್ಲಿ ಉತ್ತರ ಹುಡುಕಲು ಯತ್ನಿಸೋಣ.

ಆಯುರ್ವೇದ ಶಾಸ್ತ್ರದ ಪ್ರಕಾರ, ಆಹಾರವು ನಮ್ಮ ಆರೋಗ್ಯದ ಅಡಿಪಾಯ. ಆಹಾರದ ಜ್ಞಾನವಿಲ್ಲದೆ ನಮ್ಮ ಸ್ವಾಸ್ಥ್ಯದ ಸಂರಕ್ಷಣೆ ಅಸಾಧ್ಯ. ಆದ್ದರಿಂದ, ಆಯುರ್ವೇದ ಗ್ರಂಥಗಳು ಆಹಾರವನ್ನು ನಮ್ಮ ಲಾಭಕ್ಕಾಗಿ ಸವಿಸ್ತಾರವಾಗಿ ಬಿಡಿಬಿಡಿಯಾಗಿ ವ್ಯಾಖ್ಯಾನಿಸಿವೆ. ಆಯುರ್ವೇದವು ಆಹಾರವನ್ನು ವಿವಿಧ ರೀತಿಯಲ್ಲಿ ವಿಂಗಡಿಸುವುದಾದರೂ, ಮುಖ್ಯವಾಗಿ 'ಹಿತ ಆಹಾರ' ಮತ್ತು 'ಅಹಿತ ಆಹಾರ' ಎಂಬ 2 ಗುಂಪುಗಳಲ್ಲಿ ಅವನ್ನು ವರ್ಗೀಕರಿಸುತ್ತದೆ. ಯಾವ ಆಹಾರವು, ನಾವು ಸೇವಿಸಿದಾಗ ಶಾರೀರಿಕ ಧಾತುಗಳ ಸಮ–ಅವಸ್ಥೆಯನ್ನು ಸ್ಥಾಪಿಸಿ, ಅವುಗಳಲ್ಲಿರುವ ವಿಷಮತೆ ಮತ್ತು ವಿಕೃತಿಯನ್ನು ಹೋಗಲಾಡಿಸಿ, ಸ್ವಾಸ್ಥ್ಯವನ್ನು ಸಂರಕ್ಷಿಸುತ್ತದೆಯೋ ಅದು 'ಹಿತ ಆಹಾರ'. ಇದಕ್ಕೆ ವಿರುದ್ಧವಾದದ್ದು 'ಅಹಿತ ಆಹಾರ'. ನಮ್ಮ ಶರೀರ–ಇಂದ್ರಿಯ–ಮನಸ್ಸುಗಳನ್ನು ದಿನನಿತ್ಯ ಪೋಷಿಸಲು ಹಿತ ಆಹಾರಗಳನ್ನು ಸೇವಿಸುವ ಅಗತ್ಯವಿದೆ. ಉದಾಹರಣೆಗೆ, ಹಸುವಿನ ಹಾಲು–ತುಪ್ಪ, ಒಣದ್ರಾಕ್ಷಿ, ಎಳ್ಳೆಣ್ಣೆ, ಸೈಂಧವ ಉಪ್ಪು, ಹೆಸರುಬೇಳೆ ಇತ್ಯಾದಿ. ಇವನ್ನು ನಿತ್ಯ ಸೇವಿಸಿದಾಗ ಶರೀರದ ಎಲ್ಲ ಅವಯವಗಳಿಗೂ ಪೋಷಣೆ ದೊರಕಿ ಆರೋಗ್ಯದ ಸಂರಕ್ಷಣೆಯಾಗುತ್ತದೆ. ಇವುಗಳ ಬದಲಿಗೆ ಅಹಿತ ಆಹಾರಗಳ ನಿತ್ಯ ಸೇವನೆಗೆ ಮುಂದಾದರೆ ಸ್ವಾಸ್ಥ್ಯದ ಏರುಪೇರು ಖಚಿತ. ನೆನಪಿಡಿ– ಆಯುರ್ವೇದದ ಪ್ರಕಾರ ಮೊಳಕೆಕಾಳು 'ಹಿತ' ಆಹಾರವಲ್ಲ, ಇದರ ನಿತ್ಯಸೇವನೆ ನಿಷಿದ್ಧ. ಅಚ್ಚರಿಯಾಯಿತೇ? ಹೌದು, ಆಯುರ್ವೇದದ ಪ್ರಕಾರ ಮೊಳಕೆಕಾಳು ನಿತ್ಯಾಹಾರವಾಗಿ ಬಳಸುವುದಕ್ಕೆ ಯೋಗ್ಯವಾದಂಥ ಪದಾರ್ಥವಲ್ಲ. ಇದು ಆರೋಗ್ಯವನ್ನು ವೃದ್ಧಿಸುವ ಆಹಾರದ್ರವ್ಯವಲ್ಲ. ಇದಕ್ಕೆ ಕಾರಣವೇನೆಂಬುದನ್ನು ನೋಡೋಣ.

ಮೊಳಕೆಕಾಳನ್ನು ಜೀರ್ಣಿಸಿಕೊಳ್ಳುವುದು ಬಹಳ ಕಷ್ಟ– ಇದು ಜೀರ್ಣಕ್ಕೆ ಜಡವಾದ ಆಹಾರ. ಹಾಗೆಯೇ, ಇದು ಜೀರ್ಣವಾದ ನಂತರ ದೇಹದಲ್ಲಿ ವಿದಾಹವನ್ನು ಹೆಚ್ಚಿಸುತ್ತದೆ. ಅದರಲ್ಲಿರುವ ಪಿಷ್ಟದ ಅಂಶಗಳು ಸರಿಯಾಗಿ ಜೀರ್ಣವಾಗದೆ, ಹೊಟ್ಟೆಯುಬ್ಬರ ಮತ್ತು ಹೊಟ್ಟೆನೋವನ್ನು ಉಂಟುಮಾಡುತ್ತವೆ. ಇದು ದೇಹದಲ್ಲಿನ ವಾತ ಮತ್ತು ಪಿತ್ತ ದೋಷಗಳನ್ನು ಕೆರಳಿಸಿ ವಿವಿಧ ರೀತಿಯ ತೊಂದರೆಗಳನ್ನುಂಟುಮಾಡುತ್ತದೆ. ಒಣಗಿಸುವ ಸ್ವಭಾವ ಹೊಂದಿರುವ ಮೊಳಕೆಕಾಳು ನಮ್ಮ ಶರೀರದ ಆಂತರಿಕ ಪದರಗಳಲ್ಲಿರುವ ಜಿಡ್ಡಿನಂಶವನ್ನು ಒಣಗಿಸಿ ದೇಹದಲ್ಲಿ ನೋವು ಮತ್ತು ರೂಕ್ಷತೆಯನ್ನು ಹೆಚ್ಚಿಸುತ್ತದೆ. ಮೊಳಕೆಕಾಳು ಮಲಪ್ರಮಾಣವನ್ನು ಹೆಚ್ಚಿಸುತ್ತದೆಯೇ ಹೊರತು, ದೇಹದ ವಿವಿಧ ಅವಯವಗಳನ್ನು ಪೋಷಿಸುವ ಗುಣವನ್ನು ಹೊಂದಿಲ್ಲ. ಹಾಗಾಗಿ ಎಳೆಯ ಮಕ್ಕಳು, ವ್ಯಾಧಿಗ್ರಸ್ತರು ಗರ್ಭಿಣಿಯರು ಮತ್ತು ವೃದ್ಧರಲ್ಲಿ ಇದರ ಬಳಕೆಯನ್ನು ನಿಷೇಧಿಸಲಾಗಿದೆ. ಜೀರ್ಣಶಕ್ತಿ ಕಮ್ಮಿಯಿರುವವರು ಇದನ್ನು ಸೇವಿಸಿದಾಗ ಬೇಧಿ ಮತ್ತು ಮೂಲವ್ಯಾಧಿಗಳು ಉಂಟಾಗಬಹುದು. ಇನ್ನು ಕೆಲವರಲ್ಲಿ ಇದು ಮಲವನ್ನು ಕಟ್ಟಿ ವಿಬಂಧವನ್ನು ಸಹ ಪ್ರಾರಂಭಿಸಬಹುದು. ನಮ್ಮ ಕಣ್ಣುಗಳ ಆರೋಗ್ಯಕ್ಕೆ ಮತ್ತು ದೃಷ್ಟಿಯ ಚುರುಕುತನಕ್ಕೆ ಮೊಳಕೆಕಾಳು ಹಾನಿಕರ. ಇದು ದೇಹದಲ್ಲಿ ವಾಯುವನ್ನು ಅತಿಶೀಘ್ರವಾಗಿ ಕೆರಳಿಸಿ, ಉದರಶೂಲ, ಸಂಧಿಶೂಲ, ಚರ್ಮ ಒಣಗುವಿಕೆ, ಕೂದಲು ಉದುರುವಿಕೆ ಮತ್ತು ಅತಿಯಾದ ಬಾಯಾರಿಕೆಗಳ ಮೂಲಕ ಬಾಧಿಸುತ್ತದೆ. ಈ ಎಲ್ಲಾ ಅವಗುಣಗಳಿಂದಾಗಿ ಮೊಳಕೆಕಾಳನ್ನು ಬಹಳ ಜಾಗರೂಕತೆಯಿಂದ ಬಳಸಬೇಕೆಂಬ ಎಚ್ಚರಿಕೆಯನ್ನು ಆಯುರ್ವೇದ ನೀಡುತ್ತದೆ.

ಹಾಗಾದರೆ, ಯಾವುದೇ ತೊಂದರೆಯಿಲ್ಲದೆ ಮೊಳಕೆಕಾಳನ್ನು ಬಳಸುವ ಕ್ರಮವನ್ನು ಅರಿಯೋಣ. ಮೊದಲಿಗೆ ನೆನಪಿಡಬೇಕಾದ ಅಂಶವೆಂದರೆ, ಮೊಳಕೆಕಾಳನ್ನು ಪ್ರತಿನಿತ್ಯ ಬಳಸುವಂತಿಲ್ಲ, ಇದನ್ನು ಹಸಿಯಾಗಿ ತಿಂದರೆ ತೊಂದರೆ ತಪ್ಪದು, ಹಾಗಾಗಿ ವಿವಿಧ ಅಡುಗೆಗಳಲ್ಲಿ ಬೇಯಿಸಿಯೇ ಬಳಸುವುದು ಉತ್ತಮ. ಪ್ರತಿನಿತ್ಯ ವ್ಯಾಯಾಮ ಮಾಡಿ ಜೀರ್ಣಶಕ್ತಿಯನ್ನು ಚುರುಕಾಗಿ ಇಟ್ಟುಕೊಂಡವರು ಇದನ್ನು ಹಸಿಯಾಗಿ ಬಳಸಿದರೂ ತತ್‌ಕ್ಷಣ ಹೆಚ್ಚು ತೊಂದರೆಯಾಗದು; ಆದರೆ ವ್ಯಾಯಾಮ ಮಾಡದವರು ಮತ್ತು ಜೀರ್ಣಶಕ್ತಿ ಅಷ್ಟೇನೂ ಉತ್ತಮವಾಗಿಲ್ಲದವರು ಇದನ್ನು ಸದಾ ಬೇಯಿಸಿಯೇ ಸೇವಿಸತಕ್ಕದ್ದು. ಮೊಳಕೆಕಾಳನ್ನು 2 ವಾರಕ್ಕೊಮ್ಮೆ ಬಳಸುವುದು ಕ್ಷೇಮಕರ. ಅದರಲ್ಲೂ ರಾತ್ರಿಯ ಆಹಾರದ ಜತೆ ಬೇಡ. ಸಾಮಾನ್ಯವಾಗಿ ಚಳಿಗಾಲದಲ್ಲಿ ನಮ್ಮ ಜೀರ್ಣಶಕ್ತಿ ಉತ್ತಮವಾಗಿರುವುದರಿಂದ, ಮೊಳಕೆಕಾಳನ್ನು ಆಗ ಹೆಚ್ಚಾಗಿ ಬಳಸುವುದು ಸೂಕ್ತ. ಬೇಸಗೆ ಅಥವಾ ಮಳೆಗಾಲದಲ್ಲಿ ನಮ್ಮ ಜೀರ್ಣಶಕ್ತಿ ಕಡಿಮೆಯಿದ್ದಾಗ ಇದರ ಬಳಕೆ ನಿಷಿದ್ಧ.

ಕಾಳನ್ನು ಚೆನ್ನಾಗಿ ನೆನೆಸಿ, ಮೊಳಕೆ ಬರುವ ಮುನ್ನವೇ ಬಳಸುವುದು ಕ್ಷೇಮ. ನಂತರ ಇದನ್ನು ಅಡುಗೆಯಲ್ಲಿ ಬಳಸುವಾಗ, ಹೆಚ್ಚಾಗಿ ಎಣ್ಣೆ ಅಥವಾ ತುಪ್ಪದಂಥ ಜಿಡ್ಡಿನ ಪದಾರ್ಥಗಳಲ್ಲಿ ಇದನ್ನು ಬಾಡಿಸಿ, ಜೀರಿಗೆ/ಬೆಳ್ಳುಳ್ಳಿ/ಸೋಂಪು/ಹಿಂಗುಗಳನ್ನು ಒಗ್ಗರಣೆಯಲ್ಲಿ ಹೇರಳವಾಗಿ ಬಳಸಿದಾಗ, ಕಾಳುಗಳಿಂದಾಗುವ ತೊಂದರೆ ಕಡಿಮೆಯಾಗುತ್ತದೆ. ಎಣ್ಣೆ ಅಥವಾ ತುಪ್ಪದ ಒಗ್ಗರಣೆ ನೀಡಿ ತಯಾರಿಸುವ ಹುಳಿ, ಪಲ್ಯ, ಗೊಜ್ಜು, ಉಸ್ಲಿಗಳ ರೂಪದಲ್ಲಿ ಇದನ್ನು ಸೇವಿಸಿದಾಗ ಹೆಚ್ಚಾಗಿ ಹಾನಿ ತರದು. ಮಧ್ಯಾಹ್ನದ ಸಮಯದಲ್ಲಿ ನಮ್ಮ ಜಠರಾಗ್ನಿಯು ಉತ್ತಮವಾಗಿ ಉರಿಯುವುದರಿಂದ, ಮೊಳಕೆಕಾಳಿನ ಖಾದ್ಯಗಳನ್ನು ಸದಾ ಮಧ್ಯಾಹ್ನದ ಊಟದಲ್ಲಿ ಬಳಸುವುದು ಉತ್ತಮ. ಮೊಳಕೆಕಾಳಿನ ಅಡುಗೆಗಳ ಜತೆ ಒಂದು ಲೋಟ ಬಿಸಿಯಾದ ಜೀರಿಗೆನೀರು ಅಥವಾ ಶುಂಠಿನೀರನ್ನು ಊಟದ ಮಧ್ಯೆ ಮಧ್ಯೆ ಸ್ವಲ್ಪ ಸ್ವಲ್ಪ ಹೀರುವುದರಿಂದ ಸುಲಭವಾಗಿ ಜೀರ್ಣಿಸಿಕೊಳ್ಳಬಹುದು. ಆದರೆ, ಪದೇಪದೆ ಬಾಧಿಸುವ ಸಂಧಿಶೂಲ, ಸಂಧಿಯೂತ, ಚರ್ಮದ ಕಾಯಿಲೆ, ಕಣ್ಣಿನ ತೊಂದರೆ, ಶರೀರದಲ್ಲಿನ ಬಾವು, ಮೂಳೆಗಳ ತೊಂದರೆ, ಮೂಲವ್ಯಾಧಿ, ವಿಬಂಧ, ಅತಿಸಾರ, ನಿದ್ರಾಹೀನತೆಯಂಥ ತೊಂದರೆಗಳಿದ್ದವರು ಮೊಳಕೆಕಾಳನ್ನು ಬಳಸದಿರುವುದೇ ಕ್ಷೇಮ. ಸಪೂರ ದೇಹದವರು ಮತ್ತು ಶಾರೀರಿಕ ಬಲ ಕಡಿಮೆಯಿರುವ ವಾತಪ್ರಕೃತಿಯವರು ಮೊಳಕೆಕಾಳಿನಿಂದ ದೂರವಿರುವುದೇ ಒಳಿತು. 'ಅಯ್ಯೋ, ನನಗೆ ಈ ತೊಂದರೆಗಳೇನಿಲ್ಲ, ಆರೋಗ್ಯವಾಗಿರುವೆ! ಹಾಗಾಗಿ ಮೊಳಕೆಕಾಳನ್ನು ನಾನು ಹೇಗೆ ಬೇಕಾದರೂ, ಎಷ್ಟು ಬೇಕಾದರೂ ಬಳಸಬಹುದು' ಎಂಬ ಹುಂಬತನ ಬೇಡ. ನಿಮಗೆ ಈ ತೊಂದರೆಗಳಿಲ್ಲದಿದ್ದಾಗ್ಯೂ, ಮೊಳಕೆಕಾಳಿನ ಅತಿಯಾದ ಬಳಕೆಯು ಕ್ರಮೇಣವಾಗಿ ಆ ತೊಂದರೆಗಳು ನಿಮ್ಮನ್ನು ಬಾಧಿಸುವಂತೆ ಮಾಡಬಹುದು. '21 ಡೇ ಚಾಲೆಂಜ್' ತೆಗೆದುಕೊಂಡ ನನ್ನ ಪೇಷೆಂಟ್‌ನ ಉದಾಹರಣೆ ನಿಮಗೆ ಸದಾ ನೆನಪಿರಲಿ!

ಯಾವುದೇ ವಸ್ತುವನ್ನು ಬಳಸುವ ಮುನ್ನ, ಬಳಸುತ್ತಿರುವ ವಸ್ತುವಿನ ಗುಣದ ಅರಿವು ಮತ್ತು ನಮ್ಮ ಶರೀರದ ಸದ್ಯದ ಸ್ಥಿತಿಯ ಪರಿಜ್ಞಾನ ಈ ಎರಡು ವಿಷಯಗಳು ನಿಮ್ಮ ಗಮನದಲ್ಲಿರಬೇಕು. ಇದನ್ನರಿತು ವಿವೇಚನೆಯಿಂದ ಬಳಸಿದರೆ, ಯಾವ ದ್ರವ್ಯವೂ ನಮಗೆ ಹಾನಿಮಾಡದು. ಯಾವ ಆಹಾರ ಪದಾರ್ಥವನ್ನೂ ನಾವು ತ್ಯಜಿಸಬೇಕಿಲ್ಲ. ಯಾರಿಗೆ? ಯಾವಾಗ? ಎಷ್ಟು? ಹೇಗೆ? ಎಂಬ ಪ್ರಶ್ನೆಗಳಿಗೆ ಉತ್ತರ ಕಂಡುಕೊಂಡು ನಂತರ ಬಳಸುವುದು ಸರಿಯಾದ ಮಾರ್ಗ. 'ಅನುಯಾಯಾತ್ ಪ್ರತಿಪದಂ ಸರ್ವಧರ್ಮೇಷು ಮಧ್ಯಮಾಮ್' ಎನ್ನುವಂತೆ, ಯಾವುದೇ ವಸ್ತುವಿರಲಿ, ಅದು ಅಮೃತವೇ ಆಗಿರಲಿ, ಅದನ್ನು ಕ್ರಮತಪ್ಪಿ ಬಳಸಿದರೆ ತೊಂದರೆ ಕಟ್ಟಿಟ್ಟಬುತ್ತಿ. ಹಿತಮಿತವಾಗಿ ಬಳಸಿದಾಗ ಆರೋಗ್ಯವನ್ನು ಹಾಳುಮಾಡಿಕೊಳ್ಳದೆ ಎಲ್ಲವನ್ನೂ ಅನುಭವಿಸಿ ತೃಪ್ತರಾಗಬಹುದು. Always remember- Moderation is the key!

ನಾರದ ಸಂಚಾರ

ಕಲಹಪ್ರಿಯ
naadigru@gmail.com

ದರ್ಶನಭಾಗ್ಯಕ್ಕೆ ಅಹವಾಲು!

ತಿರುಪತಿ ಲಡ್ಡು' ಪ್ರಸಾದದಲ್ಲಿ ಪ್ರಾಣಿಜನ್ಯ ಕೊಬ್ಬು ಬೆರಕೆಯಾಗಿ, ಅದರ ಪಾವಿತ್ರ್ಯಕ್ಕೆ ಧಕ್ಕೆಯಾಗಿದೆ ಎಂಬ ಸಂಗತಿಯು ಕೆಲ ದಿನಗಳ ಹಿಂದೆ ಅದೆಂಥ ಸಂಚಲನವನ್ನು ಹುಟ್ಟುಹಾಕಿತು, ಭಾರಿ ವಿವಾದಕ್ಕೆ ಕಾರಣವಾಯಿತು ಎಂಬುದನ್ನು ನಿಮಗೆ ಬಿಡಿಸಿ ಹೇಳಬೇಕಿಲ್ಲ. ಸದರಿ 'ಲಡ್ಡು' ವಿವಾದವು ಜನಮಾನಸದಿಂದ ಮಾಸುವ ಮುನ್ನವೇ, 'ದೇಗುಲ ಪಟ್ಟಣ' ತಿರುಪತಿಯು ಮತ್ತೊಮ್ಮೆ ಸುದ್ದಿಯಲ್ಲಿದೆ. ಇದಕ್ಕೆ ಕಾರಣರಾಗಿರುವವರು ರಾಜಕಾರಣಿಗಳೇ ಎಂಬುದು ಗಮನಾರ್ಹ ('ಮತ್ತಿನ್ಯಾರು ಆಗಿರಲು ಸಾಧ್ಯ?' ಎಂದು ಗೊಣಗದಿರಿ!). ಈ ಬಾರಿಯ ಸುದ್ದಿಯ ಹೆಚ್ಚುಗಾರಿಕೆ ಎಂದರೆ, ಇದೊಂದು ಅಂತಾರಾಜ್ಯ ಚರ್ಚಾವಿಷಯವಾಗಿ ಮಾರ್ಪಟ್ಟಿದೆ. ತೆಲಂಗಾಣದ ಕಾಂಗ್ರೆಸ್ ಶಾಸಕ ಅನಿರುದ್ಧ ರೆಡ್ಡಿಯವರು 'ತಿರುಮಲ–ತಿರುಪತಿ ದೇವಸ್ಥಾನಂ' ಆಡಳಿತ ವ್ಯವಸ್ಥೆಯನ್ನು ಇತ್ತೀಚೆಗೆ ಪ್ರಶ್ನಿಸಿರುವುದೇ ಇದಕ್ಕೆ ಕಾರಣ. ''ದೇವರ ದರ್ಶನ ಮತ್ತು ವಸತಿಯ ವ್ಯವಸ್ಥೆಯನ್ನು ಕಲ್ಪಿಸುವಂತೆ ಕೋರಿ ತೆಲಂಗಾಣದ ಜನಪ್ರತಿನಿಧಿಗಳು ನೀಡಿದ ಶಿಫಾರಸು ಪತ್ರವನ್ನು ದೇಗುಲದ ಆಡಳಿತ ವ್ಯವಸ್ಥೆಯು ಯಾಕ್ರೀ ಮಾನ್ಯ ಮಾಡ್ತಾ ಇಲ್ಲಾ?'' ಎಂದು ರೆಡ್ಡಿಗಾರು ಪ್ರಶ್ನಿಸಿಬಿಟ್ಟಿದ್ದಾರಂತೆ. ಮಾತ್ರವಲ್ಲದೆ, ''ಆಂಧ್ರಪ್ರದೇಶದ ರಾಜಕೀಯ ನಾಯಕರು ತಮಗೆ ಬೇಕಾದಾಗಲೆಲ್ಲಾ, ತೆಲಂಗಾಣದ ಉದ್ದಗಲಕ್ಕೂ ಹಬ್ಬಿಕೊಂಡಿರುವ ದೇಗುಲಗಳಲ್ಲಿ ವಿಶೇಷ ದರ್ಶನದ ಸವಲತ್ತುಗಳನ್ನು ಆನಂದಿಸುತ್ತಾರೆ; ಆದರೆ ನಮಗ್ಯಾಕೆ ಆ ಭಾಗ್ಯವಿಲ್ಲ? ನಮ್ಮೆಡೆಗಿನ ನಿಮ್ಮ ನಿರ್ಲಕ್ಷ್ಯ ಹೀಗೇ ಮುಂದುವರಿದರೆ, ಆಂಧ್ರಪ್ರದೇಶದ ರಾಜಕೀಯ ನಾಯಕರಿಗೆ ತೆಲಂಗಾಣದಲ್ಲಿ ಇನ್ನು ಮುಂದೆ ಹಾರ್ದಿಕ ಸ್ವಾಗತ ಸಿಗೋದಿಲ್ಲ ನೋಡಿ'' ಎಂಬುದಾಗಿ ಕೂಡ 'ಅಸಮಾಧಾನಿತ' ಅನಿರುದ್ಧ ರೆಡ್ಡಿಯವರು ತಮ್ಮ ಆಕ್ರೋಶವನ್ನು ಕಾರಿಕೊಂಡಿದ್ದಾರಂತೆ!

ಏಡುಕೊಂಡಲವಾಡಾ ವೇಂಕಟರಮಣಾ, ನೀನೇ ಕಾಪಾಡಪ್ಪಾ!!

ನೀನ್ಯಾಕೋ, ನಿನ್ನ ಹಂಗ್ಯಾಕೋ?

ಚನ್ನಪಟ್ಟಣದ ಉಪಚುನಾವಣಾ ಕಣದಲ್ಲಿ ದಿನಗಳೆದಂತೆ ಬಿಸಿಯೇರುತ್ತಿದೆ. ಇತ್ತೀಚಿನ ಪ್ರಚಾರ ಸಭೆಯೊಂದರಲ್ಲಿ, ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿ ಹಾಗೂ ಜೆಡಿಎಸ್ ಯುವಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿಯವರನ್ನು 'ಹೊರಗಿನವರು' ಎಂದು ಕರೆಯುವ ಮೂಲಕ ಕಾಂಗ್ರೆಸ್ ನಾಯಕರೊಬ್ಬರು ಅವರನ್ನು ಮೂಲೆಗುಂಪು ಮಾಡಲು ಯತ್ನಿಸಿದರಂತೆ. ಸದರಿ ಕಾಂಗ್ರೆಸ್ ನಾಯಕರು ತಮ್ಮ 'ಸ್ಥಳೀಯ ಅಭ್ಯರ್ಥಿ' ಸಿ.ಪಿ.ಯೋಗೇಶ್ವರ್ ಅವರ ಪರವಾಗಿ ಮತ ಯಾಚಿಸುತ್ತಿದ್ದವರಲ್ಲವೇ? ಹೀಗಾಗಿ ಏನಾದರೊಂದು ಅಸ್ತ್ರ ಬೇಕಲ್ಲಾ, ಆಗ ಅವರಿಗೆ ಸಿಕ್ಕಿದ್ದೇ 'ಇವ ನಮ್ಮವ' ಮತ್ತು 'ಅವ ಹೊರಗಿನವ' ಎಂಬ ಮಾನದಂಡಗಳು. ಜತೆಗೆ ತಮ್ಮ ಮಾತನ್ನು ಸಮರ್ಥಿಸಿಕೊಳ್ಳಲೆಂದು ಅವರು, ''ಅಲ್ಲಾ ಕಣ್ರೀ, ಎಚ್.ಡಿ.ಕುಮಾರಸ್ವಾಮಿಯವರು ಮೊದಲು ರಾಮನಗರದಿಂದ, ನಂತರ ಚನ್ನಪಟ್ಟಣದಿಂದ ಸ್ಪರ್ಧಿಸಿದರು. ತರುವಾಯ ಅವರು ಮಂಡ್ಯ ಕ್ಷೇತ್ರದಿಂದ ಸ್ಪರ್ಧಿಸಿ ಸಂಸದರಾಗಿ ಚುನಾಯಿತರಾದರು. ಈಗ ಅವರು ತಮ್ಮ ಮಗ ನಿಖಿಲ್‌ರನ್ನು ಚನ್ನಪಟ್ಟಣದಲ್ಲಿ ಕಣಕ್ಕಿಳಿಸಿದ್ದಾರೆ. ಇವರನ್ನು ಆಯ್ಕೆ ಮಾಡೋಕ್ಕೆ ನಮ್ ಚನ್ನಪಟ್ಟಣದ ಜನಕ್ಕೇನು ಮಾನ–ಮರ್ಯಾದೆ, ಸ್ವಾಭಿಮಾನ ಇಲ್ವೇನ್ರೀ?'' ಎಂಬ ಬಾಣ ಬಿಟ್ಟಿದ್ದೂ ಉಂಟಂತೆ.

ಈ ಮಾತಿಗೆ ಜೆಡಿಎಸ್‌ನ ಒಂದಷ್ಟು ಕಾರ್ಯಕರ್ತರು, ''ಅದು ಸರಿ ಕಣಣ್ಣಾ, ಕೇರಳದ ವಯನಾಡಿನಲ್ಲಿ ಸ್ಪರ್ಧಿಸಿದ ನಿಮ್ ಪಕ್ಷದ ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ವಾದ್ರಾ, ಅವರು ಅಲ್ಲಿನ ಸ್ಥಳೀಕರಾ?'' ಎಂದು ತಿರುಗೇಟು ನೀಡಿದ್ದಕ್ಕೆ, ಪ್ರಚಾರ ಭಾಷಣ ಬಿಗಿದ ಆ ಕಾಂಗ್ರೆಸ್ ನಾಯಕರಿಂದ ಉತ್ತರ ಬರಲಿಲ್ಲವಂತೆ!!

ನೋಟದಲ್ಲಿ 'ಲಿಟ್ಲ್ ಮಾಸ್ಟರ್', ಆಟದಲ್ಲಿ 'ಮೆಗಾ ಬ್ಲಾಸ್ಟರ್'

ವಿಶ್ವರೂಪ ದರ್ಶನ
ಯಗಟಿ ರಘು ನಾಡಿಗ್
naadigru@gmail.com

ದಶಕಗಳ ಹಿಂದಿನ ಕಥೆಯಿದು. ಮಾಸ್ಟರ್ ಹಿರಣ್ಣಯ್ಯನವರ ಯಾವುದೋ ನಾಟಕದ ವಿಶೇಷ ಪ್ರದರ್ಶನ ಏರ್ಪಾಡಾಗಿತ್ತು. ಅದಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದವರಲ್ಲಿ ವಾಮನಾಕಾರದ ಒಬ್ಬ ವ್ಯಕ್ತಿಯೂ ಇದ್ದರು. ಪ್ರದರ್ಶನದ ನಡುವೆ ಅತಿಥಿಗಳನ್ನು ಸನ್ಮಾನಿಸಲು ಮುಂದಾದ ಹಿರಣ್ಣಯ್ಯನವರು, ''ಚೋಟುದ್ದ ಇದ್ದೀಯಾ, ಅದೇನು ಆಟ ಆಡ್ತೀಯಪ್ಪಾ..?!!'' ಎಂದು ಆ ವಾಮನಮೂರ್ತಿಯ ಮೇಲೆ ಅಕ್ಷರಶಃ ಲಲ್ಲೆಗರೆದರಂತೆ. ಹಾಗೆ ಮುದ್ದುಮಾಡಿಸಿಕೊಂಡವರು 'ಲಿಟ್ಲ್ ಮಾಸ್ಟರ್' ಎಂದೇ ಖ್ಯಾತರಾದ, ಕ್ರಿಕೆಟ್ ಜೀವನದ ದಂತಕಥೆಯಾಗಿರುವ ಗುಂಡಪ್ಪ ರಂಗನಾಥ ವಿಶ್ವನಾಥ್ ಅಥವಾ ಜಿ.ಆರ್.ವಿಶ್ವನಾಥ್. ಆತ್ಮೀಯರು–ಅಭಿಮಾನಿಗಳ ಬಾಯಲ್ಲಿ ಇವರು 'ಷಾರ್ಟ್ ಆ್ಯಂಡ್ ಸ್ವೀಟ್' ಆಗಿ 'ವಿಶಿ'.

ಇನ್ನೊಂದು ಘಟನೆ. ಭಾರತ ಮತ್ತು ವೆಸ್ಟ್ ಇಂಡೀಸ್ ನಡುವಿನ ಕ್ರಿಕೆಟ್ ಪಂದ್ಯ. ಬ್ಯಾಟಿಂಗ್ ಕ್ರೀಸ್‌ನಲ್ಲಿದ್ದ 'ವಿಶಿ' ಜಪ್ಪಯ್ಯ ಅಂದರೂ ಜಗ್ಗುತ್ತಿಲ್ಲ, ಔಟಾಗುತ್ತಿಲ್ಲ. ಬೌಲಿಂಗ್ ದಾಳಿಗೆ ಇಳಿದಿದ್ದ ಆ್ಯಂಡಿ ರಾಬರ್ಟ್ಸ್, ''ದೈತ್ಯದೇಹಿಗಳ ವಿಕೆಟ್ ಅನ್ನೇ ಕೆಡವಿರುವ ನನಗೆ ಈ ಚಿಲ್ಟಾರಿ ವಿಕೆಟ್ ಒಪ್ಪಿಸದೆ ಆಟ ಆಡಿಸ್ತಾ ಇದ್ದಾನಲ್ಲಾ?'' ಎಂದು ಸಾಕಷ್ಟು ಹತಾಶರಾಗಿದ್ದರಂತೆ. ಅಂದಹಾಗೆ, ಆಂಡಿ ರಾಬರ್ಟ್ಸ್ ಮಾರಕ ಬೌಲಿಂಗ್‌ಗೆ ಹೆಸರಾಗಿದ್ದವರು. ಅವರ ದಾಳಿಗೆ ಒಂದೋ ಎದುರಾಳಿಗಳ ವಿಕೆಟ್ ಬೀಳುತ್ತಿತ್ತು, ಇಲ್ಲವೇ ಅವರು ಎಸೆದ ಚೆಂಡು ಬ್ಯಾಟ್ಸ್‌ಮನ್‌ನ ಮುಖ–ಮೂತಿಗೆ ಅಪ್ಪಳಿಸಿ ರಕ್ತ ಚಿಮ್ಮುತ್ತಿತ್ತು. ಇಂಥ 'ರಕ್ತಚರಿತೆ'ಯಿದ್ದ ಆಂಡಿ ರಾಬರ್ಟ್ಸ್ ತಮಗೆ ವಿಕೆಟ್ ಒಪ್ಪಿಸದ 'ವಿಶಿ' ಅವರನ್ನು ಉದ್ದೇಶಿಸಿ, ''I don't want your wicket, I want your blood'' ಎಂದು ಹೇಳಿದ್ದರಂತೆ!!

ಮೇಲಿನ ದೃಷ್ಟಾಂತಗಳನ್ನು ಬೆಂಗಳೂರಿನಲ್ಲಿದ್ದ ನಮ್ಮಣ್ಣ, ನಾವಿದ್ದ ಹಳ್ಳಿ ಯಗಟಿಗೆ ಬಂದಾಗ ಹೇಳಿದ್ದು. ಕ್ರಿಕೆಟ್ ಬಗ್ಗೆ ಅಸಾಧ್ಯ ಹುಚ್ಚು ಹಿಡಿಸಿಕೊಂಡಿದ್ದ ನಾನು ಅವನ್ನು ಮನಸಾರೆ ಚಪ್ಪರಿಸಿದ್ದುಂಟು. ಏಕೆಂದರೆ, ಈಗಿನಂತೆ ಆಗಿನ್ನೂ ಮನೆಮನೆಗಳಿಗೂ ಟಿವಿ ದಾಂಗುಡಿಯಿಟ್ಟಿರಲಿಲ್ಲ. ಟಿವಿಯ ಕಥೆ ಹಾಗಿರಲಿ, ಮನೆಯೊಳಗೊಂದು ರೇಡಿಯೋ ಇದ್ದರೆ ಅದೇ ಪುಣ್ಯ! ಬೆಂಗಳೂರಿನಲ್ಲೋ ದೂರದ ದೇಶದಲ್ಲೆಲ್ಲೋ ನಡೆಯುತ್ತಿದ್ದ ಟೆಸ್ಟ್ ಕ್ರಿಕೆಟ್‌ನ ಕಾಮೆಂಟರಿ ಕೇಳುವುದಕ್ಕೆ ಯಾರದ್ದಾದರೂ ಮನೆಯೊಳಗೆ ಕಾಡಿ–ಬೇಡಿ ತೂರಿಕೊಳ್ಳಬೇಕಾಗಿ ಬರುತ್ತಿದ್ದ ಕಾಲವದು. ನಂತರ ಕಿವಿಗಳಿಗೆ ಒದಗುತ್ತಿದ್ದುದು ಅಪ್ಪಟ ರಸದೌತಣ. ಕಾರಣ, ಪಂದ್ಯದ ವೀಕ್ಷಕ ವಿವರಣೆಕಾರರು ಹಾಗೂ ಅದಕ್ಕೆ ಮತ್ತಷ್ಟು ಒಗ್ಗರಣೆ ಹಾಕುತ್ತಿದ್ದ ತಜ್ಞ ವ್ಯಾಖ್ಯಾನಕಾರ ಕೃಷ್ಣಮೂರ್ತಿಯವರು ಒಂದಿಡೀ ಆಟವನ್ನು ರುಚಿಕಟ್ಟಾಗಿ ವರ್ಣಿಸುತ್ತಿದ್ದರು. ನಿಜ ಹೇಳಬೇಕೆಂದರೆ, ಅವರಿಬ್ಬರೂ ಮಹಾಭಾರತದ ಯುದ್ಧವನ್ನು 'ಕಣ್ಣಿಗೆ ಕಟ್ಟುವಂತೆ' ವಿವರಿಸುತ್ತಿದ್ದ 'ಸಂಜಯ' ಸ್ವರೂಪಿಗಳಾಗಿದ್ದರೆ, ಕ್ರಿಕೆಟ್ ಆಟವನ್ನು ಪ್ರತ್ಯಕ್ಷ ವೀಕ್ಷಿಸಲಾಗದ ನಮ್ಮಂಥ ಕ್ರಿಕೆಟ್ ಪ್ರೇಮಿಗಳು 'ಸಾಂದರ್ಭಿಕ ಧೃತರಾಷ್ಟ್ರ'ರಂತಿರುತ್ತಿದ್ದೆವು. ಕಾರಣ ಬ್ಯಾಟಿಂಗ್ ವೇಳೆ 'ವಿಶಿ' ಮಾಡುತ್ತಿದ್ದ ಕವರ್ ಡ್ರೈವ್, ಸ್ಕ್ವೇರ್ ಕಟ್, ಲೇಟ್ ಕಟ್ ಮುಂತಾದ ವಿಶಿಷ್ಟ ಹೊಡೆತಗಳನ್ನು ಅವರು ವಿವರಿಸುತ್ತಿದ್ದ ಪರಿ ಹಾಗಿರುತ್ತಿತ್ತು. ಹೀಗೆ, ನಮ್ಮಲ್ಲಿ ಕ್ರಿಕೆಟ್ ಬಗ್ಗೆ ಅಂಥದೊಂದು ಹುಚ್ಚು ಹಿಡಿಸಿದವರು 'ಲಿಟ್ಲ್ ಮಾಸ್ಟರ್' ವಿಶಿ.

ವಿರಾಟ್ ಕೊಹ್ಲಿ, ರಿಷಭ್ ಪಂತ್, ಕ್ರಿಸ್ ಗೇಲ್, ಸೂರ್ಯಕುಮಾರ್ ಇಂಥವರ ಜಪ ನಡೆಯುತ್ತಿರುವ ಇಂದಿನ ಕ್ರಿಕೆಟ್ ಜಮಾನದಲ್ಲಿ ಈಗ ಇದ್ದಕ್ಕಿದ್ದಂತೆ ಜಿ.ಆರ್.ವಿಶ್ವನಾಥ್ ಅವರ ಹೆಸರಿನ ಪ್ರಸ್ತಾಪವಾಗುತ್ತಿರುವುದಕ್ಕೆ ಕಾರಣವೇನು? ಎಂದು ಎಂಬ ಪ್ರಶ್ನೆ ನಿಮ್ಮಲ್ಲಿ ಮೂಡಿರಬಹುದು. ಅದಕ್ಕೊಂದು ಕಾರಣವಿದೆ. 'ವಿಶಿ' ಅವರು ಟೆಸ್ಟ್ ಕ್ರಿಕೆಟ್‌ಗೆ ಅಡಿಯಿಟ್ಟು ಈ ನವೆಂಬರ್ 15ಕ್ಕೆ 55 ವರ್ಷಗಳು ತುಂಬುತ್ತವೆ. ಹೀಗಾಗಿ ಈ ಸಿಹಿಮೆಲುಕು.

ರಭಸದ ಹೊಡೆತಗಳಿಗೆ, ಓವರ್‌ಗೆ ಮೂರ್ನಾಲ್ಕು ಸಿಕ್ಸರ್ ಬಾರಿಸುವುದಕ್ಕೆ ಹೆಸರಾದ ಬ್ಯಾಟ್ಸ್‌ಮನ್‌ಗಳು ಇಂದು ಸಾಕಷ್ಟಿರಬಹುದು. ಆದರೆ ಬ್ಯಾಟಿಂಗ್‌ನಲ್ಲಿ 'ಕುಸುರಿಗಾರಿಕೆ'ಗೆ, ಕೈಗಳ ಮಣಿಕಟ್ಟನ್ನು ವಿಶಿಷ್ಟವಾಗಿ ತಿರುಗಿಸುವ ಶೈಲಿಗೆ ಹಾಗೂ ಷಾಟ್ ಹೊಡೆಯುವಾಗ ಬಲಪ್ರಯೋಗಕ್ಕಿಂತ 'ಟೈಮಿಂಗ್'ಗೆ ಒತ್ತುಕೊಟ್ಟು 1970ರ ದಶಕದ ಉದ್ದಕ್ಕೂ ಹೆಸರಾಗಿದ್ದವರು ಜಿ.ಆರ್.ವಿಶ್ವನಾಥ್. 1967ರಲ್ಲಿ, ಪ್ರಥಮ ದರ್ಜೆಯ ಕ್ರಿಕೆಟ್‌ಗೆ ಪದಾರ್ಪಣ ಮಾಡಿದಾಗಿನ ಮೊದಲ ಪಂದ್ಯದಲ್ಲೇ ಆಂಧ್ರಪ್ರದೇಶ ತಂಡದ ವಿರುದ್ಧ ಡಬಲ್ ಸೆಂಚುರಿ ಬಾರಿಸಿದ ಹೆಗ್ಗಳಿಕೆ 'ವಿಶಿ' ಅವರದ್ದು. ನಂತರ, 1969ರಲ್ಲಿ ಟೆಸ್ಟ್ ಕ್ರಿಕೆಟ್‌ಗೆ ಅಡಿಯಿಟ್ಟಾಗ, ಆಸ್ಟ್ರೇಲಿಯಾ ವಿರುದ್ಧದ ಟೆಸ್ಟ್‌ನ ಮೊದಲ ಇನ್ನಿಂಗ್ಸ್‌ನಲ್ಲಿ ಸೊನ್ನೆಗೆ ಔಟಾದರು. ಆಗ ತಂಡದ ಕ್ಯಾಪ್ಟನ್ ಆಗಿದ್ದ 'ಟೈಗರ್' ಮನ್ಸೂರ್ ಅಲಿಖಾನ್ ಪಟೌಡಿ ಅವರು, ''ಚಿಂತಿಸಬೇಡ, ರಿಲ್ಯಾಕ್ಸ್. ಬರೆದಿಟ್ಟುಕೋ, 2ನೇ ಇನ್ನಿಂಗ್ಸ್‌ನಲ್ಲಿ ನೀನು ಸೆಂಚುರಿ ಬಾರಿಸುವೆ'' ಎಂದು ಹುರುಪು ತುಂಬಿದರು. ಅಂತೆಯೇ, ಎರಡನೇ ಇನ್ನಿಂಗ್ಸ್‌ನಲ್ಲಿ 25 ಬೌಂಡರಿಗಳನ್ನು ಒಳಗೊಂಡಿದ್ದ 137 ರನ್ನುಗಳನ್ನು ಚಚ್ಚಿ ಸೈ ಎನಿಸಿಕೊಂಡುಬಿಟ್ಟರು ವಿಶಿ. ಹೀಗೆ, ಪ್ರಥಮ ದರ್ಜೆ ಕ್ರಿಕೆಟ್‌ನ ಮೊದಲ ಪಂದ್ಯದಲ್ಲೇ ಡಬಲ್ ಸೆಂಚುರಿಯನ್ನೂ, ಮೊದಲ ಟೆಸ್ಟ್ ಪಂದ್ಯದಲ್ಲೇ ಸೆಂಚುರಿಯನ್ನೂ ಬಾರಿಸಿದ ಏಕೈಕ ಆಟಗಾರ ಎಂಬ ಹೆಮ್ಮೆಯ ಗರಿಯೂ ಇವರ 'ಕೀರ್ತಿಕಿರೀಟ'ದಲ್ಲಿದೆ. ತರುವಾಯದ 13 ಟೆಸ್ಟ್ ಇನ್ನಿಂಗ್ಸ್‌ಗಳಲ್ಲಿ ತಮ್ಮ ಖಾತೆಗೆ ಮತ್ತೆ 13 ಸೆಂಚುರಿಗಳನ್ನು ಸೇರಿಸಿಕೊಂಡರು ವಿಶಿ. ಈ ಯಾವ ಪಂದ್ಯಗಳಲ್ಲೂ ಭಾರತಕ್ಕೆ ಸೋಲಾಗಲಿಲ್ಲ, ಹೀಗಾಗಿ 'ಆಪದ್ಬಾಂಧವ' ಎಂಬ ಹಣೆಪಟ್ಟಿ ವಿಶಿ ಹೆಸರಿನ ಜತೆಗೆ ಸೇರಿಕೊಂಡಿದ್ದುಂಟು. ಬ್ಯಾಟ್ಸ್‌ಮನ್‌ಗಳು ಏಗುವುದಕ್ಕೆ ಸಾಧ್ಯವೇ ಇಲ್ಲ ಎಂಬ ಸವಾಲು

ಒಡ್ಡಿದ್ದ ಪಿಚ್‌ಗಳಲ್ಲೂ ತಮ್ಮ ಕುಸುರಿಗಾರಿಕೆಯೊಂದಿಗೆ ಅತ್ಯುತ್ತಮ ಪ್ರದರ್ಶನ ನೀಡಿದ್ದಾರೆ ವಿಶಿ. ಅತ್ಯುತ್ತಮ ಎನ್ನಬಹುದಾದ ಅವರ ಇನ್ನಿಂಗ್ಸ್‌ಗಳಲ್ಲಿ ಕೆಲವದರಲ್ಲಿ ವಿಶಿಯಿಂದ ಸೆಂಚುರಿ ಹೊಮ್ಮಿಲ್ಲದಿದ್ದರೂ, ತಂಡದ ಯಶಸ್ಸಿಗೆ ಅವು ಕೊಡುಗೆ ನೀಡಿವೆ ಎಂಬುದು ಗಮನಾರ್ಹ.

ಅದು 1974–75ರ ಕಾಲಘಟ್ಟ. ಮದ್ರಾಸ್‌ಲ್ಲಿ ವೆಸ್ಟ್ ಇಂಡೀಸ್ ವಿರುದ್ಧದ ಪಂದ್ಯ ನಡೆಯುತ್ತಿತ್ತು. ಆ್ಯಂಡಿ ರಾಬರ್ಟ್ಸ್ ಅವರ ಮಾರಕ ಬೌಲಿಂಗ್ ದಾಳಿಯೆದುರು ಭಾರತ ತಂಡ ಗಳಿಸಿದ್ದು 190 ರನ್ನುಗಳಾದರೆ, ಅದರಲ್ಲಿ ವಿಶ್ವನಾಥ್ ಅವರು ಔಟಾಗದೆ ಬಾರಿಸಿದ 97 ರನ್ನುಗಳದ್ದೇ ಸಿಂಹಪಾಲು ಇತ್ತು. ಅದು 'ಸೆಂಚುರಿ' ಎನಿಸಿಕೊಳ್ಳದಿದ್ದರೂ, ಭಾರತೀಯ ಆಟಗಾರನೊಬ್ಬ ವೆಸ್ಟ್ ಇಂಡೀಸ್ ತಂಡದ ವಿರುದ್ಧ ನೀಡಿದ ಅತ್ಯುತ್ತಮ ಪ್ರದರ್ಶನಗಳಲ್ಲೊಂದು ಎಂದೇ ಪರಿಗಣಿಸಲ್ಪಟ್ಟಿತು ಮತ್ತು ಈ ಕೊಡುಗೆ ಭಾರತ ತಂಡದ ಗೆಲುವಿಗೂ ಕಾರಣವಾಯಿತು. ಇದು WISDEN 100 ಶ್ರೇಯಾಂಕ ಪಟ್ಟಿಯಲ್ಲಿ '38th best innings of all time' ಮತ್ತು 'Second best non-century' ಎಂದೇ ದಾಖಲಾಗಿದೆ! 1975–76ರಲ್ಲೂ ವೆಸ್ಟ್ ಇಂಡೀಸ್ ವಿರುದ್ಧ ವಿಶಿ ಇಂಥದೇ ಮತ್ತೊಂದು ವಿಕ್ರಮವನ್ನು ದಾಖಲಿಸಿದ್ದು ಕ್ರೀಡಾಭಿಮಾನಿಗಳ ಮನದಲ್ಲಿನ್ನೂ ಹಸಿರಾಗಿದೆ. ಪೋರ್ಟ್ ಆಫ್ ಸ್ಪೇನ್‌ನಲ್ಲಿ ನಡೆದ ಆ ಟೆಸ್ಟ್ ಪಂದ್ಯದಲ್ಲಿ ಭಾರತಕ್ಕೆ ಒಡ್ಡಲಾಗಿದ್ದ ವಿಜಯದ ಗುರಿ 403 ರನ್ನುಗಳಾಗಿತ್ತು. ''ವೆಸ್ಟ್ ಇಂಡೀಸ್ ದೈತ್ಯರ ವಿರುದ್ಧ ಸೆಣಸಿ ಇದನ್ನು ಸಾಧಿಸುವುದು ಕಷ್ಟವೇ...'' ಎಂಬುದು ಅಗಿನ ಬಹುತೇಕ ಕ್ರಿಕೆಟ್ ಪಂಡಿತರ ಲೆಕ್ಕಾಚಾರವಾಗಿತ್ತು. ಆದರೆ, ಬರೋಬ್ಬರಿ 112 ರನ್ನುಗಳನ್ನು ಚಚ್ಚಿ ಕೆಡವಿದ ವಿಶಿ, ತಮಗಿದ್ದ 'ಆಪದ್ಬಾಂಧವ' ಬಿರುದನ್ನು ಸಾಬೀತುಮಾಡಿದರು, ಭಾರತ ಗೆದ್ದಿತು. ಇದು ಆ ಕಾಲಘಟ್ಟದಲ್ಲಿ ಟೆಸ್ಟ್ ಕ್ರಿಕೆಟ್‌ನಲ್ಲಿನ ಅತಿಹೆಚ್ಚಿನ ಮೊತ್ತದ ಯಶಸ್ವಿ 'ರನ್–ಬೆನ್ನಟ್ಟುವಿಕೆ' ಎಂಬ ಖ್ಯಾತಿಯನ್ನು ಹೆಗಲಿಗೇರಿಸಿಕೊಂಡಿತು.

ಹಾಗೆಂದ ಮಾತ್ರಕ್ಕೆ ವಿಶಿ ತಮ್ಮ ಬ್ಯಾಟಿಂಗ್ ಪ್ರದರ್ಶನದಲ್ಲಿ ವಿಫಲರಾದ ನಿದರ್ಶನಗಳೇ ಇಲ್ಲ ಅಂತಲ್ಲ. ಪಾಕಿಸ್ತಾನದಲ್ಲಿ 1982–83ರಲ್ಲಿ ನಡೆದ ಟೆಸ್ಟ್ ಸರಣಿಯಲ್ಲಿ ಭಾರತವು 3–0 ಅಂತರದಲ್ಲಿ ಎದುರಾಳಿಗೆ ಸೋತ ತಂಡದಲ್ಲಿ ವಿಶಿ ಕೂಡ ಒಬ್ಬರಾಗಿದ್ದರು. ಇದಕ್ಕೆ ಕಾರಣ, ತಮ್ಮ ಬೌಲರುಗಳೆಡೆಗೆ ಪಕ್ಷಪಾತಿಗಳಾಗಿದ್ದ ಪಾಕಿಸ್ತಾನಿ ಅಂಪೈರುಗಳು ನೀಡಿದ ಒಂದಷ್ಟು ವಿವಾದಾತ್ಮಕ ನಿರ್ಣಯಗಳು. 'ತವರುತಂಡ'ದ ಪರವಾಗಿ ಅಂಪೈರುಗಳು ತೋರುವ ಇಂಥ ಪಕ್ಷಪಾತವೇ, ಪಂದ್ಯಗಳಲ್ಲಿ 'ತಟಸ್ಥ ಅಂಪೈರು'ಗಳನ್ನು ತೊಡಗಿಸುವುದಕ್ಕೆ ಕಾರಣವಾಯಿತು!

'ರಣರಂಗ' ಕನ್ನಡ ಚಲನಚಿತ್ರದ 'ಜಗವೇ ಒಂದು ರಣರಂಗ' ಎಂಬ ಗೀತೆಯಲ್ಲಿ, ''ಶತ್ರು ಬೀಳುವಾಗ, ಯುದ್ಧ ಮಾಡುವಾಗ, ಕರುಣೆ ಕಟ್ಟಿ ಇಡು ರಾಜಾ...'' ಎಂಬ ಸಾಲು ಬರುತ್ತದೆ. ಆದರೆ ಇದಕ್ಕೆ ವ್ಯತಿರಿಕ್ತವಾಗಿ ನಡೆದುಕೊಂಡವರು ವಿಶ್ವನಾಥ್. ಆ ಸಂದರ್ಭ ಹೀಗಿದೆ: 'ವಿಶಿ' ಭಾರತ ತಂಡದ ನಾಯಕತ್ವ ವಹಿಸಿಕೊಂಡಿದ್ದ ಎರಡು ಟೆಸ್ಟ್ ಪಂದ್ಯಗಳಲ್ಲಿ, ಇಂಗ್ಲೆಂಡ್ ತಂಡದ ವಿರುದ್ಧ 1979–80ರಲ್ಲಿ ಆಡಲಾದ 'ಸುವರ್ಣ ಮಹೋತ್ಸವ ಟೆಸ್ಟ್' ಪಂದ್ಯ ಕೂಡ ಒಂದು. ಇದರಲ್ಲಿ ಎದುರಾಳಿ ಬ್ಯಾಟ್ಸ್‌ಮನ್ ಬಾಬ್ ಟೇಲರ್ ಔಟಾಗಿ ಪೆವಿಲಿಯನ್‌ಗೆ ತೆರಳಿದ್ದೂ ಆಯಿತು. ಆದರೆ ಅಂಪೈರ್ ನೀಡಿದ್ದು ತಪ್ಪು ನಿರ್ಣಯ ಎಂದು ಗ್ರಹಿಸಿದ ವಿಶ್ವನಾಥ್, ಬಾಬ್ ಟೇಲರ್‌ರನ್ನು ಪೆವಿಲಿಯನ್‌ನಿಂದ ಮರಳಿ ಕ್ರೀಸ್‌ಗೆ ಕರೆಸಿ ಆಡುವುದಕ್ಕೆ ಅನುವುಮಾಡಿಕೊಟ್ಟರು. ಈ ನಿಲುವು ಭಾರತದ ಪಾಲಿಗೆ ದುಬಾರಿಯಾಗಿ ಪರಿಣಮಿಸಿತು; ಏಕೆಂದರೆ, ಅಗತ್ಯವಿದ್ದ ರನ್ನುಗಳನ್ನು ಟೇಲರ್ ಪೇರಿಸಿದ್ದರಿಂದ ಇಂಗ್ಲೆಂಡ್ ತಂಡಕ್ಕೆ ಭಾರತ ಸೋತಿತು. ''ವಿಶಿ ಹೀಗೇಕೆ ಮಾಡಿದರು?'' ಎಂದು ಆ ಕ್ಷಣಕ್ಕೆ 'ಕಟ್ಟರ್ ಕ್ರೀಡಾಭಿಮಾನಿಗಳು' ಕೈಕೈ ಹಿಸುಕಿಕೊಂಡಿದ್ದು ಹೌದಾದರೂ, ಜಗತ್ತಿನೆಲ್ಲೆಡೆಯಿಂದ 'ವಿಶಿ'ಯೆಡೆಗೆ ಹರಿದುಬಂದ ಮೆಚ್ಚುಗೆಯ ಸುರಿಮಳೆಯನ್ನು ಕಂಡು ''ಹೀಗೂ ಉಂಟೇ?'' ಎಂದು ಮೂಗಿನ ಮೇಲೆ ಬೆರಳಿಟ್ಟರು! ''ಯುದ್ಧದಲ್ಲಿ ಸೋದರಮಾವನೇ?!'' ಎಂಬುದೊಂದು ಮಾತಿದೆ. ಸಮರಾಂಗಣದಲ್ಲಾಗಲೀ ಕ್ರೀಡಾಂಗಣದಲ್ಲಾಗಲೀ ದಾಕ್ಷಿಣ್ಯವನ್ನು ನೋಡಬಾರದು; ಎದುರಾಳಿ ಎಂದರೆ ಎದುರಾಳಿಯೇ, ಅವನ ಮೇಲೆ ದಾಳಿ ಮಾಡುವುದೇ ಅಲ್ಲಿನ ಧರ್ಮ ಎನ್ನುವುದು ಈ ಮಾತಿನ ಅರ್ಥ. ಆದರೆ ವಿಶ್ವನಾಥ್ ಆ ಪಂದ್ಯದಲ್ಲಿ ಅಕ್ಷರಶಃ ಮಹಾಭಾರತದ 'ಧರ್ಮರಾಯ'ನಂತೆ ನಡೆದುಕೊಂಡುಬಿಟ್ಟರು (ಈ ಘಟನೆ ಈಗ ನಡೆದಿದ್ದರೆ ವಿಶಿಗೆ Fair Play ಪುರಸ್ಕಾರ ಸಿಕ್ಕಿಬಿಡುತ್ತಿತ್ತು!). ವಿಶಿ ಪಾಲಿಗೆ ಸೋಲು–ಗೆಲುವಿಗಿಂತ ಕ್ರೀಡಾಸ್ಫೂರ್ತಿಯೇ ಯಾವಾಗಲೂ ಪರಮೋಚ್ಚ ಆಯ್ಕೆಯಾಗಿದ್ದುದು ಈ ನಿಲುವಿಗೆ ಕಾರಣ.

ವಿಶಿ ಅವರದ್ದು ದೇಶ–ಭಾಷೆಗಳ ಸೀಮೆಯನ್ನೂ ಮೀರಿದ ಕ್ರೀಡಾಸ್ಫೂರ್ತಿ ಮತ್ತು ಹೃದಯವೈಶಾಲ್ಯ. ಯಾರೂ ಅವರನ್ನು ಆಗ್ರಹಿಸದಿದ್ದರೂ ಆಕ್ಷೇಪಿಸದಿದ್ದರೂ, ತಮ್ಮ ಸರದಿಗಾಗಿ ಕಾಯುತ್ತಿರುವ ತರುಣ ಆಟಗಾರರಿಗೆ ಅವಕಾಶ ನೀಡಬೇಕು ಎಂಬ ಧ್ಯೇಯದಲ್ಲಿ ಅವರು ತಾವಾಗಿಯೇ ತಂಡದಲ್ಲಿನ ತಮ್ಮ ಜಾಗವನ್ನು ಬಿಟ್ಟುಕೊಟ್ಟು ಕ್ರಿಕೆಟ್‌ಗೆ ವಿದಾಯ ಹೇಳಿದ್ದು ಅವರಲ್ಲಿ ಕೆನೆಗಟ್ಟಿದ್ದ ಈ ವೈಶಿಷ್ಟ್ಯಕ್ಕೆ ಸಾಕ್ಷಿ. ಒಟ್ಟು 91 ಟೆಸ್ಟ್ ಮತ್ತು 25 ಏಕದಿನ ಪಂದ್ಯಗಳನ್ನು ಆಡಿರುವ ವಿಶಿ, ಟೆಸ್ಟ್ ಪಂದ್ಯಗಳಲ್ಲಿ 41.93ರ ಬ್ಯಾಟಿಂಗ್ ಸರಾಸರಿಯೊಂದಿಗೆ 6,080 ರನ್ನುಗಳನ್ನು ಪೇರಿಸಿದರು (222 ಅವರ ಅತಿಹೆಚ್ಚಿನ ಸ್ಕೋರ್), 14 ಶತಕಗಳು, 35 ಅರ್ಧಶತಕಗಳನ್ನು ಬಾರಿಸಿದರು. ಯಾವಾಗಲೂ 'ಸ್ಲಿಪ್'ನಲ್ಲೇ ಫೀಲ್ಡಿಂಗ್‌ಗೆ ನಿಲ್ಲುತ್ತಿದ್ದ ಅವರು 63 ಕ್ಯಾಚುಗಳನ್ನೂ ಹಿಡಿದಿದ್ದಾರೆ. ಆದರೆ, ಈ ಎಲ್ಲ ದಾಖಲೆಗಳ ಹೊರತಾಗಿಯೂ ಕ್ರೀಡಾಭಿಮಾನಿಗಳು ವಿಶಿ ಅವರನ್ನು ಈಗಲೂ ಸ್ಮರಿಸುವುದು, ಮೆಚ್ಚುವುದು ಅವರ ಕ್ರೀಡಾಸ್ಫೂರ್ತಿ ಮತ್ತು ಹೃದಯವೈಶಾಲ್ಯದ ಕಾರಣಕ್ಕಾಗಿಯೇ.

ಹಾಗೆ ನೋಡಿದರೆ, ವಿಶ್ವನಾಥ್ ಅವರು ಯಾವುದೇ ಕ್ರಿಕೆಟ್ ಕ್ಲಬ್ ಸೇರಿ ತರಬೇತಿ ಪಡೆದವರಲ್ಲ. ಅವರದ್ದೇನಿದ್ದರೂ, 'ನೋಡಿ ತಿಳಿ, ಮಾಡಿ ಕಲಿ' ಎಂಬ 'ಏಕಲವ್ಯ' ಶೈಲಿಯ ಕಲಿಕೆಯೇ. ಕ್ಲಬ್ ಆಟಗಾರರಾಗಿ ಹೆಸರುಮಾಡಿದ್ದ ತಮ್ಮ ಸೋದರ ಜಗನ್ನಾಥ್ ಹಾಗೂ ನೆರೆಯವರಾದ ಎಸ್.ಕೃಷ್ಣರ ಆಟವನ್ನು ನೋಡಿಯೇ ಬ್ಯಾಟಿಂಗ್ ಕೌಶಲವನ್ನು ರೂಢಿಸಿಕೊಂಡ ಹೆಚ್ಚುಗಾರಿಕೆ ವಿಶಿ ಅವರದ್ದು. ಆದರೆ ಆಟದ ಅಖಾಡವನ್ನು ಪ್ರವೇಶಿಸುವುದು ಅಷ್ಟು ಸುಲಭವಾಗಿರಲಿಲ್ಲ. ಇದಕ್ಕೆ ಕಾರಣ, ಕಟ್ಟುಮಸ್ತಾಗಿಲ್ಲದ ಅವರ ಕುಳ್ಳುದೇಹ. ಆಯ್ಕೆಗಾರರೊಬ್ಬರು ಇದೇ ಕಾರಣ ಮುಂದುಮಾಡಿ ಅಪಸ್ವರ ಹಾಡಿದ್ದೂ ಉಂಟಂತೆ. ಆದರೆ ಇಂಥ ಎಲ್ಲ ಅಡೆತಡೆಗಳನ್ನೂ ಮೀರಿ ಆಯ್ಕೆಗೊಂಡ ವಿಶಿ, 100 ರನ್ ಬಾರಿಸುವುದರೊಂದಿಗೆ ತಮ್ಮ ಆಯ್ಕೆಯನ್ನು ಸಮರ್ಥಿಸಿಕೊಂಡರಂತೆ. ನಂತರದ್ದು ಇತಿಹಾಸ!

ವಿಶ್ವದೆಲ್ಲೆಡೆಯಿಂದ ಸಾರ್ವಕಾಲಿಕ ಜನಮೆಚ್ಚುಗೆಗೆ ಪಾತ್ರರಾದ ಕ್ರಿಕೆಟಿಗರಲ್ಲಿ ಎದ್ದುಕಾಣುವ ಹೆಸರು ವಿಶ್ವನಾಥ್. 'ಟೈಗರ್' ಪಟೌಡಿ, ಕಪಿಲ್‌ದೇವ್, ಗ್ರೆಗ್ ಚಾಪೆಲ್, ಟ್ರೆವರ್ ಬೈಲಿ ಸೇರಿದಂತೆ ವಿಶ್ವದ ಮೂಲೆಮೂಲೆಯ 'ಸಮಾನಸ್ಕಂಧ'ರಿಂದ ಶ್ಲಾಘನೆ ಪಡೆದ ಹೆಚ್ಚುಗಾರಿಕೆ ವಿಶಿ ಅವರದ್ದು. ಕ್ರಿಕೆಟ್‌ನಿಂದ ನಿವೃತ್ತಿಯಾದ ನಂತರ, 1999ರಿಂದ 2004ರವರೆಗೆ 'ಐಸಿಸಿ'ಗಾಗಿ ಮ್ಯಾಚ್ ರೆಫರಿಯಾಗಿ ಸೇವೆ ಸಲ್ಲಿಸುವ ಮೂಲಕ ಕ್ರಿಕೆಟ್ ಜತೆಗಿನ ನಂಟನ್ನು ಮುಂದುವರಿಸಿದರು ವಿಶಿ. ಇದಕ್ಕೂ ಮುನ್ನ ಅವರು ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್‌ನ (ಕೆಎಸ್‌ಸಿಎ) ಉಪಾಧ್ಯಕ್ಷರಾಗಿ, 1992–96ರ ಅವಧಿಯಲ್ಲಿ ರಾಷ್ಟ್ರೀಯ ಆಯ್ಕೆಗಾರರ ಸಮಿತಿಯ ಚೇರ್‌ಮನ್ ಆಗಿ, ಬೆಂಗಳೂರಿನಲ್ಲಿರುವ 'ನ್ಯಾಷನಲ್ ಕ್ರಿಕೆಟ್ ಅಕಾಡೆಮಿ'ಯಲ್ಲಿ ಬ್ಯಾಟಿಂಗ್ ಕೋಚ್ ಆಗಿ, ಸಂಕ್ಷಿಪ್ತ ಅವಧಿಗೆ ಭಾರತೀಯ ಕ್ರಿಕೆಟ್ ತಂಡದ ಮ್ಯಾನೇಜರ್ ಆಗಿಯೂ ಕಾರ್ಯನಿರ್ವಹಿಸಿದ್ದಿದೆ. ಬಿಸಿಸಿಐ ವತಿಯಿಂದ ಮಾಜಿ ಆಟಗಾರರೊಬ್ಬರಿಗೆ ಪ್ರದಾನಿಸಲಾಗುವ 'ಸಿಕೆ ನಾಯ್ಡು ಜೀವಿತಾವಧಿ ಸಾಧನೆಯ ಪುರಸ್ಕಾರ'ಕ್ಕೂ ವಿಶಿ ಪಾತ್ರರಾಗಿದ್ದಾರೆ.

ಬ್ಯಾಟಿಂಗ್‌ನಲ್ಲಿ ಕೌಶಲಭರಿತ ಹೊಡೆತಗಳಿಗೆ, ಅಪರಿಮಿತ ಕ್ರೀಡಾಸ್ಫೂರ್ತಿಗೆ, ಹೃದಯವೈಶಾಲ್ಯಕ್ಕೆ ಹೆಸರಾಗಿರುವ ವಿಶ್ವನಾಥ್‌ರಿಗೆ, ಅವರು ಟೆಸ್ಟ್ ಕ್ರಿಕೆಟ್‌ಗೆ ಪದಾರ್ಪಣ ಮಾಡಿ 55 ವರ್ಷಗಳಾಗುತ್ತಿರುವ ಈ ಸಂದಭದಲ್ಲಿ, ವಿಶ್ವಾದ್ಯಂತದ ಕ್ರೀಡಾಪ್ರೇಮಿಗಳು ಹಾಗೂ ಘಟಾನುಘಟಿ ಕ್ರಿಕೆಟಿಗರು ಅಭಿನಂದನೆ ಸಲ್ಲಿಸುವುದಕ್ಕೆ ಇದು ಸಕಾಲ ಎನ್ನೋಣವೇ?

ಲಾಲಿ ಲಾಲಿ ಸುಕುಮಾರಾ...



ವಿಶ್ವನಾಥರ ಬಗ್ಗೆ ಬರೆಯುವಾಗ ಅಪ್ರಯತ್ನವಾಗಿ ನುಸುಳಿಕೊಳ್ಳುತ್ತಾರೆ ಮತ್ತೊಬ್ಬ 'ಲಿಟ್ಲ್ ಮಾಸ್ಟರ್' ಸುನಿಲ್ ಗಾವಸ್ಕರ್. 70ರ ದಶಕದ ಭಾರತದ ತಂಡಕ್ಕೆ ಬ್ಯಾಟಿಂಗ್ ಆಧಾರಸ್ತಂಭಗಳಂತಿದ್ದ ಇವರಲ್ಲಿ ಒಂದಷ್ಟು ಸಾಮಾನ್ಯ ಸಂಗತಿಗಳಿದ್ದವು. ಈ ಇಬ್ಬರು ವಾಮನಮೂರ್ತಿಗಳೂ ಬ್ಯಾಟಿಂಗ್ ಕರಕೌಶಲಕ್ಕೆ ಹೆಸರಾಗಿದ್ದವರು, ಭಾರಿ ಅಭಿಮಾನಿ ಬಳಗವನ್ನು ಹೊಂದಿದ್ದವರು, ಸ್ನೇಹವನ್ನು ವಿಸ್ತರಿಸಿಕೊಂಡು ಸಂಬಂಧಿಗಳಾದವರು. ಗಾವಸ್ಕರ್ ಅವರ ಸೋದರಿ ಕವಿತಾರನ್ನು ವಿಶಿ ಮದುವೆಯಾಗಿ ನಂಟನ್ನು ಮತ್ತಷ್ಟು ಗಾಢವಾಗಿಸಿಕೊಂಡರು. ಮತ್ತೊಂದೆಡೆ, ಗಾವಸ್ಕರ್ ತಮ್ಮ ಮಗನಿಗೆ 'ರೋಹನ್ ಜೈವಿಶ್ವ' ಎಂದೇ ನಾಮಕರಣ ಮಾಡಿದರು. ಇದು ತಮ್ಮ ಮೂವರು ಅಚ್ಚುಮೆಚ್ಚಿನ ಆಟಗಾರರಾದ ವೆಸ್ಟ್ ಇಂಡೀಸ್‌ನ ರೋಹನ್ ಕನ್ಹಾಯ್, ನಮ್ಮವರೇ ಆದ ಎಂ.ಎಲ್.ಜಯಸಿಂಹ ಮತ್ತು ಜಿ.ಆರ್.ವಿಶ್ವನಾಥ್‌ರೆಡೆಗೆ ಗಾವಸ್ಕರ್ ಹೊಂದಿದ್ದ ಪ್ರೀತಿಯ ದ್ಯೋತಕವಾಗಿತ್ತು.

ಇಂಗ್ಲೆಂಡ್ ಮತ್ತು ಭಾರತ ನಡುವಿನ 1973–74ರ ಸರಣಿಯ ಅಂತಿಮ ಟೆಸ್ಟ್ ಪಂದ್ಯ ಬಾಂಬೆಯಲ್ಲಿ ನಡೆದಾಗ, ಅದರಲ್ಲಿ ವಿಶಿ ಸೆಂಚುರಿ ಬಾರಿಸಿದರು. ಆಗ ಇಂಗ್ಲೆಂಡ್ ಆಟಗಾರ ಟೋನಿ ಗ್ರೇಗ್ ಅವರು ಸಂತಸವನ್ನು ತಡೆಯಲಾಗದೆ, ಎದುರಾಳಿ ಎಂಬುದನ್ನೂ ಮರೆತು, ವಿಶಿಯನ್ನು ಎತ್ತಿ ಮಗುವಿನಂತೆ ತೋಳಲ್ಲಿ ಮಲಗಿಸಿಕೊಂಡು ಜೋಗುಳ ಹಾಡಿದರಂತೆ. ನಂತರ ಟೋನಿ ಗ್ರೇಗ್ ಅವರೂ ಸೆಂಚುರಿ ಬಾರಿಸಿದಾಗ, ವಿಶಿ ಮತ್ತು ಗಾವಸ್ಕರ್ ಇಬ್ಬರೂ ಸೇರಿಕೊಂಡು ಟೋನಿ ಗ್ರೇಗ್ ಅವರನ್ನೂ ಎತ್ತಿ ಹೀಗೆಯೇ ಜೋಗುಳ ಹಾಡಲು ಯತ್ನಿಸಿದರಂತೆ. ಆದರೆ ಅವರಿಗೆ ಎತ್ತಲಾಗಲಿಲ್ಲ ಎಂಬುದು ಬೇರೆ ಮಾತು!

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:67, Issue: 184

ಲಡ್ಡು ವಿವಾದ ಸಿಬಿಐಗೆ ವಹಿಸಲೂ ಸುಪ್ರೀಂ ಕೋರ್ಟ್ ನಕಾರ

ತಿರುಪತಿಗೆ ಪ್ರತ್ಯೇಕ ರಾಜ್ಯ ಕೋರಿದ ಅರ್ಜಿ ವಜಾ

ಹೊಸದಿಲ್ಲಿ: ತಿರುಪತಿ ದೇವಸ್ಥಾನದಲ್ಲಿ ಪ್ರಸಾದವಾಗಿ ನೀಡುವ ಲಡ್ಡುಗಳಲ್ಲಿ ಪ್ರಾಣಿಗಳ ಕೊಬ್ಬು ಬಳಸಲಾಗಿದೆ ಎಂಬ ಆರೋಪಗಳ ಬಗ್ಗೆ ಸಿಬಿಐ ತನಿಖೆಗೆ ಆದೇಶ ನೀಡುವಂತೆ ಮತ್ತು ಶ್ರೀ ಕ್ಷೇತ್ರಕ್ಕೆ ಪ್ರತ್ಯೇಕ ರಾಜ್ಯ/ಕೇಂದ್ರಾಡಳಿತ ಪ್ರದೇಶ ಕೋರಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ.

ಡಾ. ಕೆ.ಎ ಪಾಲ್ ಅವರು ಮಂಡಿಸಿದ ವಾದವನ್ನು ಆಲಿಸಿದ ಬಳಿಕ ನ್ಯಾಯಮೂರ್ತಿ ಬಿ ಆರ್ ಗವಾಯಿ ಮತ್ತು ನ್ಯಾಯಮೂರ್ತಿ ಕೆ.ವಿ. ವಿಶ್ವನಾಥನ್ ಅವರ ಪೀಠವು ಶುಕ್ರವಾರ ಅರ್ಜಿ ವಜಾಗೊಳಿಸಿ ಆದೇಶ ನೀಡಿದೆ.ಆಂಧ್ರ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ತಿರುಮಲ ಲಡ್ಡುವಿಗೆ ಪ್ರಾಣಿಗಳ ಕೊಬ್ಬನ್ನು ಬಳಸಲಾಗಿದೆ ಎಂದು ಆರೋಪ ಮಾಡಿದ್ದರು. ಈ ಸಂಬಂಧ ಸಿಬಿಐನಿಂದ ತನಿಖೆ ನಡೆಸುವಂತೆ ಪ್ರಜಾಶಾಂತಿ ಪಕ್ಷದ ಅಧ್ಯಕ್ಷ ಕೆಎ ಪಾಲ್ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಇದರ ಜೊತೆಗೆ ತಿರುಮಲವನ್ನು ಕೇಂದ್ರಾಡಳಿತ ಪ್ರದೇಶವನ್ನಾಗಿ ಮಾಡುವಂತೆಯೂ ಕೇಳಿಕೊಂಡಿದ್ದರು. ಮೇಲಿನ ಆರೋಪಗಳ ಬಗ್ಗೆ ನ್ಯಾಯಾಲಯದ ಮೇಲ್ವಿಚಾರಣೆಯ ತನಿಖೆ ಮತ್ತು ಸರ್ಕಾರಿ ಸಂಸ್ಥೆಗಳಿಂದ ನಿರ್ವಹಿಸಲ್ಪಡುವ ಹಿಂದೂ ದೇವಾಲಯಗಳಲ್ಲಿ ಹೆಚ್ಚಿನ ಹೊಣೆಗಾರಿಕೆ ಸೇರಿದಂತೆ ಪರಿಹಾರಗಳನ್ನು ಕೋರಿ ಸುಮಾರು ಐದು ಅರ್ಜಿಗಳನ್ನು ಸಲ್ಲಿಸಲಾಗಿತ್ತು. ಅದರಂತೆ ಅಕ್ಟೋಬರ್ 4 ರಂದು ತಿರುಮಲ ತಿರುಪತಿ ದೇವಸ್ಥಾನದಲ್ಲಿ ಪ್ರಸಾದವಾಗಿ ನೀಡುವ ಲಡ್ಡುಗಳನ್ನು ತಯಾರಿಸಲು ಕಲಬೆರಕೆ ತುಪ್ಪವನ್ನು ಬಳಸಲಾಗಿದೆ ಎಂಬ ಆರೋಪದ ಬಗ್ಗೆ ತನಿಖೆ ನಡೆಸಲು ಸುಪ್ರೀಂ ಕೋರ್ಟ್ ಸ್ವತಂತ್ರ ವಿಶೇಷ ತನಿಖಾ ತಂಡ (ಎಸ್‌ಐಟಿ) ಅನ್ನು ರಚಿಸಿತ್ತು. ಈ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ನಿಮ್ಮ ಕೋರಿಕೆಯಂತೆ ನಡೆದರೆ, ದೇಶದ ಎಲ್ಲಾ ದೇವಾಲಯಗಳು ಮತ್ತು ಗುರುದ್ವಾರಗಳನ್ನು ಪ್ರತ್ಯೇಕ ರಾಜ್ಯಗಳನ್ನಾಗಿ ಮಾಡಬೇಕಾಗುತ್ತದೆ ಎಂದು ಹೇಳಿದೆ. ನಿರ್ದಿಷ್ಟ ಧರ್ಮಕ್ಕೆ ಪ್ರತ್ಯೇಕ ರಾಜ್ಯ ರಚನೆಗೆ ಆದೇಶ ನೀಡಲು ಸಾಧ್ಯವಿಲ್ಲ ಎಂದು ಪೀಠವು ಅರ್ಜಿಯನ್ನು ವಜಾಗೊಳಿಸಿದೆ.

ಇಬ್ಬರು ನಕ್ಸಲರ ಎನ್‌ಕೌಂಟರ್

ರಾಯಪುರ: ಛತ್ತೀಸ್‌ಗಢದ ಬಿಜಾಪುರ ಜಿಲ್ಲೆಯಲ್ಲಿ ನಕ್ಸಲೀಯರು ಮತ್ತು ಭದ್ರತಾ ಪಡೆಗಳ ನಡುವಿನ ಎನ್ಕೌಂಟರ್‌ನಲ್ಲಿ ಶುಕ್ರವಾರ ಇಬ್ಬರು ನಕ್ಸಲೀಯರು ಹತರಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಪಾಮೆಡ್ ಗ್ರಾಮದ ಅರಣ್ಯ ಪ್ರದೇಶದಲ್ಲಿ ಬೆಳಗ್ಗೆ ಸುಮಾರು 11 ಗಂಟೆಗೆ ಗುಂಡಿನ ಚಕಮಕಿ ನಡೆದಿದ್ದು ಇಬ್ಬರು ನಕ್ಸಲರು ಹತರಾಗಿದ್ದಾರೆ ಎಂದು ಬಸ್ತರ್ನ ಪೊಲೀಸ್ ಮಹಾ ನಿರೀಕ್ಷಕ ಸುಂದರ್‌ರಾಜ್ ತಿಳಿಸಿದ್ದಾರೆ. ಘಟನಾ ಸ್ಥಳದಿಂದ ಮೃತದೇಹಗಳನ್ನು ವಶಪಡಿಸಿಕೊಳ್ಳಲಾಗಿದೆ.

ಅವರ ಬಳಿ ಸೆಲ್ಫ್ ಲೋಡಿಂಗ್ ರೈಫಲ್ (ಎಸ್‌ಎಲ್‌ಆರ್), ಬ್ಯಾರೆಲ್ ಗ್ರೆನೇಡ್, ಲಾಂಚರ್ ಶೆಲ್‌ಗಳು ಮತ್ತು ಹರಿತವಾದ ಆಯುಧಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಅವರು ತಿಳಿಸಿದ್ದಾರೆ. ಜಿಲ್ಲಾ ಮೀಸಲು ಪೊಲೀಸ್ ಪಡೆ, ಸಿಆರ್‌ಪಿಎಫ್ ಹಾಗೂ ಕೋಬ್ರಾ ಪಡೆ ಸಿಬ್ಬಂದಿ ಈ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು. ಶೋಧ ಕಾರ್ಯ ಮುಂದುವರಿದಿದೆ ಎಂದು ಅವರು ಹೇಳಿದ್ದಾರೆ.

ಕರ್ನಾಟಕ ಸರಕಾರ
(ಲೋಕೋಪಯೋಗಿ, ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರ್‌ರವರ ಕಛೇರಿ ಲೋಕೋಪಯೋಗಿ ಇಲಾಖೆ,
ಸೇಡಂ ವಿಭಾಗ ಜಿಲ್ಲೆ: ಕಲಬುರಗಿ.

ಸಂ:ಕಾನಿಇಂ/ಲೋಇ./ಸೇವಿ/ತಾಶಾ-1&2/2024-25/1987 ದಿನಾಂಕ: 06-11-2024

-:: ಅಲ್ಪಾವಧಿ ಇ-ಪ್ರೊಕ್ಯೂರಮೆಂಟ್ ಟೆಂಡರ್ ಪ್ರಕಟಣೆ ::-

1) ಕಾಮಗಾರಿಯ ವಿವರ: 1. ಸೇಡಂ ತಾಲೂಕಿನ 01 ಕೆ.ಕೆ.ಆರ್.ಡಿ.ಬಿ. ಯೋಜನೆ ಅಡಿಯಲ್ಲಿನ ಕಾಮಗಾರಿಗಳ ಇಂಡೆಂಟ್ ಸಂ. : **16400,** 2. ಚಿಂಚೋಳಿ ತಾಲೂಕಿನ 04 ಕೆ.ಕೆ.ಆರ್.ಡಿ.ಬಿ ಮತ್ತು ಫ್ಲಡ್‌ಡ್ಯಾಮೇಜ್ ಯೋಜನೆ ಅಡಿಯಲ್ಲಿನ ಕಾಮಗಾರಿಗಳ ಇಂಡೆಂಟ್ ಸಂ : **12514, 9990, 16333 (ಪ.ಜಾತಿ), 16342 (ಪ.ಜಾತಿ).** 2) ಲೆಕ್ಕ ಶೀರ್ಷಿಕೆ: 2024-25ನೇ ಸಾಲಿನ ಕೆ.ಕೆ.ಆರ್.ಡಿ.ಬಿ ಮತ್ತು ಫ್ಲಡ್‌ಡ್ಯಾಮೇಜ್ ಯೋಜನೆ ಅಡಿಯಲ್ಲಿನ ಕಾಮಗಾರಿಗಳು, 3) ಟೆಂಡರಿಗಿಟ್ಟ ಮೊತ್ತ: **ಕನಿಷ್ಠ ರೂ. 5.00 ಲಕ್ಷಗಳು, ಗರಿಷ್ಠ ರೂ. 60.00 ಲಕ್ಷಗಳು,** 4) ಗುತ್ತಿಗೆದಾರರ ಅರ್ಹತೆ: 4ನೇ ದರ್ಜೆ & ಮೇಲ್ಪಟ್ಟು, 5) ಟೆಂಡರ್ ಸ್ಪಷ್ಟೀಕರಣ ಪಡೆಯುವ ಹಾಗೂ ಸಲ್ಲಿಸುವ ಅಂತಿಮ ದಿನಾಂಕ: **14-11-2024 ಸಾಯಂಕಾಲ 17:30 ಗಂಟೆಯವರೆಗೆ,** 6) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಂ.ಡಿ ಮೊತ್ತ: ಟೆಂಡರ್ ಫಾರಂ ಬೆಲೆ & ಇ.ಎಮ್.ಡಿ ಇ-ಪ್ರೊಕ್ಯೂರಮೆಂಟ್‌ನಲ್ಲಿ ನಮೂದಿಸಿದಂತೆ, 7) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ : **16-11-2024 ರ ಸಾಯಂಕಾಲ 16:00 ಗಂಟೆಯವರೆಗೆ,** 8) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **19-11-2024 ರ ಸಾಯಂಕಾಲ 16:30 ಗಂಟೆಯವರೆಗೆ.** 9) ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ: **20-11-2024 ರ ಸಾಯಂಕಾಲ 16:30 ಗಂಟೆಯವರೆಗೆ.** 10) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖೆ, ವಿಭಾಗ ಸೇಡಂ, 11) ಅಂತರಜಾಲ ತಾಣದ ವಿಳಾಸ: www.kppp.karnataka.gov.in, 12) ಬದಲಾವಣೆಗಾಗಿ ಸಂಪರ್ಕಿಸುವ ಬಗ್ಗೆ : ಯಾವುದೇ ಮಾರ್ಪಾಡು ಬದಲಾವಣೆಗಳನ್ನು www.kppp.karnataka.gov.in ಮಾಡಲಾಗುವುದು.

ಟಿಪ್ಪಣಿ : 1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಪ್ರಕ್ರಿಯೆಯ ಮುಂದೂಡುವಿಕೆ / ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2) ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರ್
ವಾ.ಸಾ.ಸಂ.ಇ/ಕಲಬುರಗಿ/607/ಕೆ.ಎಸ್.ಎಂ.ಸಿ.&ಎ/2024-25 **ಲೋಕೋಪಯೋಗಿ, ಇಲಾಖೆ ವಿಭಾಗ ಸೇಡಂ**

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬಾಗಲಕೋಟೆ.
ಮುಚಖಂಡಿ ರಸ್ತೆ, ನವನಗರ ಬಾಗಲಕೋಟೆ-587103 (ಜಿಲ್ಲೆ : ಬಾಗಲಕೋಟೆ)
e_mail:apmcbagalkot@rediffmail.com & apmcbagalkote@gmail.com [O] 08354/235370 [Fax] 235370
ಕ್ರ ಸಂಖ್ಯೆ/ಕೃಉಮಾಸ(ಬಾ)/610/2024-25 ದಿ.07/11/2024

:ಟೆಂಡರ-ಕಂ-ಬಹಿರಂಗ ಹರಾಜು ಪ್ರಕಟಣೆ:

ಬಾಗಲಕೋಟೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ಕೆಳಕಂಡ ಚಿಕ್ಕ ಮಳಿಗೆಗಳನ್ನು ಕರ್ನಾಟಕ ಕೃಷಿ ಉತ್ಪನ್ನ ಮಾರಾಟ ವ್ಯವಹಾರ (ಮಾರುಕಟ್ಟೆ ಪ್ರಾಂಗಣದಲ್ಲಿನ ಸ್ವತ್ತಿನ ಹಂಚಿಕೆ ನಿಯಂತ್ರಣ) ನಿಯಮಗಳು 2004 ರ ನಿಯಮ 14 ರನ್ವಯ ಲೀವ್ ಅಂಡ್ ಲೈಸನ್ಸ್ ಶುಲ್ಕದ ಆಧಾರದ ಮೇಲೆ 11 ತಿಂಗಳಿಗೊಮ್ಮೆ ನವೀಕರಿಸುವ ಹಾಗೂ 33 ತಿಂಗಳಿಗೆ ಪ್ರತಿಶತ 5 ರಷ್ಟು ಲೀವ್ ಅಂಡ್ ಲೈಸನ್ಸ್ ದರಗಳನ್ನು ಹೆಚ್ಚಿಸುವ ಷರತ್ತಿಗೊಳಪಟ್ಟು ಗರಿಷ್ಠ 55 ತಿಂಗಳ ಅವಧಿಗೆ ಟೆಂಡರ-ಕಂ-ಬಹಿರಂಗ ಹರಾಜಿನ ಮೂಲಕ ಹಂಚಿಕೆ ಮಾಡಲು ಉದ್ದೇಶಿಸಿ ನಿಗದಿತ ನಮೂನೆ-VI ರಲ್ಲಿ ಆಸಕ್ತಿಯುಳ್ಳ ಸಾರ್ವಜನಿಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ	ಚಿಕ್ಕಮಳಿಗೆ/ಉಪಹಾರ ಗೃಹಗಳ ವಿವರ	ಮೀಸಲಾತಿ ವರ್ಗ	ನಿಗಧಿಪಡಿಸಿದ ಮಾಸಿಕ ಲೀವ್ ಅಂಡ್ ಲೈಸನ್ಸ್ ಶುಲ್ಕ (ಪ್ರತಿ ಮಳಿಗೆಗೆ)	ಮುಂಗಡ ಠೇವಣಿ (ರೂಗಳಲ್ಲಿ)	ನೋಂದಣಿ ಶುಲ್ಕ (ರೂಗಳಲ್ಲಿ)	ಅರ್ಜಿ ಶುಲ್ಕ (ತೆರಿಗೆ ಒಳಗೊಂಡಂತೆ)
01	02	03	04	05	06	07
ಮುಖ್ಯ ಮಾರುಕಟ್ಟೆ ಪ್ರಾಂಗಣದ ದ್ವಾರ ಬಾಗಿಲ ಹತ್ತಿರ ಇರುವ 13 ಸಂಖ್ಯೆ ಚಿಕ್ಕಮಳಿಗೆಗಳ ಪೈಕಿ						
01	06,07,09	ಸಾಮಾನ್ಯ	6125/-	12250/-	1500/-	1180/-
02	11	ಎಫ್.ಪಿ.ಒ	6125/-	12250/-	1500/-	1180/-
ಮುಖ್ಯ ಮಾರುಕಟ್ಟೆ ಪ್ರಾಂಗಣದ ದ್ವಾರ ಬಾಗಿಲ ಹತ್ತಿರ ಇರುವ ನೆಲ ಮಹಡಿ 07 ಸಂಖ್ಯೆ ಮಳಿಗೆಗಳ ಪೈಕಿ						
03	14,18,	ಸಾಮಾನ್ಯ	6867/-	13734/-	1500/-	1180/-
04	16,17	ಪರಿಶಿಷ್ಠ ಜಾತಿ	6867/-	13734/-	1500/-	1180/-
05	19	ಪರಿಶಿಷ್ಠ ಪಂಗಡ	6867/-	13734/-	1500/-	1180/-
06	20	ಸಾಮಾನ್ಯ	9758/-	19516/-	1500/-	1180/-
ಮುಖ್ಯ ಮಾರುಕಟ್ಟೆ ಪ್ರಾಂಗಣದ ದ್ವಾರ ಬಾಗಿಲ ಹತ್ತಿರ ಹೊಸದಾಗಿ ನಿರ್ಮಿಸಿರುವ 06 ಸಂಖ್ಯೆ ಮಳಿಗೆಗಳು						
07	23	ಸಾಮಾನ್ಯ ಮಹಿಳೆ	5524/-	11048/-	1500/-	1180/-

ಷರತ್ತು-ವ-ನಿಬಂಧನೆಗಳು: 1.ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಖಾಲಿ ಇರುವ ಚಿಕ್ಕ ಮಳಿಗೆ ಲೀವ್ ಅಂಡ್ ಲೈಸನ್ಸ್ ಆಧಾರದ ಮೇಲೆ ಹಂಚಿಕೆ ಪಡೆಯಲು ಇಚ್ಛಿಸುವವರು ನಿಯಮ 6 ರನ್ವಯ ಹಿಂದಿರುಗಿಸಲಾಗದ ನೋಂದಣಿ ಶುಲ್ಕ ರೂ.1500/- ನ್ನು ದಿನಾಂಕ:10-12-2024ರ ಸಂಜೆ 4:00 ಗಂಟೆಯೊಳಗೆ ಪಾವತಿಸಿ ನೋಂದಾಯಿಸುವುದು. ಈ ಹಿಂದೆ ಸಮಿತಿಯಲ್ಲಿ ಹಂಚಿಕೆಗಾಗಿ ನೋಂದಾಯಿಸಿಕೊಂಡವರು ಅದರ ಪ್ರತಿಯನ್ನು ಸಮಿತಿಗೆ ಸಲ್ಲಿಸುವುದು. ಮತ್ತೊಮ್ಮೆ ನೋಂದಾಯಿಸಿಕೊಳ್ಳುವ ಅವಶ್ಯಕತೆ ಇರುವುದಿಲ್ಲ. ನೋಂದಾಯಿತ ಅರ್ಜಿದಾರರು ನಿಗಧಿತ ಅರ್ಜಿ ಶುಲ್ಕ ರೂ.1180/- (ಶೇ.18 ರಷ್ಟು ಜಿ.ಎಸ್.ಟಿ ಸೇರಿ) ಗಳನ್ನು ನಗದು/ಡಿ.ಡಿ ಮೂಲಕ ಪಾವತಿಸಿ ಅರ್ಜಿ ನಮೂನೆ-VI ನ್ನು ಪಡೆಯಲು ಕೊನೆಯ ದಿನಾಂಕ:10/12/2024 ಸಾಯಂಕಾಲ 4:00 ಗಂಟೆಯವರೆಗೆ. 2.ಟೆಂಡರ ಸಹಿತ ಭರ್ತಿ ಮಾಡಿದ ಅರ್ಜಿಯನ್ನು ಸಂಬಂಧಿಸಿದ ದಾಖಲಾತಿಗಳೊಂದಿಗೆ ಸೀಲ್ಡ್ ಕವರನಲ್ಲಿರಿಸಿ ದಿನಾಂಕ:12-12-2024 ರ ಮಧ್ಯಾಹ್ನ 1.30 ರ ಗಂಟೆ ಒಳಗಾಗಿ ಸಮಿತಿಯ ಆಡಳಿತ ಕಛೇರಿಯ ಟೆಂಡರ ಬಾಕ್ಸ್‌ನಲ್ಲಿ ಹಾಕುವುದು. ನಂತರ ಬರುವ ಟೆಂಡರ್/ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. 3.ಹಂಚಿಕೆಗೆ ಪ್ರಕಟಿಸಿರುವ ಚಿಕ್ಕ ಮಳಿಗೆಗಳಿಗೆ ದಿನಾಂಕ: 12-12-2024 ರಂದು ಸಮಯ ಸಂಜೆ 4:30 ಗಂಟೆಗೆ ಸಮಿತಿ ಸಭಾಭವನದಲ್ಲಿ ಟೆಂಡರನಲ್ಲಿ ಭಾಗವಹಿಸಿದವರಿಗೆ ಮಾತ್ರ ಬಹಿರಂಗ ಹರಾಜು ನಡೆಸಲಾಗುವುದು. ನಂತರ ಅದೇ ದಿನ ಟೆಂಡರ್‌ಗಳನ್ನು ತೆರೆಯಲಾಗುವುದು. ಬಹಿರಂಗ ಹರಾಜು ದಿನಾಂಕವನ್ನು ಮುಂದೂಡಿದಲ್ಲಿ ಮುಂದಿನ ಬಹಿರಂಗ ಹರಾಜು ದಿನಾಂಕವನ್ನು ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗುವುದು. ಮತ್ತು ಅರ್ಜಿಯಲ್ಲಿ ನೀಡಿದ ವಿಳಾಸಕ್ಕೆ ನೋಂದಾಯಿತ ಅಂಚೆ ಮೂಲಕ ತಿಳಿಸಲಾಗುವುದು. (ಲಕೋಟೆಯ ಮೇಲೆ ಅರ್ಜಿದಾರರ ಪೂರ್ಣ ವಿಳಾಸ ನಮೂದಿಸುವುದು.). 4.ಸಮಿತಿಯ ಪ್ರಾಂಗಣದಲ್ಲಿ ಮಳಿಗೆ ಹಂಚಿಕೆಗಾಗಿ 02 ತಿಂಗಳಿಗೆ ಸಮನಾದ ಲೀವ್ & ಲೈಸನ್ಸ್ ಶುಲ್ಕ (ಈ ಪ್ರಕಟಣೆ ಕಲಂ 5 ರಲ್ಲಿ ನಮೂದಿಸಿದಂತೆ) ಮೊತ್ತಕ್ಕೆ ಇ.ಎಂ.ಡಿ. ಮೊತ್ತವನ್ನು ಕಾರ್ಯದರ್ಶಿ ಕೃಉಮಾಸ ಬಾಗಲಕೋಟ ಇವರ ಹೆಸರಿಗೆ ಡಿಡಿ ಪಡೆದು ನಿಗಧಿತ ಅರ್ಜಿ ನಮೂನೆಯೊಂದಿಗೆ ಲಗತ್ತಿಸತಕ್ಕದ್ದು. 5.ಟೆಂಡರ-ಕಂ-ಬಹಿರಂಗ ಹರಾಜಿನಲ್ಲಿ ಭಾಗವಹಿಸಿ ಅತೀ ಹೆಚ್ಚು ದರಸೂಚಿಸಿರುವ ಅರ್ಜಿದಾರರು ನಮೂದಿಸಿದ ಟೆಂಡರ ದರ/ಬಹಿರಂಗ ಹರಾಜು ದರ ಅದರಲ್ಲಿ ಯಾವುದೋ ಹೆಚ್ಚು ಸದರಿ ಮೊತ್ತಕ್ಕನುಗುಣವಾಗಿ ಮುಂಗಡ ಠೇವಣಿಯ ವ್ಯತ್ಯಾಸದ ಹೆಚ್ಚುವರಿ ಮೊತ್ತವನ್ನು ಬಹಿರಂಗ ಹರಾಜು ದಿನಾಂಕದಿಂದ 3 ದಿನಗಳ ಒಳಗೆ ಪಾವತಿಸತಕ್ಕದ್ದು. 6.ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ ಮಾರುಕಟ್ಟೆ (ಪ್ರಾಂಗಣದಲ್ಲಿನ ಆಸ್ತಿ ಹಂಚಿಕೆ ನಿಯಂತ್ರಣ) ನಿಯಮ 2004 ರ ನಿಯಮ 17 ರ ಮೀಸಲಾತಿಯನ್ವಯ ಹಂಚಿಕೆ ಮಾಡಲಾಗುವುದು. ಮೀಸಲಾತಿಯಡಿ ಅರ್ಜಿ ಸಲ್ಲಿಸುವವರು ಸಕ್ಷಮ ಪ್ರಾಧಿಕಾರಿಗಳಿಂದ ಪಡೆದ ಜಾತಿ ಪ್ರಮಾಣ ಪತ್ರ ಲಗತ್ತಿಸುವುದು. ಎಫ್.ಪಿ.ಓ ಮೀಸಲಾತಿಯಡಿ ಅರ್ಜಿ ಸಲ್ಲಿಸುವವರು ಕಂಪನಿ ಆಕ್ಟ್ ನೊಂದಣೆ ಪಡೆದಿರುವ ದಾಖಲಾತಿಗಳನ್ನು ಸಲ್ಲಿಸುವುದು. ಎಫ್.ಪಿ.ಓ ಸಂಸ್ಥೆಗೆ ನಿಯಮ-17(2)(ಬಿ) ರನ್ವಯ ಲೀವ್ & ಲೈಸನ್ಸ್ ದರದಲ್ಲಿ ಶೇ.50 ರಷ್ಟು ರಿಯಾಯತಿ ಪಡೆಯಲು ಅರ್ಹರಿರುತ್ತಾರೆ. ಮಹಿಳಾ ಮೀಸಲಾತಿಯಡಿ ಅರ್ಜಿ ಸಲ್ಲಿಸುವ ಸಂಸ್ಥೆಗಳಲ್ಲಿನ ಎಲ್ಲಾ ಸದಸ್ಯರು / ಪಾಲುದಾರರು ಮಹಿಳೆಯರಾಗಿರತಕ್ಕದ್ದು. 7.ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತು ಅಭಿವೃದ್ಧಿ) ಶಾಸನ 1966 ಮತ್ತು ನಿಯಮಗಳು 1968 ಮತ್ತು ಆಸ್ತಿ ಹಂಚಿಕೆ ನಿಯಮಾವಳಿಗಳು 2004 ರ ಷರತ್ತು ಮತ್ತು ನಿಬಂಧನೆಗೊಳಪಟ್ಟಿರುತ್ತದೆ. 8.ಎಲ್ಲಾ ಚಿಕ್ಕ ಮಳಿಗೆ ಹಂಚಿಕೆಯು ನಿಯಮಾನುಸಾರ ಮಾನ್ಯ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು ಇವರ ಅನುಮೋದನೆಯ ಷರತ್ತಿಗೊಳಪಟ್ಟು ಹಂಚಿಕೆ ಮಾಡಲಾಗುವುದು.9.ಸಮಿತಿಯು ಚಿಕ್ಕ ಮಳಿಗೆ ಹಂಚಿಕೆಯನ್ನು ಯಾವುದೇ ಕಾರಣವನ್ನು ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ.

ಹೆಚ್ಚಿನ ವಿವರಗಳನ್ನು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬಾಗಲಕೋಟೆ. ಇಲ್ಲಿ ರಜಾ ದಿನಗಳನ್ನು ಹೊರತುಪಡಿಸಿ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.

ಸಹಿ/-(ವಿ.ಡಿ.ಪಾಟೀಲ)
ಕಾರ್ಯದರ್ಶಿ
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಬಾಗಲಕೋಟೆ

ಸಹಿ/-(ಅಮರೇಶ ಪಮ್ಮಾರ)
ಆಡಳಿತಾಧಿಕಾರಿಗಳು
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಬಾಗಲಕೋಟೆ
DIPR/BGK/RO-NO-320/KSMCA/2024-25

ಮುಸ್ಲಿಂ ವಿವಿಯ ಅಲ್ಪಸಂಖ್ಯಾತ ಸ್ಥಾನಮಾನ ಸಂಬಂಧ ಸಾಂವಿಧಾನಿಕ ಪೀಠ ತೀರ್ಪು

ಅಲಿಗಢ ವಿವಿ ಸ್ಥಾನಮಾನ ನಿರ್ಧಾರಕ್ಕೆ ಸಮಿತಿ

ದೆಹಲಿ: ಅಲಿಗಢ ಮುಸ್ಲಿಂ ವಿಶ್ವವಿದ್ಯಾನಿಲಯದ ಅಲ್ಪಸಂಖ್ಯಾತ ಸ್ಥಾನಮಾನದ ಕುರಿತು ಸುಪ್ರೀಂ ಕೋರ್ಟ್ ಶುಕ್ರವಾರ ಮಹತ್ವದ ತೀರ್ಪು ನೀಡಿದೆ.

ಸುಪ್ರೀಂ ಕೋರ್ಟ್‌ನ ಏಳು ನ್ಯಾಯಾಧೀಶರ ಪೀಠ 4:3ರ ಬಹುಮತದ ತೀರ್ಪನ್ನು ನೀಡಿದ್ದು, 1967ರ ಅಝೀಝ್ ಬಾಷಾ ಮತ್ತು ಯೂನಿಯನ್ ಆಫ್ ಇಂಡಿಯಾದ ತೀರ್ಪನ್ನು ರದ್ದುಗೊಳಿಸಿದೆ. ಅಲಿಘರ್ ಮುಸ್ಲಿಂ ವಿವಿ ಅಲ್ಪಸಂಖ್ಯಾತ ಸ್ಥಾನಮಾನವು ಯಾರು ಸ್ಥಾಪಿಸಿದರು ಎಂಬುದರ ಆಧಾರದ ಮೇಲೆ ನಿರ್ಧರಿಸಲಾಗುತ್ತದೆ ಎಂದು ಪೀಠ ಹೇಳಿದೆ.

ವಿವಿಯ ಅಲ್ಪಸಂಖ್ಯಾತ ಸ್ಥಾನಮಾನವನ್ನು ಹೊಸದಾಗಿ ನಿರ್ಧರಿಸಲು ಮೂವರು ನ್ಯಾಯಾಧೀಶರ ಸಮಿತಿಯನ್ನು ರಚಿಸಲಾಗಿದೆ ಎಂದು ನ್ಯಾಯಾಲಯ ಹೇಳಿದ್ದು, ಹೊಸ ಪೀಠವು ಎಎಂಯುಗೆ ಅಲ್ಪಸಂಖ್ಯಾತ ಸ್ಥಾನಮಾನ ನೀಡುವ ಮಾನದಂಡವನ್ನು ನಿರ್ಧರಿಸುತ್ತದೆ ಎಂದು ನ್ಯಾಯಾಲಯ ಹೇಳಿದೆ. ಸಿಜೆಐ ಸೇರಿದಂತೆ ನಾಲ್ವರು ನ್ಯಾಯಾಧೀಶರು ಈ ವಿಷಯದ ಬಗ್ಗೆ ಸರ್ವಾನುಮತದ ತೀರ್ಪು ನೀಡಿದರೆ, ಮೂವರು ನ್ಯಾಯಾಧೀಶರು ಅಸಮ್ಮತಿ ಸೂಚಿಸಿದ್ದಾರೆ.

ಸಿಜೆಐ ಚಂದ್ರಚೂಡ್, ನ್ಯಾಯಮೂರ್ತಿ ಸಂಜೀವ್ ಖನ್ನಾ, ನ್ಯಾಯಮೂರ್ತಿ ಪಾರ್ದಿವಾಲಾ ಮತ್ತು ನ್ಯಾಯಮೂರ್ತಿ ಮನೋಜ್ ಮಿಶ್ರಾ ಅವರು ಈ ವಿಷಯದ ಬಗ್ಗೆ ಒಮ್ಮತ ಹೊಂದಿದ್ದಾರೆ. ಅದೇ ಸಮಯದಲ್ಲಿ, ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿ ದೀಪಂಕರ್ ದತ್ತಾ ಮತ್ತು ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮಾ ಅವರು ವಿಭಿನ್ನ ತೀರ್ಪು ನೀಡಿದ್ದಾರೆ. . 4-3 ರ ಬಹುಮತದ ನಿರ್ಧಾರದಲ್ಲಿ, ನ್ಯಾಯಾಲಯವು 1967 ರ ನಿರ್ಧಾರವನ್ನು ತಿರಸ್ಕರಿಸಿತು.

ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದವರು ಯಾರು ಮತ್ತು ಅದರ ಹಿಂದಿನ ಕರ್ತೃ ಯಾರು ಎಂಬುದನ್ನು ನ್ಯಾಯಾಲಯವು ಪರಿಶೀಲಿಸಬೇಕು. ಪರಿಶೀಲನೆಯಲ್ಲಿ ಅಲ್ಪಸಂಖ್ಯಾತ ಸಮುದಾಯ ಸ್ಥಾಪಿಸಿರುವುದು ಬಯಲಾದರೆ, ಸಂಸ್ಥೆಯು 30ನೇ ವಿಧಿಯ ಪ್ರಕಾರ ಅಲ್ಪಸಂಖ್ಯಾತ ಸ್ಥಾನಮಾನವನ್ನು ಪಡೆಯಬಹುದು ಎಂದು ಸುಪ್ರೀಂಕೋರ್ಟ್ ಪೀಠವು ಹೇಳಿದೆ. ಅಲಿಗಢ ಮುಸ್ಲಿಂ ವಿಶ್ವವಿದ್ಯಾನಿಲಯವು ಅಲ್ಪಸಂಖ್ಯಾತ ಸಂಸ್ಥೆಯೇ ಎಂಬ ವಿಷಯವನ್ನು ಈಗ ನಿರ್ಧರಿಸಲು ಸಾಮಾನ್ಯ ಪೀಠಕ್ಕೆ ಅವಕಾಶ ನೀಡಲಾಗಿದೆ.

ನ್ಯಾಯಾಲಯ ತನ್ನ ತೀರ್ಪಿನಲ್ಲಿ ಏನು ಹೇಳಿದೆ?: ಸುಪ್ರೀಂ ಕೋರ್ಟ್ ಆಲಿಗಢ್ ವಿವಿ ಅಲ್ಪಸಂಖ್ಯಾತ ಸ್ಥಾನಮಾನಕ್ಕೆ ಅರ್ಹವಾಗಿದೆ ಎಂದು ಪರಿಗಣಿಸಿದೆ. ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಯ ಸ್ಥಾನಮಾನವನ್ನು ಪಡೆಯಲು ಸಾಧ್ಯವಿಲ್ಲ ಎಂದು ಹೇಳಲಾದ ಈ ಪ್ರಕರಣದಲ್ಲಿ ನ್ಯಾಯಾಲಯವು ತನ್ನದೇ ಆದ 1967 ರ ತೀರ್ಪನ್ನು ರದ್ದುಗೊಳಿಸಿದೆ. ಈ ಸಂಸ್ಥೆಯಲ್ಲಿ ಇತರ ಸಮುದಾಯಗಳಿಗೂ ಸಮಾನ ಹಕ್ಕುಗಳಿವೆ ಎಂದು ಸುಪ್ರೀಂ ಕೋರ್ಟ್‌ನ ಸಾಂವಿಧಾನಿಕ ಪೀಠ ಈ ತೀರ್ಪು ನೀಡಿದೆ. ಈ ಪೀಠವು 7 ನ್ಯಾಯಾಧೀಶರನ್ನು ಒಳಗೊಂಡಿತ್ತು, ಅದರಲ್ಲಿ 4 ಮಂದಿ ಪರವಾಗಿ ಮತ್ತು 3 ಮಂದಿ ವಿರುದ್ಧವಾಗಿ ತೀರ್ಪು ನೀಡಿದರು. ಈ ತೀರ್ಪು ನೀಡಿ ಪ್ರಕರಣವನ್ನು 3 ನ್ಯಾಯಮೂರ್ತಿಗಳ ಸಾಮಾನ್ಯ ಪೀಠಕ್ಕೆ ವರ್ಗಾಯಿಸಲಾಗಿದೆ. ಅಐಖಿ ಅನ್ನು ಅಲ್ಪಸಂಖ್ಯಾತರು ಸ್ಥಾಪಿಸಿದ್ದಾರೆಯೇ ಎಂಬುದನ್ನು ಈ ಪೀಠವು ತನಿಖೆ ಮಾಡಿ ನಿರ್ಧರಿಸಲಿದೆ.

ಸಿಜೆಐ ಹೇಳಿದ್ದೇನು?

ಸಂವಿಧಾನದ ಮೂಲಭೂತ ಹಕ್ಕುಗಳಲ್ಲಿ ಹೇಳಲಾದ ವಿಧಿಗಳಡಿ ಅಲ್ಪಸಂಖ್ಯಾತರೆಂದು ಪರಿಗಣಿಸುವ ಮಾನದಂಡಗಳೇನು? ಯಾವುದೇ ನಾಗರಿಕರು ಸ್ಥಾಪಿಸಿದ ಶಿಕ್ಷಣ ಸಂಸ್ಥೆಯನ್ನು ಆರ್ಟಿಕಲ್ 19(6) ಅಡಿಯಲ್ಲಿ ನಿಯಂತ್ರಿಸಬಹುದು. ಆರ್ಟಿಕಲ್ 30 ರ ಅಡಿಯಲ್ಲಿ ಹಕ್ಕುಗಳು ಸಂಪೂರ್ಣವಲ್ಲ. ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಯ ನಿಯಂತ್ರಣವನ್ನು ಆರ್ಟಿಕಲ್ 19(6) ಅಡಿಯಲ್ಲಿ ಅನುಮತಿಸಲಾಗಿದೆ. ಅದು ಸಂಸ್ಥೆಯ ಅಲ್ಪಸಂಖ್ಯಾತರ ಗುಣವನ್ನು ಉಲ್ಲಂಘಿಸುವುದಿಲ್ಲ. ಧಾರ್ಮಿಕ ಸಮುದಾಯವು ಸಂಸ್ಥೆಯನ್ನು ಸ್ಥಾಪಿಸಬಹುದು, ಆದರೆ ಅದನ್ನು ನಿರ್ವಹಿಸಲು ಸಾಧ್ಯವಿಲ್ಲ ಎಂದು ಸಿಜೆಐ ಹೇಳಿದ್ದಾರೆ. ವಿಶೇಷ ಕಾನೂನುಗಳ ಅಡಿಯಲ್ಲಿ ಸ್ಥಾಪಿಸಲಾದ ಸಂಸ್ಥೆಗಳನ್ನು ಆರ್ಟಿಕಲ್ 31 ರ ಅಡಿಯಲ್ಲಿ ಪರಿವರ್ತಿಸಲಾಗುವುದಿಲ್ಲ ಎಂಬ ವಾದವೂ ಇದೆ.

ಇತಿಹಾಸ ಮತ್ತು ವಿವಾದವೇನು?: ಮುಸ್ಲಿಮರ ಶೈಕ್ಷಣಿಕ ಉನ್ನತಿಯ ಉದ್ದೇಶದಿಂದ 1875 ರಲ್ಲಿ ಸರ್ ಸೈಯದ್ ಅಹ್ಮದ್ ಖಾನ್ ಅವರು'ಅಲಿಘರ್ ಮುಸ್ಲಿಂ ಕಾಲೇಜು' ಎಂದು ಸ್ಥಾಪಿಸಿದ್ದರು. ನಂತರ, 1920 ರಲ್ಲಿ, ಇದು ವಿಶ್ವವಿದ್ಯಾನಿಲಯ ಸ್ಥಾನಮಾನವನ್ನು ಪಡೆಯಿತು. ಇದಕ್ಕೆ ಅಲಿಘರ್ ಮುಸ್ಲಿಂ ವಿಶ್ವವಿದ್ಯಾಲಯ' ಎಂದು ಹೆಸರಿಸಲಾಯಿತು. 1951 ಮತ್ತು 1965 ರಲ್ಲಿ ವಿವಿ ಕಾಯಿದೆಗೆ ಮಾಡಿದ ತಿದ್ದುಪಡಿಗಳು ಕ ವಿವಾದಕ್ಕೆ ಕಾರಣವಾಯಿತು. ಅಲಿಗಢ್ ಕೇಂದ್ರೀಯ ವಿಶ್ವವಿದ್ಯಾಲಯ ಎಂದು 1967 ರಲ್ಲಿ ಸುಪ್ರೀಂ ಕೋರ್ಟ್ ತೀರ್ಪು ನೀಡಿತ್ತು. ಆದ್ದರಿಂದ ಇದನ್ನು ಅಲ್ಪಸಂಖ್ಯಾತರ ಸಂಸ್ಥೆ ಎಂದು ಪರಿಗಣಿಸಲಾಗುವುದಿಲ್ಲ. ನ್ಯಾಯಾಲಯದ ತೀರ್ಪಿನ ಪ್ರಮುಖ ಅಂಶವೆಂದರೆ ಅದು ಕೇಂದ್ರ ಕಾಯಿದೆಯಡಿಯಲ್ಲಿ ಸ್ಥಾಪಿಸಲ್ಪಟ್ಟಿದೆ, ಇದರಿಂದಾಗಿ ಅದರ ಪದವಿಗಳಿಗೆ ಸರಕಾರದ ಮಾನ್ಯತೆಯನ್ನು ಖಚಿತಪಡಿಸಿಕೊಳ್ಳಬಹುದು. ಈ ಕಾಯ್ದೆ ಮುಸ್ಲಿಂ ಅಲ್ಪಸಂಖ್ಯಾತರ ಪ್ರಯತ್ನದ ಫಲವಾಗಿರಬಹುದು. ಆದರೆ ಮುಸ್ಲಿಂ ಅಲ್ಪಸಂಖ್ಯಾತರು ವಿಶ್ವವಿದ್ಯಾಲಯವನ್ನು ಸ್ಥಾಪಿಸಿದ್ದಾರೆ ಎಂದು ಅರ್ಥವಲ್ಲ ಎಂದು ನ್ಯಾಯಾಲಯ ಹೇಳಿದೆ.

ಅಲಹಾಬಾದ್ ಹೈಕೋರ್ಟ್ 2005ರ ತಿದ್ದುಪಡಿ ತಿರಸ್ಕಾರ

ಸುಪ್ರೀಂ ಕೋರ್ಟ್‌ನ ಈ ತೀರ್ಪು ಎಎಂಯು ಅಲ್ಪಸಂಖ್ಯಾತರ ಪರಿಕಲ್ಪನೆಯ ಬಗ್ಗೆ ಪ್ರಶ್ನೆಗಳನ್ನು ಎತ್ತಿದೆ. ಇದರ ನಂತರ, ದೇಶಾದ್ಯಂತ ಮುಸ್ಲಿಂ ಸಮುದಾಯದಿಂದ ಪ್ರತಿಭಟನೆಗಳು ನಡೆದವು, ಇದರಿಂದಾಗಿ 1981 ರಲ್ಲಿ ಎಎಂಯುಗೆ ಅಲ್ಪಸಂಖ್ಯಾತ ಸ್ಥಾನಮಾನವನ್ನು ನೀಡುವ ತಿದ್ದುಪಡಿಯನ್ನು ಮಾಡಲಾಯಿತು. 2005 ರಲ್ಲಿ, ಅಲಹಾಬಾದ್ ಹೈಕೋರ್ಟ್ 1981ರ ಎಎಂಯು ತಿದ್ದುಪಡಿ ಕಾಯಿದೆಯನ್ನು ರದ್ದುಗೊಳಿಸಿತು, ಇದು ಅಸಾಂವಿಧಾನಿಕ ಎಂದು ಘೋಷಿಸಿತು.

2006ರಲ್ಲಿ ಅಲಹಾಬಾದ್ ಹೈಕೋರ್ಟ್ ತೀರ್ಪನ್ನು ಕೇಂದ್ರ ಸರಕಾರ ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿತ್ತು. ನಂತರ 2016ರಲ್ಲಿ ಅಲ್ಪಸಂಖ್ಯಾತರ ಸಂಸ್ಥೆ ಸ್ಥಾಪನೆ ಜಾತ್ಯತೀತ ರಾಷ್ಟ್ರದ ತತ್ವಗಳಿಗೆ ವಿರುದ್ಧವಾಗಿದೆ ಎಂದು ಕೇಂದ್ರವು ತನ್ನ ಮನವಿಯಲ್ಲಿ ಹೇಳಿದೆ. 2019 ರಲ್ಲಿ ಅಂದಿನ ಸಿಜೆಐ ರಂಜನ್ ಗೊಗೊಯ್ ನೇತೃತ್ವದ ತ್ರಿಸದಸ್ಯ ಪೀಠವು ಪ್ರಕರಣವನ್ನು ಏಳು ನ್ಯಾಯಾಧೀಶರ ಸಾಂವಿಧಾನಿಕ ಪೀಠಕ್ಕೆ ವಹಿಸಿತ್ತು.

ಎಕ್ಸಿಸ್ ಬ್ಯಾಂಕ್ **ಪ್ಲಾಟ್ ಸಂಖ್ಯೆ 41, ಶೇಷಾದ್ರಿ ರಸ್ತೆ, ಆನಂದ್ ರಾವ್ ಸರ್ಕಲ್, ಬೆಂಗಳೂರು -560009**

ತಗಾದೆ ಸೂಚನೆ

ಈ ಕೆಳಗಿನ ಸಾಲಗಾರರು ಬ್ಯಾಂಕಿನಿಂದ ಪಡೆದ ಸಾಲ ಸೌಲಭ್ಯಗಳ ಮೇಲಿನ ಅಸಲು ಮತ್ತು ಬಡ್ಡಿಯನ್ನು ಹಿಂಪಾವತಿಸುವಲ್ಲಿ ವಿಫಲರಾಗಿರುವುದರಿಂದ ಆ ಸೌಲಭ್ಯಗಳು ನಿರ್ವಹಣಾರಹಿತ ಸ್ವತ್ತುಗಳಾಗಿ ಪರಿವರ್ತಿತವಾಗಿವೆ ಎಂದು ಈ ಸೂಚನೆಯ ಮೂಲಕ ತಿಳಿಸಲಾಗಿದೆ. 2002ರ ಹಣಕಾಸು ಆಸ್ತಿಗಳ ಖಾತರೀಕರಣ ಮತ್ತು ಪುನನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ ವಿಭಾಗ 13(2)ರ ಅಡಿಯಲ್ಲಿ, ಅವರು ಕೊನೆಯದಾಗಿ ತಿಳಿಸಲಾಗಿರುವಂತಹ ತಮ್ಮ ವಿಳಾಸಗಳಿಗೆ ಸೂಚನೆಗಳನ್ನು ಕಳುಹಿಸಲಾಯಿತಾದರೂ, ಅವು ಸ್ವೀಕೃತಗೊಳ್ಳದೇ ಹಿಂದಿರುಗಿರುವುದರಿಂದ ಸಾರ್ವಜನಿಕ ಪ್ರಕಟಣೆಯ ಮೂಲಕ ಅವರಿಗೆ ಈ ಕುರಿತು ತಿಳಿಸಲಾಗುತ್ತಿದೆ.

ಕ್ರ ಸಂ	ಸಾಲಗಾರರ ಹೆಸರು ಮತ್ತು ವಿಳಾಸ	ಸಾಲಗಾರರು ಅಡಮಾನ ಮಾಡಿರುವ ಆಸ್ತಿಯ ವಿವರ	ನೋಟೀಸ್ ದಿನಾಂಕ	ಬರಬೇಕಾದ ಬಾಕಿ (ರೂ.ಗಳಲ್ಲಿ)
1	**1. ಶ್ರೀ ರೋಹನ್ ವಿಶ್ವನಾಥ್ ಚಿಪ್ಕರ್,** ಬಿನ್ ಶ್ರೀ ವಿಶ್ವನಾಥ್ ಚಿಪ್ಕರ್, **2. ಶ್ರೀಮತಿ.ಪೂಜಾ ಚಿಪ್ಕರ್,** ಕೋಂ. ಶ್ರೀ ರೋಹನ್ ವಿಶ್ವನಾಥ್ ಚಿಪ್ಕರ್, **ಇವರಿಬ್ಬರ ವಿಳಾಸ:** ಚರ್ಚ್ ರಸ್ತೆ, ಬಿಣಗಾ ಕಾರವಾರ ಉತ್ತರ ಕನ್ನಡ, ಕಾರವಾರ-581307. **ಮತ್ತೊಂದು ವಿಳಾಸ:** ಫ್ಲಾಟ್ ನಂ 1857/1/ಎಸ್/4 ಎರಡನೇ ಮಹಡಿ, ಭಾಗ್ಯೋದ್ಯ ಅಪಾರ್ಟ್‌ಮೆಂಟ್, ಬಸ್ ಡಿಪೋ ಎದುರು, ಗುಣಗಿವಾಡ ರಸ್ತೆ, ಹಬ್ಬುವಾಡ-581301.	**ಆಸ್ತಿಯು ಶ್ರೀ ರೋಹನ್ ವಿಶ್ವನಾಥ್ ಚಿಪ್ಕರ್, ಬಿನ್ ಶ್ರೀ ವಿಶ್ವನಾಥ್ ಚಿಪ್ಕರ್ ರವರ ಹೆಸರಿನಲ್ಲಿದೆ,** ಎರಡನೇ ಮಹಡಿಯಲ್ಲಿರುವ ಫ್ಲಾಟ್ ನಂ. ಎಸ್-4 ಸಿಎಂಸಿ ನಂ.1857/1/ಎಸ್/4, 800 ಚದರ ಅಡಿ ನಿರ್ಮಿತ ಪ್ರದೇಶವನ್ನು ಹೊಂದಿದೆ, ಕೃಷಿಯೇತರ ಜಮೀನಿನ ಆಸ್ತಿಯ ನಂ. ಸಿಟಿಎಸ್ ನಂ.9571ಎ, 1182.92 ಚದರ ಅಡಿ ಹೊಂದಿದ್ದು ಅದರಲ್ಲಿ ನನ್ನ ಸ್ವಾಧೀನದಲ್ಲಿರುವ 24.80 ಚದರ ಮೀಟರ್ ಅಂದರೆ 267 ಚ. ಅಡಿ (0-0-4 ಅನ್ನಾಸ್) ನ ಅವಿಭಾಜಿತ ಪಾಲು. ಹೊಂದಿರುವ "ಭಾಗ್ಯೋದಯ ಅಪಾರ್ಟ್‌ಮೆಂಟ್" ಹೆಸರಿನ ಅಪಾರ್ಟ್‌ಮೆಂಟ್ ಅನ್ನು ಬಾದ್-1 ಗ್ರಾಮ, ಕಾರವಾರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆಯಲ್ಲಿ ನಿರ್ಮಿಸಲಾಗಿದ್ದು, ಜೊತೆಗೆ ಮೊಸಾಯಿಕ್ ಫ್ಲೋರಿಂಗ್ ಹೊಂದಿದೆ, ಕಾರ್ ಪಾರ್ಕಿಂಗ್ ಸೌಲಭ್ಯವನ್ನು ಹೊಂದಿಲ್ಲ, ಇದು ಹಬ್ಬುವಾಡದ ಕಾರವಾರದಲ್ಲಿದೆ, ಚಕ್ಕುಬಂದಿ: ಉತ್ತರಕ್ಕೆ: ತೆರೆದ ಜಾಗದ ಗಡಿ, ದಕ್ಷಿಣಕ್ಕೆ: ತೆರೆದ ಜಾಗದ ಗಡಿ, ಪಶ್ಚಿಮಕ್ಕೆ : ಎಸ್.ಡಿ. ಅನ್ವೇಕರ್ ರವರ ಪ್ಲಾಟ್‌ನ ಬೌಂಡ್ರಿ, ಪೂರ್ವಕ್ಕೆ: ಭಾಗ್ಯೋದಯ ಅಪಾರ್ಟ್‌ಮೆಂಟ್ ನ 2ನೇ ಹಂತದ ಬೌಂಡ್ರಿ, ಎರಡನೇ ಮಹಡಿಯಲ್ಲಿರುವ ಪ್ಲಾಟ್‌ನ ಒಟ್ಟು ವಿಸ್ತೀರ್ಣ 800 ಚದರ ಅಡಿ, ಷೆಡ್ಯೂಲ್ ಆಸ್ತಿಯ ಮೊತ್ತ ರೂ.6,76,000/- (ರೂಪಾಯಿ ಆರು ಲಕ್ಷದ ಎಪ್ಪತ್ತಾರು ಸಾವಿರ ಮಾತ್ರ) ಫ್ಲಾಟ್‌ನ ವಿವರ ಗ್ರಾಮ-ಬಾದ್-1, ಸಿಟಿಎಸ್ ನಂ. 9571ಎ ರಲ್ಲಿ 1182.92, ಫ್ಲಾಟ್ ಎರಡನೇ ಮಹಡಿಯಲ್ಲಿದೆ ಇದು 24.80 ಚ.ಮೀ. ಅಂದರೆ 267 ಚ.ಅಡಿ (0-0-4 ಅನ್ನಾಸ್) **ಹೆಚ್ಚಿನ ಮಾಹಿತಿಗಾಗಿ ಶ್ರೀ.ತ್ರಿಮೂರ್ತಿ : 9036773553 ರವರನ್ನು ಸಂಪರ್ಕಿಸಿ.**	22.09.2024 ಎನ್‌ಪಿಎ ದಿನಾಂಕ 08.09.2024	Loan No. PHR012905638329 POWER HOME VANILLA BRE ಒಟ್ಟು ಮೊತ್ತ ರೂ.21,37,178/- ದಿನಾಂಕ: 12.09.2024 ರಂದು ಇದ್ದಂತೆ
2	**1. ಶ್ರೀ ಯಲ್ಲಪ್ಪ ಹೊರಕೇರಿ,** ಬಿನ್ ಶ್ರೀ ಬಾಳಪ್ಪ, **2. ಶ್ರೀಮತಿ ನಿರ್ಮಲಾ ಹೊರಕೇರಿ,** ಕೋಂ. ಶ್ರೀ ವಲ್ಲಪ್ಪ ಹೊರಕೇರಿ, **ಇವರಿಬ್ಬರ ವಿಳಾಸ:** 10/1, 1913 1ನೇ ಮುಖ್ಯರಸ್ತೆ, ರಜತಗಿರಿ, ಲ್ಯಾಂಡ್‌ಮಾರ್ಕ್-ಕಾಳಿದಾಸ್ ಹಾಸ್ಟೆಲ್ ಹಿಂದೆ, ಧಾರವಾಡ-580004. **ಮತ್ತೊಂದು ವಿಳಾಸ:** ಪ್ಲಾಟ್ ನಂ.14, ವಿನಾಯಕ್ ಗಾರ್ಡನ್, ಲಕಮನಹಳ್ಳಿ, ಉದಯಗಿರಿ ರಸ್ತೆ, ಧಾರವಾಡ, ಕರ್ನಾಟಕ-580001.	**ಆಸ್ತಿಯು ಶ್ರೀ ಯಲ್ಲಪ್ಪ ಬಿ ಹೊರಕೇರಿ ಬಿನ್ ಶ್ರೀ ಬಳ್ಳಪ್ಪ ಹೊರಕೇರಿ ರವರ ಹೆಸರಿನಲ್ಲಿದೆ,** ಆಸ್ತಿಯ ನಂ.56/ಎಫ್, ಪ್ಲಾಟ್ ನಂ.14 ಕೆಜೆಪಿ ಆರ್.ಎಸ್.ನಂ.56 ಎಫ್ ರಲ್ಲಿ ರೂಪುಗೊಂಡಿದೆ, ವಿಸ್ತೀರ್ಣ 01 ಗುಂಟೆ 01 ಅನ್ನಾಸ್ ಅಂದರೆ 1157.06 ಚ.ಅಡಿ, ಜೊತೆಗೆ ಅನುಮತಿಯೊಂದಿಗೆ ನೆಲ ಮಹಡಿಯಲ್ಲಿ 59.64 ಚದರ ಮೀಟರ್‌ನಲ್ಲಿ ವಸತಿ ಕಟ್ಟಡವನ್ನು ಮತ್ತು ಮೊದಲನೇ ಮಹಡಿಯಲ್ಲಿ 59.64 ಚ.ಮೀಟರ್ ನಿರ್ಮಿಸಲಾಗಿದೆ, ಇದು ಹುಬ್ಬಳ್ಳಿ-ಧಾರವಾಡ ಕಾರ್ಪೊರೇಷನ್ ವ್ಯಾಪ್ತಿಯಲ್ಲಿದೆ, ಇದು ಲಕಮನಹಳ್ಳಿ, ಧಾರವಾಡ ತಾಲ್ಲೂಕು ಧಾರವಾಡ ಜಿಲ್ಲೆ, ಧಾರವಾಡದಲ್ಲಿದೆ ಮತ್ತು ಈ ಕೆಳಗಿನಂತೆ ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ. ಪಶ್ಚಿಮಕ್ಕೆ: ಪ್ಲಾಟ್ ನಂ.13. ಉತ್ತರಕ್ಕೆ: ಪ್ಲಾಟ್ ನಂ.11. ದಕ್ಷಿಣಕ್ಕೆ: ರಸ್ತೆ. **ಹೆಚ್ಚಿನ ಮಾಹಿತಿಗಾಗಿ ಶ್ರೀ.ಸಂಜಯಪ್ರಸಾದ್ : 9916566630 ರವರನ್ನು ಸಂಪರ್ಕಿಸಿ.**	21.09.2024 ಎನ್‌ಪಿಎ ದಿನಾಂಕ 08.09.2024	(1) Loan No. PHR012901494567 POWER HOME (2) Loan No. PHR012901884943 POWER HOME ಒಟ್ಟು ಮೊತ್ತ: ರೂ.19,79,349/- ದಿನಾಂಕ: 12.09.2024 ರಂದು ಇದ್ದಂತೆ
3	**1. ಶ್ರೀಮತಿ ಮಾಲಾ,** ಕೋಂ. ಶ್ರೀ ಸಿಡಿ ಪ್ರಕಾಶ್, **2. ಶ್ರೀ ಸಿಡಿ ಪ್ರಕಾಶ್,** ಬಿನ್ ಶ್ರೀ ಚೆರುಕುರಿ ದೊರೈಸ್ವಾಮಿ ನಾಯ್ಡು, **ಇವರಿಬ್ಬರ ವಿಳಾಸ:** ನಂ. 100, 2ನೇ ಕ್ರಾಸ್, 3ನೇ ಮುಖ್ಯರಸ್ತೆ, ಜೆ ಪಿ ನಗರ, 4ನೇ ಹಂತ ಡಾಲರ್ಸ್ ಕಾಲೋನಿ, ಬೆಂಗಳೂರು – 560078. **ಮತ್ತೊಂದು ವಿಳಾಸ:** ನಂ. 100, 2ನೇ ಕ್ರಾಸ್, 3ನೇ ಮುಖ್ಯರಸ್ತೆ, ಜೆ ಪಿ ನಗರ, 4ನೇ ಹಂತ ಡಾಲರ್ಸ್ ಕಾಲೋನಿ, ಬೆಂಗಳೂರು – 560078.	**ಆಸ್ತಿಯು 1. ಶ್ರೀ.ಸಿ.ಡಿ.ಪ್ರಕಾಶ್ ಬಿನ್ ಶ್ರೀ. ಲೇಟ್.ಸಿ.ಡಿ.ನಾಯ್ಡು 2.ಶ್ರೀಮತಿ. ಮಾಲಾ ಪ್ರಕಾಶ್ ಕೋಂ. ಸಿ.ಡಿ.ಪ್ರಕಾಶ್ ರವರ ಹೆಸರಿನಲ್ಲಿದೆ.** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಸತಿ ಖಾಲಿ ನಿವೇಶನ ನಂ.100, ಇದು ಡಾಲರ್ಸ್ ಕಾಲೋನಿ, ಸಾರಕ್ಕಿ 4ನೇ ಹಂತ, ಬೆಂಗಳೂರಿನಲ್ಲಿದೆ, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ 15.25 ಮೀ ಮತ್ತು ಉತ್ತರದಿಂದ ದಕ್ಷಿಣಕ್ಕೆ 24,38 ಮೀ. ಮತ್ತು ಚಕ್ಕುಬಂದಿ ಪೂರ್ವಕ್ಕೆ: ನಿವೇಶನ ನಂ.101 ಪಶ್ಚಿಮಕ್ಕೆ: ನಿವೇಶನ ನಂ.99, ಉತ್ತರಕ್ಕೆ: ರಸ್ತೆ. ದಕ್ಷಿಣಕ್ಕೆ: ನಿವೇಶನ ನಂ.129, **ಹೆಚ್ಚಿನ ಮಾಹಿತಿಗಾಗಿ ಶ್ರೀ ಪ್ರೇಮ್ ಕುಮಾರ್ ಎ : 8880041234ರವರನ್ನು ಸಂಪರ್ಕಿಸಿ.**	16.10.2024 ಎನ್‌ಪಿಎ ದಿನಾಂಕ 08.10.2024	Loan No. LPR000905059091 ASSET POWER BRE ಒಟ್ಟು ಮೊತ್ತ ರೂ.30,20,309/- ದಿನಾಂಕ: 14.10.2024 ರಂದು ಇದ್ದಂತೆ
4	**1. ಶ್ರೀ.ಸುರೇಶ್,** ಬಿನ್ ಶ್ರೀ ಮಲ್ಲಿಕಾರ್ಜುನಪ್ಪ, **2. ಶ್ರೀಮತಿ ನಳಿನಾ,** ಕೋಂ. ಶ್ರೀ ಸುರೇಶ್, **ಇವರಿಬ್ಬರ ವಿಳಾಸ:** ನಂ. 185, 18ನೇ ಕ್ರಾಸ್, 1ನೇ ಬ್ಲಾಕ್, ಆದರ್ಶ ಶಾಲೆಯ ಹತ್ತಿರ, ಆರ್.ಟಿ.ನಗರ, ಬೆಂಗಳೂರು-560032. **ಮತ್ತೊಂದು ವಿಳಾಸ:** 148, ಮುನಿಸಿಪಲ್ ನಂ. 170/ಎಲ್148, ಹೊಸೂರಿನ ಸೆಕ್ಟರ್ 6 ರಲ್ಲಿದೆ, ಸರ್ಜಾಪುರ ರಸ್ತೆ ಲೇಔಟ್, ಬೆಂಗಳೂರು – 560102.	**ಆಸ್ತಿಯು ಶ್ರೀ.ಸುರೇಶ್, ಬಿನ್ ಶ್ರೀ ಮಲ್ಲಿಕಾರ್ಜುನಪ್ಪ ರವರ ಹೆಸರಿನಲ್ಲಿದೆ,** ಷೆಡ್ಯೂಲ್ 'ಎ' ಆಸ್ತಿ : ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಉತ್ತರ ಭಾಗದ ಸ್ಪಿಲ್ಟ್ ಫ್ಲೋರ್‌ನ ವಿಸ್ತೀರ್ಣ 1329 ಚದರ ಅಡಿ, ದಕ್ಷಿಣ ಭಾಗದ ನೆಲ ಅಂತಸ್ತಿನ ವಿಸ್ತೀರ್ಣ 1329 ಚದರ ಅಡಿ, ಸಂಪೂರ್ಣ ಎರಡನೇ ಮಹಡಿಯ ವಿಸ್ತೀರ್ಣ 2905 ಚದರ ಅಡಿ, ಸಂಪೂರ್ಣ ಮೂರನೇ ಮಹಡಿಯ ವಿಸ್ತೀರ್ಣ 2905 ಚ.ಅಡಿ, ಉತ್ತರ ಭಾಗದ ಪೆಂಟ್ ಹೌಸ್‌ನ ವಿಸ್ತೀರ್ಣ 927 ಚ.ಅಡಿ, ಉತ್ತರ ಭಾಗದ ಐದನೇ ಮಹಡಿಯ ವಿಸ್ತೀರ್ಣ 476 ಚದರ ಅಡಿ, ದಕ್ಷಿಣ ಭಾಗದ ಪೆಂಟ್ ಹೌಸ್‌ನ ಮೇಲಿನ ಟೆರೇಸ್‌ನ ವಿಸ್ತೀರ್ಣ 1148 ಚದರ, ನಿವೇಶನ ನಂ. ಎಲ್-148, ಮುನಿಸಿಪಲ್ ನಂ. 170/ಎಲ್-148, ಸೆಕ್ಟರ್ 6, ಹೊಸೂರು ಸರ್ಜಾಪುರ ರಸ್ತೆ ಲೇಔಟ್, ಬೆಂಗಳೂರಿನ ಬಿಡಿಎ ಲೇಔಟ್‌ನಲ್ಲಿ ನಿರ್ಮಿಸಲಾಗಿದೆ. **ಹೆಚ್ಚಿನ ಮಾಹಿತಿಗಾಗಿ ಶ್ರೀ.ಸಂಜಯ್ ಪ್ರಸಾದ್ : 9916566630 ರವರನ್ನು ಸಂಪರ್ಕಿಸಿ.**	16.10.2024 ಎನ್‌ಪಿಎ ದಿನಾಂಕ 08.10.2024	Loan No. PCR056101542326 ASSET POWER ಒಟ್ಟು ಮೊತ್ತ ರೂ. 2,61,120/- ದಿನಾಂಕ: 14.10.2024 ರಂದು ಇದ್ದಂತೆ
5	**1. ಶ್ರೀ. ಶರಾಫತ್ ಅಲಿ,** ಬಿನ್ ಶ್ರೀ ಆಲಂ ದೀನ್, **2. ಶ್ರೀಮತಿ ಕುರ್ರತ್ ಮಸಿಹಾ** ಕೋಂ. ಶ್ರೀ. ಶರಾಫತ್ ಅಲಿ, **ಇವರಿಬ್ಬರ ವಿಳಾಸ:** ವಾರ್ಡ್ ನಂ.2, ಕೆಎಸ್‌ಆರ್‌ಟಿಸಿ ಕ್ವಾಟ್ರಸ್ ಹಿಂದೆ, ಆಡುವಳ್ಳಿ, ಹಾಸನ – 573201. **ಮತ್ತೊಂದು ವಿಳಾಸ:** ನಿವೇಶನ ನಂ. 1100, ಹೆಚ್‌ಐಜಿ 1, ಸರ್ವೆ ನಂ.92, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಹತ್ತಿರ, ಕಸಬಾ ಹೋಬಳಿ, ಹಾಸನ – 562123.	**ಆಸ್ತಿಯು 1. ಶ್ರೀ ಹಬೀಬ್ ಉರ್ ರೆಹಮಾನ್ ಬಿನ್ ಶ್ರೀ ಹೆಚ್.ಎಸ್.ಅಬ್ದುಲ್ ಹಫೀಜ್ ಸಾಯೀದ್ 2. ಶ್ರೀ.ಶರಾಫತ್ ಅಲಿ ಬಿನ್ ಲೇಟ್ ಆಲಂ ದೀನ್. ರವರ ಹೆಸರಿನಲ್ಲಿದೆ, ಷೆಡ್ಯೂಲ್ ಆಸ್ತಿ** ಈ ನಿವೇಶನವುನ ಚನ್ನಪಟ್ಟಣ ಎಕ್ಸ್‌ಟೆನ್ಶನ್, ಕೆ.ಹೆಚ್.ಬಿ. ಕಾಲೋನಿ ಎದುರುಗಡೆ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದಲ್ಲಿರುವ ನಿವೇಶನ ನಂ.1100 ಎಚ್.ಐ.ಜಿ. ವಿಸ್ತೀರ್ಣ ಪೂರ್ವ-ಪಶ್ಚಿಮ 12.00 ಮೀಟರ್‌ಗಳು ಮತ್ತು ದಕ್ಷಿಣ-ಉತ್ತರ 18.00 ಮೀಟರ್‌ಗಳು, ಒಟ್ಟು 216.00 ಚದರ ಮೀಟರ್ (12.00X18.00 ಮೀಟರ್‌ಗಳು) ಒಳಗೊಂಡಿರುತ್ತವೆ ಚಕ್ಕುಬಂದಿ: ಪೂರ್ವಕ್ಕೆ : ನಿವೇಶನ ನಂ.ಎಚ್.ಐ.ಜಿ.-1101, ಪಶ್ಚಿಮಕ್ಕೆ : ನಿವೇಶನ ನಂ.ಎಚ್.ಐ.ಜಿ.-1099, ಉತ್ತರಕ್ಕೆ : 12.00 ಮೀಟರ್ ರಸ್ತೆ: ದಕ್ಷಿಣಕ್ಕೆ: ನಿವೇಶನ ನಂ.ಎಲ್‌ಐಜಿ-1129 ಮತ್ತು 1130. **ಹೆಚ್ಚಿನ ಮಾಹಿತಿಗಾಗಿ ಶ್ರೀ ಸುದರ್ಶನ್ : 9611067929 ರವರನ್ನು ಸಂಪರ್ಕಿಸಿ.**	16.10.2024 ಎನ್‌ಪಿಎ ದಿನಾಂಕ 03.10.2024	Loan No. PHR007708421277 POWER HOME VANILLA BRE ಒಟ್ಟು ಮೊತ್ತ ರೂ.53,58,944/- ದಿನಾಂಕ: 14.10.2024 ರಂದು ಇದ್ದಂತೆ
6	**1. ಶ್ರೀ ಮಧುಸೂಧನ,** ಬಿನ್ ಶ್ರೀ ಮಲ್ಲಿಕಾರ್ಜುನ, **2. ಶ್ರೀಮತಿ ಸುಮಿತ್ರಾ,** ಕೋಂ. ಶ್ರೀ ಮಧುಸೂಧನ, **ಇವರಿಬ್ಬರ ವಿಳಾಸ:** ಮನೆ ನಂ 897, 12ನೇ ವಾರ್ಡ್, ಸಿದ್ದಿಪ್ರಿಯ ಕಲ್ಯಾಣ ನಗರ ಹಿಂದೆ, ಚಿತವಾಡಗಿ, ಹೊಸಪೇಟೆ-583201. **ಮತ್ತೊಂದು ವಿಳಾಸ:** ಪ್ಲಾಟ್ ನಂ.11, ಅಸೆಸ್‌ಮೆಂಟ್ ನಂ.1060, ಸರ್ವೆ ನಂ. 196/ಎ2, ಅಮರಾವತಿ ಗ್ರಾಮ, ಚಿತ್ತವಾಡಗಿ ರೈಲ್ವೆ ಟ್ರ್ಯಾಕ್ ಏರಿಯಾ, ವಾರ್ಡ್ 11, ಸಬ್ ರೋಡ್ ಹೊಸಪೇಟೆ, ಬೆಂಗಳೂರು-583201.	**ಆಸ್ತಿಯು ಶ್ರೀ.ಕೆ.ಎಂ.ಮಧುಸೂಧನ ಬಿನ್ ಶ್ರೀ ಮಲ್ಲಿಕಾರ್ಜುನ ರವರ ಹೆಸರಿನಲ್ಲಿದೆ,** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಸತಿ ಪ್ಲಾಟ್ ನಂ.11, ಅಸೆಸ್‌ಮೆಂಟ್ ನಂ.1060, ವಿಸ್ತೀರ್ಣ 51+48.6X44.9X36.9/2 ಇದು ಅಮರಾವತಿ, ಹೊಸಪೇಟೆ ಯಲ್ಲಿದೆ, ಮತ್ತು ಚಕ್ಕುಬಂದಿ: ಪೂರ್ವಕ್ಕೆ: 9 ಮೀಟರ್ ರಸ್ತೆ, ಪಶ್ಚಿಮಕ್ಕೆ: ಪ್ಲಾಟ್ ನಂ.10, ಉತ್ತರಕ್ಕೆ: ಪ್ಲಾಟ್ ನಂ.11, ದಕ್ಷಿಣಕ್ಕೆ: 9 ಮೀಟರ್ ರಸ್ತೆ. **ಹೆಚ್ಚಿನ ಮಾಹಿತಿಗಾಗಿ ಶ್ರೀ.ಸಂಜಯಪ್ರಸಾದ್ : 9916566630 ರವರನ್ನು ಸಂಪರ್ಕಿಸಿ.**	16.10.2024 ಎನ್‌ಪಿಎ ದಿನಾಂಕ 08.10.2024	Loan No. PHR022501295778 POWER HOME ಒಟ್ಟು ಮೊತ್ತ: ರೂ.38,66,093/- ದಿನಾಂಕ: 14.10.2024 ರಂದು ಇದ್ದಂತೆ
7	**1. ಶ್ರೀ ಸಂಜೀವ್ ಕುಮಾರ್** ಬಿನ್ ಮಲ್ಲಿಕಾರ್ಜುನ್, **2. ಶ್ರೀಮತಿ ಉಷಾ** ಕೋಂ. ಶ್ರೀ ಸಂಜೀವ್ ಕುಮಾರ್, ಬಿನ್ ಶ್ರೀ ಮಲ್ಲಿಕಾರ್ಜುನ, **ಇವರಿಬ್ಬರ ವಿಳಾಸ:** ಗಂಗಾನಗರ್, ವಾರ್ಡ್ ನಂ.13, ಮಾಲಿಪೇಠ್ ಶಾಮಪುರ್ಯಾರ್ಗಿರ್, ರಾಯಮುತ್ಯಾನ್ ದೇವಸ್ಥಾನದ ಹತ್ತಿರ, ಶಹಾಪುರ, ಕರ್ನಾಟಕ – 585223. **ಮತ್ತೊಂದು ವಿಳಾಸ:** ಪ್ಲಾಟ್ ನಂ.15-ಡಿ(28), ಸರ್ವೆ ನಂ.4 01 ಮಾಲಿಸಾಗರ, ಶಾಮಪುರ, ಗದ್ಗೀರ್, ಹಳಿಸಾಗರ, ಕರ್ನಾಟಕ-585223.	**ಆಸ್ತಿಯು ಶ್ರೀ.ಸಂಜೀವ್‌ಕುಮಾರ್ ಬಿನ್ ಶ್ರೀ ಮಲ್ಲಿಕಾರ್ಜುನ್ ರವರ ಹೆಸರಿನಲ್ಲಿದೆ,** ಮನೆ ಹೊಂದಿರುವ ಸಿಎಂಸಿ 36-550-1018, ಹಳೆಯ ನಂ.15-ಡಿ/28, ವಾರ್ಡ್ ನಂ.22, ಪಿಐಡಿ ನಂ.29581, ಪ್ಲಾಟ್ ನಂ.15-ಡಿ/28 ರಲ್ಲಿ ನಿರ್ಮಿಸಲಾಗಿದೆ, ವಿಸ್ತೀರ್ಣ 9.144018 X12.192024=111.4836 ಚ.ಮೀಟರ್‌ಗಳು, ಪ್ಲಿಂತ್ ಏರಿಯಾ ಜಿಎಫ್: 66.50ಚ.ಅಡಿ, ಇದು ಸರ್ವೆ ನಂ.401, ಹಲಿಸಾಗರ್, ಶಹಾಪುರ ಜಿಲ್ಲೆ: ಯಾದಗಿರಿಯಲ್ಲಿದೆ, ಚಕ್ಕುಬಂದಿ: ಪೂರ್ವಕ್ಕೆ: ಪ್ಲಾಟ್ ನಂ.15-ಡಿ (27) 36-550-1016, ಪಶ್ಚಿಮಕ್ಕೆ: ಪ್ಲಾಟ್ ನಂ.15-ಡಿ (29) 36-550-1020, ಉತ್ತರಕ್ಕೆ: ಪ್ಲಾಟ್ ನಂ.15-ಡಿ(17) 36-552-1081, ದಕ್ಷಿಣಕ್ಕೆ: 20 ಅಡಿ ರಸ್ತೆ 550-14 ನೇ ಕ್ರಾಸ್. **ಹೆಚ್ಚಿನ ಮಾಹಿತಿಗಾಗಿ ಶ್ರೀ ಸುದರ್ಶನ್ : 9611067929 ರವರನ್ನು ಸಂಪರ್ಕಿಸಿ.**	20.09.2024 ಎನ್‌ಪಿಎ ದಿನಾಂಕ 08.09.2024	Loan No. PHR034207645670 POWER HOME IMGC BRE ಒಟ್ಟು ಮೊತ್ತ ರೂ.19,52,109/- ದಿನಾಂಕ: 12.09.2024 ರಂದು ಇದ್ದಂತೆ

ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002ರ ಸೂಚನೆಯ ಆದೇಶಾನುಸಾರವಾಗಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಮೇಲೆ ಉಲ್ಲೇಖಿಸಲಾದ ಸಾಲಗಾರರು ಮತ್ತು/ಅಥವಾ ಖಾತರಿದಾರರು (ಎಲ್ಲೆಲ್ಲಿ ಅನ್ವಯವಾಗುತ್ತದೆಯೋ) ಈ ಮೇಲೆ ತಿಳಿಸಿಲಾದ ಬಾಕಿ ಉಳಿದಿರುವ ಮೊತ್ತವನ್ನು ಭವಿಷ್ಯದ ಬಡ್ಡಿ ಮತ್ತು ಅನ್ವಯವಾಗುವ ಶುಲ್ಕಗಳೊಂದಿಗೆ, ಈ ಸೂಚನೆ ಪ್ರಕಟಣೆಗೊಂಡ ದಿನಾಂಕದಿಂದ 60 ದಿನಗಳೊಳಗಾಗಿ ಪಾವತಿಸುವಂತೆ ಸಲಹೆ ನೀಡಲಾಗಿದ್ದು, ವಿಫಲವಾದಲ್ಲಿ ಸೂಚನಾ ತಾರೀಖಿನಿಂದ 60 ದಿನಗಳ ಅವಧಿ ಮುಕ್ತಾಯದ ನಂತರ, 2002ರ ಹಣಕಾಸು ಆಸ್ತಿಗಳ ಖಾತರೀಕರಣ ಮತ್ತು ಪುನನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆಯ ನಿಬಂಧನೆಗನುಸಾರವಾಗಿ, ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು.

ಮೇಲೆ ತಿಳಿಸಲಾದ ಕಾಯ್ದೆಯ ವಿಭಾಗ 13(13), ಉಪ-ವಿಭಾಗ(2)ರ ಅಡಿಯಲ್ಲಿ ಉಲ್ಲೇಖಿಸಿರುವಂತೆ, ಯಾವುದೇ ಒಬ್ಬ ಸಾಲಗಾರ ಈ ಸೂಚನೆಯು ತಲುಪಿದ ನಂತರ, ಭದ್ರತಾ ಸಾಲ ನೀಡಿದವರ ಲಿಖಿತ ಪೂರ್ವಾನುಮತಿ ಪಡೆಯದೇ, ಸೂಚನೆಯಲ್ಲಿ ಪ್ರಸ್ತಾಪಿಸಲಾಗಿರುವ ಭದತಾ ಆಸ್ತಿಗಳನ್ನು ಮಾರಾಟದ ಮೂಲಕ ವರ್ಗಾಯಿಸುವುದಾಗಲಿ, ಭೋಗ್ಯಕ್ಕೆ ನೀಡುವುದಾಗಲಿ ಅಥವಾ ಬೇರೆ ರೀತಿಯಲ್ಲಿ ಬಳಸಿಕೊಳ್ಳುವುದಾಗಲಿ ಮಾಡುವಂತಿಲ್ಲ ಎಂಬುದನ್ನು ದಯವಿಟ್ಟು ಗಮನಿಸತಕ್ಕದ್ದು.

ಆಕ್ಟ್‌ನ ಸೆಕ್ಷನ್ 13ರ ಸಬ್ ಸೆಕ್ಷನ್ (8)ರಲ್ಲಿನ ನಿಯಮಗಳ ಅನುಸಾರ ಭದ್ರತಾ ಸ್ವತ್ತುಗಳನ್ನು ಹಿಂದಕ್ಕೆ ಪಡೆದುಕೊಳ್ಳಲು ಕಾಲಾವಕಾಶವನ್ನು ನೀಡಲಾಗುವುದು ಎಂದು ಈ ಮೂಲಕ ಸಾಲಗಾರರ ಗಮನಕ್ಕೆ ತರಲಾಗುವುದು. ಸಾರ್ವಜನಿಕ ಹರಾಜಿಗಾಗಿ ಅಥವಾ ಭೋಗ್ಯ, ಹಂಚಿಕೆ ಅಥವಾ ಮಾರಾಟದ ಮೂಲಕ ಭದ್ರತಾ ಸ್ವತ್ತುಗಳ ವರ್ಗಾವಣೆಗಾಗಿ ಸಾರ್ವಜನಿಕ ಅಥವಾ ಖಾಸಗಿ ಒಪ್ಪಂದಕ್ಕೆ ಉಲ್ಲೇಖಗಳನ್ನು ಅಥವಾ ಟೆಂಡರ್ ಆಹ್ವಾನಿಸುವ ಸೂಚನಾ ಪ್ರಕಟಣೆಯ ದಿನಾಂಕಕ್ಕಿಂತ ಮೊದಲು ಯಾವುದೇ ಸಮಯದಲ್ಲಿ ಸಾಲಗಾರರು, ಸುರಕ್ಷಿತ ಸಾಲದಾತರ ಖರ್ಚು, ವೆಚ್ಚ ಮತ್ತು ಶುಲ್ಕಗಳನ್ನು ಒಳಗೊಂಡಂತೆ ಎಲ್ಲಾ ಬಾಕಿಯನ್ನು ಪಾವತಿಸಿ, ಭದ್ರತಾ ಸ್ವತ್ತುಗಳನ್ನು ಬಿಡಿಸಿಕೊಳ್ಳಬಹುದು.

ಸ್ಥಳ : ಬೆಂಗಳೂರು
ದಿನಾಂಕ : 06.11.2024
ಸಹಿ/- ಅಧಿಕೃತ ಅಧಿಕಾರಿ
ಎಕ್ಸಿಸ್ ಬ್ಯಾಂಕ್ ಲಿಮಿಟೆಡ್

370ನೇ ವಿಧಿ ಮರುಸ್ಥಾಪನೆ ಅಸಾಧ್ಯ: ಮೋದಿ

ಮುಂಬೈ: ಕಾಂಗ್ರೆಸ್ ನೇತೃತ್ವದ ಇಂಡಿಯ ಮೈತ್ರಿಕೂಟ ಜಮ್ಮು-ಕಾಶ್ಮೀರದಿಂದ ಭಾರತದ ಸಂವಿಧಾನವನ್ನು ತೆಗೆದುಹಾಕಲು ಬಯಸುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಆರೋಪಿಸಿದ್ದು, ಜಗತ್ತಿನ ಯಾವುದೇ ಶಕ್ತಿಯಿಂದಲೂ 370ನೇ ವಿಧಿ ಮರುಸ್ಥಾಪನೆ ಸಾಧ್ಯವಿಲ್ಲ ಎಂದು ಹೇಳಿದ್ದಾರೆ.

ನ. 20 ರಂದು ಮತದಾನ ನಡೆಯಲಿರುವ ಮಹಾ ರಾಷ್ಟ್ರದ ವಿಧಾನಸಭಾ ಕ್ಷೇತ್ರಗಳಲ್ಲಿ ನ.08 ರಂದು ಪ್ರಚಾರ ನಡೆಸಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, ಒಂದು ಜಾತಿಯ ವಿರುದ್ಧ ಮತ್ತೊಂದು ಜಾತಿಯನ್ನು ಎತ್ತಿಕಟ್ಟುವ ಕೆಲಸವನ್ನು ಕಾಂಗ್ರೆಸ್ ಮಾಡುತ್ತಿದೆ. ದಲಿತರು ಮತ್ತು ಆದಿವಾಸಿಗಳನ್ನು ಕೆರಳಿಸಲು ಖಾಲಿ ಪುಸ್ತಕಗಳನ್ನು ತೋರಿಸಿ ಸಂವಿಧಾನ ಎಂದು ರವಾನಿಸುತ್ತಿದ್ದಾರೆ ಎಂದು ದೂರಿದರು. ಒಗ್ಗಟ್ಟಾಗಿದ್ದರೆ ಸುರಕ್ಷವಾಗಿರುತ್ತೀರಿ ಎಂದ ಪ್ರಧಾನಿ, ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷಗಳು ಪಾಕಿಸ್ತಾನದ ಕಾರ್ಯ ಸೂಚಿಯನ್ನು ಪ್ರೋತ್ಸಾಹಿಸಬಾರದು. ಪ್ರತ್ಯೇಕತಾವಾದಿಗಳ ಭಾಷೆಯಲ್ಲಿ ಮಾತನಾಡಬಾರದು. ಜನರ ಆಶೀರ್ವಾದ ಇರುವವರೆಗೂ ಅವರ ಕಾರ್ಯಸೂಚಿ ಯಶಸ್ವಿಯಾಗುವುದಿಲ್ಲ ಎಂದು ಹೇಳಿದರು. ಜಮ್ಮು-ಕಾಶ್ಮೀರ ವಿಧಾನಸಭೆಯಲ್ಲಿ 370ನೇ ವಿಧಿಯನ್ನು ವಾಪಸ್ ತರುವ ಕುರಿತು ಹೇಗೆ ನಿರ್ಣಯ ಮಂಡಿಸಲಾಯಿತು ? ಬಿಜೆಪಿ ಶಾಸಕರು ಪ್ರತಿಭಟಿಸಿದಾಗ ಅವರನ್ನು ಹೊರಹಾಕಲಾಯಿತು ಎಂಬುದನ್ನು ನೀವು ಟಿವಿಯಲ್ಲಿ ನೋಡಿದ್ದೀರಿ. ಇದನ್ನು ದೇಶ ಮತ್ತು ಮಹಾರಾಷ್ಟ್ರ ಅರ್ಥಮಾಡಿಕೊಳ್ಳಬೇಕು ಎಂದು ಮೋದಿ ಹೇಳಿದರು.

ಕಾಶ್ಮೀರ ಸದನದಲ್ಲಿ ನಿಲ್ಲದ ಗದ್ದಲ

ಶ್ರೀನಗರ: ಜಮ್ಮು ಕಾಶ್ಮೀರ ವಿಧಾನಸಭೆಯಲ್ಲಿ ಮೂರನೇ ದಿನವೂ ಗದ್ದಲ, ಕೋಲಾಹಲ ಮುಂದುವರೆದಿದೆ. ವಿಶೇಷ ಸ್ಥಾನಮಾನದ ನಿರ್ಣಯವನ್ನು ವಿರೋಧಿಸಿ ಶುಕ್ರವಾರವೂ ಸದನದ ಬಾವಿಗಿಳಿದು ಬಿಜೆಪಿ ಶಾಸಕರು ಪ್ರತಿಭಟನೆ ನಡೆಸಿದ್ದು, 12 ಶಾಸಕರನ್ನು ಸ್ಪೀಕರ್ ಸದನದಿಂದ ಹೊರ ಕಳುಹಿಸಿದ್ದಾರೆ. ಸದನ ಆರಂಭವಾಗುತ್ತಿದ್ದಂತೆ ಸ್ಪೀಕರ್ ರಹೀಮ್ ರಾಥರ್ ನಿರ್ದೇಶನದ ಮೇರೆಗೆ ನ್ಯಾಷನಲ್ ಕಾನ್ಫರೆನ್ಸ್‌ನ ಶಾಸಕರ ಜಾವೇದ್ ಬೇಗ್, ವಂದನಾ ನಿರ್ಣಯದ ಮೇಲೆ ಮಾತನಾಡುತ್ತಿದ್ದರು. ಈ ವೇಳೆ ವಿಪಕ್ಷಗಳಾದ ಬಿಜೆಪಿ, ಪಿಸಿ, ಪಿಡಿಪಿ ಮತ್ತು ಎಐಪಿ ಶಾಸಕರು ಜಮ್ಮು ಕಾಶ್ಮೀರದ ವಿಶೇಷ ಸ್ಥಾನಮಾನದ ಕುರಿತು ಅಂಗೀಕಾರವಾದ ನಿರ್ಣಯ ವಿರೋಧಿಸಿ ಪ್ರತಿಭಟನೆಗೆ ಮುಂದಾದರು. ಕೆಲವು ಶಾಸಕರು ಪ್ರತಿಭಟನೆ ನಡೆಸಿದರು. ಸದನದಲ್ಲಿ ಕೋಲಾಹಲ ಹೆಚ್ಚುತ್ತಿದ್ದಂತೆ ಸ್ಪೀಕರ್ ಗದ್ದಲ ಸೃಷ್ಟಿಸಿದ ಸದಸ್ಯರನ್ನು ಸದನದಿಂದ ಹೊರಗೆ ಕಳುಹಿಸುವಂತೆ ಮಾರ್ಷಲ್‌ಗಳಿಗೆ ಸೂಚಿಸಿದರು. ಈ ವೇಳೆ ಬಿಜೆಪಿ ಶಾಸಕರು, ಪ್ರತ್ಯೇಕತೆ ಸ್ವೀಕಾರಾರ್ಹವಲ್ಲ ಎಂದು ಘೋಷಣೆ ಕೂಗುತ್ತಾ ಹೊರನಡೆದರು.

ಸಮಾಚಾರ ಸಣ್ಣದಲ್ಲ

ಕನ್ನಡ ರಾಜ್ಯೋತ್ಸವ: ಸಾಧಕರಿಗೆ ಸನ್ಮಾನ

ರಾಯಚೂರು: ಜಿಲ್ಲಾ ಹಾಗೂ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಸಹಯೋಗದಲ್ಲಿ ಹೆಸರಾಯಿತು ಕರ್ನಾಟಕ – ಉಸಿರಾಗಲಿ ಕನ್ನಡ ಸುವರ್ಣ ಸಂಭ್ರಮ -50 ಅಂಗವಾಗಿ ನ.9ರಂದು ಕನ್ನಡ ಭವನದಲ್ಲಿ ಬೆಳಿಗ್ಗೆ 10.30ಕ್ಕೆ ಸಾಧಕರಿಗೆ ಸನ್ಮಾನ, ನೃತ್ಯ, ಸಂಗೀತ, ಉಪನ್ಯಾಸ, ಕವಿಗೋಷ್ಠಿ ಆಯೋಜಿಸಲಾಗಿದೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯ ಸಿದ್ದರಾಮ ಹೊನ್ನಲ್ ಈ ಕಾರ್ಯಕ್ರಮದ ಉದ್ಘಾಟನೆ ಮಾಡಲಿದ್ದು, ಜಿಲ್ಲಾಧ್ಯಕ್ಷ ರಂಗಣ್ಣ ಪಾಟೀಲ ಅಧ್ಯಕ್ಷತೆ ವಹಿಸಲಿದ್ದು, ವೆಂಕಟರಾವ್ ಕುಲಕರ್ಣಿ ವಿಶೇಷ ಉಪನ್ಯಾಸ ನೀಡಲಿದ್ದಾರೆ. ಕನ್ನಡ ನಾಡು ನುಡಿಗೆ ಸಂಬಂಧಿಸಿದಂತೆ ಸೇವೆ ಸಲ್ಲಿಸುತ್ತಿರುವ ಸಾಧಕರಿಗೆ, ಈ ವರ್ಷದ ರಾಜ್ಯ, ಜಿಲ್ಲಾ ಮಟ್ಟದ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಿಗೆ ಸನ್ಮಾನಿಸಲಾಗುವುದು. ಸಿಗ್ನಚರ ಡಾನ್ಸ್ ಸ್ಟುಡಿಯೋ ಅವರ ತಂಡದಿಂದ ನೃತ್ಯ, ಗಾನಯೋಗಿ ಸಂಗೀತ ಪಾಠಶಾಲೆ ವಿದ್ಯಾರ್ಥಿಗಳಿಂದ ಸಂಗೀತ ಕಾರ್ಯಕ್ರಮ ನಡೆಯಲಿವೆ ಎಂದು ತಾಲೂಕು ಗೌರವ ಕಾರ್ಯದರ್ಶಿ ರಾವುತರಾವ್ ಬರೂರು ತಿಳಿಸಿದ್ದಾರೆ.

ಮಕ್ಕಳ ರಕ್ಷಣಾ ಘಟಕ: ಅರ್ಜಿ ಆಹ್ವಾನ

ರಾಯಚೂರು: ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ವತಿಯಿಂದ ಪೋಕ್ಸೋ ಕಾಯಿದೆ-2012ರನ್ವಯ ಬೆಂಬಲ ವ್ಯಕ್ತಿಗಳಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ತಿಳಿಸಿದ್ದಾರೆ. ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು ಹೊರಡಿಸಿದ ಮಾದರಿ ಮಾರ್ಗಸೂಚಿಯಂತೆ ಪೋಕ್ಸೋ ಕಾಯಿದೆಯ ಸೆಕ್ಷನ್-39ರಡಿಯಲ್ಲಿ ಪ್ರತಿ ಜಿಲ್ಲೆಯಲ್ಲಿ ಬೆಂಬಲ ವ್ಯಕ್ತಿಗಳನ್ನು ನೇಮಕ ಮಾಡಬೇಕಾಗಿರುತ್ತದೆ. ಉಲ್ಲೇಖ(1)ರಂತೆ ಈ ನೇಮಕಾತಿಗೆ ಅರ್ಜಿ ಸಲ್ಲಿಸಲು ನ.04 ವರೆಗೆ ನಿಗಧಿಪಡಿಸಲಾಗಿತ್ತು. ಕಾರಣಾಂತರಗಳಿಂದ ಬೆಂಬಲ ವ್ಯಕ್ತಿಗಳನ್ನು ನೇಮಕ ಮಾಡಿಕೊಳ್ಳಲು ಅರ್ಜಿಗಳನ್ನು ಸಲ್ಲಿಸಲು ನ.12ರವರೆಗೆ ವಿಸ್ತರಿಸಲಾಗಿದೆ ಎಂದು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೈಗಾರಿಕಾ ತರಬೇತಿ: ಬಹಿರಂಗ ಹರಾಜು

ರಾಯಚೂರು: ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಆವರಣದಲ್ಲಿ ಅನುಪಯುಕ್ತ ಸ್ಕ್ರಾಪ್‌ಗಳನ್ನು ಅದೇ ಸ್ಥಿತಿಯಲ್ಲಿ ಒಂದೇ ಲಾಟಿನಲ್ಲಿ ನ.28ರ ಬೆಳಿಗ್ಗೆ 11ಗಂಟೆಗೆ ಬಹಿರಂಗ ಹರಾಜಿನ ಮೂಲಕ ಒಂದೇ ಲಾಟಿನಲ್ಲಿ ವಿಲೇವಾರಿ ಮಾಡಲಾಗುವುದು ಎಂದು ಸಂಸ್ಥೆಯ ಪ್ರಾಚಾರ್ಯರು ತಿಳಿಸಿದ್ದಾರೆ. ಆಸಕ್ತ ಬಿಡ್‌ದಾರರು ನ.22ರೊಳಗಾಗಿ 5000 ರು. ಇಒಆ ಹಣ ಪಾವತಿಸಿ ಮೇಲೆ ತಿಳಿಸಿದ ದಿನಾಂಕ ದಂದು ಸಂಸ್ಥೆಯಲ್ಲಿ ನಡೆಯಲಿರುವ ಬಹಿರಂಗ ಹರಾಜಿನಲ್ಲಿ ಭಾಗವಹಿಸಲು ಕೋರಲಾಗುವುದು.

ಕೋಟೆ ಸ್ವಚ್ಛತೆಗೆ ದಸಂಸ ಆಗ್ರಹ

ಮುದಗಲ್: ಪಟ್ಟಣ ಐತಿಹಾಸಿಕ ಕೋಟೆಯನ್ನು ಸಂಘ ಸಂಸ್ಥೆಗಳು ಸಾರ್ವಜನಿಕರು ಸ್ವಚ್ಛತೆಗೆ ಮುಂದಾಗ

ಬೇಕೆಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ ಸಂಚಾಲಕ ಶರಣಪ್ಪ ಕಟ್ಟ ಮನಿ ಹೇಳಿದರು. ಪಟ್ಟಣ ದಲ್ಲಿ ಸುದ್ದಿಗಾರರೊಂದಿಗೆ ಮಾತ ನಾಡಿದರು. ಕಳೆದ ಐದಾರು ದಿನಗಳ ಹಿಂದೆ ಶಾಸಕರ ಹಾಗೂ ಕಸಾಪ ಪದಾಧಿಕಾರಿಗಳು ಸೇರಿ ಕೊಂಡು ಪ್ರವಾಸಿ ಮಂದಿರದಲ್ಲಿ ರಾಜ್ಯೋತ್ಸವ ನಿಮಿತ್ತ ನ.29-30 ರಂದು ಕೋಟೆ ಉತ್ಸವ ಆಚರಿಸಲು ತಿರ್ಮಾನಿಸಿದ್ದರಿಂದ ಸಾರ್ವಜನಿಕರು ಹಾಗೂ ಸಂಘಟನೆಗಳು ವಿರೋಧ ವ್ಯಕ್ತಪಡಿಸಿದ್ದರು.

ಅಗಲಿದ ಜೀವ

ವೀರಭದ್ರಪ್ಪ ಗದ್ದಿ

ಕನಕಗಿರಿ: ತಾಲೂಕಿನ ಹುಲಿಹೈದರ ಗ್ರಾಮದ ನಿವಾಸಿ ವೀರಭದ್ರಪ್ಪ ಗದ್ದಿ(70) ಅನಾರೋಗ್ಯದಿಂದ

ಶುಕ್ರವಾರ ನಿಧನರಾಗಿದ್ದಾರೆ. ಮೃತರಿಗೆ ಪತ್ನಿ, ಇಬ್ಬರು ಗಂಡು, ಐವರು ಹೆಣ್ಣು ಮಕ್ಕಳು, ಸಹೋದರರು ಸೇರಿ ಅಪಾರ ಬಂಧು- ಬಳಗ ಇದೆ. ಗ್ರಾಮದ ವೀರಶೈವ ಲಿಂಗಾಯತ ರುದ್ರ ಭೂಮಿಯಲ್ಲಿ ಶನಿವಾರ ಮಧ್ಯಾಹ್ನ 1ಕ್ಕೆ ಅಂತ್ಯ ಸಂಸ್ಕಾರ ನೆರವೇರಲಿದೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

{ ಎಚ್.ಕೆ.ಪಾಟೀಲ್ } ಸಚಿವ

ರಾಜ್ಯದಲ್ಲಿ ಶಿಗ್ಗಾವಿ, ಸಂಡೂರು ಮತ್ತು ಚನ್ನಪಟ್ಟಣ ಕ್ಷೇತ್ರಗಳಲ್ಲಿ ಉಪಚುನಾವಣೆ ನಡೆಯುತ್ತಿವೆ. ಮೂರೂ ಕಡೆ ಕಾಂಗ್ರೆಸ್ ಅಲೆ ಕಾಣುತ್ತಿದೆ. ಕಾರ್ಯಕರ್ತರು ಅತ್ಯಂತ ಉತ್ಸಾಹದಿಂದ ಕೆಲಸ ಮಾಡುತ್ತಿದ್ದಾರೆ. ನಮ್ಮ ಅಭ್ಯರ್ಥಿಗಳು ಗೆಲುವಿನ ನಗೆ ಬೀರಲಿದ್ದಾರೆ ಎಂಬ ವಿಶ್ವಾಸ ಇದೆ.



ಜಿಲ್ಲಾ ಮಟ್ಟದ ಯುವ ಜನೋತ್ಸವ | ಮೊಬೈಲ್ ಗೀಳಿನಿಂದ ದೂರ ಇರಲಿ ಯುವ ಪೀಳಿಗೆ

ಶಿಕ್ಷಣದಷ್ಟೇ ಕಲೆಗೂ ಆದ್ಯತೆ ನೀಡಿ: ಜಿಪಂ ಸಿಇಒ

ಕೊಪ್ಪಳ: ಪ್ರತಿಯೊಬ್ಬರಲ್ಲೂ ಒಂದೊಂದು ವಿಶೇಷ ಕಲೆ ಇರುತ್ತದೆ. ಯುವಕರು ಕೇವಲ ಓದು, ಬರಹಕ್ಕೆ ಮಾತ್ರ ಮೀಸಲಾಗದೇ ತಮ್ಮಲ್ಲಿನ ಕಲೆಗೂ ಆದ್ಯತೆ ನೀಡಬೇಕು ಎಂದು ಜಿಪಂ ಸಿಇಒ ರಾಹುಲ್ ರತ್ನಂ ಪಾಂಡೇ ಹೇಳಿದರು.

> ಸ್ಪರ್ಧಾತ್ಮಕ ಜಗತ್ತಿನಲ್ಲಿ ಒಂದೇ ಕಲಿಕೆಯಲ್ಲಿ ಸಮಯ ವ್ಯರ್ಥ ಮಾಡಬಾರದು. ಬದಲಾಗಿ ಅನೇಕ ರಂಗದಲ್ಲಿ ಯುವಕ- ಯುವತಿಯರು ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕು. ಇದು ಭವಿಷ್ಯದಲ್ಲಿ ತಮ್ಮನ್ನು ತಾವು ಗುರುತಿಸಿಕೊಳ್ಳಲು ಸಹಾಯವಾಗುತ್ತದೆ.
> – ರಾಹುಲ್ ರತ್ನಂ ಪಾಂಡೇ, ಜಿಪಂ ಸಿಇಒ

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಯುವ ಸಂಘಗಳು ಜಂಟಿಯಾಗಿ ಆಯೋಜಿಸಿದ್ದ ಜಿಲ್ಲಾ ಮಟ್ಟದ ಯುವಜನೋತ್ಸವ-2024 ಕಾರ್ಯಕ್ರಮ ಉದ್ಘಾಟಿಸಿ ಶುಕ್ರವಾರ ಮಾತನಾಡಿದರು.

ಇಂದಿನ ಯುವ ಪೀಳಿಗೆ ಮೊಬೈಲ್ ಫೋನ್‌ಗೆ ತುಂಬಾ ಹತ್ತಿರವಾಗಿದ್ದು, ಅದನ್ನು ತ್ಯಜಿಸಿ ಕಲೆ, ಸಾಹಿತ್ಯಕ್ಕೆ ಒತ್ತು ನೀಡಬೇಕಿದೆ. ಯುವಕ ಯುವತಿಯರು ಮಾನಸಿಕವಾಗಿ ಸದೃಢರಾಗಲು ಯೋಗ ಹಾಗೂ ಕ್ರೀಡೆಯಲ್ಲಿ ತೊಡಗಬೇಕು. ಯುವಕರು ಎಲ್ಲರೊಂದಿಗೆ ಸಾಮರಸ್ಯ ಜೀವನ ನಡೆಸುವ ಕ್ರಮ ಬೆಳೆಸಿಕೊಳ್ಳಬೇಕು. ನಮ್ಮ ಕಲೆ ಮತ್ತು ಸಂಸ್ಕೃತಿಯನ್ನು ನಾವೆಲ್ಲರೂ ಅರಿತುಕೊಳ್ಳಬೇಕು. ಸ್ಥಳೀಯ ಕಲೆ, ಸಾಹಿತ್ಯ ಪ್ರೋತ್ಸಾಹಿಸುವ ಜೊತೆಗೆ ಸಂರಕ್ಷಿಸೋಣ ಎಂದು ಕರೆ ನೀಡಿದರು.

ಯಾವುದೇ ಕೆಲಸವನ್ನು ಚಿಕ್ಕದು, ದೊಡ್ಡದು ಎಂದು ಪರಿಗಣಿಸಬಾರದು. ಬದಲಾಗಿ ಶ್ರದ್ಧೆ ಹಾಗೂ ಶ್ರಮ ವಹಿಸಿ ಕೆಲಸ ಮಾಡುವುದು ಮುಖ್ಯ. ಯುವಕ ಯುವತಿಯರಿಗಾಗಿ ಹಲವಾರು ಅವಕಾಶಗಳಿವೆ ಅವುಗಳನ್ನು ಬಳಸಿಕೊಳ್ಳಬೇಕು. ಯುವಕ-ಯುವತಿಯರಲ್ಲಿ ವಿಭಿನ್ನ ಹಾಗೂ ವಿಶಿಷ್ಟ ಪ್ರತಿಭೆ ಹೊಂದಿರುತ್ತಾರೆ. ಸಂಕಲ್ಪ ಇಟ್ಟುಕೊಂಡು ಗುರಿ ತಲುಪಿದರೆ, ಯಶಸ್ಸು ನಿಮ್ಮದಾಗುತ್ತದೆ ಎಂದು ಕಿವಿಮಾತು ಹೇಳಿದರು.

ರಾಜ್ಯ ಯುವ ಸಂಘಗಳ ಒಕ್ಕೂಟದ ರಾಜ್ಯಾಧ್ಯಕ್ಷ ಡಾ.ಎಸ್ ಬಾಲಾಜಿ ಮಾತನಾಡಿ, ರಾಜ್ಯದಲ್ಲಿ ಸಾಂಸ್ಕೃತಿಕ ನೀತಿ ಜಾರಿಯಾಗಬೇಕು. ಯುವಕ ಯುವತಿಯರು ಹೆಚ್ಚಿನ ಸಂಖ್ಯೆಯಲ್ಲಿ ಸಾಂಸ್ಕೃತಿಕ ಚಟುವಟಿಕೆಯಲ್ಲಿ ಭಾಗಿಯಾಗಬೇಕು.

ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಜಿಲ್ಲಾ ಮಟ್ಟದ ಯುವಜನೋತ್ಸವ-2024 ಕಾರ್ಯಕ್ರಮವನ್ನು ಜಿಪಂ ಸಿಇಒ ರಾಹುಲ್ ರತ್ನಂ ಪಾಂಡೇ ಉದ್ಘಾಟಿಸಿದರು.

ಪ್ರಶಸ್ತಿ ಪುರಸ್ಕೃತರಿಗೆ ಸನ್ಮಾನ

ಕಾರ್ಯಕ್ರಮದಲ್ಲಿ 2024ನೇ ಸಾಲಿನ ಕರ್ನಾಟಕ ರಾಜೋತ್ಸವ ಪ್ರಶಸ್ತಿ ಪುರಸ್ಕೃತ ಪ್ರೊ. ಅಲ್ಲಮಪ್ರಭು ಬೆಟ್ಟದೂರು ಹಾಗೂ ಈ ಬಾರಿ ನೀಡಿದ ಸುವರ್ಣ ಮಹೋತ್ಸವ ಪ್ರಶಸ್ತಿ ಪುರಸ್ಕೃತ ರುಕ್ಮಿಣಿಬಾಯಿ ಚಿತ್ರಗಾರ ಅವರನ್ನು ಸನ್ಮಾನಿಸಲಾಯಿತು.

ಗೆಲುವು ಸೋಲು ಮುಖ್ಯವಲ್ಲ. ಭಾಗವಹಿಸುವುದು ಮುಖ್ಯ. ಜಿಲ್ಲೆಯಲ್ಲಿ ಜಾನಪದ ತರಬೇತಿಯ ಅಗತ್ಯ ಇದೆ ಎಂದು ಸಲಹೆ ನೀಡಿದರು. ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಸಾಹಿತಿ ಪ್ರೊ.ಅಲ್ಲಮಪ್ರಭು ಬೆಟ್ಟದೂರು ಮಾತನಾಡಿ, ಜಿಲ್ಲೆಯಲ್ಲಿ ಜಾನಪದ ಕಲೆ ಶ್ರೀಮಂತವಾಗಿದೆ. ಇಲ್ಲಿನ ಹೆಸರಾಂತ ಕಲೆಗಳು ಬಹಳ ಪುರಾತನವಾಗಿದೆ. ಗವಿಮಠ ಜಾತ್ರೆ ವರ್ಷದಿಂದ ವರ್ಷಕ್ಕೆ ಸಾಂಸ್ಕೃತಿಕ ಸ್ವರೂಪ ಪಡೆಯುತ್ತಿದೆ. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ವಿಠ್ಠಲ ಬಿ ಜಾಬಗೌಡರ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ರಾಜ್ಯ ಯುವ ಸಂಘಗಳ ಒಕ್ಕೂಟದ ಜಿಲ್ಲಾಧ್ಯಕ್ಷ ಮಂಜುನಾಥ ಜಿ ಗೊಂಡಬಾಳ, ನೆಹರು ಯುವ ಕೇಂದ್ರದ ಮೊಂಟು ಪತ್ತಾರ, ಜೀವನ್ ಸಾಬ್ ಬಿನ್ನಾಳ, ಅಕ್ಬರ್ ಮಿರ್ಚಿ ಸೇರಿ ನಿರ್ಣಾಯಕರು, ಇದ್ದರು.

ಸಹಬಾಳ್ವೆ ಗುಣ ಕಲಿಸುವ ಎನ್ನೆಸ್ಸೆಸ್ ಶಿಬಿರ

ರಾಯಚೂರು: ಮೈತ್ರಿ-ಸೌಹಾರ್ದತೆ, ಸಹಕಾರ, ಸೇವಾ ಮನೋಭಾವ, ಸಹಜೀವನ ಗುಣಗಳನ್ನು ಮೈಗೂಡಿಸಿಕೊಳ್ಳಲು ಎನ್‌ಎಸ್‌ಎಸ್ ಶಿಬಿರಗಳು ಸಹಕಾರಿಯಾಗಿದ್ದು, ಪರಸ್ಪರ ಒಬ್ಬರನ್ನೊಬ್ಬರು ಅರಿತು ಸಹಬಾಳ್ವೆ ನಡೆಸುವ ಮನೋಭಾವದ ಜತೆಗೆ ರಾಷ್ಟ್ರೀಯ ಭಾವೈಕ್ಯತೆಯನ್ನು ನಮ್ಮಲ್ಲಿ ಮೂಡಿಸುತ್ತದೆ. ವಿವಿಧತೆಯಲ್ಲಿ ಏಕತೆ ಎಂಬ ಆದರ್ಶವನ್ನು ಸಾಕಾರಗೊಳಿಸಲು ಎನ್‌ಎಸ್‌ಎಸ್ ಸಹಕಾರಿಯಾಗಿದೆ ಎಂದು ರಾಜ್ಯಶಾಸ್ತ್ರ ಅಧ್ಯಯನ ವಿಭಾಗದ ಸಹಪ್ರಾಧ್ಯಾಪಕ ಡಾ. ವೆಂಕಟೇಶ್.ಕೆ ಮಾತನಾಡಿದರು.

ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕ ವಿಶೇಷ ಶಿಬಿರ-2024ರ ಉದ್ಘಾಟನಾ ಸಮಾರಂಭವನ್ನು ರಾಯಚೂರು ವಿಶ್ವವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ ಘಟಕದ ವತಿಯಿಂದ (ಎನ್‌ಎಸ್‌ಎಸ್) ಗುರುವಾರ ಹಮ್ಮಿಕೊಳ್ಳಲಾಗಿತ್ತು.

ಕುಲಸಚಿವ ಪ್ರೊ. ಯರಿಸ್ವಾಮಿ.ಎಂ ಮಾತನಾಡಿ, ತಾವು ವಾಸಿಸುವ ಸಮುದಾಯ ಹಾಗೂ ಸಮಾಜದ ಸಮಸ್ಯೆಗಳನ್ನು ಅರಿಯಲು ಎನ್‌ಎಸ್‌ಎಸ್ ಶಿಬಿರಗಳು ಸಹಕಾರಿಯಾಗಿದ್ದು, ಅಗತ್ಯತೆಗಳನ್ನು ಗುರುತಿಸಿ ತಾವು ಏನು ಮಾಡಬಹುದೆಂಬ ಆಲೋಚನೆ ಜೊತೆಗೆ ಸೇವೆಗೆ ಪ್ರೇರಣೆ ನೀಡುತ್ತದೆ.

ಎನ್‌ಎಸ್‌ಎಸ್ ಕಾರ್ಯಕ್ರಮ ಸಂಯೋಜನಾಧಿಕಾರಿ ಹಾಗೂ ವಿದ್ಯಾರ್ಥಿ ಕಲ್ಯಾಣಾಧಿಕಾರಿಯಾಗಿರುವ ಡಾ.ಜಿ.ಎಸ್.ಬಿರಾದಾರ ಮಾತನಾಡಿ, ಗಾಂಧೀಜಿಯವರ ಗ್ರಾಮ ಸ್ವರಾಜ್ಯ ಹಾಗೂ ಸ್ವಯಂ ಸೇವೆ ಆದರ್ಶಗಳ ಅಡಿಯಲ್ಲಿ ಈ ಎನ್‌ಎಸ್‌ಎಸ್ ಸ್ಥಾಪನೆಯಾಗಿದ್ದು, ರಾಷ್ಟ್ರಾದ್ಯಂತ 800 ವಿಶ್ವವಿದ್ಯಾಲಯಗಳು ಹಾಗೂ 50 ಸಾವಿರ ಕಾಲೇಜುಗಳನ್ನೊಳಗೊಂಡಂತೆ 11 ಲಕ್ಷ ನೋಂದಾಯಿತ ಸ್ವಯಂ ಸೇವಕರನ್ನು ಈ ರಾಷ್ಟ್ರೀಯ ಸೇವಾ ಯೋಜನೆ ಒಳಗೊಂಡಿದೆ. ಸದ್ಯ ರಾವಿವಿಯಲ್ಲಿ ಹಮ್ಮಿಕೊಳ್ಳಲಾಗಿರುವ ಈ ವಾರ್ಷಿಕ ವಿಶೇಷ ಶಿಬಿರವು ನ.11 ರಿಂದ ನ.13 ರವರೆಗೆ ನಡೆಯಲಿದ್ದು, ಧ್ವಜಾರೋಹಣ, ಪ್ರಾರ್ಥನೆ, ಪಥಸಂಚಲನ, ಯೋಗ, ಶ್ರಮದಾನ, ಸಾಂಸ್ಕೃತಿಕ ಹಾಗೂ ವಿಶೇಷ ಉಪನ್ಯಾಸ ಕಾರ್ಯಕ್ರಮಗಳು ಪ್ರತಿನಿತ್ಯ ನಡೆಯಲಿವೆ ಎಂದು ಮಾಹಿತಿ ನೀಡಿದರು.

ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕ ಶಿಬಿರದಲ್ಲಿ ರಾಯಚೂರು ವಿಶ್ವವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ ಘಟಕದ ವಿದ್ಯಾರ್ಥಿಗಳು ಇದ್ದರು.

> ಸಂಘಟನಾ ಸಾಮರ್ಥ್ಯವನ್ನು ಬೆಳೆಸಿಕೊಳ್ಳುವ ಜತೆಗೆ ಉತ್ತಮ ನಾಯಕತ್ವ ಗುಣಗಳನ್ನು ರೂಢಿಸಿಕೊಳ್ಳಲು ಎನ್‌ಎಸ್‌ಎಸ್ ಸಹಕಾರಿಯಾಗಿದೆ. ವಿದ್ಯಾರ್ಥಿಗಳು ಈ ಶಿಬಿರದಲ್ಲಿ ಸಕ್ರೀಯರಾಗಿ ಭಾಗವಹಿಸಿ ಸದುಪಯೋಗ ಪಡೆಯಬೇಕು.
> -ಪ್ರೊ. ಯರಿಸ್ವಾಮಿ.ಎಂ, ಕುಲಸಚಿವ

ಕಾರ್ಯಕ್ರಮದಲ್ಲಿ ಮಹೇಂದ್ರ ಹಾಗೂ ಸಂಗಡಿಗರು ಎನ್‌ಎಸ್‌ಎಸ್ ಗೀತೆ ಹಾಡಿದರು. ವಿದ್ಯಾರ್ಥಿಗಳಾದ ಮರಿಲಿಂಗಪ್ಪ ಹಾಗೂ ಶಿಲ್ಪಾ ನಿರೂಪಿಸಿದರು. ಕಾರ್ಯಕ್ರಮಾಧಿಕಾರಿಯಾಗಿರುವ ನಾಗವೇಣಿ.ವಿ.ಸರೋದೆ ವಂದಿಸಿದರು. ರಸಾಯನಶಾಸ್ತ್ರ ವಿಭಾಗದ ಸಹ ಪ್ರಾಧ್ಯಾಪಕಿ ಡಾ. ಲತಾ.ಎಂ.ಎಸ್ ಹಾಗೂ ಇನ್ನೋರ್ವ ಕಾರ್ಯಕ್ರಮಾಧಿಕಾರಿಯಾಗಿರುವ ಶಿವರಾಜ್ ಹರವಿ ವೇದಿಕೆ ಮೇಲೆ ಉಪಸ್ಥಿತರಿದ್ದರು.

ಉಪನ್ಯಾಸಕರಾದ ಡಾ. ಪದ್ಮಜಾ ದೇಸಾಯಿ, ವಿಜಯ್ ಸರೋದೆ, ಡಾ. ಶರಣಪ್ಪ ಚಲುವಾದಿ, ಕೃಷ್ಣಾ, ದುರುಗಪ್ಪ ಗಣೇಕಲ್ ಸೇರಿದಂತೆ ಶಿಬಿರಾರ್ಥಿ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ನೃಪತುಂಗ ಪ್ರಶಸ್ತಿ ಪ್ರದಾನ ನಾಳೆ

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಅಧ್ಯಕ್ಷ ಬಶೀರ ಅಹ್ಮದ್ ಹೊಸಮನಿ ಮಾತನಾಡಿದರು.

ರಾಯಚೂರು: ಹೊಸಮನಿ ಪ್ರಕಾಶನ ವತಿಯಿಂದ ಕನ್ನಡ ರಾಜ್ಯೋತ್ಸವ ಅಂಗವಾಗಿ ನ.10ರಂದು ನೃಪತುಂಗ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆಯ ಅಧ್ಯಕ್ಷ ಬಶೀರ ಅಹ್ಮದ್ ಹೊಸಮನಿ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿ,ಸಮಾರಂಭವು ನಗರದ ಕನ್ನಡ ಭವನದಲ್ಲಿ ಬೆಳಿಗ್ಗೆ 10- 30 ಕ್ಕೆ ಜರುಗಲಿದೆ. ಸಮಾರಂಭ ಉದ್ಘಾಟನೆಯನ್ನು ಹಿರಿಯ ಸಾಹಿತಿ ಬಾಬುಭಂಡಾರಿಗಲ್ ಮಾಡಲಿದ್ದಾರೆ.

ಅಧ್ಯಕ್ಷತೆಯನ್ನು ಬಶೀರ ಅಹ್ಮದ್ ಹೊಸಮನಿ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಇಲಕಲ್ ತಾಲ್ಲೂಕಿನ ಇಂಗಳಗಿ ಸರ್ಕಾರಿ ಪ್ರೌಢಶಾಲೆಯ ಪ್ರಭಾರಿ ಮುಖ್ಯ ಗುರುಗಳಾದಖಾಜಾ ಮೊಯಿನುದ್ದೀನ, ಹೊಸಮನಿ ಪ್ರಕಾಶನ ಉಪಾಧ್ಯಕ್ಷ ಪರ್ವಿನಬೇಗಂ ಹೊಸಮನಿ ಆಗಮಿಸಲಿದ್ದಾರೆ.

ನೃಪತುಂಗ ಪ್ರಶಸ್ತಿಯನ್ನು ಸುದ್ದಿಮೂಲ ಕನ್ನಡ ದಿನಪತ್ರಿಕೆ ಸಂಪಾದಕ ಬಸವರಾಜಸ್ವಾಮಿ, ಜನ ಸಂಗ್ರಾಮ ಪರಿಷತ್ ರಾಜ್ಯ ಸಂಸ್ಥಾಪಕ ಅಧ್ಯಕ್ಷ ರಾಘವೇಂದ್ರ ಕುಷ್ಟಗಿ, ಹಿರಿಯ ಸಾಹಿತಿ ಭಗತರಾಜ ನಿಜಾಮಕಾರಿ.ಕೆ.ಕರಿಯಪ್ಪ,ಮಾಸ್ಟರ್, ಆಂಜನೇಯ ಜಾಲಿಬೆಂಚಿ,ಡಿ.ಹೆಚ್.ಕಂಬಳಿ, ಅಮರಕುಮಾರ ದೀಕ್ಷಿತ, ರಘುಪತಿ ಪೂಜಾರ ದಿನ್ನಿ, ಡಾ. ಖಾಜಾವಲಿ ಈಚನಾಳ, ಹೊಳೆಮ್ಮ ಬಸವರಾಜ, ಹರವಿಬಸಮ್ಮ ಅವರು ನೀಡಲಾಗುತ್ತದೆ ಎಂದರು. ಈ ಸಂದರ್ಭದಲ್ಲಿ ಫರ್ಮಿನ ಬೇಗಂ, ಸುರೇಶ ಕುಮಾರ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಆಸ್ಪತ್ರೆಯಲ್ಲಿ ಮಹಿಳೆ ಸಾವು ಪ್ರಕರಣ: ತನಿಖೆಗೆ ಆಗ್ರಹ

ಸಿಂಧನೂರು: ನಗರದ ತಾಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ ಅ.21ರಂದು ಆರ್.ಎಚ್. ಕ್ಯಾಂಪ್ -3ರ ಮಹಿಳೆ ಮೌಸಂಬಿ ಮಹೇಶ್ವರ ಮಂಡಲ್ ಹೆರಿಗೆಯ ನಂತರ ವೈದ್ಯಕೀಯ ನಿರ್ಲಕ್ಷ್ಯದಿಂದ ಮೃತಪಟ್ಟಿದ್ದಾರೆಂದು ಆರೋಪಿಸಿ, ಈ ಬಗ್ಗೆ ತನಿಖೆ ನಡೆಸಿ, ತಪ್ಪಿತಸ್ಥರನ್ನು ಅಮಾನತುಗೊಳಿಸಿ ಕಾನೂನು ರೀತ್ಯ ಕ್ರಮ ಜರುಗಿಸಬೇಕು.

ಆಸ್ಪತ್ರೆಯ ಅವ್ಯವಸ್ಥೆಯನ್ನು ಸರಿಪಡಿಸಿ ಸಾರ್ವಜನಿಕರಿಗೆ ಗುಣಮಟ್ಟದ ಚಿಕಿತ್ಸೆ ಒದಗಿಸುವಂತೆ ಒತ್ತಾಯಿಸಿ, ನಮ್ಮ ಕರ್ನಾಟಕ ಸೇನೆ ವತಿಯಿಂದ ನಗರದ ತಹಸಿಲ್ ಕಚೇರಿ ಮುಂದೆ ಶುಕ್ರವಾರ ಅನಿರ್ದಿಷ್ಟ ಧರಣಿ ಸತ್ಯಾಗ್ರಹ ಆರಂಭಿಸಿದರು. ತಾಲೂಕು ಘಟಕದ ಅಧ್ಯಕ್ಷ ಮಂಜುನಾಥ ಗಾಣಗೇರ ಮಾತನಾಡಿ, ಸರಕಾರಿ ಆಸ್ಪತ್ರೆ ಅವ್ಯವಸ್ಥೆಯ ಆಗರವಾಗಿದ್ದು, ವೈದ್ಯರು ಸರಿಯಾದ ಸಮಯಕ್ಕೆ ಬರದಿರುವುದಲ್ಲದೇ, ಖಾಸಗಿ ಆಸ್ಪತ್ರೆ ನಡೆಸುವ ಮೂಲಕ ಕರ್ತವ್ಯಲೋಪ ಎಸಗುತ್ತಿದ್ದಾರೆ. ಆದರೆ ಸರಕಾರಿ ಆಸ್ಪತ್ರೆಯಲ್ಲಿ ನಿರ್ಲಕ್ಷ್ಯದ ಕಾರಣ ಮೇಲಿಂದ ಮೇಲೆ ಸಾವು-ನೋವುಗಳಾಗುತ್ತಿದ್ದರೂ ಅಧಿಕಾರಿಗಳಾಗಲೀ, ಚುನಾಯಿತ ಜನಪ್ರತಿನಿಧಿಗಳಾಗಲೀ ಕಾಳಜಿ ವಹಿಸದೇ ನಿರ್ಲಕ್ಷ್ಯ ತಾಳಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯ ಘಟಕದ ಕಾರ್ಯಾಧ್ಯಕ್ಷ ಉಮೇಶಗೌಡ ಆಸ್ಪತ್ರೆಯ ಅಧಿಕಾರಿಗಳೊಂದಿಗೆ ಮಾತನಾಡಿ, ಡಿಎಚ್‌ಒ ಅವರಿಂದ ಹಿಡಿದು ಸಿಎಂ ಅವರಿಗೆಗೂ ಮನವಿ ಸಲ್ಲಿಸಿ ಗಮನ ಸೆಳೆದರೂ ಸಂಪೂರ್ಣ ನಿರ್ಲಕ್ಷ್ಯ ತಾಳಲಾಗಿದೆ. ಅ.21ರಂದು ನಡೆದ ಮಹಿಳೆ ಸಾವಿನ ಪ್ರಕರಣ ಒಂದೇ ಅಲ್ಲ, ಹಲವು ಬಾರಿ ಆಸ್ಪತ್ರೆಯ ಲೋಪಗಳ ಬಗ್ಗೆ ಯಾರೊಬ್ಬರೂ ಸಾರ್ವಜನಿಕರಿಗೆ ಉತ್ತರದಾಯಿತ್ವ ಹೊಂದಿಲ್ಲದ ಕಾರಣ ಸಂಘಟನೆಯಿಂದ ಅನಿರ್ದಿಷ್ಟ ಹೋರಾಟ ಕೈಗೊಳ್ಳಲಾಗಿದೆ ಎಂದು ಹೇಳಿದರು.

ಆಸ್ಪತ್ರೆಯ ಅವ್ಯವಸ್ಥೆಯನ್ನು ಸರಿಪಡಿಸಿ ಒತ್ತಾಯಿಸಿ, ನಮ್ಮ ಕರ್ನಾಟಕ ಸೇನೆ ವತಿಯಿಂದ ನಗರದ ತಹಸಿಲ್ ಕಚೇರಿ ಮುಂದೆ ಅನಿರ್ದಿಷ್ಟ ಧರಣಿ ಸತ್ಯಾಗ್ರಹ ಆರಂಭಿಸಿದರು.

> ಅ. 21ರಂದು ಆರ್.ಎಚ್.ಕ್ಯಾಂಪ್ 3ರ ಗರ್ಭಿಣಿ ಮಹಿಳೆ ಹೆರಿಗೆ ನಂತರ ಮೃತಪಟ್ಟಿರುವುದು ವೈದ್ಯರು ಹಾಗೂ ಸಿಬ್ಬಂದಿಗಳ ನಿರ್ಲಕ್ಷ್ಯಕ್ಕೆ ಸಾಕ್ಷಿಯಾಗಿದೆ. ಸುರಕ್ಷಿತ ಮಾತೃತ್ವ ಆಶ್ವಾಸನೆ (ಸುಮನ್) ಯೋಜನೆ ಜಾರಿಗೆ ತರಲಾಗಿದೆ.
> -ಮಂಜುನಾಥ ಗಾಣಗೇರ, ಅಧ್ಯಕ್ಷ

ಈ ಸಂದರ್ಭದಲ್ಲಿ ಈ ಸಂದರ್ಭದಲ್ಲಿ ಸೇನೆಯ ಜಿಲ್ಲಾ ಉಪಾಧ್ಯಕ್ಷ ರಾಘವೇಂದ್ರ, ಜೆಡಿಎಸ್ ವಕ್ತಾರ ಬಸವರಾಜ ನಾಡಗೌಡ ಜಿಲ್ಲಾ ಸಂಚಾಲಕ ಹುಸೇನ್ ಭಾಷಾ ಇಂದಿರಾನಗರ, ಜಿಲ್ಲಾ ಯುವ ಘಟಕದ ಪ್ರಧಾನ ಕಾರ್ಯದರ್ಶಿ ಬೂದೇಶ ಮರಾಠ, ತಾಲೂಕು ಉಪಾಧ್ಯಕ್ಷ ಗದ್ದೆಪ್ಪ, ಸದ್ದಾಂ, ಎಂ.ಡಿ.ನಬಿ, ಮಲ್ಲಿಕಾರ್ಜುನ, ಅಬ್ದುಲ್ ನಬಿ, ಮಹ್ಮದ್ ಸಾಬ್ ಚಿಟಗಿ, ಮಹಿಳಾ ಘಟಕದ ಅಧ್ಯಕ್ಷೆ ಶ್ರೀದೇವಿ ಹನುಮಂತ, ನಗರ ಮಹಿಳಾ ಘಟಕದ ಅಧ್ಯಕ್ಷೆ ಪಾವನಿ ಸೇರಿದಂತೆ ಇನ್ನಿತರರು ಭಾಗವಹಿಸಿದ್ದರು.

ಹೆಸರು ಉಳಿವಂತೆ ಅಭಿವೃದ್ಧಿ ಮಾಡಿ

ಪುರಸಭೆ ಅಧ್ಯಕ್ಷ ಉಪಾಧ್ಯಕ್ಷರ ಪದಗ್ರಹಣ ಕಾರ್ಯಕ್ರಮವನ್ನು ಮಾಜಿ ಶಾಸಕ ಎ.ಪಾಪರೆಡ್ಡಿ ಉದ್ಘಾಟಿಸಿದರು.

ಲಿಂಗಸಗೂರು: ಅಧಿಕಾರ ಸಿಕ್ಕಾಗ ಜನರ ಮನಸಲ್ಲಿ ಹೆಸರು ಉಳಿಯುವಂತೆ ಅಭಿವೃದ್ಧಿ ಕೆಲಸಗಳನ್ನು ಮಾಡಬೇಕು ಆಗ ಮಾತ್ರ ನಮ್ಮ ಹೆಸರು ಜನರ ಮನಸಲ್ಲಿ ಉಳಿಯುತ್ತದೆ ಎಂದು ರಾಯಚೂರು ಕ್ಷೇತ್ರದ ಮಾಜಿ ಶಾಸಕ ಎ.ಪಾಪರೆಡ್ಡಿ ಹೇಳಿದರು.

ಪಟ್ಟಣದ ದೊಡ್ಡ ಹನುಮಂತ ದೇವಸ್ಥಾನದ ಎದುರುಗಡೆ ಹಮ್ಮಿಕೊಂಡಿದ್ದ ಪುರಸಭೆ ಅಧ್ಯಕ್ಷ ಉಪಾಧ್ಯಕ್ಷರ ಪದಗ್ರಹಣ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ನೂತನವಾಗಿ ಆಯ್ಕೆಯಾದ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಪುರಸಭೆ ವ್ಯಾಪ್ತಿಯ ವಾರ್ಡಗಳ ಸಮಸ್ಯೆಗಳಿಗೆ ಸದಾ ಸ್ಪಂದಿಸುವ ಕೆಲಸ ಮಾಡಬೇಕಾಗಿದೆ. ನಮ್ಮ ಮುನ್ನೂರು ಕಾಪು ಜನಾಂಗದ ಸಮುದಾಯಕ್ಕೆ ಲಿಂಗಸಗೂರ ಪುರಸಭೆ ಅಧ್ಯಕ್ಷ ಸ್ಥಾನ ಒದಗಿಸಿಕೊಟ್ಟ ಮಾಜಿ ಶಾಸಕ ಡಿ.ಎಸ್.ಹೂಲಗೇರಿರವರಿಗೆ, ಪುರಸಭೆ ಸದಸ್ಯರಿಗೆ ಅಭಿನಂದನೆ ಸಲ್ಲಿಸುವೆ ಎಂದು ಹೇಳಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗೋವಿಂದ ನಾಯಕರವರು ಮಾತನಾಡಿ, ಎರಡು ಬಾರಿ ಪುರಸಭೆ ಸದಸ್ಯರಾಗಿ ಆಯ್ಕೆಯಾದ ಬಾಬುರೆಡ್ಡಿ ಮುನ್ನೂರ ಅವರು ಸರಳ ಸ್ವಭಾವದ ವ್ಯಕ್ತಿಯಾಗಿದ್ದು 29 ವರ್ಷಗಳ ನಂತರ ಮುನ್ನೂರು ಕಾಪು ಸಮಾಜಕ್ಕೆ ಮತ್ತೆ ಅಧ್ಯಕ್ಷ ಸ್ಥಾನ ಸಿಕ್ಕಿದೆ. ಮಾಜಿ ಶಾಸಕರಾದ ಡಿ ಎಸ್ ಹೂಲಗೇರಿಯವರ ಮತ್ತು ಪುರಸಭೆ ಎಲ್ಲಾ ಸದಸ್ಯರ ವಿಶ್ವಾಸದೊಂದಿಗೆ ಪುರಸಭೆ ವ್ಯಾಪ್ತಿಯ ಎಲ್ಲಾ ವಾರ್ಡಗಳ ಸಮಸ್ಯೆಗಳಿಗೆ ಸದಾ ಕಾಲ ಸ್ಪಂದಿಸುತ್ತಾರೆ ಎಂಬ ಮನೋಭಾವ ನಮ್ಮಲ್ಲಿದ್ದು ಬಾಬು ರೆಡ್ಡಿ ಅವರನ್ನು ಬೆಂಬಲಿಸಿದ ಪುರಸಭೆಯ ಸದಸ್ಯರಿಗೆ ಅಭಿನಂದನೆಗಳನ್ನು ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಮುಖಂಡರಾದ ಶಿವಾನಂದ ಐದ ನಾಳ, ಪುರಸಭೆ ಉಪಾಧ್ಯಕ್ಷ ಶರಣಮ್ಮ ಅಮರಪ್ಪ ಕೊಡ್ಲಿ, ಡಾ. ಶಿವಬಸಪ್ಪ ಹೆಸರೂರ, ಪುರಸಭೆ ಸದಸ್ಯರಾದ ದೊಡ್ಡನಗೌಡ ಹೊಸಮನಿ, ಯಮನಪ್ಪ ದೇಗುಲಮಡಿ, ರಾಜಪ್ಪ ರೆಡ್ಡಿ ಮುನ್ನೂರ ಇದ್ದರು.

ನವೆಂಬರ್ ಪಡಿತರ ಧಾನ್ಯಗಳ ವಿತರಣೆ

ರಾಯಚೂರು: ನಗರದ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ನವೆಂಬರ್ ಮಾಹೆಗೆ ರಾಷ್ಟ್ರೀಯ ಆಹಾರ ಭದ್ರತಾ ಕಾಯಿದೆಯಡಿ ಜಿಲ್ಲೆಯ ಪ್ರತಿ ಅಂತ್ಯೋದಯ(ಎಎವೈ) ಪಡಿತರ ಚೀಟಿಗೆ 21ಕೆ.ಜಿ ಸಾರವರ್ಧಿತ ಅಕ್ಕಿ ಮತ್ತು 14 ಕೆ.ಜಿ ಜೋಳ ಹಾಗೂ ಪಿ.ಎಚ್.ಎಚ್(ಬಿಪಿಎಲ್) ಪಡಿತರ ಚೀಟಿಯಲ್ಲಿನ ಪ್ರತಿ ಫಲಾನುಭವಿಗೆ 03 ಕೆ.ಜಿ ಸಾರವರ್ಧಿತ ಅಕ್ಕಿ ಮತ್ತು 02 ಕೆ.ಜಿ ಜೋಳವನ್ನು ಉಚಿತವಾಗಿ ವಿತರಿಸಲಾಗುತ್ತದೆ ಎಂದು ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪ ನಿರ್ದೇಶಕರು ತಿಳಿಸಿದ್ದಾರೆ. ಒಪ್ಪಿಗೆ, ಸಮ್ಮತಿ ಸೂಚಿಸಿರುವ ಎಪಿಎಲ್(ಎನ್‌ಪಿಎಚ್‌ಎಚ್) ಪಡಿತರ ಚೀಟಿದಾರರಿಗೆ ರಿಯಾಯಿತಿ ದರದಲ್ಲಿ ಪ್ರತಿ ಕೆ.ಜಿಗೆ 15 ರು. ರಂತೆ ಏಕ ಸದ್ಯಸರ ಪಡಿತರ ಚೀಟಿಗೆ 05 ಕೆ.ಜಿ ಅಕ್ಕಿ ಹಾಗೂ ಎರಡು ಮತ್ತು ಹೆಚ್ಚಿನ ಕುಟುಂಬ ಸದಸ್ಯರಿರುವ ಎಪಿಎಲ್ ಪಡಿತರ ಚೀಟಿಗೆ 10 ಕೆ.ಜಿ ಅಕ್ಕಿಯನ್ನು ವಿತರಿಸಲಾಗುವುದು. ಒಂದು ರಾಷ್ಟ್ರ ಒಂದು ಪಡಿತರ ಚೀಟಿ (ಅಂತರ್ ರಾಜ್ಯ/ ಅಂತರ್ ಜಿಲ್ಲೆ) ಪೋರ್ಟೆಬಿಲಿಟಿ ಜಾರಿಯಲ್ಲಿರುವುದರಿಂದ ಯಾವುದೇ ರಾಜ್ಯದ ಪಡಿತರ ಚೀಟಿದಾರರು ಯಾವುದೇ ವರ್ಗದ ಪಡಿತರ ಚೀಟಿದಾರರು ಯಾವುದೇ ನ್ಯಾಯಬೆಲೆ ಅಂಗಡಿಯಲ್ಲಿ ಪಡಿತರವನ್ನು ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಸದರಿ ಪಡಿತರ ಚೀಟಿಯನ್ನು ಆರು ತಿಂಗಳ ಅವಧಿಗೆ ಅಮಾನತ್ತುಗೊಳಿಸಲಾವುದೆಂದು ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕನಕನಾಲಾ ಕೆರೆ ಅಭಿವೃದ್ಧಿಗೆ ಆದ್ಯತೆ: ಶಾಸಕ

ಮಸ್ಕಿ: ಮಾರಲದಿನ್ನಿ ಡ್ಯಾಂನ ಹೆಚ್ಚುವರಿ ನೀರನ್ನು ಕನಕನಾಲಾ ಕೆರೆ ಭರ್ತಿ ಮಾಡಲು ಅನುದಾನ ನೀಡುವಂತೆ ಸರಕಾರಕ್ಕೆ ಈಗಾಗಲೇ ಪ್ರಸ್ತಾವನೆ ಸಲ್ಲಿಸಲಾಗಿದೆ. ಅನ್ನದಾತನಿಗೆ ಕೈ ಹಿಡಿಯುವ ಕನಕನಾಲಾ ಕೆರೆ ಅಭಿವೃದ್ಧಿ ಪಡಿಸಲಾಗುವುದು ಎಂದು ಶಾಸಕ ಹಾಗೂ ಖಾದಿ ಮತ್ತು ಗ್ರಾಮೋದ್ಯೋಗ ನಿಗಮ ಮಂಡಳಿ ಅಧ್ಯಕ್ಷ ಆರ್.ಬಸನಗೌಡ ತುರವಿಹಾಳ ಅವರು ಭರವಸೆ ನೀಡಿದರು.

ತಾಲೂಕಿನ ಕನಕನಾಲಾ ಕೆರೆಗೆ ಕಾರ್ಯಕರ್ತರು ಹಾಗೂ ಅಧಿಕಾರಿಗಳೊಂದಿಗೆ ತೆರಳಿ ಶುಕ್ರವಾರ ಪೂಜೆ ಸಲ್ಲಿಸಿ, ಕೆರೆ ನೀರನ್ನು ಕಾಲುವೆಗೆ ಹರಿಸಿದರು. ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 16ಫೀಟ್ ಆಳ ಇರುವ ಕನಕ ನಾಲಾ ಕೆರೆಯು 9ಫೀಟ್ ಭರ್ತಿಯಾಗಿದೆ, ಬೊಮ್ಮನಾಳ ಹಟ್ಟಿ, ಬೋಮ್ಮನಾಳ, (ಯು,) ರತ್ನಾಪುರ, ಸಂಕನಾಳ, ಗುಂಡಾ. ವಗರನಾಳ, ಗುಡಿಹಾಳ. ಗದ್ರಟಗಿ, ಹತ್ತಿಗುಡ್ಡ ಗ್ರಾಮದ ರೈತರು ಭಿತ್ತನೆ ಮಾಡಿರುವ ಹಿಂಗಾರು ಬೆಳೆಗಳಿಗೆ ಅನುಕೂಲವಾಗಲೆಂದು ಕೆನಾಲ್‌ಗೆ ನೀರು ಹರಿಸಲಾಗಿದೆ, ರೈತರು ನೀರನ್ನು ಸದುಪಯೋಗ ಪಡೆದುಕೊಳ್ಳಬೇಕೆಂದು ಹೇಳಿದರು. ಸರಕಾರ ಹಂತದಲ್ಲಿ ಚರ್ಚೆ ಮಾಡಿದ ಬಳಿಕ ಅನುದಾನ ಬಿಡುಗಡೆ ಆಗಲಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಮುಖಂಡ ನಿರುಪಾದೆಪ್ಪ ವಕೀಲರು, ಮಲ್ಲನಗೌಡ ಗುಂಡಾ, ತಹಸೀಲ್ದಾರ್ ಮಲ್ಲಪ್ಪ ಯರಗೋಳ, ನೀರಾವರಿ ಇಲಾಖೆ ಸಹಾಯಕ ಕಾರ್ಯಪಾಲಕ ಗುರುಮೂರ್ತಿ, ಎಇ ಅಮರೇಶ, ಸೋಮನಾಥ, ಛತ್ರಪ್ಪ, ಅಯ್ಯನಗೌಡ, ಯಮನೂರು ಸೇರಿದಂತೆ ಇನ್ನಿತರಿದ್ದರು.

ಕನಕನಾಲಾ ಕೆರೆ ನೀರು ಕಾಲುವೆಗೆ ನೀರು ಹರಿಸಿದ ಬಳಿಕ ರೈತರೊಂದಿಗೆ ಶಾಸಕ ಆರ್. ಬಸನಗೌಡ ತುರವಿಹಾಳ ಅವರು ಚರ್ಚಿಸುತ್ತಿರುವುದು.

> 5 ಸಾವಿರ ಎಕರೆ ಪ್ರದೇಶಗಳಿಗೆ ನೀರುಣಿಸುವ ಕನಕನಾಲಾ ಕೆರೆ ಭರ್ತಿ ಆಗುವುವುದು ಬಹುತೇಕ ವಿರಳ, ಹೀಗಾಗಿ ಮಸ್ಕಿ ನಾಲಾ ಯೋಜನೆಯ ಹೆಚ್ಚುವರಿ ನೀರನ್ನು ಕನಕನಾಲಾ ಕೆರೆಗೆ ಹರಿಸಲು ಹಾಗೂ ಕನಕನಾಲಾ ಕೆರೆ ಅಭಿವೃದ್ಧಿಪಡಿಸಲು 140 ಕೋಟಿ ಅನುದಾನ ಮಂಜೂರು ಮಾಡುವಂತೆ ಈಗಾಗಲೆ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.
> -ಆರ್.ಬಸನಗೌಡ ತುರವಿಹಾಳ, ಶಾಸಕ

ಕಳಪೆ ಕೀಟ ನಾಶ : ತನಿಖೆಗೆ ಒತ್ತಾಯ

ಸಿರವಾರ: ಪಟ್ಟಣದ ಹನುಮಾನ ಟ್ರೈಡರ್ಸ್ ಮತ್ತು ಬಂಡಿ ವಿರುಪನಗೌಡ ಬಯೋಕೆಮಿಕಲ್ ಹೆಸರಿನಲ್ಲಿ ಕಳಪೆ ಕೀಟನಾಶಕ ಮಾರಾಟದ ವಿಷಯದಲ್ಲಿ ಜಿಲ್ಲಾಡಳಿತ ಹಾಗೂ ಕೃಷಿ ಇಲಾಖೆ ಹೋರಾಟಗಾರರನ್ನು ಹತ್ತಿಕ್ಕುವ ಕೆಲಸ ಮಾಡುತ್ತಿದೆ ಅಧಿಕಾರಿಗಳ ಮೇಲೆ ಕ್ರಮಕೈಗೊಂಡು ಇದನ್ನು ತನಿಖೆಗೆ ಒಪ್ಪಸಬೇಕು. ಇದರ ವಿರುದ್ಧ ಮುಂದಿನ ದಿನಗಳಲ್ಲಿ ಹೋರಾಟ ಹಮ್ಮಿಕೊಳ್ಳಲಾಗುವುದೆಂದು ಜಿಲ್ಲಾ ಮಹಿಳಾ ಅಧ್ಯಕ್ಷೆ ಅನಿತಾ ನವಲಕಲ್ ಹೇಳಿದರು. ಪಟ್ಟಣದ ಪ್ರವಾಸಿ ಮಂದಿರದಲ್ಲಿ ಕರೆದ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಹನುಮಾನ ಟ್ರೈಡರ್ಸ್ ಅಂಗಡಿಯಲ್ಲಿ ನಕಲಿ ಬಯೋ ಕೀಟನಾಶಕ ಮಾರಾಟ ಖಂಡಿಸಿ ಧರಣಿ ಹಮ್ಮಿಕೊಂಡಿರುವುದರಿಂದ ತನಿಖೆ ಕೈಗೊಳ್ಳವುದರ ಮೂಲಕ ಕ್ರಮಕೈಗೊಳ್ಳುವ ಭರವಸೆಯಂತೆ ಹೋರಾಟವನ್ನು ಹಿಂಪಡೆಯಲಾಯಿತು. ಇದರಿಂದ ಹೋರಾಟವನ್ನು ಹತ್ತಿಕ್ಕಲು ಹೋರಾಟಗಾರರ ಮೇಲೆ ಒತ್ತಡ ಏರುತ್ತಿದ್ದ ಪರಿಣಾಮ 16ರಂದುಅನಿರ್ದಿಷ್ಟ ಧರಣಿ ಸತ್ಯಾಗ್ರಹ ಹಿಂಪಡೆಯಾಗಿದ್ದು, ಕಳಪೆ ನಕಲು ಕ್ರಿಮಿನಾಶಕ ಹಾಗೂ ರಸಗೊಬ್ಬರ ಪ್ರಕ್ರಿಯೆಯಲ್ಲಿ ಅಧಿಕಾರಿಗಳ ಕೈವಾಡ ಇದೆ. ಮುಂದಿನ ದಿನಮಾನದಲ್ಲಿ ತನಿಖೆ ಕೈಗೊಳ್ಳದ ಕಾರಣ ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆ ಉಗ್ರವಾದ ಹೋರಾಟ ಹಮ್ಮಿಕೊಳ್ಳಲಾಗುವುದು ಈ ದರಣಿ ಸತ್ಯಗ್ರಹಕ್ಕೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಮಹರ್ಷಿ ವಾಲ್ಮೀಕಿ ನಾಯಕರ ಮಹಾವೇದಿಕೆ ಸಂಘದ ತಾಲೂಕಾಧ್ಯಕ್ಷ ವಸಂತ ನಾಯಕ, ರಮೇಶ ದೊರೆ, ಸುನೀಲ್ ಕಟ್ಟೆಮನೆ ಇದ್ದರು.

ಚಿತ್ತ ವಿಹಾರ

ಸಂದರ್ಭಗಳ ಸದ್ಬಳಕೆ

ಒಂದು ಘಟನೆಗೆ ನಮ್ಮ ಮನಸ್ಸು ಪ್ರತಿಕ್ರಿಯಿಸುವ ರೀತಿಯಿಂದಾಗಿ ಯೇ ನಮ್ಮ ಜೀವನ ದಲ್ಲಿ ಪರಿಸ್ಥಿತಿಗಳು ನಿರ್ಮಾಣವಾಗುತ್ತಾ ಹೋಗುತ್ತವೆ. ಹೆಚ್ಚಿನ ಸಂದರ್ಭಗಳಲ್ಲಿ, ಪರಿಸ್ಥಿತಿ ಅನುಕೂಲಕರವಾ ಗಿರಲಿಲ್ಲ, ಹಾಗಾಗಿ ಕೆಲಸ ಪ್ರಾರಂಭಿಸ ಲಾಗಲಿಲ್ಲ ಎಂದೋ ಅಥವಾ ಕೆಲಸ ಸಫಲವಾಗಲಿಲ್ಲ ಎಂದೋ ಹೇಳುವ ಮಾತುಗಳನ್ನು ಕೇಳುತ್ತಿರುತ್ತೇವೆ. ಜಗತ್ತಿನ ಬಹುತೇಕ ಆವಿಷ್ಕಾರಗಳು ಆದದ್ದೇ ಪ್ರತಿಕೂಲ ಸಂದರ್ಭಗಳಲ್ಲಿ. ಸಾಂಕ್ರಾಮಿಕ ರೋಗಗಳು ಉಲ್ಬಣ ಆದಾಗ ಅವುಗಳಿಗೆ ಮದ್ದು ಕಂಡುಹಿಡಿ ಯಲಾಗಿದೆ. ಆಹಾರದ ಕೊರತೆ ತೀವ್ರವಾದಾಗ, ಹೆಚ್ಚಿನ ಪ್ರಮಾಣದ ಆಹಾರವನ್ನು, ಕಡಿಮೆ ಭೂಪ್ರದೇಶ ಮತ್ತು ಅಲ್ಪ ಸಮಯದಲ್ಲಿ ಬೆಳೆಯುವ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಲಾಗಿದೆ. ಹೀಗೆ ಸಂದಿಗ್ಧ ಪರಿಸ್ಥಿತಿಗಳಲ್ಲಿ ಉಳಿವಿಗಾಗಿ ಕಂಡುಕೊಳ್ಳುವ ಪರಿಹಾರಗಳು ಮುಂದೆ ಹಲವು ಕಾಲ, ಹಲವು ತಲೆಮಾರುಗಳಿಗೆ ವರವಾಗಿ ಪರಿಣಮಿಸಿವೆ. ಈ ಸಾರ್ವತ್ರಿಕ ನಿಯಮವೇ ವ್ಯಯಕ್ತಿಕಕ್ಕೂ ಅನ್ವಯಿಸುತ್ತದೆ. ಒಮ್ಮೆ ಎನ್ರಿಕೋ ಕಾರ್ಸೋ ಎಂಬ ಒಪೆರಾ ಗಾಯಕ, ವೇದಿಕೆಗೆ ಬಂದ ಕ್ಷಣ ಸಭಾಕಂಪನ ಕ್ಕೊಳಗಾಗಿ, ಗಂಟಲಿನ ಒಂದು ಭಾಗ ಪಾರ್ಶ್ವ ಸೆಳೆತಕ್ಕೊಳಗಾಯಿತು. ಅಲ್ಲಿನ ಎಲ್ಲಾ ವಿಚಾರಗಳು ಸಮಸ್ಯೆಯಂತೆ ಕಾಣತೊಡಗಿ ಹಾಡಲು ಆಗದೆ ಹಿಂತಿರುಗಬೇಕೆಂದು ಕೊಂಡ. ಅಷ್ಟರಲ್ಲಿ ಹಾಡಲೇಬೇಕೆನ್ನುವ ಆತನ ಒಳ ಮನಸ್ಸು, ಅಲ್ಲಿನ ಸಂದರ್ಭ, ವೇದಿ ಕೆಯ ಮುಂದೆ ಕಾದಿರುವ ಉತ್ಸುಕ ಶೋತೃಗಳು ಎಲ್ಲವನ್ನೂ ಸಕಾರಾತ್ಮ ಕವಾಗಿ ಪರಿಗಣಿಸಲಾರಂಭಿಸಿತು. ಹಾಡಲು ಪ್ರಾರಂಭಿಸಿಯೇ ಬಿಟ್ಟ. ಆ ಪ್ರದರ್ಶನ ದಾಖಲೆಯ ಪ್ರದರ್ಶನವಾ ಯಿತು. ಗಾಯಕನ ಮತ್ತು ಶ್ರೋತೃಗಳ ಜೀವನದ ಸ್ಮರಣೀಯ ಪ್ರದರ್ಶನವಾಯಿತು. ಯಾವುದೇ ಕೆಲಸವನ್ನು ಮಾಡಲು ತೊಡಗು ವಾಗ, ಇದು ನನ್ನಿಂದ ಆಗುವುದಿಲ್ಲ, ಆಗದಿರಲು ಇಷ್ಟೆಲ್ಲಾ ಕಾರಣಗಳಿವೆ ಎಂದು ಕಾರಣಗಳನ್ನು ಹುಡುಕುವ ಬದಲು, ನನ್ನಲ್ಲಿ ಈ ಕೆಲಸವನ್ನು ಮಾಡಲು ಎಷ್ಟೆಲ್ಲಾ ಸಾಮರ್ಥ್ಯಗಳಿವೆ, ಸಂದರ್ಭಗಳನ್ನು ಹೇಗೆಲ್ಲಾ ಬಳಸಿಕೊಳ್ಳಬಹುದು ಎಂಬ ದಿಕ್ಕಿನಲ್ಲಿ ಯೋಚಿಸಿದರೆ ಕ್ಷಮತೆಯನ್ನು ವಿಸ್ತರಿಸಿಕೊಳ್ಳಲು ಸಾಧ್ಯ.

• ಮಾಯಾ ಬಾಲಚಂದ್ರ

ಧನ್ಯತಾ ವೃಕ್ಷ

ನಾನಾ ರೀತಿಗಳಲ್ಲಿ ಕೃತಜ್ಞತೆ ಸಲ್ಲಿಸುವ ಸಂಪ್ರದಾಯ ವಿಶ್ವವ್ಯಾಪಿಯಾಗಿ ರೂಢಿಯಲ್ಲಿರುವುದನ್ನು ನಾವು ಕಾಣಬಹುದು. ಅಮೆರಿಕದಲ್ಲಂತೂ 'ಥ್ಯಾಂಕ್ಸ್ ಗಿವಿಂಗ್' ಒಂದು ಪ್ರಮುಖ ಆಚರಣೆಯಾಗಿದೆ. ನವೆಂಬರ್ ಕಡೆಯ ಗುರುವಾರವನ್ನು 'ಥ್ಯಾಂಕ್ಸ್ ಗಿವಿಂಗ್ ಡೇ' ಎಂದು ಆಚರಿಸಲಾಗುತ್ತದೆ ಯಾದರೂ, ಉಪಕರಿಸಿದವರಿಗೆ ಆಭಾರಿಯಾಗಿರುವುದು ಆ ದಿನಕ್ಕೆ ಮಾತ್ರ ಸೀಮಿತವಾಗಿಲ್ಲ. ನವೆಂಬರ್ ತಿಂಗಳಿಡೀ ಇಲ್ಲಿ ಉಪಕಾರ ಸ್ಮರಣೆಯ ಹಲವಾರು ಚಟುವಟಿಕೆಗಳು ಗೋಚರಿಸುತ್ತವೆ. ಧನ್ಯವಾದ ಸಮರ್ಪಿಸುವ ವಿನೂತನ ವಿಧಾನಗಳು ಕಾಣಸಿಗುತ್ತವೆ. ಇವುಗಳಲ್ಲಿ ಅನೇಕವು ಮಕ್ಕಳನ್ನು ದೃಷ್ಟಿಯಲ್ಲಿರಿ ಸಿಕೊಂಡು ರೂಪಿಸಿದ ಚಟುವಟಿ ಕೆಗಳಾಗಿರುತ್ತವೆ. ಕ್ಯಾಲಿಫೋರ್ನಿಯಾದ ಅರ್ವೈನ್ ನಗರದ ವುಡ್-ಬ್ರಿಜ್ ವಿಲೇಜ್ ಸೆಂಟರ್-ನಲ್ಲಿ ಸ್ಥಾಪಿಸಲಾಗಿದ್ದ ಗ್ರಾಟಿಟ್ಯೂಡ್ ಟ್ರೀ ಇದಕ್ಕೊಂದು ನಿದರ್ಶನ. ಮರವೊಂದರ ಕೆಳಗೆ ಈ ಧನ್ಯತಾ ವೃಕ್ಷವನ್ನು ನಿರ್ಮಿಸಲಾಗಿತ್ತು. ಬಿಳಲುಗಳನ್ನು ಹೋಲುವ ಬಣ್ಣದ ಟೇಪುಗಳನ್ನು ಇಳಿಬಿಡಲಾಗಿತ್ತು. ಅಲ್ಲಿ ಒಂದು ಪಾರದರ್ಶಕ ಪೆಟ್ಟಿಗೆಯೊಂದಿತ್ತು. ಅದರಲ್ಲಿ ಕಂದು ಬಣ್ಣದ ಕಾಗದದ ಚೂರುಗಳು, ಲೇಖನಿ, ಹಾಗು ಸೇಫ್ಟಿ ಪಿನ್‌ಗಳನ್ನು ಇರಿಸಲಾಗಿತ್ತು. ನೀವು ಯಾವುದಕ್ಕೆ ಆಭಾರಿಯಾಗಿರುವಿರಿ ಎಂಬುದನ್ನು ಬರೆದು ಅದನ್ನು ಧನ್ಯತಾ ವೃಕ್ಷಕ್ಕೆ ಲಗತ್ತಿಸುವಂತೆ ಮನವಿ ಮಾಡಲಾಗಿತ್ತು. ಈ ಮನವಿಯಂತೆ, ಮಕ್ಕಳು ಮತ್ತು ಹಿರಿಯರು ತಮ್ಮ ಅನಿಸಿಕೆಗಳನ್ನು ದಾಖಲಿಸಿ ಅವುಗಳನ್ನು ಧನ್ಯತಾ ವೃಕ್ಷಕ್ಕೆ ಸೇರಿಸಿದ್ದರು. ನೀರು ಮತ್ತು ಆಹಾರ, ಜೀವ, ಗೆಳೆಯರು, ಅಮ್ಮ, ಕೆಲಸ, ಸಮೃದ್ಧ ಪ್ರಕೃತಿ ಮುಂತಾದುವುಗಳಿಗೆ ಅವರು ತಮ್ಮ ವಂದನೆಗಳನ್ನು ಸಲ್ಲಿಸಿದ್ದರು. ಎಳವೆಯಲ್ಲಿಯೇ ಇಂತಹ ಮೌಲ್ಯಗಳನ್ನು ಮಕ್ಕಳಲ್ಲಿ ರೂಢಿಸುವ ಈ ಕ್ರಮ ಸ್ತುತ್ಯರ್ಹ ಎನಿಸಿತು.

• ಮಂಜುನಾಥ ಡಿ. ಎಸ್.

ಸಂಗೀತ ಕ್ಷೇತ್ರದಲ್ಲಿ ಸಾಧನೆ, ಬೋಧನೆ ಮತ್ತು ಹಿರಿಯ ಪ್ರತಿಭಾವಂತರಿಗೆ ಗೌರವ ಸಲ್ಲಿಕೆ
ಇಂತಹ ವಿಶಿಷ್ಟ ಆಯಾಮ ಹೊಂದಿರುವ ಸುಸ್ವರಲಯ ಪ್ರೌಢ ಸಂಗೀತ ಕಲಾಶಾಲೆಗೆ ಈಗ ಬೆಳ್ಳಿ ಹಬ್ಬದ ಸಂಭ್ರಮ.



ಅನುದಿನವೂ ವಿರಾಮಕ್ಕೆ ಒಂದು ನೆಪ

ಆರಾಮ

'1987ರಿಂದ ನಾನು ಪಾಠ ಮಾಡಲು ಆರಂಭಿಸಿದೆ. ಇಂಜಿನಿಯರಿಂಗ್ ಓದಿದ್ದೆ. ಆದರೆ ಸಂಗೀತ ಮತ್ತು ಮೃದಂಗ ಬಲವಾಗಿ ಸೆಳೆಯಿತು. ಕಲಿಕೆ -ಪಾಠ - ಅವುಗಳ ಜೊತೆಗೆ ವಿದ್ವಾಂಸರಿಗೆ ನಾವು ಗೌರವ ತೋರಿಸಬೇಕು ಎಂದೂ ಅನಿಸಿತು. ಸುಸ್ವರಲಯ ಪ್ರೌಢ ಸಂಗೀತ ಕಲಾಶಾಲೆ ಎಂಬ ದೀಪವನ್ನು 1999 ಹಚ್ಚಿದೆವು.

ಸುಸ್ವರಲಯ ಪ್ರೌಢ ಸಂಗೀತ ಕಲಾಶಾಲೆಗೆ ರಜತ ಸಂಭ್ರಮ

ನ. 9ರಂದು ಪ್ರಶಸ್ತಿ ಪ್ರದಾನ- ಸಂಗೀತ ಉತ್ಸವ

ಕಲೆಯಿಂದ ಸಮಾಜಕ್ಕೆ ಸಂತೋಷ!

• ಶಿವಮೊಗ್ಗ ರಾಮ್

ಮೃದಂಗ ವಿದ್ವಾಂಸ ಎಚ್.ಎಸ್. ಸುಧೀಂದ್ರ ಕಟ್ಟಿ ಬೆಳೆಸಿರುವ ಸಂಸ್ಥೆ ಸುಸ್ವರಲಯ ಪ್ರೌಢ ಸಂಗೀತ ಕಲಾಶಾಲೆಗೆ ಈಗ ಬೆಳ್ಳಿ ಹಬ್ಬ. 25 ವಸಂತದ ಸಂಭ್ರಮದಲ್ಲಿರುವ ಬೆಂಗಳೂರಿನ ಸಂಸ್ಥೆಗೆ ತರುಣ ಸಾರಥಿಯೇ ಸುಧೀಂದ್ರ. ಇವರು ಸಂಸ್ಥೆ ಮೂಲಕ ಸಾಧಿಸಿದ್ದು ಅನಂತ. ಸಾವಿರಾರು ಕನಸುಗಳು ಮತ್ತೂ ಜೀವಂತ. ಎಲ್ಲ ಕಲಾವಿದರಿಗೂ ಲೇಸನ್ನೇ ಬಯಸುವ, ಕಲಾವಂತಿಕೆ ಇರುವ ಜನರಿಗೆ ಸದಾ ಮಿಡಿಯುವ ಹೃದಯವಂತ ಸುಧೀಂದ್ರ ಅವರು ತಮ್ಮ ಕಲಾಶಾಲೆ ಬೆಳ್ಳಿ ಮಹೋತ್ಸವ ದ ಅಂಗವಾಗಿ ನ. 9ರಂದು ಬನಶಂಕರಿ ರಾಮಲಲಿತ ಕಲಾ ಮಂದಿರದಲ್ಲಿ ಭರಪೂರ ಸಂಗೀತ ಉತ್ಸವ ಹಮ್ಮಿಕೊಂಡಿದ್ದಾರೆ. ಖ್ಯಾತ ಗಾಯಕ ಡಾ. ವಿದ್ಯಾಭೂಷಣ, ಯದುಗಿರಿ ಯತಿರಾಜ ಮಠದ ನಾರಾಯಣ ಜೀಯರ್ ಸಮ್ಮುಖದಲ್ಲಿ ವಿದ್ವಾನ್. ಟಿ. ವಿ. ರಾಮ ಪ್ರಸಾದ್‌ಗೆ

(ಸ್ವರಲಯ ರತ್ನ) ಮತ್ತು ಖ್ಯಾತ ವಯೋಲಿನ್ ವಿದುಷಿ ನಳಿನಾ ಮೋಹನ್‌ಗೆ (ಸ್ವರಲಯ ಶೃಂಗ) ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಿದ್ದಾರೆ. ಮೃದಂಗ ವಿದ್ವಾಂಸ ಮತ್ತು ಗುರು ಶ್ರೀಮುಷ್ಣಂ ವಿ. ರಾಜಾರಾವ್‌ಗೆ ಇದೇ ಸಂದರ್ಭದಲ್ಲಿ ಗೌರವಿಸಲಾಗುತ್ತಿದೆ.

ಕರ್ನಾಟಕ ಶಾಸ್ತ್ರೀಯ ಸಂಗೀತದ ಮೇರು ಪಂಕ್ತಿ ಕಲಾವಿದರಲ್ಲಿ ವಿದ್ವಾನ್ ಎಚ್.ಎಸ್. ಸುಧೀಂದ್ರ ಅವರ ಹೆಸರು ದೊಡ್ಡದು. ಕಲಿತದ್ದು ಬಿಇ. ಆದರೆ ಒಲಿದಿದ್ದು ಕಲೆ. ಕರಗತವಾಗಿದ್ದು ಕರ್ನಾಟಕ ಶಾಸ್ತ್ರೀಯ ಸಂಗೀತ. ಕೈ ಹಿಡಿದಿದ್ದು ಮೃದಂಗ. ಗಾಯನ - ಪಕ್ಕವಾದ್ಯ ಎರಡರಲ್ಲೂ ಪಟ್ಟುಗಳನ್ನು ತಿಳಿದಿರುವ ತಜ್ಞರಿವರು.

ಕಲಾರಂಗದ ದಿಗ್ಗಜರೆಲ್ಲರೊಂದಿಗೆ ಸಖ್ಯ ಹೊಂದಿರುವ ಸುಧೀಂದ್ರ, ಅವರಿಗೆಲ್ಲ ಕಛೇರಿಯಲ್ಲಿ ಮೃದಂಗ ಸಾಥ್ ನೀಡುವಲ್ಲಿ ಅಗ್ರಗಣ್ಯರಾಗಿದ್ದಾರೆ. ಪಾಠ ಮಾಡಲು ಕುಳಿತರೆ ಅಲ್ಲಿ ರಾಜಿ ಇಲ್ಲ. ಲೋಕವಿಖ್ಯಾತಿ ಪಡೆದಿದ್ದರೂ ಸುಧೀಂದ್ರ ಅವರು ಒಣ ಪ್ರತಿಷ್ಠೆ ಅಂಟಿಸಿಕೊಂಡಿಲ್ಲ. ಕಲಿಕೆ ವಿಚಾರದಲ್ಲಿ ಕಠಿಣ. ವಿಶ್ವಾಸದಲ್ಲಿ ಅವರು ಹೂವಿನಂತೆ ಮೃದು. ಎಳೆಯರಿಗೂ ಪ್ರೋತ್ಸಾಹಿಸಿ, ಖುಷಿಪಡಿಸಿ, ಪಾಠ ಹೇಳಿ, ನಾನಿದ್ದೇನೆ ಎಂಬ ಭರವಸೆ ನೀಡುವ ವಿಶೇಷ ಚೇತನ ಅವರು.



ನೀಡುವುದರೊಂದಿಗೆ ಬೋಧಪ್ರದವಾದ, ಆಸಕ್ತಿಯಿಂದಕೂಡಿದ ಸಂಗೀತ ಕಛೇರಿಗಳನ್ನೂ ಆಯೋಜಿಸುತ್ತದೆ.

ಬೆಳ್ಳಿ ಹಬ್ಬ

ಕಳೆದ 24 ವರ್ಷಗಳಿಂದ ವಾದನ, ಹಾಗೂ ತಾಳವಾದ್ಯ ಕ್ಷೇತ್ರಗಳಲ್ಲಿ ಶಿಕ್ಷಣನೀಡುತ್ತಾ ಬಂದಿದೆ. ಸಾಹಿತ್ಯ ಮತ್ತು ಲಯದ ತಿಳಿವಳಿಕೆಗೆ ವಿಶೇಷ ಆದ್ಯತೆ ನೀಡುವ ಮಹತ್ತರವಾದ ಸೇವೆ ಮಾಡುತ್ತಿದೆ. ಈ ಶಾಲೆಯ ಆಶ್ರಯದಲ್ಲಿ ಬೆಳೆದ ನೂರಾರು ಕಲಾವಿದರು ಆಕಾಶವಾಣಿ - ದೂರದರ್ಶನದ ಕಲಾವಿದರಾಗಿ, ದೇಶ- ವಿದೇಶಗಳಲ್ಲಿ ಶುದ್ಧ ಭಾರತೀಯ ಶಾಸ್ತ್ರೀಯ ಸಂಗೀತದ ವಿದ್ವಾಂಸರಾಗಿ ಖ್ಯಾತರಾಗಿರುವುದು ಹೆಮ್ಮೆ. ಕಲೆಗಾಗಿ ತಮ್ಮ ಜೀವನವನ್ನೇ ಸಮರ್ಪಿಸಿಕೊಂಡ ವಿದ್ವಾನ್ ಎಚ್.ಎಸ್.ಸುಧೀಂದ್ರ ಈ ಪ್ರೌಢ ಸಂಗೀತ ಕಲಾಶಾಲೆಯ ಸಾಧನೆಗಳ ಹಿಂದಿನ ರೂವಾರಿ. ಅದಕ್ಕಿಂತಾ ಹೆಚ್ಚಾಗಿ ಸಮಾಜದ ಒಬ್ಬ ಸರಳ, ಸಜ್ಜನ.

ಅನೂಹ್ಯ ಅನುಭವ!

• ಶೋಭಾ ಹೆಗಡೆ

ಏನೇ ಆದರೂ ಅವರವರ ಸ್ವಂತದ ಕಲ್ಪನೆಯ ಸಾಕಾರ ಕಣ್ಣೆದುರು ತೆರೆದುಕೊಂಡಾಗ ಆಗುವ ಬೆರಗು ಅನನ್ಯ. ಅದನ್ನು ನಾನು ಇತ್ತೀಚೆಗೆ ಅನುಭವಿಸಿದ್ದು ಪ್ಯಾರಿಸ್‌ಗೆ ಹೋದಾಗ.

ನಾವು ಪ್ಯಾರಿಸ್‌ನಲ್ಲಿ ಪ್ರತಿದಿನ ಕಾರಿನಲ್ಲಿ ಒಂದೊಂದು ಸ್ಥಳಕ್ಕೆ ಭೇಟಿ ಕೊಡುತ್ತಿದ್ದೆವು. ಒಂದು ಇಡೀ ದಿನವನ್ನು ಡಿಸ್ನಿಲ್ಯಾಂಡ್ ಭೇಟಿಗೆಂದು ಮೀಸಲಿರಿಸಿದ್ದೆವು. ಆದರೆ, ಅಲ್ಲಿಗೆ ಹೋದ ಮೇಲೆ ತಿಳಿಯಿತು ಒಂದೀಡಿ ದಿನ ಆ ಜಾಗದ ಕಾಲು ಭಾಗ ನೋಡಲೂ ಸಾಕಾಗದು. 1992 ರಲ್ಲಿ ಪ್ಯಾರೀಸಿನ ಪೂರ್ವ ದಿಕ್ಕಿನಲ್ಲಿ ಪ್ರಾರಂಭವಾದ ಈ ಮೋಜಿನ ಉದ್ಯಾನ 32 ಚದರ ಕಿಲೋಮೀಟರ್ ವಿಸ್ತೀರ್ಣ ಹೊಂದಿದೆ. ಇದರಲ್ಲಿ ಎರಡು ಸಮಾವೇಶದ ಸಭಾಂಗಣವಿದೆ. 29 ರೆಸ್ಟಾರೆಂಟಗಳಿವೆ. ಒಮ್ಮೆ ಟಿಕೆಟ್ ಖರೀದಿಸಿಕೊಂಡರೆ ಎಲ್ಲಾ ಕಡೆ ಸುತ್ತಬಹುದು. ಒಂದೆರಡು ನಾಟಕ, ಮತ್ತು ತೊಟ್ಟಿಲಿನಂತಹ ಮೋಜಿನಾಟಕ್ಕೆ ಪ್ರವೇಶ ನಾವು ಪಡೆದ ಟಿಕೆಟಿನಲ್ಲಿ ಸೇರಿಕೊಂಡಿರುವುದನ್ನು ಬಿಟ್ಟರೆ, ಉಳಿದೆಲ್ಲ ನೋಟಕ್ಕೂ, ಆಟಕ್ಕೂ ಬೇರೆ ಟಿಕೆಟ್ ಖರೀದಿಸಬೇಕು. ನಾವು ಹೋದಾಗ ಡಿಸ್ನಿಯವರ ಸುಪ್ರಸಿದ್ಧ ಕಾರ್ಟೂನ್ ಸಿನೇಮಾದ ರೂಪಾಂತರ 'ಲೈನ್ ಕಿಂಗ್' ಎಂಬ ನೃತ್ಯ ನಾಟಕದ ಟಿಕೆಟ್ ದೊರೆತಿತ್ತು. ಎಲ್ಲ ದೇಶದ ಕಲಾವಿದರನ್ನೊಳಗೊಂಡ ಒಂದು ಅಪರೂಪದ ನೃತ್ಯ ನಾಟಕ.

ಕಾರ್ಟೂನ್ ಪಾತ್ರಗಳು

ಡಿಸ್ನಿಯವರ ಕಾರ್ಟೂನ್ ಪಾತ್ರಗಳು, ಮತ್ತು ಆಯಾ ಕಥೆಗಳಲ್ಲಿ ಬರುವ ಸನ್ನಿವೇಶಗಳ ಮರುಸೃಷ್ಟಿಯನ್ನು ಇಡಿಯಾಗಿ ಆ ಐದಾರು ಎಕರೆ ಜಾಗದಲ್ಲಿ ಕಾಣಬಹುದು. ಕಾರು ನಿಲ್ಲಿಸುವ ವ್ಯವಸ್ಥೆಯಿಂದ ಹಿಡಿದು ಎಲ್ಲ ಕಡೆ ಸ್ವಚ್ಛತೆ, ಶಿಸ್ತು ಮತ್ತು ಹಸಿರ ನಡುವೆ ಕಂಗೊಳಿಸುವ ಹೂವು ಹಾಗೂ ಹಣ್ಣಿನ ಗಿಡಮರಗಳು ನಮ್ಮ ಕಣ್ಮನ ಸೆಳೆಯುತ್ತವೆ. ಜಗತ್ತಿನ ಎಲ್ಲ ರೀತಿಯ ಹೂಗಳಿಂದ ಕಂಗೊಳಿಸುತ್ತ, ನಡುವಿನ ಕಾರಂಜಿಯ ಕೆರೆಯಲ್ಲಿ ತಮ್ಮ ರೂಪ ಪ್ರತಿಬಿಂಬಿಸಲು ಹಾತೊರೆಯುವ ಗಿಡ, ಬಳ್ಳಿಗಳು ನಮ್ಮ ನಡಿಗೆಯನ್ನು ಹಗುರಾಗಿಸುತ್ತವೆ.

ಮುಂದೆ ಕಾಣ ಸಿಗುವ ರಾಜಬೀದಿಯಲ್ಲಿ ಡಿಸ್ನಿಯವರ ಪ್ರಸಿದ್ಧ ಕಾರ್ಟೂನ್ ಸಿನೆಮಾಗಳ ಪಾತ್ರಗಳಾಗಿ ಬದಲಾದ ಕಲಾವಿದರು ನರ್ತಿಸುತ್ತ ನಮ್ಮೆದುರು ಸಾಗುತ್ತಾರೆ. ಬೆಳಿಗ್ಗೆಗೊಮ್ಮೆ, ಸಾಯಂಕಾಲಕ್ಕೊಮ್ಮೆ ಸಾಗುವ ಈ ಮೆರವಣಿಗೆಯಲ್ಲಿ ಇಡೀ ಕಥೆಯ ಉಳಿದ ಪರಿಕರಗಳೂ ಬೃಹತ್ತಾಗಿ ಸ್ತಬ್ಧಚಿತ್ರಗಳಂತೆ ಸಾಗುತ್ತವೆ. ದಸರಾ ಮೆರವಣಿಗೆಯನ್ನು ನೆನಪಿಸುವ ವೈಭವ, ಆಯಾ ಪಾತ್ರಕ್ಕೆ ಒಪ್ಪುವ ಸಂಗೀತ - ನೋಡುತ್ತಿರುವ ಇಡೀ ಸಮೂಹ ಮೈಮರೆತು ಅವರೊಡನೆ ನಲಿದಾಡುತ್ತದೆ.

ಹಾಗೆ ಮುಂದುವರಿದರೆ ಡಿಸ್ನಿ ಎಂಬ ಹೆಸರಿನ ಹಿಂದೆ ಸಂಕೇತವಾಗಿ ನಿಲ್ಲುವ ಅರಮನೆ ನಮ್ಮನ್ನು ಸ್ವಾಗತಿಸುತ್ತದೆ. ಜರ್ಮನಿಯಲ್ಲಿರುವ ಅರಮನೆಯ ಪ್ರತಿರೂಪವಾದ ಇದು ಡಿಸ್ನಿಯವರ ಕಥೆಗಳಿಗೆಲ್ಲ ಪ್ರೇರಣೆಯಂತಿದೆಯಂತೆ. ಹಾಗಾಗಿ, ಡಿಸ್ನಿಯವರ ಹೆಸರಿನೊಂದಿಗೆ ಈ ಅರಮನೆ ಮತ್ತು ಅದರ ಹಿಂದಿನ ಮಿನುಗುವ ಕಮಾನು ಇರುತ್ತದೆ. ಅರಮನೆಯ ಹಿಂದಿನ ಆಗಸದ ಕತ್ತಲಿನಲ್ಲಿ ಮಿನುಗುವ ಇನ್ನೂರು ದ್ರೋಣ ಕ್ಯಾಮರಾಗಳು ಕಂಪ್ಯೂಟರ್ ಮೂಲಕ ವಿಶೇಷ ವಿನ್ಯಾಸವನ್ನು ಬಾನಿನಲ್ಲಿ ಮೂಡಿಸುತ್ತವೆ. ಅರಮನೆಯ ಗೋಡೆಯ ಮೇಲೆ ಲೇಸರ್ ಶೋ ತನ್ನ ಚಮತ್ಕಾರ ತೋರಿಸುತ್ತದೆ. ಡಿಸ್ನಿಯವರು ಸೃಷ್ಟಿಸಿದ ಪಾತ್ರಗಳೆಲ್ಲ ಅಲ್ಲಿ ಒಟ್ಟಾಗಿ ಸೇರಿ, ಒಂದು ಹೊಸ ಲೋಕದಲ್ಲಿ ವ್ಯವಹರಿಸುತ್ತಿದ್ದಂತೆ ಭಾಸವಾಗುತ್ತದೆ. ಆ ಬೆಳಕು ಮೂಡಿಸುವ ಮಾಯಾಜಾಲ ಒಮ್ಮೊಮ್ಮೆ ನಮ್ಮೆಡೆಗೂ ಹರಿದು ಮಿಕ್ಕಿ ಮೌಸ್, ಮೆರಿಡಾ, ಜೆಸಮಿನ್, ಮುಲಾನ್, ಮೋನಾ ಎಲ್ಲ ವೀಕ್ಷಕರೊಡನೆ ಓಡಿ ಬಂದು ಸೇರಿದಂತಾಗಿ ಕಕ್ಕಾಬಿಕ್ಕಿಯಾಗಿಬಿಡುತ್ತೇವೆ. ಒಂದು ಕ್ಷಣ ಕತ್ತಲಾಗಿ ಒಮ್ಮೆಲೆ ಮೂಡುವ ಮಂದ ಬೆಳಕು ಜನರ ಮೇಲೆ ಹಾಯುವಾಗ ನಮ್ಮನಮ್ಮಲ್ಲಿ ಆ ಪಾತ್ರಗಳನ್ನು ಹುಡುಕುವ ಮೂಲಕ ದೇಶಭಾಷೆ ಮರೆತು ಇಡೀ ಸಮುದಾಯ ಆತ್ಮೀಯವಾ ಗಿಬಿಡುತ್ತದೆ.

ಅಮೆರಿಕದ ಪ್ರತಿಕೃತಿ

ಇದರಲ್ಲಿ ಅಮೆರಿಕ ರೀತಿಯ ಬೀದಿಗಳಿವೆ. ಡಿಸ್ನಿಯವರ ಸಿನೆಮಾಗಳಲ್ಲಿ ಬರುವ ಮಹಲುಗಳು, ಸನ್ನಿವೇಶಗಳು, ಪರಿಸರಗಳನ್ನು ಅನತಿ ದೂರಗಳಲ್ಲಿ ಸೃಷ್ಟಿಸಿದ್ದಾರೆ. ಆ ವಲಯದೊಳಗೆ ಹೊದೊಡನೆ ನಾವು ನೋಡಿದ ಆಯಾ ಸಿನೇಮಾದ ಕಾಲದೊಳಗೆ ನಾವು ಸೇರಿ ಹೋದಂತಹ ಒಂದು ಭ್ರಮಾ ಲೋಕದೊಳಗೆ ನಾವು ತೇಲಿಹೋಗಿಬಿಡುತ್ತೇವೆ. ನೀರಿನಾಟಗಳಿವೆ. ಆ ನಂತರ, ನಾವು ನೋಡಲೇಬೇಕಾದ ನೈಜ ಪ್ರದರ್ಶನಗಳಿವೆ, ಸಿನೇಮಾದಲ್ಲಿ ಬರುವ ಪಾತ್ರಗಳೊಡನೆ ಫೋಟೊ ತೆಗೆಸಿಕೊಳ್ಳುವ ವ್ಯವಸ್ಥೆಯಿದೆ, ಭಯವೂ ಕೂಡ ಒಂದು ಅನುಭವ ಎಂದು ತೋರಿಸಿಕೊಡುವ ವಿಭಿನ್ನ ಸವಾರಿಗಳಿವೆ.

ಎರಡನೆಯ ಭಾಗ, ಡಿಸ್ನಿ ಸ್ಟುಡಿಯೊ ಪಾರ್ಕ್. ಇದರಲ್ಲಿ ಸಿನೆಮಾ ತಯಾರಿಕೆಯ ಪ್ರಾತ್ಯಕ್ಷಿಕೆ, ವಸ್ತು ಪ್ರದರ್ಶನ, ಅಂಗಡಿಗಳು,ಸಿನೆಮಾ ಟಾಕೀಸ್ ಗಳಿವೆ. ನಮಗೆ ಮೊದಲ ಭಾಗದಲ್ಲಿ ಸುತ್ತಾಡಿಕೊಂಡು, ಸ್ಟುಡಿಯೊ ಕಡೆಗೆ ಬರುತ್ತಿದ್ದಂತೆ ಸಾಯಂಕಾಲದ ಸ್ತಬ್ಧಚಿತ್ರ ಪ್ರದರ್ಶನದ ಅಬ್ಬರದ ಸಂಗೀತ ಕಿವಿಗಪ್ಪಳಿಸತೊಡಗಿತು. ಅವರ ತಾಳಕ್ಕೆ ಹೆಜ್ಜೆ ಹಾಕುತ್ತ ಅರಮನೆಯ ಪಟಾಕಿ ಪ್ರದರ್ಶನ ವೀಕ್ಷಣೆಗೆ ತಯಾರಾದೆವು. ಅದು ಮುಗಿದಾಗ ರಾತ್ರಿ ಒಂದು ಗಂಟೆ. ಬೆಳಿಗ್ಗೆ ಒಂಬತ್ತು ಗಂಟೆಗೆ ಈ ಮಾಯಾಲೋಕಕ್ಕೆ ಬಂದವರು, ನಮ್ಮ ಪ್ರಪಂಚಕ್ಕೆ ವಾಪಸ್ಸಾದದ್ದು ಇಪ್ಪತ್ತು ತಾಸಿನ ನಂತರ! ಮತ್ತೊಮ್ಮೆ ಬಾಲ್ಯಕ್ಕೆ ಮರಳಬೇಕೆನ್ನುವವರು ಒಮ್ಮೆ ಪ್ಯಾರಿಸ್‌ನ ಡಿಸ್ನಿ ಜಗತ್ತಿಗೆ ಭೇಟಿ ಕೊಡಬೇಕು.

ಪುರಾತನ ರೈಲು

ಅರಮನೆಯ ಒಳಭಾಗವನ್ನು ಇಡಿಯಾಗಿ ನೋಡಲು ನಮಗೆ ಸಾಧ್ಯವಾಗಲಿಲ್ಲ. ಅರಮನೆಯ ಎದುರು ನಿಂತು ನೋಡಿದರೆ, ಪುಟ್ಟ ಬೆಟ್ಟವೊಂದರ ಮೇಲಿರುವ ನೀರ ಕಾಲುವೆಯನ್ನು ಸೀಳಿಕೊಂಡು ಅತಿ ವೇಗವಾಗಿ ಸಂಚರಿಸುವ ಒಂದು ಪುಟಾಣಿ ಟ್ರೇನು ನಮ್ಮನ್ನು ಹೊತ್ತು ಹೋಗುವೆನು ಬನ್ನಿ ಎಂದು ಕೂಗಿ ಕರೆಯುವದು. ಪುರಾತನ ಮಾದ ರಿಯ ಈ ಟ್ರೇನನ್ನು ಹತ್ತಲು ಸಾಗುವ ದಾರಿಯಲ್ಲಿ ಯುರೋಪ್ ನ ಟ್ರೇನ್ ಇತಿಹಾಸದ ಪ್ರಾತ್ಯಕ್ಷಿಕೆಯಿದೆ. ಹೊರಭಾಗದಿಂದ ನೀರು ಚಿಮ್ಮಿಸುತ್ತ ಶಿಳ್ಳೆ ಹೊಡೆಯುತ್ತ ಮಕ್ಕಳಂತಾಡುವ ಈ ಟ್ರೇನು, ಪ್ರವಾಸಿಗರು ಕೂತೊಡನೆ ತನ್ನ ವರಸೆ ಬದಲಿಸಿಬಿಡುತ್ತದೆ. ಗುಡು ಗುಡು ಸದ್ದು

ಮಾಡುತ್ತ ಕಡುಕತ್ತಲಿನ ನಿಗೂಢತೆಯಲ್ಲಿ ಭಯಾ ನಕವಾದ ಏರು ಇಳಿತಗಳೊಳಗೆ ನುಗ್ಗುತ್ತ, ಒಮ್ಮೆ ಪ್ರಪಾತದೊಳಗೆ ಸುಂಯ್ ಎಂದು ಜಾರುತ್ತ ನಮ್ಮ ಮೈಯ್ಯನ್ನೂ ಸ್ವಲ್ಪ ನುಗ್ಗಾಗಿಸುತ್ತದೆ. ಓಡುತ್ತ ಓಡುತ್ತ ಬೆಟ್ಟದ ಹೊರಮೈಗೆ ಅಂತೂ ಬರುತ್ತದೆ. ಅಬ್ಬಾ! ಯಾವುದರೊಳಗೆ ಎಂಥ ಮಾಯೆಯೊ... ಅಂತಹ ಅಮಾವಾಸ್ಯೆಯ ಕತ್ತಲೆಯೊಳಗೆ ನಾವು ಹಾದು ಹೋಗುವಾಗಿನ ಕೆಲ ಫೋಟೊಗಳನ್ನು ಅಡಗಿಸಿಟ್ಟ ಕ್ಯಾಮೆರಾ ಸೆರೆಹಿಡಿದಿರುತ್ತದೆ. ಟ್ರೇನ್ ಇಳಿದು ನಾವು ಹೊರಬಾಗಿಲನ್ನು ದಾಟುವಾಗ, ಅವರವರ ಫೋಟೊ ಮುಂದಿರುವ ಪರದೆಯ ಮೇಲೆ ಕಾಣಿಸಿಕೊಳ್ಳುತ್ತದೆ. ಬೇಕಿದ್ದರೆ ಖರೀದಿಸಬಹುದು.

ಇದೇ ರೀತಿಯ ಇನ್ನೊಂದು ಟ್ರೇನ್, ಡಿಸ್ನಿಲ್ಯಾಂಡನ್ನು ಹೊರ ವರ್ತುಲದಲ್ಲಿ ಸುತ್ತಾಡಿಸುತ್ತದೆ. ಕಾಲ್ನಡಿಗೆಯಲ್ಲಿ ಸಂಚಾರ ಬೇಡವೆನ್ನುವವರು ಮೊದಲಿಗೆ ಈ ಟ್ರೇನ್ ಟಿಕೆಟ್ ಖರೀದಿಸಬಹುದು. ಈ ಮೋಜಿನ ಉದ್ಯಾನವನದಲ್ಲಿ ಎರಡು ಭಾಗವಿದೆ. ಒಂದು, ಈ ರೀತಿಯ ಮನೊರಂಜನಾತ್ಮಕವಾದ ಆಟಗಳು, ಊಟದ ವ್ಯವಸ್ಥೆ ಮತ್ತು ನೈಜ ಪಾತ್ರಧಾರಿಗಳು ಹಾಗೂ ಅವರ ಪ್ರದರ್ಶನಗಳು

• ಡಾ. ಎನ್ ಜಯರಾಮ ಶೆಟ್ಟಿ

ನೀವೂ ಆಗಿ ಪಿಗ್ಮೇಲಿಯನ್!

ವೈಯಕ್ತಿಕ ಪ್ರೇರೇಪಣೆ, ಕೆಲಸ ಕ್ಷೇತ್ರಗಳಲ್ಲಿ ನೌಕರರ ಪಾಲುಗೊಳ್ಳುವಿಕೆ, ವ್ಯಕ್ತಿ-ವ್ಯಕ್ತಿಗಳ ಮಧ್ಯೆ ಸಂಬಂಧ ಸಂವರ್ಧನೆ ಈ ಎಲ್ಲ ಪ್ರಕ್ರಿಯೆಗಳಲ್ಲಿ 'ಪಿಗ್ಮೇಲಿಯನ್ ಪರಿಣಾಮ' ದ ಬಗ್ಗೆ ಕೇಳಬರುತ್ತಿದೆ ಮತ್ತು ಅಧ್ಯಯನಗಳು ನಡೆಯುತ್ತಿವೆ. ಪಿಗ್ಮೇಲಿಯನ್ ಎಂದರೆ ಗ್ರೀಕ್ ಪುರಾಣದಲ್ಲಿ ಬರುವ ಶಿಲ್ಪಿಯ ಹೆಸರು. ಆತ ಕಡೆಯುತ್ತಿದ್ದ ಸುಂದರಿಯ ಬಗ್ಗೆ ತುಂಬಾ ನಿರೀಕ್ಷೆ ಮತ್ತು ಹೆಮ್ಮೆ ಇತ್ತು. ಪ್ರತಿಮೆ ಮುಗಿದು, ಹುಣ್ಣಿಮೆಯ ರಾತ್ರಿಯಲ್ಲಿ ಹಾಸಾಗಿ ಬಿದ್ದಿದ್ದ ಆ 'ಸುಂದರಿ' ಯನ್ನು ಆತನೇ ತನ್ನ ಪ್ರೇಯಸಿಯೆನ್ನುವ ತೆರದಿ ಪ್ರೀತಿಸತೊಡ ಗಿದನಂತೆ. ಶಿಲ್ಪಿಯ ಆಸೆಯನ್ನು ಪೂರೈಸಲೋ ಎಂಬಂತೆ, ಅಫ್ರೊಡೈಟ್ ಎನ್ನುವ ಹೆಸರಿನ ದೇವತೆ, ಧರೆಗಿಳಿದು ಪಿಗ್ಮೇಲಿ ಯನ್ ಅರಾಧಿಸುತ್ತಿದ್ದ

ಒಂದು ಸಂಸ್ಥೆ ಬೆಳೆಯಲು, ಕೆಲಸದಲ್ಲಿ ಉದ್ಯೋಗಿಗಳು ಉತ್ತಮ ಪ್ರಗತಿ ತೋರಲು, ಆ ಮೂಲಕ ಸಂಸ್ಥೆಯೂ ಬೆಳೆಯುವಂತೆ ಮಾಡಲು, ಉದ್ಯೋಗಿಯ ಮೇಲ್ವಿಚಾರಕನು ಕೈಗೊಳ್ಳುವ ಸಕಾರಾತ್ಮಕ ತಂತ್ರವೇ ಈ ತತ್ವದ ತಿರುಳು.

ಪ್ರತಿಮೆಗೆ ಜೀವವನ್ನೇ ತುಂಬಿಸಿದಳಂತೆ! ಗ್ರೀಕ್ ಪುರಾಣದ ಈ ಕಥೆಯನ್ನು ಜಾರ್ಜ್ ಬರ್ನಾರ್ಡ್ ಶಾ ರವರು1913ರಲ್ಲಿ, ನಾಟಕರೂಪಕ್ಕಿಳಿಸಿ ಪ್ರಸ್ತುತಪಡಿಸಿದರು. ಪಿಗ್ಮೇಲಿಯನ್ ನಾಟಕ ಹೆಸರು ಗಳಿಸಿತು. ಅದರ ಮುಖ್ಯ ಪಾತ್ರಧಾರಿ, ಪ್ರೊಫೆಸರ್ ಹೆನ್ರಿ ಹಿಗಿನ್ಸ್, ದಿನಾಲೂ ಮನೆಗೆ ಬಂದು ಹೂ ತಲುಪಿಸುವ ಹುಡುಗಿಯನ್ನು ಮೆಚ್ಚುತ್ತಾರೆ, ಪ್ರೀತಿಯ ಹೊನಲನ್ನೂ ಹರಿಸುತ್ತಾರೆ. ಆದರೆ ಈ ಹೂವಿನ ಹುಡುಗಿ ಇಂಗ್ಲಿಷಿನಲ್ಲಿ ಅಪ್ರಬುದ್ಧಳಾಗಿ ರುವುದನ್ನು ಗಮನಿಸಿ, ಪ್ರೊಫೆಸರ್ ಅವಳಿಗೆ ತರಬೇತಿ ನೀಡುತ್ತಾರೆ. ಒಂದು ದಿನ ಮನಬಿಚ್ಚಿ ಹೇಳುತ್ತಾರೆ, 'ಎಲೈಝಾ (ಅವಳ ಹೆಸರು), ನೀನು ಕೇವಲ ಹೂ ಮಾರುವ ಹುಡುಗಿ ಯೆಂದು ಭಾವಿಸಿ, ಕುಗ್ಗಬೇಡ. ನೀನು ಒಬ್ಬ ಪರಿಪೂರ್ಣ ಹೆಂಗಸು. ನಾನು ನಿನ್ನನ್ನು ಹಾಗೆಯೇ ಪರಿಭಾವಿಸಿ ಪ್ರೀತಿಸುತ್ತಿದ್ದೇನೆ'.

ವ್ಯವಹಾರ ಕ್ಷೇತ್ರದಲ್ಲಿ

ಗ್ರೀಕ್ ದಂತಕಥೆ ಮತ್ತು ಬರ್ನಾರ್ಡ್ ಶಾ ರವರ ನಾಟಕದ ಸಂದೇಶ ಎಲ್ಲ ವಲಯಗಳಿಗೆ ರವಾನೆಯಾಯಿತು. ಇಂಗ್ಲಿಷ್ ಚಲನಚಿತ್ರ 'ಮೈ ಫೇರ್ ಲೇಡಿ', ಹಿಂದಿಯಲ್ಲಿ ಬಂದಂತಹ 'ಡ್ರೀಮ್ ಗರ್ಲ್' ಪಿಗ್ಮೇಲಿಯನ್ ತತ್ವ ಅಧಾರಿತವಾದುವುಗಳು. ಇವೆಲ್ಲಕ್ಕಿಂತ ಪಿಗ್ಮೇಲಿಯನ್ ತತ್ವ ಇಂದು ಮಾನವಿಕ ಶಾಸ್ತ್ರದ ಅವಿಭಾಜ್ಯ ಅಂಗವಾಗಿ ಕಂಗೊಳಿಸುತ್ತಿದೆ. ಪಿಗ್ಮೇಲಿಯನ್ ಮಾದರಿಯಲ್ಲಿ ಕೆಲಸಕ್ಷೇತ್ರಗಳಲ್ಲಿ ಉದ್ಯೋಗಿಗಳನ್ನು ಹುರಿ ದುಂಬಿಸಬಹುದು; ನಿರಾಸಕ್ತ, ನಿರ್ಭಾವಿ ಉದ್ಯೋಗಿಗಳನ್ನು ಉತ್ಸಾಹ ವಲಯಕ್ಕೆ ಎಳೆಯಬಹುದು. ಪಿಗ್ಮೇಲಿಯನ್ ಮಾಡೆಲ್ ಬಳಸಿ, ನಷ್ಟದಂಚಿನಲ್ಲಿರುವ ಸಂಸ್ಥೆಗಳನ್ನು ಲಾಭದಾಯಕವನ್ನಾಗಿ ಪರಿವರ್ತಿಸಿದ ಉದಾಹರಣೆಗಳಿವೆ. ಉತ್ಸಾಹದ ಕೊರತೆಯಿಂದ ಬಳಲುವವರಿಗೆ, ಕೀಳರಿಮೆ ಯಿಂದ ಮುಂದೆ ಬಾರದವರಿಗೆ, ಕೆಲಸ ಮತ್ತು ಜವಾಬ್ದಾರಿಯಿಂದ ನುಣುಚಿಕೊಳ್ಳುವವರಿಗೆ ಪಿಗ್ಮೇಲಿಯನ್ ಸಂದೇಶ ಖಂಡಿತವಾಗಿ ಚೇತೋಹಾರಿ ಮತ್ತು ಪ್ರೇರಣಾತ್ಮಕ. ಪಿಗ್ಮೇಲಿಯನ್‌ಮಾಡೆಲ್ ಅನ್ನು ಯಾರೂ ಅಳವಡಿಸಬಹುದು. ಈ ನಿಟ್ಟಿನಲ್ಲಿ ಕೆಲವು ಮುಖ್ಯ ಹೆಜ್ಜೆಗಳು ಹೀಗಿವೆ.

ಹಿರಿಯ ನಿರೀಕ್ಷೆ

ಕೆಲಸದ ಮೇಲ್ವಿಚಾರಕನು, ತನ್ನ ನೌಕರರಲ್ಲಿ ತನ್ನ ನಿರೀಕ್ಷೆಯನ್ನು ಸ್ಪಷ್ಟಪಡಿಸಬೇಕು. ನಿರೀಕ್ಷೆಯ ಗುರಿ ಯಾವಾಗಲೂ ಗುರುತರವಾಗಿರಬೇಕು. ದೊಡ್ಡಮಟ್ಟದ ನಿರೀಕ್ಷೆ ಉದ್ಯೋಗಿಗಳನ್ನು ಹುರಿದುಂಬಿಸುವಂತಿರಬೇಕು. ಇಂತಹ ಸವಾಲುಗಳು ಗುರುಗಳಿಂದ ವಿದ್ಯಾರ್ಥಿಗಳಿಗೆ, ಮೇಲ್ವಿಚಾರಕರಿಂದ ನೌಕರರಿಗೆ, ಪೋಷಕರಿಂದ ಮಕ್ಕಳಿಗೆ ಹದವಾಗಿ, ಹಿತವಾಗಿ ಎಸೆಯಲ್ಪಡುತ್ತಿರಬೇಕು. ಸವಾಲೊಂದಕ್ಕೆ ಸ್ಪಂದಿಸಿ, ಸಾಧನೆಗೆ ಅಣಿಗೊಳ್ಳುವುದೇ ಮನುಜನ ಸಹಜ ಗುಣ.

ಸಂವಹನ

ನಿರೀಕ್ಷೆಯನ್ನು ಮುಂದಿಟ್ಟು ತಟಸ್ಥರಾಗುವುದು ನಿರ್ವಹಣೆ ಕಳಪೆಯಾಗಿರುವುದಕ್ಕೆ ಪ್ರಬಲ ಕಾರಣ. ನಿರಂತರ ಮೇಲ್ವಿಚಾರಣೆ, ಅಭಿಪ್ರಾಯ ಸಂಗ್ರಹಣೆ, ಮಧ್ಯಕಾಲೀನ ಸಹಾಯ ವಿಸ್ತರಣೆ ಈ ಪ್ರಕ್ರಿಯೆಗಳಿಂದ ಪ್ರಬಂಧಕರು ನಿರ್ವಹಣಾ ಯಶಸ್ಸಿನ ಒಂದು ಭಾಗವಾಗಬೇಕು.

ಸಲಹೆ, ಸೂಚನೆ, ಸ್ಪಂದನೆ

ಆಟೋಟಗಳಲ್ಲಿ ಕೋಚ್ ಇರುತ್ತಾನೆ. ಪ್ರತಿ ಸುತ್ತಿನಲ್ಲಿ, ಕೋಚ ಒಂದೊ ಎರಡೊ ಶಬ್ದಗಳನ್ನು ತನ್ನ ಶಿಷ್ಯನ ಕಿವಿಗೆ ಉಸುರಿ, ಬೆನ್ನು ತಟ್ಟಿ ಪಕ್ಕಕ್ಕೆ ಹೊರಳುತ್ತಾನೆ. ಗುರುಸಮಾನ ಕೋಚ್‌ನ ಆ ಒಂದು ಸಲಹೆ ಆಟಗಾರನಿಗೆ ಪ್ರಾಣ ಮತು ತ್ರಾಣವಲ್ಲವೆ? ಕೆಲಸ ವಲಯಗಳಲ್ಲೂ ಅಷ್ಟೆ, ಮೇಲ್ವಿಚಾರಕನು ಸೂಚಿಸಿದ ಗುರಿಯನ್ನು ತನ್ನ ಉದ್ಯೋಗಿ ಮೀರಿ ಸಾಧಿಸಲು ಸಹಾಯಕನಾಗಿ ಕಾಣಿಸಿಕೊಳ್ಳಬೇಕು.

ಸಂಭ್ರಮದ ಆಚರಣೆ

ಪಿಗ್ಮೇಲಿಯನ್ ತಂತ್ರದಲ್ಲಿ ಕುತಂತ್ರ ಮತ್ತು ಕುಹಕಕ್ಕೆ ಜಾಗವಿಲ್ಲ. ಕೆಲಸಗಾರರನ್ನು ಅತಂತ್ರದಲ್ಲಿ ಬಿಟ್ಟು, ಗೆದ್ದಾಗ ಮಾತ್ರ ಬಂದು ನಾಟಕೀಯ ಪ್ರಹಸನ ತೋರುವವರು ಉತ್ತಮ ನೇತಾರರಾಗರು ಸಾಧ್ಯವೇ ಇಲ್ಲ. ಗೆಲ್ಲಲಿ, ಸೋಲಲಿ ಕೆಲಸ ತನ್ನದು, ಕೆಲಸಗಾರರು ತನ್ನವರು ಎನ್ನುವ ಭಾವತೋ ರುವ, ಮನೋಭಾವ ಪ್ರಕಟಿಸುವ ಹೃದಯವಂತರಿಗೆ ಪಿಗ್ಮೇಲಿಯನ್ ತತ್ವ ಒಲಿದು ಬರುವುದು. ಪ್ರತಿದಿನದ ವ್ಯವಹಾರದಲ್ಲೊ, ಬೋಧನೆ-ನಿರ್ವಹಣೆಯಲ್ಲೊ ನೀವು ಒಬ್ಬ ಶ್ರೇಷ್ಠ ಪಿಗ್ಮೇಲಿಯನ್ ಆಗಿ ಕಾಣಿಸಿಕೊಳ್ಳಬಹುದು. ನಿಮ್ಮ ಕ್ಷೇತ್ರದಲ್ಲಿ ಕನಿಷ್ಟ ಐದು ಮಂದಿಗಾದರೂ ಉತ್ತಮ ಮೆಂಟರ್, ಕೋಚ್ ಆಗಿ ಸಹಾಯ ಮಾಡಿ. ಅವರ ಪ್ರಗತಿಯ ಜತೆಯಲ್ಲೇ ನಿಮ್ಮ ಸಂಸ್ಥೆಯೂ ಪ್ರಗತಿ ಹೊಂದಲು, ಅವರನ್ನು ಹುರುದುಂಬಿಸಿ; ಅಂದಿಗೆ, ಅಷ್ಟಕ್ಕೆ ನೀವೊಬ್ಬ ಉತ್ತಮ ಪಿಗ್ಮೇಲಿಯನ್.

ಅವೆನ್ಯೂ ರೋಡ್

ನಿತ್ಯದ ವಿಂಡೋ ಶಾಪಿಂಗ್

ವಿಶ್ವವಾಣಿ
09.11.2024 ಶನಿವಾರ
vishwavani.news

ದಿನ ಭವಿಷ್ಯ

ಮೇಷ ಗಾಳಿಯಲ್ಲಿ ಮನೆ ಕಟ್ಟುವಲ್ಲಿ ಸಮಯ ವ್ಯರ್ಥ ಮಾಡಬೇಡಿ. ಬದಲಿಗೆ ಏನಾದರೂ ಅರ್ಥಪೂರ್ಣ ವಾದದ್ದನ್ನು ಮಾಡಲು ಶಕ್ತಿ ವ್ಯಯಿಸಿ.

ವೃಷಭ ಅತಿಯಾಗಿ ತಿನ್ನುವುದನ್ನು ತಪ್ಪಿಸಿ ಮತ್ತು ಫಿಟ್ ಆಗಿ ಉಳಿಯಲು ನಿಯವಿತವಾಗಿ ಹೆಲ್ತ್ ಕ್ಲಬ್‌ಗೆ ಭೇಟಿ ನೀಡಿ. ಬಾಕಿಯಿರುವ ವಿಷಯಗಳು ರಹಸ್ಯಮಯವಾಗುತ್ತವೆ.

ಮಿಥುನ ಆರಾಮವಾಗಿರುವ ಭಾವನೆ ಹೊಂದಿರುತ್ತೀರಿ ಮತ್ತು ಆನಂದಿಸಲು ಸೂಕ್ತ ಮನೋಭಾವದಲ್ಲಿರುತ್ತೀರಿ.

ಕಟಕ ಅನಾವಶ್ಯಕ ಉದ್ವೇಗ ಮತ್ತು ಚಿಂತೆ ನಿಮ್ಮ ಜೀವನದ ರಸ ಹೀರಬಹುದು. ಅವು ಕೇವಲ ಸಮಸ್ಯೆಯನ್ನು ಉಲ್ಬಣಗೊಳಿಸುತ್ತವೆ.

ಸಿಂಹ ಮಾನಸಿಕ ಒತ್ತಡವನ್ನು ಹೊಡೆದೋಡಿಸಲು ಆಧ್ಯಾತ್ಮಿಕತೆ ಒಂದು ಅತ್ಯುತ್ತಮ ಆಯ್ಕೆಯಾಗಿ ರುವುದರಿಂದ ಅದರ ಸಹಾಯ ಪಡೆಯಿರಿ

ಕನ್ಯಾ ಒಂದು ಲಾಭಕರ ದಿನ ಮತ್ತು ದೀರ್ಘಕಾಲದ ಅನಾರೋಗ್ಯಕ್ಕೆ ಪರಿಹಾರ ಹುಡುಕಲು ಸಾಧ್ಯವಾಗಬಹುದು.

ತುಲಾ ಉತ್ತಮ ಆರೋಗ್ಯ ಕ್ರೀಡಾ ಸ್ಪರ್ಧೆಯಲ್ಲಿ ಭಾಗವಹಿಸಲು ಸಕ್ರಿಯಗೊಳಿಸುತ್ತದೆ. ರಾಯ ಧನಗಳಿಂದ ಪ್ರಯೋಜನ ಪಡೆಯುತ್ತೀರಿ.

ವೃಶ್ಚಿಕ ದೈಹಿಕ ರಚನೆಯನ್ನು ಕಾಯ್ದುಕೊಳ್ಳಲು ನೆರವಾಗುವ ಕೆಲವು ಕ್ರೀಡಾ ಚಟುವಟಿಕೆಗಳನ್ನು ಇಂದು ಆನಂದಿಸಬಹುದು.

ಧನು ಹಿರಿಯರು ಉತ್ತಮ ಲಾಭ ಪಡೆಯಲು ತಮ್ಮ ಹೆಚ್ಚುವರಿ ಶಕ್ತಿಯನ್ನು ಸಕಾರಾತ್ಮಕ ಬಳಕೆಗೆ ವಿನಿಯೋಗಿಸಬೇಕು.

ಮಕರ ಇತ್ತೀಚೆಗೆ ಕೆಲವರು ಓವರ್‌ಟೈಮ್ ಮಾಡುತ್ತಿರುತ್ತಾರೆ ಹಾಗೂ ಚೈತನ್ಯ ಉಡುಗುತ್ತಿರುತ್ತದೆ. ಇಂದು ಒತ್ತಡ ಹಾಗೂ ಸಂದಿಗ್ಧತೆಯನ್ನು ಬಯಸುವುದಿಲ್ಲ.

ಕುಂಭ ಆರೋಗ್ಯ ಚೆನ್ನಾಗಿರುತ್ತದೆ. ಹಣ ಉಳಿಸಲು ಮನೆಯ ಜನರೊಂದಿಗೆ ಮಾತನಾಡಬೇಕು.

ಮೀನ ದ್ವೇಷ ಪ್ರೀತಿಗಿಂತ ಹೆಚ್ಚು ಶಕ್ತಿಶಾಲಿಯಾಗಿ ದುದ್ದೈಹದ ಮೇಲೆ ಪ್ರಾಣಾಂತಿಕ ಪರಿಣಾಮ ಬೀರುವದರಿಂದ ದ್ವೇಷವನ್ನು ಸಾಯಿಸಿ.

● ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ

- ಉತ್ತರಾಖಂಡ ದಿನ
- ಭಾರತದ ರಾಷ್ಟ್ರೀಯ ಕಾನೂನು ಪ್ರಾಧಿಕಾರದ ದಿನ
- ಖ್ಯಾತ ನಟಿ ಅನುಪ್ರಭಾಕರ್ ಹುಟ್ಟುಹಬ್ಬ

ಚಿತ್ರಸ್ಫೂರ್ತಿ

ದಿನ ದರ್ಶಿಕೆ

ಕಾರ್ತಿಕ ಮಾಸ, ಶುಕ್ಲ ಪಕ್ಷ, ಅಷ್ಟಮಿ ತಿಥಿ, ಶ್ರವಣ ನಕ್ಷತ್ರ, ಗಂಡ ಯೋಗ, ವಿಷ್ಟಿ ಕರಣ, ಮಕರ ಲಗ್ನ, ತುಲಾ ರಾಶಿ, ಹೇಮಂತ್ ಋತು, ದಕ್ಷಿಣಾಯನ, ಕ್ರೋಧಿನಾಮ ಸಂವತ್ಸರ, ವಿಕ್ರಮಶಕ ಸಂವತ್ಸರ

ಮನೆಮದ್ದು

ಅಗಸೆ ಬೀಜದಲ್ಲಿ ಇರುವ ಪೋಷಕಾಂಶಗಳಿಂದಾಗಿ ಅದು ಋತುಚಕ್ರದ ಸಮಯದಲ್ಲಿ ನೋವನ್ನು ನಿವಾರಣೆ ಮಾಡಲು ಸಹಕಾರಿ ಆಗಿದೆ. ಒಮೆಗಾ-3 ಕೊಬ್ಬಿನಾಮ್ಲವನ್ನು ಹೊಂದಿರು ವಂತಹ ಅಗಸೆ ಬೀಜವು ಉರಿಯೂತವನ್ನು ಶಮನಕಾರಿಯಾ ಗಿದ್ದು, ಇದರ ಕಾರಣ ಋತುಚಕ್ರ ಸಂಬಂಧ ಸೆಳೆತ ಮತ್ತು ಅಹಿತಕರ ಕಡಿಮೆ ಮಾಡು ವುದು.

ಸೌಂದರ್ಯ ಸೂತ್ರ

ಗೆಣಸು ಒಟ್ಟಾರೆ ಚರ್ಮದ ಆರೋಗ್ಯವನ್ನು ಕಾಪಾಡುವಂತಹ ಪೋಷಕಾಂಶಗಳ ಸಾಲಿಗೆ ಸೇರುತ್ತದೆ. ಅವು ನಾರಿನ ಉತ್ತಮ ಮೂಲ ವಾಗಿದೆ. ಇದು ಆರೋಗ್ಯಕರ ಜೀರ್ಣಾಂಗ ವ್ಯವಸ್ಥೆಯನ್ನು ಹೊಂದಲು ಸಹಾಯ ಮಾಡುತ್ತದೆ. ಇದರಿಂದ ದೇಹ ನಿರ್ವಿಷೀಕ ರಣಗೊಳ್ಳಲು, ಪೋಷಕಾಂಶ ಹೀರಿಕೊಳ್ಳಲು ಸಹಾಯ ಮಾಡುತ್ತದೆ.



ಮಾರ್ಜಾಲ ನೋಟ: ಅತ್ತ ಚಕ್ರ, ಇತ್ತ ಕಲ್ಲು, ಮಧ್ಯದ ಸಣ್ಣ ಸಂಧಿಯೇ ನನ್ನ ಸುರಕ್ಷಿತ ಅಡಗುದಾಣ.

ಚಿತ್ರ: ಅಕ್ಷಯ್ ಪುತ್ರನ್ ಮುಂಬೈ.

ದಿನಕ್ಕೊಂದು ಪ್ರಶ್ನೆ

● ಎಲ್.ಪಿ.ಕುಲಕರ್ಣಿ, ಬಾದಾಮಿ

● ಮಾನವರಲ್ಲಿ ಮಂಗನ ಕಾಯಿಲೆಯ ಮೊದಲ ಪ್ರಕರಣವು ಯಾವ ದೇಶದಲ್ಲಿ ದಾಖಲಾಗಿದೆ?

- ಎ. ಭಾರತ.
- ಬಿ. ಶ್ರೀಲಂಕಾ.
- ಸಿ. ಉಗಾಂಡಾ.
- ಡಿ. ಡಿಆರ್‌ಸಿ.

ಉತ್ತರ: ಡಿ. ಡಿಆರ್‌ಸಿ.

ಮಾಹಿತಿ

1970 ರಲ್ಲಿ ಡೆಮಾಕ್ರಟಿಕ್ ರಿಪಬ್ಲಿಕ್ ಆಫ್ ಕಾಂಗೋ (ಡಿಆರ್‌ಸಿ) ನಲ್ಲಿ ಮಂಕಿಪಾಕ್ಸ್‌ನ ಮೊದಲ ಪ್ರಕರಣವನ್ನು ದಾಖಲಿಸಲಾಯಿತು. ಇದು ಮಂಕಿಪಾಕ್ಸ್ ವೈರಸ್‌ನಿಂದ ಉಂಟಾಗುವ ಅಪರೂಪದ ಝೂನೋಟಿಕ್ ಕಾಯಿಲೆಯಾಗಿದ್ದು, ಇದು Poxviridae ಕುಟುಂಬಕ್ಕೆ ಸೇರಿದೆ. ಇದರ ಲಕ್ಷಣಗಳು ಸಿಡುಬಿನಂತೆಯೇ ಇರುತ್ತವೆ ಆದರೆ ಸೌಮ್ಯವಾಗಿರುತ್ತವೆ.

ರಾಜ್ಯಕ್ಕೆ ಹೊಸ ಮುಖ್ಯಮಂತ್ರಿಯ ಆಯ್ಕೆ!

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಬ್ಬ ರಾಜನ ಆಸ್ಥಾನದ ಮುಖ್ಯಮಂತ್ರಿ ಅಕಾಲಿಕವಾಗಿ ಮರಣ ಹೊಂದಿದ. ರಾಜ್ಯದ ಆಡಳಿತದ ಭಾರವೆಲ್ಲ ರಾಜನ ಮೇಲೇ ಬಿತ್ತು. ಇದರಿಂದಾಗಿ ಅವನು ಸ್ವಲ್ಪ ಆಯಾಸಗೊಂಡ. ಮಂತ್ರಿಮಂಡಲದಲ್ಲಿದ್ದ ಉಳಿದ ಮಂತ್ರಿಗಳಲ್ಲಿ ಯಾರನ್ನು ಮುಖ್ಯಮಂತ್ರಿಯಾಗಿ ಆಯ್ಕೆ ಮಾಡುವುದೆಂದು ಅವನಿಗೆ ದೊಡ್ಡ ಸಮಸ್ಯೆಯಾಗಿ ಬಹಳವಾಗಿ ತಲೆಕೆಡಿಸಿಕೊಂಡ. ಅವನಿಗೆ ಹಸಿವು ನಿದ್ರೆಗಳು ಇಲ್ಲದಾಯಿತು.

ಇದನ್ನು ಗಮನಿಸಿದ ಅವನ ರಾಣಿ, ಅವನ ಮನಸ್ಸಿನ ಬೇಸರ ಕಳೆಯಲು ನದೀತೀರದ ವಿಹಾರ ಕೂಟವನ್ನು ಏರ್ಪಡಿಸಿದಳು. ಇವರ ಜೊತೆಗೆ ರಾಜ್ಯ ಪರಿವಾರದವರಲ್ಲದೇ ಇವರ ಮಂತ್ರಿಗಳೂ, ಹಾಗೂ ರಾಜ್ಯದ ಇತರ ಪ್ರಮುಖರೂ ಆಹ್ವಾನಿತರಾಗಿದ್ದರು.

ರಾಜ, ಮರದ ನೆರಳಿನಲ್ಲಿ ಕುಳಿತು ನದಿಯನ್ನು ನೋಡುತ್ತಾ ತನ್ನ ಚಿಂತೆಯನೆಲ್ಲ ಮರೆತ. ಹೊಟ್ಟೆ ತುಂಬಾ ಒಳ್ಳೆಯ ಊಟ ಮಾಡಿದ, ಒಳ್ಳೆ ಸಂಗೀತಗಾರರ, ಗಾಯನವನ್ನು ಕೇಳುತ್ತಾ ಆನಂದದಿಂದಿದ್ದ. ಇದ್ದಕ್ಕಿದ್ದಂತೆ ಅವನಿಗೆ ನದಿಯ ನೀರಿನ ಮೇಲೆ ಏನೋ ತೇಲುತ್ತಿರುವುದು ಕಾಣಿಸಿತು. ನದಿಯ ನೀರಿನಲ್ಲಿ ತೇಲುತ್ತಿರುವುದೇನು? ಎಂದು ತನ್ನ ಮಂತ್ರಿಗಳನ್ನು ಕೇಳಿದ.

ಒಬ್ಬ ಮಂತ್ರಿ ತಾನು ಇದ್ದಲ್ಲಿಂದಲೇ ನೋಡುತ್ತಾ, ಯಾವುದೋ ಹಣ್ಣಿನ ತರಹ ಕಾಣುತ್ತಿದೆ ಎಂದ. ಇನ್ನೊಬ್ಬ ಮಂತ್ರಿ, ಸ್ವಲ್ಪ ನದಿಯ ಹತ್ತಿರ ಬಗ್ಗಿ ನೋಡಿ ಹೌದು ಮಹಾಪ್ರಭು ಅದೊಂದು ಮಾವಿನ ಹಣ್ಣು ಎಂದ. ಇನ್ನೊಬ್ಬ ಮಂತ್ರಿ ತನ್ನ ಉಡುಪುಗಳನ್ನು ಕಳಚಿ, ನದಿಯೊಳಗೆ ಧುಮುಕಿದ. ಅಲ್ಲಿಂದ ಈಜುತ್ತಾ ಹೋಗಿ ತೇಲುತ್ತಿದ್ದ ಮಾವಿನ ಹಣ್ಣನ್ನು ತೆಗೆದುಕೊಂಡು ಬಂದು ರಾಜನ ಕೈಗಿತ್ತು, ಮಹಾಪ್ರಭು ಈ ಮಾವಿನ ಹಣ್ಣು ಬಹಳ ರುಚಿಯಾಗಿದೆ ತಿನ್ನಿ ಎಂದ.

ರಾಜನಿಗೆ ಅವನ ಈ ವರ್ತನೆ ಬಹಳ ಸಂತೋಷವನ್ನುಂಟು ಮಾಡಿತು. ಅವನ ಸಮಸ್ಯೆಗೆ ಪರಿಹಾರವೂ ತೊರಕಿದಂತಾಯಿತು. ಒಂದು ದಿನ ಎಲ್ಲರೂ ನದಿಯ ತೀರದಲ್ಲೇ ಉಳಿದು, ಮಾರನೆಯ ದಿನ ರಾಜಧಾನಿಗೆ ಹಿಂದಿರುಗಿದರು.

ಮಾರನೆಯ ದಿನ ರಾಜ ಎಲ್ಲರನ್ನೂ ಆಸ್ಥಾನಕ್ಕೆ ಕರೆದು, ನಾನು ಮುಖ್ಯಮಂತ್ರಿಯನ್ನು ಆರಿಸಿದ್ದೇನೆ, ಎಂದು ಹೇಳಿದಾಗ ಎಲ್ಲರಿಗೂ ಆಶ್ಚರ್ಯವಾಗಿ ಒಬ್ಬರ ಮುಖವನ್ನು ಒಬ್ಬರು ನೋಡಿಕೊಳ್ಳತೊಡಗಿದರು. ಆಗ ರಾಜ, ಯಾರ ಒತ್ತಾಯವೂ ಇಲ್ಲದೆ, ನೀರಿಗೆ ಧುಮುಕಿ, ಮಾವಿನ ಹಣ್ಣನ್ನು ಯಾರು ತಂದು ಕೊಟ್ಟರೋ, ಆತನೇ ಮುಂದಿನ ಮುಖ್ಯಮಂತ್ರಿ ಎಂದು ಘೋಷಿಸಿದ ಏಕೆಂದರೆ, ಅವನ ಮಾತಿಗಿಂತ ಕೆಲಸ ಮುಖ್ಯ ಎಂಬ ನಡುವಳಿಕೆಯು ನನಗೆ ಇಷ್ಟವಾಯಿತು ಎಂದ.

ಮುಂದೆ ಕೂಡಾ ಇವನು ರಾಜ್ಯದ ಸಮಸ್ಯೆಯನ್ನು ಇಷ್ಟೇ ಆಸಕ್ತಿಯಿಂದ ತನ್ನ ಕೃತಿಯಿಂದ ಬಗೆಹರಿಸುವವನೆಂಬ ನಂಬಿಕೆ ನನಗೆ ಅವನ ಮೇಲೆ ಇದೆ ಎಂದು ರಾಜ ಹೇಳಿದ. ಆತ ಹೊಸ ಮುಖ್ಯಮಂತ್ರಿಯಾಗಿ ಎಲ್ಲರಿಗೂ ತಲೆಬಾಗಿ ವಂದಿಸಿದ. ಎಲ್ಲರೂ ಆನಂದದಿಂದ ಚಪ್ಪಾಳೆ ತಟ್ಟಿದರು.

ಇಂತಹ ಕಥೆಗಳು ನಮಗೆ ಜೀವನದಲ್ಲಿ ಮಾತಿಗಿಂತ ಕೃತಿಗೆ ಎಷ್ಟು ಬೆಲೆ ಎಂದು ತಿಳಿಸಿಹೇಳುತ್ತದೆ. ಅನೇಕ ಬಾರಿ ನಾವು ಭವಿಷ್ಯಕ್ಕಾಗಿ ಸಾಕಷ್ಟು ಯೋಜನೆಗಳನ್ನು ಹಾಕಿಕೊಳ್ಳುತ್ತೇವೆ, ಕನಸುಗಳನ್ನು ಕಾಣುತ್ತೇವೆ. ಕನಸು ಕಾಣುವುದು ತಪ್ಪಲ್ಲ ಆದರೆ ಅದನ್ನು ನನಸಾಗಿಸಿಕೊಳ್ಳಲು ನಮ್ಮ ಪರಿಶ್ರಮವೂ ಬೇಕಾಗುತ್ತದೆ. ಪ್ರತಿದಿನ ನಮ್ಮ ಕನಸನ್ನು ನನಸಾಗಿಸಿಕೊಳ್ಳುವತ್ತ ನಾವು ಪರಿಶ್ರಮಪಡದೆ ಹೋದರೆ ಎಲ್ಲವೂ ಕನಸುಗಳಾಗಿ ಉಳಿಯುತ್ತವೆ. ಕೆಲವರು ನಮಗೆ ಬರಿ ಬಾಯುಪಚಾರದ ಮಾತುಗಳನ್ನು ಆಡುತ್ತಾರೆ. ಅದೆಂತಹ ಕಷ್ಟದಲ್ಲಿದ್ದರೂ ಸಹ ಬರಿ ಸಾಂತ್ವನ ಹೇಳುವುದರಿಂದ ಯಾರಿಗೂ ಪ್ರಯೋಜನವಾಗುವುದಿಲ್ಲ. ನಿಜವಾಗಿ ನಮ್ಮ ಜೊತೆಗೆ ನಿಂತು ನಮ್ಮ ಕಷ್ಟಕ್ಕೆ ಸಹಾಯ ಮಾಡುವ ಮನಸ್ಸುಗಳು ನಮ್ಮ ನಿಜವಾದ ಸ್ನೇಹಿತರು. ಇಂತಹ ನಾಲ್ಕು ಸ್ನೇಹಿತರು ನಮ್ಮ ಜೀವನದಲ್ಲಿ ಇದ್ದರೂ ಸಹ ನಾವು ಎಂಥದ್ದೇ ಕಷ್ಟ ಬಂದರೂ ನಿಭಾಯಿಸಬಹುದು. ಜೊತೆಗೆ ನಾವು ಕೂಡ ಮತ್ತೊಬ್ಬರ ಕಷ್ಟಕ್ಕೆ ಸಹಾಯ ಹಸ್ತ ಚಾಚಬೇಕು.

ಬರೀ ಕರೆ ಮಾಡಿ ಮಾತನಾಡಿ ಸಾಂತ್ವನ ನೀಡಿದರೆ ನೀನು ಪ್ರಯೋಜನವಿಲ್ಲ.

ಯುಪಿಐ ಜಾಲದಲ್ಲಿ...

ಯುಪಿಐ ಎಂದರೇನು? ಅರೆ! ಇದೆಂತ ಸಾಮಾನ್ಯ ಪ್ರಶ್ನೆ ಕೇಳುತ್ತಿದ್ದೀರಿ? ಎಂದುಕೊಳ್ಳಬೇಡಿ. ದಿನನಿತ್ಯ ನಮ್ಮ ಜೀವನದ ವ್ಯಾಪಾರ ವಹಿವಾಟುಗಳಲ್ಲಿ ಇದರ ಬಳಕೆ ಸರ್ವೇಸಾಮಾನ್ಯ ವಾಗಿರುವುದಂತೂ ನಿಜ, ಆದರೆ ಬಹುತೇಕರಿಗೆ ವಿಸ್ತ್ರತ ರೂಪ ತಿಳಿದಿರುವುದಿಲ್ಲ. ಗೂಗಲ್ ಅಮ್ಮನ ಮೊರೆ ಹೋದಾಗಲೆ ನನಗೂ ತಿಳಿದಿದ್ದು ಇದರ ವಿಸ್ತ್ರತ ರೂಪ 'Unified Payment Interface' ಎಂದು. ಮನೆಯಿಂದ ಹೊರ ಬಿದ್ದರೆ ಸಾಕು, ಒಂದು ತರಕಾರಿ ಕೊಂಡುಕೊಳ್ಳುವುದರಿಂದ ಹಿಡಿದು, ಕಿರಾಣಿ ಅಂಗಡಿ, ಟೀ ಅಂಗಡಿ, ಬಟ್ಟೆ ಅಂಗಡಿ ಹೀಗೆ ಪಟ್ಟಿ ಮಾಡುತ್ತಾ ಹೋದರೆ ಹನುಮಂತನ ಬಾಲದಂತೆ ಬೆಳೆಯುತ್ತಾ ಹೋಗುತ್ತದೆ. ಹಾಗೂ ಹೋದಲ್ಲೆಲ್ಲ ಕೇಳುವ ಮೊದಲ ಪ್ರಶ್ನೆಯೇ 'ಕ್ಕಿ ಇಣಈಊ' ಇದೆಯಾ ಎಂದು. 'ನಿಮ್ಮ ಜೇಬಿನಲ್ಲಿ ನಾವು ಇರುತ್ತೇವೆ, ನಮ್ಮಲ್ಲಿರುವ ಹಣವನ್ನು ನೀವು ಉಪಯೋಗಿಸಬಹುದು' ಎಂಬ ಪರ್ಸಿನ ಆರ್ತನಾದ ಕೆಲವೊಮ್ಮೆ ಕಿವಿಗಳಿಗೆ ಕೇಳಿಸುವುದೇ ಇಲ್ಲ. ಸುಲಭಕ್ಕೆ ಯಾವುದು ಎಟುಕುವುದೋ ಅದರ ಕಡೆ ಮನಸ್ಸು ವಾಲಿ ಬಿಡುತ್ತದೆ. ಕೆಲವು ದಿನಗಳ ಹಿಂದೆ ಆಫೀಸ್ ಹೋಗಲು ವೋಲ್ವೋ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದೆ, ಒಬ್ಬ ಹುಡುಗ ಪಕ್ಕದ ಸೀಟಿನಲ್ಲಿ ಬಂದು ಕುಳಿತ.

ನಾನು ಕಿಟಕಿಯನ್ನು ನೋಡುತ್ತಾ ಯಾವುದೋ ಲಹರಿಯಲ್ಲಿ ಮುಳುಗಿದ್ದೆ, ಅಷ್ಟರಲ್ಲಿ 'ಅಂಕಲ್ ನಿಮ್ಮ ಹತ್ತಿರ' ಮಾತು ಮುಗಿಸುವ ಮೊದಲೇ ಒಮ್ಮೆ ದುರುಗುಟ್ಟಿ ನೋಡಿದೆ. 'ಸಾರಿ... ಬ್ರೋ, ನಿಮ್ಮ ಬಳಿ ಕ್ಯಾಶ್ ಇದ್ರೆ ಕೊಡಿ, ನಾನು ನಿಮ್‌ಗೆ gpay ಮಾಡುತ್ತೇನೆ' ಎಂದು ಕೇಳಿದ, ಪರ್ಸ್ ತೆಗುದು ನೋಡಿದೆ. ನನ್ನ ಬಳಿ ಇದ್ದದ್ದು ಕೇವಲ ಇಪ್ಪತ್ತು ರುಪಾಯಿ. ಅವನಿಗೆ ಉತ್ತರಿಸಲು ನೋಡಿದೆ, ಆಗಲೇ ಅವನು ಬೇರೆಯವರಿಂದ ಹಣ ಪಡೆದಿದ್ದ. ನನ್ನ ಆಫೀಸ್ ಸ್ಟಾಪ್ ಬಂದಿತೆಂದು ಮುಂದಿನ ಬಾಗಿಲಿಗೆ ಇಳಿಯಲು ಹೋದೆ, ಅಲ್ಲಿಯೂ ಇದೆ ಪುರಾಣ.

ಒಂದು ಹುಡುಗಿ ಇನ್ನೊಂದು ಹುಡುಗಿಯ ಹತ್ತಿರ ಇಂಗ್ಲಿಷ್‌ನಲ್ಲಿ ನೀನು ನನಗೆ ಕ್ಯಾಶ್‌ಕೊಡು, ನಾನು ನಿನಗೆ gpayಇಲ್ಲವೇ phonepay ಮಾಡುತ್ತೇನೆ ಎಂಬ ರಾಗ. ಕೊನೆಗೆ ಆಫೀಸ್ ಸೇರಿಕೊಂಡೆ, ಕ'ೊಟ್ಟ ಕೆಲಸವನ್ನೆಲ್ಲ ಮುಗಿಸಿ ಮನೆಗೆ ಹೊರಡುವ ಸಮಯವಾಯಿತು. ಬಾಗಿಲು ತೆಗೆದು ಹೊರನಡೆದು ಏನೋ ತಲೆಗೆ ಹೊಳೆದಂತಾಗಿ ಅಲ್ಲಿಯೇ ನಿಂತು ಬಿಟ್ಟೆ. ನನ್ನ ಸಹದ್ಯೋಗಿಗೆ ಫೋನಾಯಿಸಿ 'ಸರ್ ದಯವಿಟ್ಟು ಒಂದು ನಿಮಿಷ ಹೊರಗೆ ಬನ್ನಿ' ಎಂದು ಅಂಗಾಲಚಿದೆ. 'ಹೇಳಿ ಸರ್ ಏನ್ ಸಮಾಚಾರ' ಎಂದು ನನ್ನ ಸಹುದ್ಯೋಗಿ ಕೊಠಡಿಯಿಂದ ಹೊರಬಂದರು. 'ಸರ್ 100 ರುಪಾಯಿ ಕ್ಯಾಶ್ ಇದ್ರೆ ಕೊಡಿ, ಬಸ್‌ನಲ್ಲಿ ಹೋಗಲು ಕಾಸಿಲ್ಲ, ನಾನು ನಿಮ್‌ಗೆ ಕ್ಯಾಶ್ ಇಲ್ಲವೇ ಜಟಚಿಢಮಾಡುತ್ತೇನೆ ಎಂದೆ' ಅದಕ್ಕವರು ಯಾವುದಾದರು ನಡೆಯುತ್ತದೆ ಎಂದರು. ನಾನು ಅವರಿಗೆ gpay ಮಾಡಿ,100 ರುಪಾಯಿಯನ್ನು ನನ್ನ ಜೇಬಿನಲ್ಲಿ ಸೇರಿಸಿಕೊಂಡು ಬಸ್ ಸ್ಟಾಪ್‌ನ ಕಡೆ 'ಬದುಕಿದೆಯಾ ಬಡ ಜೀವಿ' ಎಂದು ಹಲ್ಲು ಕಿರಿದು ಹೊರಟೆ. ಅಂದಿನಿಂದ ಹೊರಗಡೆ ಹೊರಟರೆ ಮೊಬೈಲ್‌ನ ಜೊತೆಗೆ ಪರ್ಸ್‌ನಲ್ಲಿ ಕಾಸಿದೆಯೋ ಇಲ್ಲವೋ ಎಂದು ಗಮನಿಸಿಯೇ ಹೊರಗೆ ಹೋಗುತ್ತೇನೆ. ಮತ್ತೆ ನೀವು....?

● ಮಯೂರ ಬಿ ಮಸೂತಿ

ಪದಬಂಧ



ಎಡದಿಂದ ಬಲಕ್ಕೆ:

1. ವಿಷ್ಣುವಿನ ದಶಾವತಾರಗಳಲ್ಲಿ ಒಂದು (3)
3. ತುಟಿಯ ಕೆಳಗಿನ ಭಾಗ (3)
5. ನೀರು ಜಿನುಗುವ ತಗ್ಗಾದ ಪ್ರದೇಶ (3)
7. ಗೆಲುವಲ್ಲ, ಪರಾಭವ (2)
8. ಹಕ್ಕಿಯ ರೆಕ್ಕೆ (2)
9. ಆಗಸ ಎರಡಕ್ಷರದಲ್ಲಿ (2)
11. ಬುದ್ಧಿಯಿರುವ ದೇಹದ ಅಂಗ (3)
13. ಎರಡಕ್ಷರದ ತನಯ (2)
14. ಭಾಸ್ಕರ ಎರಡು ಅಕ್ಷರದಲ್ಲಿ (2)
15. ಮತ್ತೊಂದು ಕೈ (2)
16. ರಾಜನ ಪತ್ನಿ (2)
17. ಹಲವು ಜನರಿಗೆ ಕಬ್ಬಿಣದ ಕಡಲೆ ಯಾಗುವ ಪಠ್ಯ ವಿಷಯ (3)
19. ಎರಡಕ್ಷರದ ಬಾಗಿಲು (2)
21. ಉಪ್ಪಿಗೆ ಇನ್ನೊಂದು ಹೆಸರು (2)
22. ಜವಾಬ್ದಾರಿ ಅಥವಾ ಹೊಣೆಗಾರಿಕೆ (2)
23. ಲಕ ಲಕ ಹೊಳೆಯುತ್ತಿದೆ ಹಣೆಯ ಮೇಲಿರುವ ಬೊಟ್ಟು (3)
25. ಕೊಡಬೇಕಾದ ವಸ್ತುವಿಗೆ ಒತ್ತಾಯ ಮಾಡುವುದು, ವ್ಯಾಜ್ಯ (3)
26. ಪಿತ್ರಾರ್ಜಿತವಾದ ಹಕ್ಕು (3)

ಮೇಲಿನಿಂದಕೆಳಕ್ಕೆ:

1. ವಾತಾವರಣದಲ್ಲಿರುವ ಗಾಳಿ ಬರಲು ಮಾಡಿದ ಕಿಟಕಿ (4)
2. ನಾಗರಿಕ ಇಲ್ಲಿ ಎರಡೇ ಅಕ್ಷರದಲ್ಲಿ ಬಂದಿದ್ದಾನೆ (2)
4. ನಾಲ್ಕು ಯುಗಗಳಲ್ಲಿ ಈಗಿನದ್ದು (4)
5. ಎಂದೂ ಬತ್ತದಿರಲಿ ಈ ಚಿಲುಮೆ ಪ್ರೀತಿ (3)
6. ಹೊಗಳುವುದಲ್ಲ, ನಿಂದಿಸು (3)
10. ಇಪ್ಪತ್ತೇಳು ನಕ್ಷತ್ರಗಳಲ್ಲಿ ಒಂದು ಕರಡಿಗೆಯೂ ಹೌದು (3)
12. ಕಡಿಮೆ ಬೆಲೆಯ ಒಂದು ತಾಮ್ರದ ನಾಣ್ಯ (3)
13. ದೇಹದ ಮೇಲಿರುವ ತಲೆ (3)
16. ಹನುಮಂತನಿಗೆ ಹೀಗೆಯೂ ಹೇಳಬಹುದು (4)
17. ಗೃಹಿಣಿಗೆ ಇನ್ನೊಂದು ಹೆಸರು (3)
18. ಅತಿಯಾದ ಆತುರ (3)
20. ಜೋರಾಗಿ ಗದರಿಸು (4)
24. ಎರಡಕ್ಷರದ ಒದೆತ (2)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 2. ಕಾಜಾಣ 3. ಉಪಾಯ 5. ಪರ್ವತ 6. ಕೂಪ 7. ರಜಾಯಿ 9. ರವಿ 11. ವಿಮಾನ 13. ರಿವಾಜು 15. ಸಂಗತಿ 17. ನದಿ 19. ಅಂಕಿತ 21. ದತ್ತಿ 23. ತವಕ 24. ಕಾಳಗ

ಮೇಲಿನಿಂದ ಕೆಳಕ್ಕೆ: 1. ಉಪಕಾರ 2. ಕಾತರ 3. ಉಪಜೀವಿ 4. ಯಕ್ಷಗಾನ 8. ಜಾಲರಿ 10. ವಿಹಗ 12. ಮಾಪನ 14. ಜುಮಕಿ 15. ಸಂಕುಚಿತ 16. ತಿಲೋದಕ 18. ದಿನಕರ 20. ತರಂಗ

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

ಸಮುದ್ರಮಟ್ಟದಲ್ಲಿರುವ ನೆದರ್ಲ್ಯಾಂಡ್

ನೆದರ್ಲ್ಯಾಂಡ್ ಯುರೋಪ್‌ನಲ್ಲೇ ಅತ್ಯಂತ ತಗ್ಗು ಪ್ರದೇಶವಾಗಿದೆ. ಅದರ ಸುಮಾರು ಮೂರನೇ ಒಂದು ಭಾಗವು ಸಮುದ್ರ ಮಟ್ಟಕ್ಕಿಂತ ಕೆಳಗಿದೆ. ಇಲ್ಲಿನ ಜುಯಿಡ್‌ಪ್ಲಾಸ್ ಪೋಲ್ಡರ್ ಸಮುದ್ರ ಮಟ್ಟಕ್ಕಿಂತ 6.7 ಮೀಟರ್‌ಗಳಷ್ಟು ಕೆಳಗಿದೆ. ವಾಲ್ಸರ್ಬರ್ಗ್ ಬೆಟ್ಟ, ಸಮುದ್ರ ಮಟ್ಟದಿಂದ 323 ಮೀಟರ್ ಎತ್ತರದಲ್ಲಿದೆ. ನೆದರ್ಲ್ಯಾಂಡ್‌ನ ಶೇ 50ರಷ್ಟು ಭೂಮಿ ಸಮುದ್ರ ಮಟ್ಟದಿಂದ ಕೇವಲ ಒಂದು ಮೀಟರ್ ಎತ್ತರದಲ್ಲಿದೆ ಮತ್ತು ಅಲ್ಲಿನ ಶೇ 60ರಷ್ಟು ಜನಸಂಖ್ಯೆ ಸಮುದ್ರ ಮಟ್ಟಕ್ಕಿಂತ ಐದು ಮೀಟರ್ ಕೆಳಗೆ ವಾಸಿಸುತ್ತದೆ. ದೇಶದ ಪ್ರಮುಖ ಅಂತರಾಷ್ಟ್ರೀಯ ವಿಮಾನ ನಿಲ್ದಾಣವಾದ ಶಿಪೋಲ್ ವಿಮಾನ ನಿಲ್ದಾಣವು ಸಮುದ್ರ ಮಟ್ಟದಿಂದ ಮೂರು ಮೀಟರ್‌ಗಿಂತಲೂ ಹೆಚ್ಚು ಕೆಳಗಿದೆ.

ಪುಸ್ತಕ ಲೋಕ



ಕಾಲಯಾನ

ಲೇಖಕ, ಸಂಶೋಧಕ ಸದ್ಯೋಜಾತ ಭಟ್ಟರ ಕಾಲಯಾನ, ಅಪೂರ್ವ, ವಿಭಿನ್ನ ಮತ್ತು ಸಂಗ್ರಹ ಯೋಗ್ಯ ಕೃತಿ. ವೇದ, ವಿಜ್ಞಾನ, ಪರಂಪರೆ ಮತ್ತು ಐತಿಹಾಸಿಕ ಮಾಹಿತಿಗಳು ಇದರಲ್ಲಿದೆ. ವೇದ, ಶಾಸ್ತ್ರ ಪುರಾಣಗಳಷ್ಟೇ ಅಲ್ಲದೇ ಆಧುನಿಕ ವಿಜ್ಞಾನದ ಎಳೆ ಎಳೆಯನ್ನು ಎಳೆ ತಂದು ಪ್ರಸ್ತುತ ಪಡಿಸಿದ ಸದ್ಯೋಜಾತರ ಈ ಪ್ರಯತ್ನ ಅಭೂತಪೂರ್ವ. ಸಂಸ್ಕೃತ ಜ್ಞಾನವಿಲ್ಲದವರಿಗೂ ಅರ್ಥವಾಗುವಂತೆ ವೇದಗಳಲ್ಲಿನ ಋಕ್ಕುಗಳನ್ನು ಬಿಡಿಸಿಟ್ಟು, ನೀಡಿದ ಅರ್ಥವಿವರಣೆ ಸಹಿತ ಸಾಕ್ಷೀ ಸಮೇತವಾಗಿ ವಿವರಿಸಿದ್ದಾರೆ. ಐತಿಹಾಸಿಕ ವಿಚಾರಗಳನ್ನೂ ಸಾಕ್ಷಿ ಸಹಿತ ಅವರು ಪೋಣಿಸಿದ ರೀತಿ ಕೂಡಾ ಅತ್ಯದ್ಭುತ. ವಿವಿಧ ಆಕರಗಳನ್ನು ಪರಿಶೀಲಿಸಿ ವಿವಿಧ ಕಥೆಗಳ ಮೂಲಕ ಕಾಲದ ಜಿಜ್ಞಾಸೆಗೆ ಉತ್ತರವನ್ನು ಕಂಡುಕೊಳ್ಳುವ ಪ್ರಯತ್ನವೇ ಈ ಕೃತಿ.

ಟ್ವೀಟ್‌ಮೆಂಟ್

ಎಲಾನ್ ಮಸ್ಕ್ : ಯಾರಾದ್ರೂ, ನಾಳೇನೇ ಮಂಗಳ ಗ್ರಹಕ್ಕೆ ಹೋಗಲು ಸಿದ್ಧರಿದ್ದೀರಾ?! 1 ಸಾವಿರ ಡಾಲರ್ ಒಂದು ಟ್ರಿಪ್‌ಗೆ

ಅಲ್ಟ್ರಾ ಎಂ ಜೆ ತೃಥ್: ಬರ್ತೀನಿ, ಆದ್ರೆ ಆ ಗಗನ ನೌಕೆ ವಿಡಿಯೋ ಗೇಮ್ ಕಂಟ್ರೋಲರ್‌ನ ನಿಯಂತ್ರಣಕ್ಕೆ ಒಳಪಟ್ಟಿರಬಾರದಷ್ಟೆ!

ಪ್ರಶಸ್ತಿ, ಪುರಸ್ಕಾರ ಇತ್ಯಾದಿ



● ಬೇಲೂರು ರಾಮಮೂರ್ತಿ

ಒಂದು ಸಮಾರಂಭ, ಅಲ್ಲಿದ್ದ ಹಿರಿಯರ ಮುಂದೆ ಆ ದಿನ ಪ್ರಶಸ್ತಿ ಪಡೆಯುವವರೊಬ್ಬರು ಹಾದು ಹೋದರು. ಆ ಹಿರಿಯರು ಅವರಿಗೆ ನಮಸ್ಕರಿಸಿ ಅಭಿನಂದನೆ ಸಲ್ಲಿಸಲು ಹೋದಾಗ ಆ ವ್ಯಕ್ತಿ ಇವರ ಕಡೆ ಅಷ್ಟಾಗಿ ನೋಡದೇ ಹೊರಟುಹೋದರು. ಅವರ ವರ್ತನೆ ಏನಿತ್ತು ಅಂದರೆ ನನ್ನ ಸಾಧನೆಯ ಮುಂದೆ ಇವನದೇನು ಎನ್ನುವಂತೆ. ಇದನ್ನು ಗಮನಿಸಿದ ಹಿರಿಯರು ನಕ್ಕರು. ಪಕ್ಕದಲ್ಲಿದ್ದವರು ನೀವು ಸಿಟ್ಟು ಮಾಡಿಕೊಳ್ಳಬೇಕು, ಬದಲಾಗಿ ನಗುತ್ತಿದ್ದೀರಲ್ಲ ಅಂತ ಕೇಳಿದರು, ಅದಕ್ಕೆ ಹಿರಿಯರು 'ಆ ಪುಣ್ಯಾತ್ಮ ಅವನ ದೇಹಕ್ಕೆ ಬಂದ ಪ್ರಶಸ್ತಿಗೆ ತಲೆತಿರುಗಿದವನಂತೆ ಆಡುತ್ತಿದ್ದಾನೆ. ಆದರೆ ಅವನ ಆತ್ಮಕ್ಕೆ ಏನು ಪ್ರಶಸ್ತಿ ಬಂದಿದೆ ಎಂದು ಚಿಂತಿಸುವುದಿಲ್ಲ' ಅಂದರು.

'ಆತ್ಮಕ್ಕೆ ಯಾರಾದರೂ ಪ್ರಶಸ್ತಿ ಕೊಡುತ್ತಾರೆಯೇ' ಎಂದು ಪಕ್ಕದವರು ಕೇಳಿದರು. ಅದಕ್ಕೆ ಹಿರಿಯರು 'ನಾವೆಲ್ಲ ನಮ್ಮ ದೇಹಕ್ಕೆ ಪ್ರಶಸ್ತಿ ತಂದುಕೊಡುವುದರ ಬದಲಿಗೆ ಆತ್ಮಕ್ಕೆ ಪ್ರಶಸ್ತಿ ತಂದುಕೊಡುವುದರತ್ತ ಗಮನಿಸಬೇಕು. ನಿಮಗೆ ಅಚ್ಚರಿಯಾಗಬಹುದು ಆತ್ಮಕ್ಕೆ ಹೇಗೆ ಪ್ರಶಸ್ತಿ ಕೊಡುವುದು ಎಂದು. ಹೇಳುತ್ತೇನೆ ಕೇಳಿ. ಒಬ್ಬರು ಇನ್ನೊಬ್ಬರನ್ನು ಸಂತೋಷಪಡಿಸುವುದೇ ಆತ್ಮಕ್ಕೆ ನಾವು ನೀಡುವ ಪ್ರಶಸ್ತಿ. ಈಗ ನಾನು ಆ ವ್ಯಕ್ತಿಗೆ ಅಭಿನಂದನೆ ಸಲ್ಲಿಸಲು ಹೋದಾಗ ಆ ವ್ಯಕ್ತಿ ಅದನ್ನು ಸ್ವೀಕರಿಸಿದ್ದರೆ ಅವನ ಆತ್ಮವೂ ಸಂತೋಷಪಡುತ್ತಿತ್ತು ನನ್ನ ಆತ್ಮವೂ ಸಂತೋಷಪಡುತ್ತಿತ್ತು. ಈಗ ನನ್ನ ಆತ್ಮ ಬೇಜಾರು ಮಾಡಿಕೊಂಡಿದೆ. ಯಾರು ಇನ್ನೊಬ್ಬರನ್ನು ಗೌರವಿಸುತ್ತಾರೋ ಅವರೇ ದೊಡ್ಡವರು. ಆ ವ್ಯಕ್ತಿ ತನ್ನ ದೇಹಕ್ಕೆ ಬಂದ ಪ್ರಶಸ್ತಿಗೆ ತಲೆ ತಿರುಗಿದವನಂತೆ ಆಡುತ್ತಿದ್ದಾನೆ. ಹೋಗಲಿ ಆ ಪ್ರಶಸ್ತಿಗೆ ಅವನೊಬ್ಬನೇ ಅರ್ಹನೇ. ಅವನು ಮಾಡಿದ ಕೆಲಸಕ್ಕೆ ಅನೇಕರು ಸಹಕರಿಸಿರುತ್ತಾರಲ್ಲವೇ. ಒಬ್ಬ ಒಂದು ಗ್ರಂಥ ಬರೆದು ಪ್ರಶಸ್ತಿ ಪಡೆದ ಅಂದರೆ ಅವನು ಬರೆಯಲು ಸಮಯಾವಕಾಶ ನೀಡಿ ಸಹಕರಿಸಿದ ಮನೆಯವರು, ಬರೆಯಲು ಉಪಯೋಗಿಸಿದ ಮೇಜು, ಕುರ್ಚಿ, ಪೆನ್ನು, ಕಂಪ್ಯೂಟರು, ಮನೆಯ ದೀಪ, ಬರೆಯಲು ಸಿಕ್ಕ ವಾತಾವರಣ, ಇವೆಲ್ಲಕ್ಕೂ ಆ ವ್ಯಕ್ತಿ ಧನ್ಯವಾದ ತಿಳಿಸುತ್ತಾನೆಯೇ ಖಂಡಿತಾ ಇಲ್ಲ.

ಇನ್ನು ಅವನು ಬರೆದ ಗ್ರಂಥವನ್ನು ಓದಿ, ಅಭಿನಂದಿಸಿ, ಅದನ್ನು ಮುದ್ರಿಸಿ, ಪ್ರಚಾರ ಮಾಡಿ, ಮಾರಾಟ ಮಾಡಿದವರೂ ಮುಖ್ಯ ಅಲ್ಲವೇ. ಇವೆಲ್ಲವೂ ಆಗಿಲ್ಲದೇ ಹೋದರೆ ಅವನ ಗ್ರಂಥ ಅಜ್ಞಾತವಾಗಿಯೇ ಉಳಿದಿರುತ್ತಿತ್ತು. ಹೀಗಾಗಿ ಅವನು ಈ ಎಲ್ಲರಿಗೂ ಕೃತಜ್ಞನಾಗಿರಬೇಕು. ಎಲ್ಲರೂ ಎಲ್ಲ ಕಾಲಕ್ಕೂ ಎಲ್ಲರಿಗೂ ಕೃತಜ್ಞರಾಗಿರೋದು ಅಸಾಧ್ಯ. ಅದಕ್ಕೆ ಎಲ್ಲ ಕಾಲದಲ್ಲೂ ನಾವು ಭೇಟಿ ಮಾಡುವ ಜನರೊಂದಿಗೆ ನಗುಮುಖದ ಸಂವಹನ, ಮೆದು ಮಾತು, ದುರಂಹಾರವಿಲ್ಲದ ಮುಖಭಾವ, ಸೌಜನ್ಯದ ನಡವಳಿಕೆ, ತಾರತಮ್ಯವಿಲ್ಲದ ಮನೋಭಾವ ಇವೆಲ್ಲವನ್ನೂ ಅಳವಡಿಸಿಕೊಳ್ಳಬೇಕು. ಒಬ್ಬ ಗ್ರಂಥಕರ್ತ ಇನ್ನೊಬ್ಬ ಗ್ರಂಥಕರ್ತನನ್ನು ಗೌರವದಿಂದ ಪ್ರೀತಿಯಿಂದ ನೋಡೋದು ಸಾಧ್ಯವೇ ಇಲ್ಲವೇ.

ಸಾಧ್ಯ ಮಾಡಿಕೊಟ್ಟವನೇ ನಿಜವಾದ ಮನುಷ್ಯ'. ಇಷ್ಟು ದೀರ್ಘ ಮಾತುಗಳನ್ನಾಡಿದ ಹಿರಿಯರನ್ನು ಪಕ್ಕದವರು ನಿಮ್ಮದು ಆಳವಾದ ಜ್ಞಾನ ಅಂದರು. ನಮ್ಮ ಹಿರಿಯರು ಆತ್ಮೋದ್ಧಾರ ಎನ್ನುವ ಮಾತಾಡುತ್ತಿದ್ದರು. ಅಂಥಾ ಆತ್ಮೋದ್ಧಾರ ಪಡೆಯಲು ಎಲ್ಲರೂ ಶ್ರಮಿಸಬೇಕು. ಸುಮ್ಮನೇ ಯಾರೋ ಪ್ರಶಸ್ತಿ ಕೊಟ್ಟರು ಪುರಸ್ಕಾರ ಮಾಡಿದರು ಎಂದರೆ ದುರಂಕಾರದ ಮುಖಭಾವ ಹೊತ್ತು ಮೆರೆಯುವುದಲ್ಲ. ಯಾರೇ ಆಗಲಿ ಪ್ರಶಸ್ತಿ ಪುರಸ್ಕಾರ ಬಂತು ಎಂದರೆ ತಲೆ ತಗ್ಗಿಸಿ ನಡೆಯುವುದೇ ಹೊರತು ತಲೆ ಎತ್ತಿ ಮೆರೆಯುವುದಲ್ಲ. ನನಗೆ ಏಕೆ ನಗು ಬರುತ್ತಲೇ ಇರುತ್ತದೆ ಎಂದರೆ ಜನರು ಇಲ್ಲಿ ಬಿಟ್ಟುಹೋಗುವ ಪ್ರಶಸ್ತಿ ಪುರಸ್ಕಾರಗಳ ಬಗೆಗೇ ತಲೆ ಕೆಡಿಸಿಕೊಂಡು ತಿರುಗುತ್ತಿರುತ್ತಾರಲ್ಲ, ತೆಗೆದುಕೊಂಡು ಹೋಗುವ ಪ್ರಶಸ್ತಿ ಬಗ್ಗೆ ಚಿಂತಿಸುವುದೇ ಇಲ್ಲವಲ್ಲ ಅಂತ. ಪಕ್ಕದಲ್ಲಿ ಕೂತಿದ್ದವರು ಇವರದು ಅತ್ಯಂತ ಆಳವಾದ ಆಧ್ಯಾತ್ಮ ಚಿಂತನೆ ಎಂದು ಅವರ ಪಾದಕ್ಕೆ ನಮಸ್ಕರಿಸಿ ಹೊರಟರು.

ಸಮಾಚಾರ ಸಣ್ಣದಲ್ಲ

ಪೆಟ್ರೋಲಿಯಂ ರಿಟೈಲ್ ಔಟ್‌ಲೇಟ್ ಸ್ಥಾಪನೆ

ಹೊಸಪೇಟೆ: ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಆಫ್ ಇಂಡಿಯಾ ಲಿಮಿಟೆಡ್ ಇವರು ವಿಜಯನಗರ ಜಿಲ್ಲೆ ಹೊಸಪೇಟೆ ತಾಲೂಕಿನ ಕಮಲಾಪುರ ಹೋಬಳಿಯ ಗೋನಾಳು ಗ್ರಾಮದ 16 ಕೆಎಲ್ ಸಾಮರ್ಥ್ಯದ ಪೆಟ್ರೋಲಿಯಂ ಕ್ಲಾಸ್ ಎ ಮತ್ತು 35 ಕೆಎಲ್ ಸಾಮರ್ಥ್ಯದ ಪೆಟ್ರೋಲಿಯಂ ಕ್ಲಾಸ್ ಬಿ ಒಟ್ಟು 51 ಕೆಎಲ್ ಸಾಮರ್ಥ್ಯದ ಬಂಕ್ ಸ್ಥಾಪನೆ ಮಾಡಲು ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡುವಂತೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಜುವೇರಿಯಾ ಅಂಜುಮ್ ಗಂಡ ಜಿ.ಎಸ್.ಜಿಲಾನ್ ಬಾಷಾ ಬಳ್ಳಾರಿ ಜಿಲ್ಲೆಯಲ್ಲಿ ಫ್ರಾಂಚೈಸ್ಸಿಯನ್ನಾಗಿ ಕಂಪನಿ ನೇಮಕ ಮಾಡಿದೆ. ಈ ಜಮೀನಿನಲ್ಲಿ ಪೆಟ್ರೋಲಿಯಂ ರಿಟೈಲ್ ಔಟ್‌ಲೆಟ್ ಸ್ಥಾಪನೆ ಮಾಡಲು ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡಲು ಸಾರ್ವಜನಿಕರಿಂದ ಆಕ್ಷೇಪಣೆಗಳು ಇದ್ದಲ್ಲಿ ಹತ್ತು ದಿನದೊಳಗಾಗಿ ಜಿಲ್ಲಾಧಿಕಾರಿಗಳ ಕಾರ್ಯಾಲಯದ ಇಮೇಲ್ ಐಡಿ: vijayanagaradc@gmail.com ಅಥವಾ ಹೊಸಪೇಟೆ ಜಿಲ್ಲಾಧಿಕಾರಿಗಳ ಕಾರ್ಯಾಲಯದ ಎಂಎಜಿ-2 ಶಾಖೆಗೆ ಸಲ್ಲಿಸಲು ಜಿಲ್ಲಾಧಿಕಾರಿಗಳು ಕಚೇರಿ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಉದ್ಯಮಶೀಲತಾಭಿವೃದ್ಧಿ ತರಬೇತಿಗೆ ಅರ್ಜಿ

ಹೊಸಪೇಟೆ: ಕೌಶಲಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆಯ ಪ್ರಾಯೋಜಕತ್ವದಲ್ಲಿ ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ, ಸಿಡಾಕ್ ಇವರು ಸ್ವಯಂ ಉದ್ಯೋಗ ಪ್ರಾರಂಭಿಸುವ ಆಸಕ್ತ ಪರಿಶಿಷ್ಟ ಪಂಗಡದವರಿಗೆ ಹತ್ತು ದಿನಗಳ ಉದ್ಯಮಶೀಲತಾಭಿವೃದ್ಧಿ ತರಬೇತಿ ನೀಡಲು ಆಸಕ್ತರಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ನ.14ರೊಳಗಾಗಿ 63626 81190 ಗೆ ಕರೆ ಮಾಡುವುದರ ಮೂಲಕ ಅರ್ಜಿ ಸಲ್ಲಿಸಬಹುದಾಗಿದ್ದು, ತರಬೇತಿಯಲ್ಲಿ ಸ್ವಂತ ಉದ್ಯಮ ಸ್ಥಾಪಿಸಲು ಅನುಸರಿಸಬೇಕಾದ ಕ್ರಮಗಳು, ಸರಕಾರದ ಸ್ವಂತ ಉದ್ಯೋಗದ ಯೋಜನೆಗಳು, ಬ್ಯಾಂಕಿನ ವ್ಯವಹಾರ, ಮಾರುಕಟ್ಟೆ ಸಮೀಕ್ಷೆ, ಯೋಜನಾ ವರದಿ ತಯಾರಿಕೆ ಹಾಗೂ ಉದ್ಯಮ ನಿರ್ವಹಣೆ, ಉದ್ಯಮಶೀಲತೆ,ಇತ್ಯಾದಿ ವಿಷಯಗಳ ಕುರಿತು ತರಬೇತಿ ನೀಡಲಾಗುವುದು. ಅಭ್ಯರ್ಥಿಗಳಿಗೆ 18 ದಿಂದ 45 ವರ್ಷ ವಯಸ್ಸಿನವರಾಗಿರಬೇಕು ಹಾಗೂ ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾಗಿರಬೇಕು. ಪರಿಶಿಷ್ಟ ಪಂಗಡದ ಪುರುಷ ಮತ್ತು ಮಹಿಳೆಗೆ ಮಾತ್ರ ಅವಕಾಶವಿರುತ್ತದೆ ಎಂದು ಸಿಡಾಕ್ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಕ್ಕಳಿಗೆ ಉಚಿತ ಕಂಪ್ಯೂಟರ್ ತರಬೇತಿ

ಹರಪನಹಳ್ಳಿ: ತಾಲೂಕಿನ ಹಿರೇಮೇಗಳಗೆರೆ ಗ್ರಾಮದಲ್ಲಿ ಜನ ಸೇವಾ ಸಮೃದ್ಧಿ ಟ್ರಸ್ಟ್ (ರಿ) ನ ವತಿಯಿಂದ ಸಮೃದ್ಧಿ ಕಂಪ್ಯೂಟರ್ ಕೇಂದ್ರ ಎಂಬ ಹೆಸರಿನೊಂದಿಗೆ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳಿಗೆ ಉಚಿತವಾಗಿ ಕಂಪ್ಯೂಟರ್ ತರಬೇತಿ ನೀಡುವ ಉದ್ದೇಶದಿಂದ ಆರಂಭ ಮಾಡಲಾಯಿತು. ಎಸ್‌ಡಿಎಂಸಿ ಅಧ್ಯಕ್ಷ ರಂಗಪ್ಪ ಆರ್, ಗ್ರಾಮ ಪಂಚಾಯಿತಿ ಅಧ್ಯಕ್ಷೆ ಪ್ರತಿಭಾ ಪರಶುರಾಮಪ್ಪ. ಕೆ, ಊರಿನ ಮುಖಂಡ ರಾದ ಬಣಕಾರ್ ಮಂಜಪ್ಪ, ದೊಡ್ಡಜ್ಜರ ಹನುಮಂ ತಪ್ಪ, ಬೇಲೂರು ಶಂಕ್ರಪ್ಪ, ಶಾಲೆಯ ಮುಖ್ಯೋಪಾಧ್ಯಾಯರು ಮತ್ತು ಸಹ ಶಿಕ್ಷಕರು ಹಾಗೂ ಟ್ರಸ್ಟನ ಅಧ್ಯಕ್ಷ ಸಿದ್ದಾರ್ಥ, ಎ.ಎಸ್. ಟ್ರಸ್ಟ್ ನ ಉಪಾಧ್ಯಕ್ಷರು ಕಾರ್ಯದರ್ಶಿ ಮತ್ತು ಸದಸ್ಯರುಗಳು ಉಪಸ್ಥಿತರಿದ್ದರು.

'ಕಾನೂನು ಬದ್ಧ ದತ್ತು' ಮಾಸಾಚರಣೆ

ಬಳ್ಳಾರಿ: ದತ್ತು ಮಾಸಾಚರಣೆ ನವೆಂಬರ್-2024 ರ ಅಂಗವಾಗಿ 'ಕಾನೂನು ಬದ್ಧ ದತ್ತು' ಪ್ರೋತ್ಸಾಹಿಸುವ ಸಲುವಾಗಿ ಜಿಲ್ಲೆಯಲ್ಲಿ ದತ್ತು ಮಾಸಾಚರಣೆ ಆಚರಿಸಲಾಗುತ್ತಿದ್ದು, ಮಕ್ಕಳನ್ನು ಮಾರುವವರಿಗೂ ಹಾಗೂ ಕೊಳ್ಳುವವರಿಗೂ ಬಾಲನ್ಯಾಯ ಕಾಯಿದೆ-2015 ಸೆಕ್ಷನ್ 80 ಮತ್ತು 81ರ ಅನ್ವಯ 5 ವರ್ಷಗಳವರೆಗೂ ಸೆರೆಮನೆ ವಾಸದೊಂದಿಗೆ ರೂ.1 ಲಕ್ಷಗಳವರೆಗೆ ದಂಡ ವಿಧಿಸಬಹುದು ಎಂದು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಯವರು ತಿಳಿಸಿದ್ದಾರೆ. ಈ ಅಪರಾಧದಲ್ಲಿ ಆಸ್ಪತ್ರೆಯ ಅಧಿಕಾರಿ ಹಾಗೂ ಸಿಬ್ಬಂದಿ ಭಾಗಿಯಾದಲ್ಲಿ ಶಿಕ್ಷೆಯ ಅವಧಿ 3 ವರ್ಷಗಳಿಗೆ ಕಡಿಮೆ ಇಲ್ಲದಂತೆ 7 ವರ್ಷಗಳವರೆಗೆ ವಿಸ್ತರಣೆ ಮಾಡಲಾಗುವುದು. ಅನಾಥ, ಪರಿತ್ಯಕ್ತ ಮತ್ತು ಒಪ್ಪಿಸಲ್ಪಟ್ಟ ಮಕ್ಕಳ ಮಾಹಿತಿಯು ಕಂಡುಬಂದಲ್ಲಿ ನಗರದ ಕಂಟೋನ್‌ಮೆಂಟ್‌ನ ಶಾಂತಿಧಾಮ ಆವರಣದ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ದೂ.08392-241373 ಹಾಗೂ ಮಕ್ಕಳ ಸಹಾಯವಾಣಿ-1098 ಅಥವಾ 112 ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗೆಜೆಟಿಯರ್
ಪ್ರತಿ ಮಂಗಳವಾರ
ಇದು ಅನುಕ್ಷಣದ ಆ್ಯಪ್

{ಸಿಎಂ ಇಬ್ರಾಹಿಂ} ಮಾಜಿ ಸಚಿವ

ರಾಜ್ಯದಲ್ಲಿ ನಡೆಯುತ್ತಿರುವ ಉಪ ಚುನಾವಣೆಯ ಪ್ರಚಾರಕ್ಕೆ ನಾನು ಹೋಗುತ್ತಿಲ್ಲ. ನಾನು ಡೈವೋರ್ಸ್ ಆಗಿರುವ ಹೆಂಡತಿಯಂತೆ ಆಗಿದ್ದೇನೆ. ಚನ್ನಪಟ್ಟಣದಲ್ಲಿ ಒಬ್ಬರು ಗೋಳೋ ಅಂತ ಆಳುತ್ತಿದ್ದಾರೆ. ಏಕೆ ಅಳಬೇಕು.? ಏಕೆ ಎಲೆಕ್ಷನ್ ನಿಲ್ಲಬೇಕು.?

ಸಂಡೂರು ಕ್ಷೇತ್ರಕ್ಕೆ ನ.13 ರಂದು ಮತದಾನ | ಜಿಲ್ಲಾ ಚುನಾವಣಾಧಿಕಾರಿ ಪ್ರಶಾಂತ್

ಪಾರದರ್ಶಕ ಚುನಾವಣೆಗೆ ನಮ್ಮ ಜಿಲ್ಲಾಡಳಿತ ಸಜ್ಜು

ಬಳ್ಳಾರಿ: ಸಂಡೂರು ವಿಧಾನಸಭೆ ಉಪಚುನಾವಣೆಗೆ ನ.13 ರಂದು ಮತದಾನ ಜರುಗಲಿದ್ದು, ನ.11 ರ ಸಂಜೆ 6 ಗಂಟೆಗೆ ಬಹಿರಂಗ ಪ್ರಚಾರ ಅಂತ್ಯಗೊಳ್ಳಲಿದೆ. ಸಂಡೂರು ವಿಧಾನಸಭೆ ಕ್ಷೇತ್ರ ವ್ಯಾಪ್ತಿಯಲ್ಲಿ 2,36,100 ಮತದಾರರು ಇದ್ದು, 253 ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ.

ಮತದಾನದ ಕಾರ್ಯಕ್ಕೆ ಸಂಡೂರು ಕ್ಷೇತ್ರದಲ್ಲಿ 1,215 ಅಧಿಕಾರಿ ಹಾಗೂ ಸಿಬ್ಬಂದಿ ನೇಮಕ ಮಾಡಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿಂ ಹಾಗೂ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ತಿಳಿಸಿದ್ದಾರೆ.

ಸಂಡೂರು ವಿಧಾನಸಭೆ ಉಪಚುನಾವಣೆ ನಿಮಿತ್ತ ನ.13 ರಂದು ಬೆಳಿಗ್ಗೆ 7 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಮತದಾನ ನಡೆಯಲಿದೆ. ಮತದಾನ ಅಂತ್ಯದ 48 ಗಂಟೆಗೂ ಮುನ್ನ ಅಂದರೆ ನ.11 ರ ಸಂಜೆ 6 ಗಂಟೆಗೆ ಬಹಿರಂಗ ಪ್ರಚಾರ ಅಂತ್ಯವಾಗಲಿದೆ. ಈ ಸಂದರ್ಭದಲ್ಲಿ ವಾಹನಗಳ ಮೂಲಕ ಬಹಿರಂಗ ಪ್ರಚಾರ, ಧ್ವನಿವರ್ಧಕ ಬಳಕೆಗೆ ಅವಕಾಶ ಇರುವುದಿಲ್ಲ, ಅಭ್ಯರ್ಥಿಗಳು ಮನೆ-ಮನೆ ಭೇಟಿ ಮೂಲಕ ಮತಯಾಚನೆ ಮಾಡಬಹುದು. ನ.11 ರ ಸಂಜೆ 6 ರಿಂದ ನ.14 ಸಂಜೆ 6 ಗಂಟೆಯವರೆಗೆ ಸಂಡೂರು ವಿಧಾನಸಭೆ ಕ್ಷೇತ್ರ ವ್ಯಾಪ್ತಿಯಲ್ಲಿ ಭಾರತೀಯ ನಾಗರಿಕ ಸುರಕ್ಷಾ ಸಂಹಿತಾ 2023 ರ ಕಲಂ 163 ಅಡಿ ಪ್ರತಿಬಂಧಕಾಜ್ಞೆ ಜಾರಿಯಾಗಲಿದ್ದು, 5 ಕ್ಕಿಂತ ಹೆಚ್ಚು ಜನರು ಒಟ್ಟಾಗಿ ಓಡಾಡುವಂತಿಲ್ಲ. ಕಾನೂನು ಸುವ್ಯವಸ್ಥೆ ಪಾಲನೆಗಾಗಿ ಕ್ಷೇತ್ರದ ಮತದಾರರಲ್ಲದವರು ಕ್ಷೇತ್ರ ಬಿಡಲು ಸೂಚನೆ ನೀಡಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಸಂಡೂರು ಕ್ಷೇತ್ರದಲ್ಲಿ ಹಾಗೂ ಈ ಕ್ಷೇತ್ರಕ್ಕೆ ಹೊಂದಿಕೊಂಡ ಕಂಪ್ಲಿ, ಕುರುಗೋಡು ಮತ್ತು ಬಳ್ಳಾರಿ ತಾಲ್ಲೂಕಗಳ 5 ಕಿ.ಮೀ ವ್ಯಾಪ್ತಿಯಲ್ಲಿ ನ.11 ರ ಸಂಜೆ 06 ಗಂಟೆಯಿಂದ ನ.14 ರ ಬೆಳಿಗ್ಗೆ 6 ಗಂಟೆಯವರೆಗೆ ಮದ್ಯ ಮಾರಾಟ ಮತ್ತು ಸಾಗಾಟವನ್ನು ನಿಷೇಧಿಸಿ ಡ್ರೈಡೇ ಆಚರಿಸಲು ಸೂಚಿಸಿದ್ದಾರೆ.

ಸಂಡೂರು ವಿಧಾನಸಭೆ ಕ್ಷೇತ್ರ ವ್ಯಾಪ್ತಿಯಲ್ಲಿ ಒಟ್ಟು 2,36,100 ಮತದಾರರು, 253 ಮತಗಟ್ಟೆ: ಸಂಡೂರು ವಿಧಾನಸಭೆ ವ್ಯಾಪ್ತಿಯಲ್ಲಿ ಒಟ್ಟು 2,36,100 ಮತದಾರರಿದ್ದಾರೆ. 1,17,789 ಪುರುಷ ಮತದಾರರು, 1,18,282 ಮಹಿಳೆ ಮತದಾರರು ಹಾಗೂ 29 ಅಲ್ಪಸಂಖ್ಯಾತ ಲಿಂಗತ್ವ ಮತದಾರರು ಇದ್ದಾರೆ. ಒಟ್ಟು 253 ಮತಗಟ್ಟೆ ಮತಕೇಂದ್ರಗಳಿವೆ.

ಮತಗಟ್ಟೆಗಳಿಗೆ 1,215 ಸಿಬ್ಬಂದಿ ನೇಮಕ: ಸಂಡೂರು ವಿಧಾನಸಭೆ ಉಪಚುನಾವಣೆ ಅಂಗವಾಗಿ ಶಾಂತಿಯುತ ಹಾಗೂ ಚುನಾವಣಾ ಆಯೋಗದ ನಿಯಮಾನುಸಾರ ಮತದಾನ ಜರುಗಿಸಲು ಅಗತ್ಯ ಕ್ರಮ ವಹಿಸಲಾಗಿದೆ. ಮತಗಟ್ಟೆಗಳಲ್ಲಿ ಕರ್ತವ್ಯ ನಿರ್ವಹಿಸಲು 304 ಮತಗಟ್ಟೆ ಅಧಿಕಾರಿಗಳು, 304 ಸಹಾಯಕ ಅಧಿಕಾರಿಗಳು, 608 ಮತದಾನ ಸಹಾಯಕ ಸಿಬ್ಬಂದಿ ಸೇರಿ ಒಟ್ಟು 1,215 ಅಧಿಕಾರಿ, ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ. ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ ಮತಗಟ್ಟೆಗಳಿಗೆ ಹೆಚ್ಚುವರಿಗೆ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಮತ್ತು ಪ್ರತಿ ಮತಗಟ್ಟೆಗಳಿಗೆ ವೈದ್ಯಕೀಯ ಸಿಬ್ಬಂದಿಗಳನ್ನು ನೇಮಿಸಲಾಗಿದೆ ಎಂದು ತಿಳಿಸಿದ್ದಾರೆ.

ಪೂರ್ವಾನುಮತಿ ಕಡ್ಡಾಯ: ಸಂಡೂರು ವಿಧಾನಸಭೆ ಉಪಚುನಾವಣೆ ಅಂಗವಾಗಿ ನ.12 ಮತ್ತು 13 ರಂದು ಅಭ್ಯರ್ಥಿಗಳು ಮತ್ತು ಸಂಸ್ಥೆಗಳು ಅಥವಾ ಯಾವುದೇ ವ್ಯಕ್ತಿಯು ದಿನಪತ್ರಿಕೆಗಳಲ್ಲಿ ಯಾವುದೇ ರೀತಿಯ ಜಾಹೀರಾತು ಪ್ರಕಟಿಸಬೇಕಾದರೆ ಜಿಲ್ಲಾ ಮಾಧ್ಯಮ ಪ್ರಮಾಣೀಕರಣ ಹಾಗೂ ಕಣ್ಗಾವಲು ಸಮಿತಿ (ಎಂಸಿಎಂಸಿ) ವತಿಯಿಂದ ಪೂರ್ವಾನುಮತಿ ಪಡೆಯುವುದು ಕಡ್ಡಾಯವಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ತಿಳಿಸಿದ್ದಾರೆ.

> **ಪಾರದರ್ಶಕ ಚುನಾವಣೆಗೆ ಎಲ್ಲಾ ಹಂತದಲ್ಲಿ ಇವಿಎಂ ಮತಯಂತ್ರಗಳನ್ನು ಪರಿಶೀಲನೆ ನಡೆಸಿದ್ದು, ಯಾವುದೇ ರೀತಿಯ ಗೊಂದಲವಾಗದಂತೆ ಅಗತ್ಯ ಕ್ರಮ ವಹಿಸಲಾಗಿದೆ. ರಾಜಕೀಯ ಪಕ್ಷಗಳ ಅಭ್ಯರ್ಥಿಗಳ ಸಮ್ಮುಖದಲ್ಲಿ ರ್‍ಯಾಂಡಮೈಜೇಶನ್ ಮಾಡಿ, ಎಲ್ಲ ಪ್ರಕ್ರಿಯೆಗಳನ್ನು ಅವರ ಗಮನಕ್ಕೆ ತರಲಾಗಿದೆ.**
> -ಮಿಶ್ರಾ, ಜಿಲ್ಲಾಧಿಕಾರಿ

ಪೂರ್ವಾನುಮತಿಗೆ ಅರ್ಜಿ ಲಭ್ಯ

ನ.12 ಮತ್ತು 13 ರಂದು ಮುದ್ರಣ ಮಾಧ್ಯಮದಲ್ಲಿ ಜಾಹೀರಾತು ಪ್ರಕಟಿಸುವ ಸಲುವಾಗಿ ಅನುಮತಿ ಪಡೆಯಲು ಅಗತ್ಯವಿರುವ ನಿಗದಿತ ನಮೂನೆಯ ಅರ್ಜಿ ನಮೂನೆಗಳು ಜಿಲ್ಲಾಧಿಕಾರಿಗಳ ಕಚೇರಿ ಆವರಣದ ವಾರ್ತಾ ಮತ್ತು ಸಾರ್ವಜನಿಕ ಇಲಾಖೆ ಕಚೇರಿಯಿಂದ ಪಡೆಯಬಹುದು. ಚುನಾವಣೆಗೆ ಸಂಬಂಧಿಸಿದಂತೆ ಯಾವುದೇ ರೀತಿಯ ಜಾಹೀರಾತುಗಳನ್ನು ಪ್ರಕಟಿಸಲು ಜಿಲ್ಲಾ ಮಟ್ಟದ ಎಂಸಿಎಂಸಿ ವತಿಯಿಂದ ನಿಗದಿತ ನಮೂನೆಯಲ್ಲಿ ಪೂರ್ವಾನುಮತಿ ಪಡೆಯದ ಜಾಹೀರಾತುಗಳನ್ನು ಸ್ಥಳೀಯ, ಪ್ರಾದೇಶಿಕ, ರಾಜ್ಯ ಹಾಗೂ ರಾಷ್ಟ್ರ ಮಟ್ಟದ ದಿನಪತ್ರಿಕೆಗಳು ಪ್ರಕಟಿಸಬಾರದು ಎಂದು ಚುನಾವಣಾ ಆಯೋಗ ತಿಳಿಸಿದೆ.

ತೆರಿಗೆ ಹಣ ಅಭಿವೃದ್ಧಿಗೆ



ಕೈಗಾರಿಕೋದ್ಯಮಿಗಳು – ವ್ಯಾಪಾರಿಗಳ ಸಭೆಯಲ್ಲಿ, ಮೇಯರ್ ಮುಲ್ಲಂಗಿ ನಂದೀಶ್‌ರನ್ನು ಸನ್ಮಾನಿಸಿದರು.

ಬಳ್ಳಾರಿ: ಮಹಾನಗರ ಪಾಲಿಕೆ ವ್ಯಾಪ್ತಿಯ ಆಸ್ತಿಗಳ ತೆರಿಗೆ ಪಾವತಿಗೆ ಆನ್‌ಲೈನ್ ವ್ಯವಸ್ಥೆ ಜಾರಿಯಲ್ಲಿದ್ದು, ಕೈಗಾರಿಕಾ ವಲಯದಲ್ಲಿರುವ ಸಮಸ್ಯೆಗಳ ಪರಿಹಾರಕ್ಕೆ ಕೈಗಾರಿಕಾ ಪ್ರದೇಶದಲ್ಲಿಯೇ ಸಭೆ ನಡೆಸಿ ಸಮಸ್ಯೆಗಳ ಪರಿಹಾರಕ್ಕೆ ಪ್ರಯತ್ನಿಸುವೆ ಎಂದು ಮಹಾನಗರ ಪಾಲಿಕೆಯ ಮೇಯರ್ ಮುಲ್ಲಂಗಿ ನಂದೀಶ್ ತಿಳಿಸಿದ್ದಾರೆ.

ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ನೇತೃತ್ವದಲ್ಲಿ ಬಳ್ಳಾರಿ ಮಹಾನಗರ ಪಾಲಿಕೆಯ ಅಧಿಕಾರಿಗಳು 'ಆಸ್ತಿ ತೆರಿಗೆ ಸಂಗ್ರಹ ಮತ್ತು ಮೂಲಭೂತ ಸೌಕರ್ಯಗಳು, ಪ್ಲಾಸ್ಟಿಕ್ ಬಳಕೆ ಇನ್ನಿತರೇ ಸಮಸ್ಯೆಗಳು' ವಿಷಯದ ಕುರಿತು ನಡೆದ ಕೈಗಾರಿಕೋದ್ಯಮಿಗಳು - ವ್ಯಾಪಾರಿಗಳ ಸಭೆಯಲ್ಲಿ, ಮೇಯರ್ ಮುಲ್ಲಂಗಿ ನಂದೀಶ್ ಸನ್ಮಾನ ಸ್ವೀಕರಿಸಿದರು.

ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಯಶವಂತರಾಜ್ ನಾಗಿರೆಡ್ಡಿ ಅವರು ಸ್ವಾಗತಿಸಿ, ರಸ್ತೆಗಳು, ಬೀದಿ ದೀಪಗಳ ನಿರ್ವಹಣೆ ಸೇರಿ ಅನೇಕ ಮೂಲಭೂತ ಸಮಸ್ಯೆಗಳಿವೆ. ಸಮಸ್ಯೆಗಳನ್ನು ಪರಿಹರಿಸಿ ಕೈಗಾರಿಕೋದ್ಯಮಿಗಳು ಮತ್ತು ವ್ಯಾಪಾರಿಗಳಿಗೆ ಅನುಕೂಲ ಮಾಡಿಕೊಡಬೇಕು ಎಂದು ಮನವಿ ಮಾಡಿದರು.

ಜಂಟಿ ಕಾರ್ಯದರ್ಶಿ ಡಾ. ಮರ್ಚೇಡ್ ಮಲ್ಲಿಕಾರ್ಜುನಗೌಡ, ನಿಕಟಪೂರ್ವ ಅಧ್ಯಕ್ಷ ಬಿ. ಮಹಾರುದ್ರಗೌಡ, ಕಾರ್ಯಕಾರಿ ಸಮಿತಿ ಸದಸ್ಯರುಗಳಾದ ವೇಣುಗೋಪಾಲ ಗುಪ್ತಾ, ಬಿ.ವಿ. ಬದ್ರಿನಾರಾಯಣ, ಜೆ. ರಾಜೇಶ್, ವಿಶೇಷ ಆಹ್ವಾನಿತರಾದ ವಾಸುದೇವ ಜಿ. ಸಹಚಾರ್ ಅವರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಇರುವ ಮೂಲಭೂತ ಸೌಲಭ್ಯಗಳಾದ ಬೀದಿ ದೀಪಗಳು, ಡ್ರೈನೇಜ್, ರಸ್ತೆಗಳು, ಕುಡಿಯುವ ನೀರು, ಬೀದಿನಾಯಿಗಳ ಹಾವಳಿ, ಬಿಡಾಡಿದನಗಳು ಎಲ್ಲಾ ಪ್ರಮುಖ ರಸ್ತೆಗಳಲ್ಲಿ ಸಂಚಾರ, ಕೋತಿಗಳ ಹಾವಳಿ, ಧೂಳು ಇನ್ನಿತರೆಗಳ ಕುರಿತು ವಿಷಯ ಪ್ರಸ್ತಾಪ ಮಾಡಿ, ಪಾಲಿಕೆ ತ್ವರಿತವಾಗಿ ಸಮಸ್ಯೆಗಳ ಪರಿಹಾರಕ್ಕೆ ಕ್ರಮಕೈಗೊಳ್ಳಬೇಕು ಎಂದು ಮನವಿ ಮಾಡಿದರು.

ಬಳ್ಳಾರಿ ಮಹಾನಗರ ಪಾಲಿಕೆಯ ಉಪ ಆಯುಕ್ತ ಅಬ್ದುಲ್ ರೆಹಮಾನ್ ಅವರು, ಸ್ವಯಂ ಘೋಷಿತ ಆಸ್ತಿ ತೆರಿಗೆಯನ್ನು ಆನ್‌ಲೈನ್ ನಲ್ಲಿ ಪಾವತಿಸುವ ಕುರಿತು ವಿವರಣೆ ನೀಡಿದರು. ಜಂಟಿ ಕಾರ್ಯದರ್ಶಿ ಡಾ. ಮರ್ಚೇಡ್ ಮಲ್ಲಿಕಾರ್ಜುನಗೌಡ ಅವರು ವಂದನಾರ್ಪಣೆ ಸಲ್ಲಿಸಿದರು.

ಮಹಾನಗರ ಪಾಲಿಕೆ ಸದಸ್ಯ ರಾಮಾಂಜಿನೇಯಲು, ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಉಪಾಧ್ಯಕ್ಷ ಎಸ್.ದೊಡ್ಡನಗೌಡ, ಕಾರ್ಯಕಾರಿ ಸಮಿತಿ ಸದಸ್ಯರುಗಳಾದ ಟಿ. ಶ್ರೀನಿವಾಸರಾವ್, ನೇಕಾರ ನಾಗರಾಜ್, ವೇಣುಗೋಪಾಲ ಗುಪ್ತಾ ಕಾರ್ಯಕಾರಿ ಸಮಿತಿ ಸದಸ್ಯರು, ವಿಶೇಷ ಆಹ್ವಾನಿತರಾದ ಹ್ಯಾಲೀಸ್ ಬ್ಲೂನ್ ಕೆ.ಎಂ. ಶಿವಮೂರ್ತಿ ಮತ್ತು ಕೆ.ಎಂ. ಭೋಗೇಶ್ ಹಾಗೂ ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.

> **ಕೈಗಾರಿಕಾ ವಲಯದಲ್ಲಿ ಮೂಲಭೂತ ಸೌಲಭ್ಯಗಳ ಸಮಸ್ಯೆಗಳಿವೆ. ರಸ್ತೆ, ಬೀದಿ ದೀಪ, ಕುಡಿಯುವ ನೀರಿನ ಪೂರೈಕೆ ಸೇರಿ ಅನೇಕ ಸಮಸ್ಯೆಗಳು ಮಹಾನಗರ ಪಾಲಿಕೆಯ ಗಮನಕ್ಕೆ ಬಂದಿವೆ. ಕೆಲ ಸಮಸ್ಯೆಗಳನ್ನು ಸ್ಥಳದಲ್ಲಿಯೇ ಪರಿಹರಿಸಬಹುದಾಗಿದೆ. ಕಾರಣ ಕೈಗಾರಿಕಾ ವಲಯದಲ್ಲಿಯೇ ಸಭೆ ನಡೆಸಲಾಗುತ್ತದೆ.**
> -ಮುಲ್ಲಂಗಿ ನಂದೀಶ್, ಮೇಯರ್

ಒನಕೆ ಓಬವ್ವ ಜಯಂತಿ ಸಿದ್ಧತೆಗೆ ಸಭೆ

ಹೊಸಪೇಟೆ: ವೀರವನಿತೆ ಒನಕೆ ಓಬವ್ವ ಧೀರ ಮಹಿಳೆಯಾಗಿ ಮಾದರಿಯಾಗಿದ್ದು, ನ.11 ರಂದು ಓಬವ್ವ ಜಯಂತಿ ಅರ್ಥಪೂರ್ಣವಾಗಿ ಆಚರಣೆ ಮಾಡಬೇಕು ಎಂದು ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣಪ್ಪ ಹೇಳಿದರು.

ವೀರವನಿತೆ ಒನಕೆ ಓಬವ್ವ ಜಯಂತಿ ಪೂರ್ವ ಭಾವಿ ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣಪ್ಪ ಮಾತನಾಡಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ವೀರವನಿತೆ ಒನಕೆ ಓಬವ್ವ ಜಯಂತಿ ಪೂರ್ವ ಭಾವಿ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು. ಓಬವ್ವ ದಿಟ್ಟ ಮಹಿಳೆ, ಅವರನ್ನು ಒಂದು ಸಮುದಾಯಕ್ಕೆ ಸೀಮಿತ ಮಾಡಬಾರದು. ಅವರ ಗುಣಗಳನ್ನು ಮಕ್ಕಳಲ್ಲಿ ತುಂಬುವಲ್ಲಿ ಜಯಂತಿ ಆಚರಣೆ ದಾರಿಯಾಗಬೇಕು ಎಂದರು.

ನ.11 ರಂದು ನಡೆಯುವ ವೇದಿಕೆ ಕಾರ್ಯಕ್ರಮಕ್ಕೆ ಸೂಕ್ತ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಇಲಾಖೆಯಿಂದ ಕೈಗೊಳ್ಳಬೇಕು. ಶಿಷ್ಟಾಚಾರದನ್ವಯ ಜಯಂತಿಯ ಆಮಂತ್ರಣ ಪತ್ರಿಕೆ ಮುದ್ರಿಸಿ, ಆಮಂತ್ರಣ ಪತ್ರಿಕೆಗಳನ್ನು ಗಣ್ಯ ಮಾನ್ಯರಿಗೆ ವಿತರಿಸಬೇಕು ಎಂದು ತಿಳಿಸಿದರು.

ವೇದಿಕೆ ಕಾರ್ಯಕ್ರಮದ ನಂತರ ಕಲಾ ತಂಡಗಳನ್ನು ಒಳಗೊಂಡ ಮೆರವಣಿಗೆಯು ನಗರದ ಚಲವಾದಿ ಓಣಿಯಿಂದ ರಾಮ ಟಾಕೀಸ್, ಉದ್ಯೋಗ್ ಪೆಟ್ರೋಲ್ ಬಂಕ್, ನಗರಸಭೆ ಕಚೇರಿ, ಟೌನ್ ಪೊಲೀಸ್ ಠಾಣೆ ಪುನೀತ್ ಸರ್ಕಲ್ ಮತ್ತು ಅಂಬೇಡ್ಕರ್ ವೃತ್ತದ ವರೆಗೆ ಮೆರವಣಿಗೆ ಸಾಗುವುದು ಎಂದು ಹೇಳಿದರು.

ಈ ಭಾರಿ ವೇದಿಕೆಯನ್ನು ದೊಡ್ಡದಾಗಿ ಹಾಕಬೇಕು. ರಾಮ ಟಾಕೀಸ್ ಹತ್ತಿರ ವಾಹನ ಸಂಚಾರವನ್ನು ಕಾರ್ಯಕ್ರಮ ಮುಗಿಯುವವರೆಗೆ ನಿರ್ಬಂಧಿಸಬೇಕು ಎಂದು ಚಲವಾದಿ ಸಮುದಾಯದ ಮುಖಂಡರು ಅಪರ ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿಕೊಂಡರು.

ಸಭೆಯಲ್ಲಿ ನಗರಸಭೆಯ ಪೌರಾಯುಕ್ತರಾದ ಚಂದ್ರಪ್ಪ, ಜಿಲ್ಲಾ ಆರೋಗ್ಯ ಶಿಕ್ಷಕಣಾಧಿಕಾರಿಗಳಾದ ಡಾ.ಎಂ.ಪಿ.ದೊಡ್ಡಮನಿ ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು ಮತ್ತು ಚಲವಾದಿ ಸುಮುದಾಯದ ಮುಖಂಡರು ಉಪಸ್ಥಿತರಿದ್ದರು.

> **ಸಮುದಾಯದ ಸಹಕಾರವಿದ್ದರೆ ವೇದಿಕೆಯನ್ನು ದೊಡ್ಡದಾಗಿ ಹಾಕಲಾಗುವುದು, ಸಾರ್ವಜನಿಕರಿಗೆ ಸಂಚಾರಕ್ಕೆ ತೊಂದರೆಯಾಗದಂತೆ ಸೂಕ್ತ ವ್ಯವಸ್ಥೆ ಮಾಡಲಾಗುವುದು ಎಂದು ಸಮುದಾಯದ ಮುಖಂಡರಿಗೆ ತಿಳಿದರು.**
> -ಇ.ಬಾಲಕೃಷ್ಣಪ್ಪ, ಅಪರ ಜಿಲ್ಲಾಧಿಕಾರಿಗಳು

ನೀರಗಂಟಿಗಳಿಗೆ ಬಾಕಿ ವೇತನ: ಮುಷ್ಕರ ಅಂತ್ಯ

ಹೂವಿನಹಡಗಲಿ: ಏತ ನೀರಾವರಿ ಯೋಜನೆ ನಿರ್ವಾಹಕರು ಮತ್ತು ನೀರುಗಂಟಿಗಳಿಗೆ ಬಾಕಿ ವೇತನ ಪಾವತಿಗೆ ಸಣ್ಣ ನೀರಾವರಿ ಇಲಾಖೆ ಕಾರ್ಯನಿರ್ವಾಹಕ ಎಂಜಿನಿಯರ್ ನವೀನ್ ಕುಮಾರ್ ಭರವಸೆ ನೀಡಿದ ಹಿನ್ನೆಲೆಯಲ್ಲಿ ನೀರುಗಂಟಿಗಳು ಮುಷ್ಕರ ಮುಕ್ತಾಯಗೊಳಿಸಿದರು.

ಏತ ನೀರಾವರಿ ಯೋಜನೆ ಕೆಲಸ ಬಹಿಷ್ಕರಿಸಿ ಕಳೆದ ಮೂರು ದಿನದಿಂದ ನಿರ್ವಾಹಕರು, ನೀರುಗಂಟಿಗಳು ಇಲ್ಲಿನ ಸಣ್ಣ ನೀರಾವರಿ ಉಪ ವಿಭಾಗ ಕಚೇರಿ ಬಳಿ ಮುಷ್ಕರ ಆರಂಭಿಸಿದ್ದರು. ಸ್ಥಳಕ್ಕೆ ಭೇಟಿ ನೀಡಿ ಮನವಿ ಸ್ವೀಕರಿಸಿದ ಇಲಾಖೆ ಕಾರ್ಯನಿರ್ವಾಹಕ ಎಂಜಿನಿಯರ್ ನವೀನ್ ಕುಮಾರ್, ಸದ್ಯ ಅನುದಾನ ಬಿಡುಗಡೆಯ ಹಂತದಲ್ಲಿದ್ದು, 15 ದಿನದೊಳಗೆ ಕಳೆದ ವರ್ಷದ ಬಾಕಿ ವೇತನ ಗುತ್ತಿಗೆದಾರರಿಂದ ಕೊಡಿಸಲು ಕ್ರಮ ಕೈಗೊಳ್ಳುತ್ತೇವೆ ಎಂದು ಭರವಸೆ ನೀಡಿದರು.

ಅಧಿಕಾರಿಯ ಭರವಸೆಯ ಮೇರೆಗೆ ನೀರುಗಂಟಿಗಳು ಮುಷ್ಕರ ಮುಕ್ತಾಯಗೊಳಿಸಿದರು. ಎಇಇ ಜಗದೀಶ ಇದ್ದರು. ಕಳೆದ ವರ್ಷ ನಿರ್ವಹಣೆ ಮಾಡಿರುವ ಗುತ್ತಿಗೆದಾರರಿಗೆ ಅನುದಾನ ಬಿಡುಗಡೆಯಾಗಿಲ್ಲ, ಈ ವರ್ಷ ಇನ್ನೂ ಟೆಂಡರ್ ಪ್ರಕ್ರಿಯೆ ನಡೆದಿಲ್ಲ, ಹೀಗಾಗಿ ವೇತನ ಬಿಡುಗಡೆ ವಿಳಂಬವಾಗಿದೆ ಎಂದು ನವೀನ್ ಕುಮಾರ್ ತಿಳಿಸಿದರು.

ವಿವಿಧ ಸಂಘಟನೆಗಳ ಮುಖಂಡರಾದ ಬಸವರಾಜಪ್ಪ, ಸುರೇಶ ಹಲಗಿ, ಜಂಗ್ಲಿಸಾಬ್, ನೀರುಗಂಟಿಗಳ ಸಂಘದ ಅಧ್ಯಕ್ಷ ಹೆಚ್.ಎಂ. ಕೊಟ್ರಯ್ಯ, ಕಾರ್ಯದರ್ಶಿ ಷಣ್ಮುಖಪ್ಪ, ಪದಾಧಿಕಾರಿಗಳಾದ ಎಚ್. ರುದ್ರಪ್ಪ, ಕೆ. ಭೀಮಪ್ಪ, ಟಿ.ಹನುಮಂತ, ಕಾಶೀಂಸಾಬ್, ಕೋಟೆಪ್ಪ, ಪಾಂಡುನಾಯ್ಕ, ಉಮೇಶನಾಯ್ಕ, ಹೇಮರಡ್ಡಿ ಇದ್ದರು.

ಹೂವಿನಹಡಗಲಿಯಲ್ಲಿ ಮುಷ್ಕರನಿರತ ಏತ ನೀರಾವರಿ ಯೋಜನೆ ನಿರ್ವಾಹಕರು ಎಂಜಿನಿಯರ್ ನವೀನ್ ಕುಮಾರ್‌ಗೆ ಮನವಿ ಸಲ್ಲಿಸಿದರು.

> **ಯೋಜನೆಗಳಲ್ಲಿ 12 ತಿಂಗಳು ಕೆಲಸ ನೀಡಲು ಅವಕಾಶವಿಲ್ಲ. ನಿರ್ವಾಹಕರಿಗೆ 9 ತಿಂಗಳಿಗೆ ಮಾತ್ರ ಕೆಲಸ ನೀಡಿ ವೇತನ ಪಾವತಿಸುತ್ತೇವೆ. ಕಾರ್ಮಿಕರ ನಿಯೋಜನೆಗಾಗಿ ಈ ಬಾರಿ ಪ್ರತ್ಯೇಕ ಟೆಂಡರ್ ಕರೆಯಲು ಸಿದ್ಧತೆ ಮಾಡಿಕೊಂಡಿದ್ದೇವೆ. ಇನ್ಮುಂದೆ ಸಕಾಲದಲ್ಲಿ ವೇತನ ಬಿಡುಗಡೆಯಾಗಲಿದೆ ಉಳಿದ ಬೇಡಿಕೆ ಹಂತ ಹಂತವಾಗಿ ಈಡೇರಿಸಲು ಕ್ರಮ ಕೈಗೊಳ್ಳುತ್ತೇವೆ.**
> -ನವೀನ್ ಕುಮಾರ್, ಎಂಜಿನಿಯರ್

ಅಮೃತ್ 2.0 ಯೋಜನೆಗೆ ಕ್ಷಿಪ್ರ ವೇಗ: ಡಿಸಿ ಸೂಚನೆ

ಹೊಸಪೇಟೆ: ಅಮೃತ್ 2.0 ಯೋಜನೆಯಡಿಯಲ್ಲಿ ಮರಿಯಮ್ಮನಹಳ್ಳಿ, ಕಮಲಾಪುರ, ಸೇರಿ ಹಗರಿಬೊಮ್ಮನಹಳ್ಳಿ, ಕೂಡ್ಲಿಗಿ, ಕೊಟ್ಟೂರು, ಹೂವಿನಹಡಗಲಿ ತಾಲೂಕುಗಳಿಗೆ ಕುಡಿಯುವ ನೀರು ಪೂರೈಕೆಗೆ ಬಾಕಿ ಇರುವ ಕಾಮಗಾರಿಯನ್ನು ತಿಂಗಳೊಳಗೆ ಪೂರ್ಣಗೊಳಿಸುವಂತೆ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಸೂಚಿಸಿದರು.

ನಗರದ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ನಡೆದ ಅಮೃತ್ 2.0 ಯೋಜನೆಯ ಜಿಲ್ಲಾ ಮಟ್ಟದ ಅಧಿಕಾರಿಗಳ ಮೇಲ್ವಿಚಾರಣೆ ಸಭೆಯ ಅಧ್ಯಕ್ಷತೆ ವಹಿಸಿ ಶುಕ್ರವಾರ ಮಾತನಾಡಿದರು. ಅಮೃತ್ ಯೋಜನೆಗೆ ಸಂಬಂಧಿಸಿದಂತೆ ತಾಂತ್ರಿಕ ಸಮಸ್ಯೆಗಳು, ರಸ್ತೆ ಬದಿ ಪೈಪ್‌ಲೈನ್ ವ್ಯವಸ್ಥೆ, ಜಾಗದ ಕೊರತೆಗಳಿದ್ದರೇ ಶೀಘ್ರವೇ ಇತ್ಯರ್ಥಗೊಳಿಸಿ ಜನರಿಗೆ ಕುಡಿಯುವ ನೀರು ಪೂರೈಕೆಗೆ ಕ್ರಮವಹಿಸಬೇಕು ಎಂದರು.

ನೈರ್ಮಲ್ಯ, ಕುಡಿಯುವ ನೀರು ಸೇರಿದಂತೆ ಚರಂಡಿ ವ್ಯವಸ್ಥೆಗೆ ಮೊದಲ ಆದ್ಯತೆ ನೀಡಬೇಕು. ಮರಿಯಮ್ಮನಹಳ್ಳಿಯಲ್ಲಿ ಮುಂಬರುವ ರಥೋತ್ಸವಕ್ಕೆ ಹೆಚ್ಚಿನ ಜನಸಂಖ್ಯೆ ಸೇರಲಿದ್ದಾರೆ. ಅಷ್ಟರೊಳಗೆ ಕುಡಿಯುವ ನೀರಿನ ಯೋಜನೆ ಪೂರ್ಣಗೊಳಿಸಲು ಅಧಿಕಾರಿಗಳು ಕಾರ್ಯನ್ಮೋಖರಾಗಬೇಕು. ವಿವಿಧ ಇಲಾಖೆಗಳ ಅಧಿಕಾರಿಗಳು ಸಮನ್ವಯತೆಯಿಂದ ಕಾರ್ಯ ನಿರ್ವಹಿಸಬೇಕು. ಕೆಲಸದಲ್ಲಿ ನಿರಾಸಕ್ತಿ ವಹಿಸಿದರೇ ಶಿಸ್ತು ಕ್ರಮ ಎದುರಿಸಬೇಕಾಗುತ್ತದೆ.

ಭೂತ ಸಮಸ್ಯೆಗಳಿಗೆ ಅಧಿಕಾರಿಗಳು ನಿರಾಸಕ್ತಿ ವಹಿಸಿದರೇ ಶೋಕಾಸ್ ನೊಟೀಸ್ ನೀಡಿ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಹೊಸಪೇಟೆ ಸಹಾಯಕ ಆಯುಕ್ತರಾದ ಪಿ. ವಿವೇಕಾನಂದ, ಹರಪನಹಳ್ಳಿ ಸಹಾಯಕ ಆಯುಕ್ತರಾದ ಚಿದಾನಂದ ಗುರುಸ್ವಾಮಿ, ನಗರಸಭೆ ಪೌರಾಯುಕ್ತ ಚಂದ್ರಪ್ಪ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ಮನೋಹರ್, ನಗರನೀರು ಸರಬರಾಜು ಇಲಾಖೆ ಎಇಇ ಮಲ್ಲಿಕಾರ್ಜುನ ಪಾಟೀಲ್ ಸೇರಿದಂತೆ ಯೋಜನಾ ನಿರ್ದೇಶಕರು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಪುರಸಭೆಯ ಮುಖ್ಯಾಧಿಕಾರಿಗಳು, ಜೆಸ್ಕಾಂ ಇಲಾಖೆಯ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಇಂಜಿನಿಯರ್‌ಗಳು ಸಭೆಯಲ್ಲಿ ಉಪಸ್ಥಿತರಿದ್ದರು.

> **ನಗರಸಭೆ, ಪುರಸಭೆ ವ್ಯಾಪ್ತಿಯಲ್ಲಿ ನಿಗದಿತ ಸ್ಥಳದಲ್ಲಿ ಶೌಚಾಲಯ ನಿರ್ಮಾಣಕ್ಕೆ ಅನುದಾನ ನೀಡಿದ್ದರೂ, ನಿರ್ಮಾಣ ಕಾಮಗಾರಿಗಳಿಗೆ ಅಧಿಕಾರಿಗಳು ವಿಳಂಬ ಮಾಡುತ್ತಿರುವುದು ಸರಿಯಲ್ಲ. ಇನ್ನು ಹದಿನೈದು ದಿನದೊಳಗೆ ಶೌಚಾಲಯಗಳ ಕಾಮಗಾರಿ ಪೂರ್ಣಗೊಳಿಸಿ ವರದಿ ಸಲ್ಲಿಸಬೇಕು.**
> -ಎಂ.ಎಸ್.ದಿವಾಕರ್, ಜಿಲ್ಲಾಧಿಕಾರಿ

ಶಿಕ್ಷಣ ಪ್ರೋತ್ಸಾಹ ಧನ ಹೆಚ್ಚಳ

ಬಳ್ಳಾರಿ: ಐಐಟಿ, ಐಐಎಂ, ಐಐಎಸ್‌ಸಿ, ಎನ್‌ಐಟಿ ಯಂತಹ ರಾಷ್ಟ್ರೀಯ ಸಂಸ್ಥೆಗಳಲ್ಲಿ ಓದುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳ ಪ್ರೋತ್ಸಾಹ ಧನವನ್ನು 1 ರಿಂದ 2 ಲಕ್ಷಕ್ಕೆ ಹೆಚ್ಚಳ ಮಾಡಿ ಸರಕಾರವು ಆದೇಶ ಹೊರಡಿಸಿದ್ದು, ಇದು ಪರಿಶಿಷ್ಟ ಸಮುದಾಯದ ವಿದ್ಯಾರ್ಥಿಗಳ ಹೆಚ್ಚಿನ ಶೈಕ್ಷಣಿಕ ಸಾಧನೆಗೆ ಕಾರಣವಾಗಲಿದೆ ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ ತಿಳಿಸಿದ್ದಾರೆ.

ಇನ್ನು ಪಿಯುಸಿ ಪರೀಕ್ಷೆಯಲ್ಲಿ 95 ಕ್ಕೂ ಹೆಚ್ಚಿನ ಅಂಕಗಳನ್ನು ಪಡೆದು, ನೀಟ್ ಪ್ರವೇಶ ಪರೀಕ್ಷೆಯ ಮೂಲಕ ಸರ್ಕಾರಿ ಕೋಟಾದಡಿ ಪ್ರವೇಶ ದೊರಕದೇ ಮ್ಯಾನೇಜ್‌ಮೆಂಟ್ ಕೋಟಾದಡಿ ಎಂಬಿಬಿಎಸ್ ಕೋರ್ಸ್‌ಗೆ ಸೀಟು ಪಡೆದುಕೊಂಡ ಪರಿಶಿಷ್ಟ ಜಾತಿಯ ಮಕ್ಕಳಿಗೆ 25 ಲಕ್ಷ ರು.ಗಳ ಶುಲ್ಕ ಧನವನ್ನು ಒದಗಿಸಲು ಸರಕಾರ ತೀರ್ಮಾನಿಸಿದೆ.

ಎಂಬಿಬಿಎಸ್ ಪದವಿಯನ್ನು ಪಡೆಯುತ್ತಿರುವ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳು ಮೊದಲ ವರ್ಷ ಶೇ.60 ಗೂ ಹೆಚ್ಚಿನ ಅಂಕ ಪಡೆದು ಉತ್ತೀರ್ಣರಾದರೆ ಅವರಿಗೆ ಮತ್ತೆ 25 ಲಕ್ಷ ರು.ಗಳ ಪ್ರೋತ್ಸಾಹ ಧನ ನೀಡಲಾಗುವುದು.

ಈಗಾಗಲೇ ಪ್ರಬುದ್ಧ ಯೋಜನೆಯಡಿ ವಿದೇಶಿ ವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸಿರುವ ನಮ್ಮ ಸರ್ಕಾರವು ಇದೀಗ ಮಕ್ಕಳ ಉತ್ತಮ ಶಿಕ್ಷಣವನ್ನು ಗಮನದಲ್ಲಿಟುಕೊಂಡು ಮುಖ್ಯ ಘೋಷಣೆಯನ್ನು ಮಾಡಿದೆ.

ಬಾಬಾ ಸಾಹೇಬರ ಆಶಯದಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಶಿಕ್ಷಣ ಪಡೆಯುವ ನಿಟ್ಟಿನಲ್ಲಿ ಹೆಚ್ಚು ಆಸಕ್ತಿ ಹೊಂದಿ, ಶ್ರಮ ಹಾಕಿ ಓದಬೇಕೆಂದು ಸಚಿವ ಡಾ.ಎಚ್. ಸಿ. ಮಹದೇವಪ್ಪ ಆಶಯ ವ್ಯಕ್ತಪಡಿಸಿದ್ದಾರೆ.

ಒನಕೆ ಓಬವ್ವ ಜಯಂತಿ ಆಚರಣೆ ನ.11 ರಂದು

ಹೊಸಪೇಟೆ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಹೊಸಪೇಟೆ ನಗರಸಭೆ ಇವರ ಸಂಯುಕ್ತಾಶ್ರಯದಲ್ಲಿ ವೀರವನಿತೆ ಒನಕೆ ಓಬವ್ವ ಜಯಂತ್ಯುತ್ಸವ ಕಾರ್ಯಕ್ರಮವನ್ನು ನ.11 ರಂದು ಬೆಳಿಗ್ಗೆ 10 ಗಂಟೆಗೆ ಹೊಸಪೇಟೆಯ ಛಲುವಾದಿಕೇರಿಯಲ್ಲಿ ಹಮ್ಮಿಕೊಳ್ಳಲಾಗಿದೆ. ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಸಚಿವರು ಹಾಗೂ ವಿಜಯನಗರ ಮತ್ತು ಬಳ್ಳಾರಿ ಜಿಲ್ಲೆಗಳ ಉಸ್ತುವಾರಿ ಸಚಿವರಾದ ಬಿ.ಜೆಡ್. ಜಮೀರ್ ಅಹ್ಮದ್ ಖಾನ್ ಅವರು ಕಾರ್ಯಕ್ರಮ ಉದ್ಘಾಟಿಸುವರು. ವಿಜಯನಗರ ವಿಧಾನಸಭಾ ಕ್ಷೇತ್ರದ ಶಾಸಕರಾದ ಹೆಚ್.ಆರ್. ಗವಿಯಪ್ಪ ಅವರು ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಸಂಸದ ಈ.ತುಕಾರಾಂ ಹಾಗೂ ಡಾ.ಪ್ರಭಾ ಮಲ್ಲಿಕಾರ್ಜುನ, ಶಾಸಕ ಕೆ.ನೇಮಿರಾಜ ನಾಯ್ಕ, ಡಾ.ಎನ್.ಟಿ.ಶ್ರೀನಿವಾಸ್, ಎಲ್.ಕೃಷ್ಣ ನಾಯಕ, ಎಂ.ಪಿ.ಲತಾ ಮಲ್ಲಿಕಾ ರ್ಜುನ ಹಾಗೂ ಬಿ.ದೇವೇಂ ದ್ರಪ್ಪ, ವಿಧಾನ ಪರಿಷತ್ ಸದಸ್ಯ ಡಾ.ಚಂದ್ರಶೇಖರ ಬಿ.ಪಾಟೀಲ್, ಶಶೀಲ್ ಜಿ. ನಮೋಶಿ ಹಾಗೂ ವೈ.ಎಂ. ಸತೀಶ್, ಹೊಸಪೇಟೆ ನಗರಸಭೆ ಅಧ್ಯಕ್ಷ ರೂಪೇಶ್ ಕುಮಾರ ಎನ್., ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿ ಕಾರದ ಅಧ್ಯಕ್ಷ ಎಚ್.ಎನ್.ಎಫ್ ಇಮಾಮ್ ನಿಯಾಜಿ ಅವರು ಹಾಗೂ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ನೋಂಗ್ಜಾಯ್ ಮೋಹಮ್ಮದ್ ಅಲಿ ಅಕ್ರಮ್ ಷಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿ ಬಾಬು ಬಿ.ಎಲ್ ಉಪಸ್ಥಿತ ರಿರುವರು.

ಆಧಾರ್ ಕಾರ್ಡ್ ಮುಖ್ಯ ಗುರುತಿನ ದಾಖಲೆ

ಹೊಸಪೇಟೆ: ದೇಶದ ನಾಗರಿಕರಿಗೆ ಈಗಿನ ದಿನಗಳಲ್ಲಿ ಆಧಾರ್ ಕಾರ್ಡ್ ಗುರುತಿಸುವಿಕೆಯ ಒಂದು ಅವಿಭಾಜ್ಯ ಅಂಗವಾಗಿದೆ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಅವರು ಹೇಳಿದರು.

ವಿಜಯನಗರ ಜಿಲ್ಲಾಡಳಿತ, ಇ-ಆಡಳಿತ ಕೇಂದ್ರ ಹಾಗೂ ಆಧಾರ್ ವಿಶಿಷ್ಟ ಗುರುತಿನ ಪ್ರಾಧಿಕಾರ, ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ ಜಿಲ್ಲಾ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಆಧಾರ್ ಪುನಶ್ಚೇತನ ತರಬೇರಿ ಶಿಬಿರ ಉದ್ಘಾಟಿಸಿ ಮಾತನಾಡಿದರು.

ಆಧಾರ್ ಕಾರ್ಡ್ ಬಂದ ಮೊದಲ ದಿನಗಳಲ್ಲಿ ಅದರ ಬಗ್ಗೆ ಸಾರ್ವಜನಿಕರಲ್ಲಿ ಕೆಲವು ಗೊಂದಲಗಳು ಮತ್ತು ಅನೇಕ ಚರ್ಚೆಗಳಿಗೆ ಗ್ರಾಸವಾಗಿತ್ತು. ಆದರೆ, ಈಗ ಭಾರತದ ಪ್ರತಿಯೊಬ್ಬ ನಾಗರಿಕರಿಗೆ ಆಧಾರ್ ಒಂದು ವಿಶಿಷ್ಟಿ ಗುರುತಿಸನ ದಾಖಲೆಯಾಗಿ ಬೆಳೆದಿದೆ. ಯಾವುದೇ ಒಂದು ಸಿಮ್ ಕಾರ್ಡ್ ಪಡೆದುಕೊಳ್ಳಬೇಕಾದರೆ ಆಧಾರ್ ಕರ್ಡ್ ಬೇಕಾಗುತ್ತದೆ. ಸಿಮ್ ಕಾರ್ಡ್ಗಳಿಗೆ ಆಧಾರ್ ಜೋಡನೆ ಮಾಡಿರುವುದರಿಂದ ಸಾಕುಷ್ಟು ಅಪರಾಧಗಳು ಬೆಳಕಿಗೆ ಬರುತ್ತಿವೆ ಎಂದು ಹೇಳಿದರು. ಸರಕಾರದ ಕಚೇರಿಗಳಿಗೆ ಆಧಾರ್ ಕಾರ್ಡ್ ಮಾಡಿಸಿಕೊಳ್ಳಲು ಮತ್ತು ತಿದ್ದುಪಡಿ ಮಾಡಿಸಿಕೊಳ್ಳಲು ಬರುವವರ ಹತ್ತಿರ ಸಭ್ಯತೆಯಿಂದ ವರ್ತಿಸಿ, ಪ್ರತಿ ಸಣ್ಣ ದಾಖಲೆಗಳಿಗೆ ಅವರನ್ನು ವಾರಗಟ್ಟಲೆ ಅಲೆದಾಡದಂತೆ ಮಾಡಬಾರದು, ನಮ್ಮಿಂದ ಸಾರ್ವಜನಿಕರಿಗೆ ತೊಂದರೆ ಆಗಬಾರದು ಎಂದು ಆಧಾರ್ ನೋಂದಣಿ ಅಪರೇಟರ್‌ಗಳಿಗೆ ಸೂಚಿಸಿದರು.

ಶಿಬಿರದ ವಿಷಯಗಳು: ಆಧಾರ್ ಪುನಶ್ಚೇತನ ತರಬೇತಿ ಶಿಬಿರದಲ್ಲಿ ಆಧಾರ್ ನೋಂದಣಿ ಅಪರೇಟರ್‌ಗಳಿಗೆ ಹೊಸದಾಗಿ ನವೀರಿಸಿದ ತಂತ್ರಾಶದ ಬಗ್ಗೆ, ನವೀಕರಿಸಿದ ತಂತ್ರಾಂಶದಲ್ಲಿ ಹಾಗೂ ಹಿಂದಿನ ತಂತ್ರಾಂಶದಲ್ಲಿ ಇರುವಂತಹ ಗೊಂದಲಗಳ ನಿವಾರಣೆ ಬಗ್ಗೆ, ಹೊಸದಾಗಿ ಆಧಾರ್ ಮಾಡಿಸಲು ಹಾಗೂ ನವೀಕರಿಸಲು ಬೇಕಾಗುವ ದಾಖಲೆಗಳ ಬಗ್ಗೆ, ಆಧಾರ್ ಮಾಡಿಸಲು ಯಾವೆಲ್ಲ ದಾಖಲೆಗಳು ಪೂರಕವಾಗಿ ಬೇಕಾಗುತ್ತವೆ. ಮತ್ತು ಆಧಾರ್ ಕಾರ್ಡ್ ಮಾಡಿಸಲು ಬರುವ ಸಾರ್ವಜನಿಕರ ಹತ್ತಿರ ಯಾವ ರೀತಿಯಲ್ಲಿ ವರ್ತಿಸಬೇಕು ಎಂದು ತಿಳಿಸಿಕೊಡಲಾಯಿತು.

ಜಿಪಂ ಸಿಇಒ ನೋಂಗ್ಜಾಯ್ ಮಹಮ್ಮದ್ ಅಲಿ ಅಕ್ರಂ ಷಾ, ವಿಜಯನಗರ ಹಾಗೂ ಬಳ್ಳಾರಿ ಅಂಚೆ ಕಚೇರಿಯ ಹಿರಿಯ ಅಧೀಕ್ಷರಾದ ಚಿದಾನಂದ ಪಿ.ಡಿಪಿಐ ವೆಂಕಟೇಶ ರಾಮಚಂದ್ರಪ್ಪ, ಹೊಸಪೇಟೆ ತಹಸೀಲ್ದಾರ್ ಮೇಘಾ ಇದ್ದರು.

ಜಿಲ್ಲಾ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಆಧಾರ್ ಪುನಶ್ಚೇತನ ತರಬೇತಿ ಶಿಬಿರವನ್ನು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಉದ್ಘಾಟಿಸಿದರು.

ಸಂಪೂರ್ಣ ಡಿಜಿಟಲ್ ಸಾಕ್ಷರತೆ ತರಬೇತಿ

ಹೊಸಪೇಟೆ: ಶಿಕ್ಷಣ ಫೌಂಡೇಶನ್, ಡೆಲ್ ಕಂಪನಿ, ಕರ್ನಾಟಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿ ರಾಜ್ ಇಲಾಖೆ ಸಹಯೋಗದಲ್ಲಿ ಗ್ರಾ.ಪಂ. ಅರಿವು ಕೇಂದ್ರಗಳ ಮೂಲಕ ಗ್ರಾಮ ಪಂಚಾಯಿತಿಯಲ್ಲಿ ನೋಂದಣಿಯಾದ ಸ್ವ-ಸಹಾಯ ಸಂಘದ ಮಹಿಳೆಯರಿಗೆ ಹಾಗೂ ಸಮುದಾಯದ ಜನರಿಗೆ ಸಂಪೂರ್ಣ ಡಿಜಿಟಲ್ ಸಾಕ್ಷರತೆಯ ತರಬೇತಿ ಕಾರ್ಯಕ್ರಮ ಆರಂಭಿಸಲಾಗಿದೆ. ಈ ತರಬೇತಿ ಕಾರ್ಯಕ್ರಮ ಆರಂಭವಾಗಿದ್ದು, ಮಲಪನಗುಡಿ ಗ್ರಾ.ಪಂ. ವ್ಯಾಪ್ತಿಗೆ ಬರುವ ಪ್ರತಿಯೊಂದು ಸ್ವ-ಸಹಾಯ ಸಂಘದ ಮಹಿಳೆಯರಿಗೆ ಸಂಪೂರ್ಣ ಡಿಜಿಟಲ್ ಸಾಕ್ಷರತಾ ತರಬೇತಿಯನ್ನು ಅರಿವು ಕೇಂದ್ರದ ಮೇಲ್ವಿಚಾರಕರು ಉಮಾದೇವಿ ಅವರು ತರಬೇತಿ ನೀಡುತ್ತಿದ್ದಾರೆ. ಡಿಜಿಟಲ್ ಸಾಕ್ಷರತೆ ತರಬೇತಿಯಲ್ಲಿ ಮಹಿಳೆಯರಿಗೆ ಸ್ಮಾರ್ಟ್ ಫೋನ್ ಬಳಕೆಯ ಭಾಗವಾದ ನಂಬರ್ ಸೇವ್ ಮಾಡುವುದು, ಸಂದೇಶ ರವಾನಿಸುವುದು, ಫೋನ್ ಕರೆ ಹಾಗೂ ವಾಟ್ಸಾಪ್, ಫೇಸ್‌ಬುಕ್, ಇನ್‌ಸ್ಟಾಗ್ರಾಮ್ ನಂತಹ ಸಾಮಾಜಿಕ ಜಾಲತಾಣಗಳ ಬಳಕೆ ಹಾಗೂ ಗೂಗಲ್ ಕ್ರೋಮ್ ನಂತಹ ಸರ್ಚ್ ಇಂಜಿನ್‌ಗಳಲ್ಲಿ ಅಗತ್ಯ ಮಾಹಿತಿ ಹುಡುಕಲು ಮತ್ತು ಮೊಬೈಲ್‌ನಲ್ಲಿ ಪೇರೆಂಟ್ ಐಡಿ ಕ್ರಿಯೇಟ್ ಮಾಡಿ ಮಕ್ಕಳು ಉತ್ತಮ ರೀತಿಯಲ್ಲಿ ಮೊಬೈಲ್ ಬಳಕೆ ಮಾಡುವುದನ್ನು ತಿಳಿಸಿಕೊಡುವುದು. ಬ್ಯಾಂಕಿಂಗ್ ಸೌಲಭ್ಯಗಳ ಕುರಿತು ಮಹಿಳೆಯರಿಗೆ ತರಬೇತಿಯಲ್ಲಿ ನೀಡಲಾಗುವುದು. ಮಹಿಳೆಯರು ಹಾಗೂ ಮಕ್ಕಳ ಹಿತಾಸಕ್ತಿಗಾಗಿ ಕಾಪಾಡಲು ಡಿಜಿಟಲ್ ಸಾಕ್ಷರತೆ ತರಬೇತಿ ಕಾರ್ಯಕ್ರಮ ಸಹಾಯವಾಗುತ್ತದೆ.

ಸಮಾಚಾರ ಸಣ್ಣದಲ್ಲ

ಅಥರ್ವ, ಸಹನಾಗೆ ರಾಜ್ಯ ಟಿಟಿ ಪ್ರಶಸ್ತಿ

ಬೆಂಗಳೂರು: ಅಥರ್ವ ನವರಂಗ ಮತ್ತು ಸಹನಾ ಎಚ್. ಮೂರ್ತಿ ಅವರು ಶುಕ್ರವಾರ ಡಾ.ಎಂ.ಎಸ್. ರಾಮಯ್ಯ ಸ್ಮಾರಕ ಕರ್ನಾಟಕ ರಾಜ್ಯ ರ್‍ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ 19 ವರ್ಷದೊಳಗಿನ ಬಾಲಕರ ಮತ್ತು ಬಾಲಕಿಯರ ಪ್ರಶಸ್ತಿಯನ್ನು ಗೆದ್ದರು. ದೊಡ್ಡಬಳ್ಳಾಪುರದ ಹಿಲ್ ಸ್ಪೋರ್ಟ್ಸ್ ಅಕಾಡೆಮಿಯಲ್ಲಿ ಆರಂಭವಾದ ಟೂರ್ನಿಯ ಮೊದಲ ದಿನ ಬಾಲಕರ ಫೈನಲ್‌ನಲ್ಲಿ ಅಥರ್ವ 4-2ರಿಂದ (8-11, 11-9, 7-11, 11-3, 11-9, 11-7) ಅರ್ಣವ್ ಎನ್. ಅವರನ್ನು ಮಣಿಸಿದರು. ಸೆಮಿಫೈನಲ್‌ನಲ್ಲಿ ಅಥರ್ವ 3-0ಯಿಂದ ವಿಭಾಸ್ ವಿ.ಜಿ. ವಿರುದ್ಧ; ಅರ್ಣವ್ 3-2ರಿಂದ ಬಿ.ಆರ್.ಗೌರವ್ ವಿರುದ್ಧ ಜಯ ಸಾಧಿಸಿದ್ದರು. ಬಾಲಕಿಯರ ಫೈನಲ್‌ನಲ್ಲಿ ಸಹನಾ 4-2ರಿಂದ (11-9, 11-7, 11-4, 11-13, 9-11, 11- 4) ಹಿಮಾಂಶಿ ಚೌಧರಿ ಅವರನ್ನು ಸೋಲಿಸಿ ದರು. ಸೆಮಿಫೈನಲ್‌ನಲ್ಲಿ ಸಹನಾ 3-0 ಯಿಂದ ತೃಪ್ತಿ ಪುರೋಹಿತ್ ಅವರನ್ನು; ಹಿಮಾಂಶಿ 3-1ರಿಂದ ನೀತಿ ಅಗರವಾಲ್ ಅವರನ್ನು ಮಣಿಸಿದರು.

ಕೊರಿಯಾ ಮಾಸ್ಟರ್ಸ್: ಸೆಮಿಫೈನಲ್‌ಗೆ ಕಿರಣ್

ಇಕ್ಸಾನ್ ಸಿಟಿ (ಕೊರಿಯಾ): ಯಶಸ್ಸಿನ ಓಟ ಮುಂದುವರಿಸಿರುವ ಭಾರತದ ಕಿರಣ್ ಜಾರ್ಜ್ ಅವರು ಕೊರಿಯಾ ಮಾಸ್ಟರ್ಸ್ ಬ್ಯಾಡ್ಮಿಂಟನ್

ಟೂರ್ನಿಯಲ್ಲಿ ಐದನೇ ಶ್ರೇಯಾಂಕದ ಜಪಾನ್ ಆಟಗಾರನ ಮೇಲೆ ನೇರ ಸೆಟ್‌ಗಳ ಗೆಲುವು ಪಡೆದು ಸೆಮಿಫೈನಲ್‌ಗೆ ಲಗ್ಗೆಯಿಟ್ಟರು. ವಿಶ್ವ ಕ್ರಮಾಂಕದಲ್ಲಿ 41ನೇ ಸ್ಥಾನದಲ್ಲಿರುವ ಕಿರಣ್, ಶುಕ್ರವಾರ ನಡೆದ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ತಕುಮಾ ಒಬಾಯಾಶಿ ಅವರನ್ನು ಕೇವಲ 39 ನಿಮಿಷಗಳಲ್ಲಿ 21-14, 21-16 ರಿಂದ ಸೋಲಿಸಿದರು. 24 ವರ್ಷ ವಯಸ್ಸಿನ ಕಿರಣ್ ಜಾರ್ಜ್, ಸೂಪರ್ 300 ಮಟ್ಟದ ಈ ಟೂರ್ನಿಯ ಸೆಮಿಫೈನಲ್ನಲ್ಲಿ ಅಗ್ರ ಶ್ರೇಯಾಂಕದ ಕುನ್ಲಾವುತ್ ವಿಟಿಡ್ಸರ್ನ್ ಅವರನ್ನು ಎದುರಿಸಲಿದ್ದಾರೆ. ವಿಶ್ವ ಕ್ರಮಾಂಕದಲ್ಲಿ ಐದನೇ ಸ್ಥಾನದಲ್ಲಿರುವ ಥಾಯ್ಲೆಂಡ್‌ನ ಆಟಗಾರ ಕುನ್ಲಾವುತ್ ಇನ್ನೊಂದು ಕ್ವಾರ್ಟರ್ ಫೈನಲ್‌ನಲ್ಲಿ ಚೀನಾದ ಲಿಯು ಲಿಯಾಂಗ್ ಅವರನ್ನು 21-15, 21-11 ರಿಂದ ಹಿಮ್ಮೆಟ್ಟಿಸಿದರು.

ವಿರಾಮ
ಪ್ರತಿ ಭಾನುವಾರ

ಐಸಿಸಿ ಚಾಂಪಿಯನ್‌ಶಿಪ್ ಟ್ರೋಫಿ ದುಬೈನಲ್ಲಿ ನಡೆಸಲು ಭಾರತ ತಂಡದ ಆಗ್ರಹ

ಪಾಕಿಸ್ತಾನಕ್ಕೆ ಭಾರತ ತಂಡ ಹೋಗಲ್ಲ

ದೆಹಲಿ: 2025ರಲ್ಲಿ ನಡೆಯಲಿರುವ ಐಸಿಸಿ ಚಾಂಪಿಯನ್ ಟ್ರೋಫಿಗಾಗಿ ಭಾರತ ತಂಡವನ್ನು ಪಾಕಿಸ್ತಾನಕ್ಕೆ ಕಳುಹಿಸಲು ಭದ್ರತಾ ದೃಷ್ಟಿಯಿಂದ ಬಿಸಿಸಿಐ ನಿರಾಕರಿಸಿದೆ.

ಇದರ ಬದಲಾಗಿ ಎಲ್ಲ ಪಂದ್ಯಗಳನ್ನು ದುಬೈನಲ್ಲಿ ಆಡಿಸುವ ಪ್ರಸ್ತಾವನೆಯನ್ನು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ಮುಂದಿಟ್ಟಿದೆ. ತನ್ನ ಈ ನಿರ್ಧಾರದಲ್ಲಿ ಯಾವುದೇ ಬದಲಾವಣೆ ಇಲ್ಲ. ಪಂದ್ಯಾವಳಿಯನ್ನು ದುಬೈಗೆ ಸ್ಥಳಾಂತರಿಸುವ ಕುರಿತು ಪತ್ರ ಬರೆಯಲಾಗಿದೆ ಎಂದು ಬಿಸಿಸಿಐ ಮೂಲಗಳು ತಿಳಿಸಿರುವುದಾಗಿ ದಿ ಇಂಡಿಯನ್ ಎಕ್ಸ್‌ಪ್ರೆಸ್ ವರದಿ ಮಾಡಿದೆ.

2025ರ ಫೆ. 19ರಿಂದ ಮಾರ್ಚ್ 5ರವರೆಗೆ ನಡೆಯಲಿರುವ ಐಸಿಸಿ ಚಾಂಪಿಯನ್ಸ್ ಟ್ರೋಫಿಯಲ್ಲಿ ಜಗತ್ತಿನ ಪ್ರಮುಖ 8 ತಂಡಗಳು ಪಾಲ್ಗೊಳ್ಳಲಿವೆ. ಈ ಬಾರಿಯ ಆತಿಥ್ಯವನ್ನು ಪಾಕಿಸ್ತಾನ ವಹಿಸಿಕೊಂಡಿದ್ದು, ಕರಾಚಿ, ಲಾಹೋರ್ ಹಾಗೂ ರಾವಲ್ಪಿಂಡಿಯಲ್ಲಿ ಆಡಿಸುವುದಾಗಿ ಹೇಳಿದೆ.

ಚಾಂಪಿಯನ್ ಟ್ರೋಫಿ ಪಾಕಿಸ್ತಾನದಲ್ಲಿ ನಡೆಯುತ್ತಿರುವ ಕುರಿತು ಸರಕಾರದ ಗಮನಕ್ಕೆ ತರಲಾಗಿತ್ತು. ಸರಕಾರದ ನಿರ್ಧಾರದಂತೆ ಮಂಡಳಿ ನಿರ್ಣಯ ಕೈಗೊಂಡಿದೆ. 2023ರ ಏಷ್ಯಾ ಕಪ್ ಕೂಡಾ ಆರಂಭದಲ್ಲಿ ಪಾಕಿಸ್ತಾನದಲ್ಲೇ ಆಯೋಜನೆಗೊಂಡಿತ್ತು. ಆದರೆ, ನಂತರ ಇದನ್ನು ಬದಲಿಸಿ ಪಾಕಿಸ್ತಾನ ಹಾಗೂ ಶ್ರೀಲಂಕಾದಲ್ಲಿ ಆಡಿಸುವ ನಿರ್ಧಾರ ತೆಗೆದುಕೊಳ್ಳಲಾಗಿತ್ತು. ಇದರಲ್ಲಿ ಭಾರತವು ತನ್ನ ಎಲ್ಲ ಪಂದ್ಯಗಳನ್ನು ದ್ವೀಪರಾಷ್ಟ್ರದಲ್ಲೇ ಆಡಿತ್ತು.

ಇತ್ತೀಚೆಗೆ ಇಸ್ಲಾಮಾಬಾದ್‌ನಲ್ಲಿ ನಡೆದ ಶಾಂಘೈ ಸಹಕಾರ ಸಂಘದ ಸಭೆಯಲ್ಲಿ ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಪಾಲ್ಗೊಂಡಿದ್ದರು. ಭಾರತ ಹಾಗೂ ಪಾಕಿಸ್ತಾನ ಕ್ರಿಕೆಟ್ ತಂಡದ ಸೌಹಾರ್ದತೆ ಕುರಿತು ಪಾಕಿಸ್ತಾನದ ವಿದೇಶಾಂಗ ಸಚಿವ ಮುಹಮ್ಮದ್ ಇಷ್ಕ್ ದಾರ್ ಹಾಗೂ ಆಂತರಿಕ ಸಚಿವ ಹಾಗೂ ಪಿಸಿಬಿ ಅಧ್ಯಕ್ಷ ಮೊಹಸಿನ್ ರಾಝಾ ನಖ್ವಿ ಅವರೊಂದಿಗೆ ಮಾತುಕತೆ ನಡೆಸುವ ನಿರೀಕ್ಷೆ ಇತ್ತು. ಆದರೆ ಅದು ಕೈಗೂಡಲಿಲ್ಲ.

ಈ ನಡುವೆ ಭಾರತ ತಂಡವು ಪಾಕಿಸ್ತಾನದಲ್ಲಿ ತನ್ನ ಪಂದ್ಯ ಮುಗಿಸಿ ಅದೇ ದಿನ ಭಾರತ ತಂಡ ಸ್ವದೇಶಕ್ಕೆ ಮರಳುವ ಪ್ರಸ್ತಾವನೆಯನ್ನೂ ಪಾಕಿಸ್ತಾನ ಕ್ರಿಕೆಟ್ ಮಂಡಳಿ ಮುಂದಿಟ್ಟಿತ್ತು. ಅಂತಿಮವಾಗಿ ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿಯು ಎರಡು ರಾಷ್ಟ್ರಗಳ ಕ್ರಿಕೆಟ್ ಮಂಡಳಿಗಳ ನಡುವಿನ ತಿಕ್ಕಾಟವನ್ನು ಪರಿಹರಿಸಬೇಕಿದೆ ಎಂದು ವರದಿಯಾಗಿದೆ.

2006ರಲ್ಲಿ ಭಾರತ ತಂಡವು ಪಾಕಿಸ್ತಾನಕ್ಕೆ ಪ್ರಯಾಣಿಸಿದ್ದೇ ನೆರೆಯ ರಾಷ್ಟ್ರಕ್ಕೆ ಕೊನೆಯ ಪ್ರವಾಸವಾಗಿದೆ. ಆ ಸಂದರ್ಭದಲ್ಲಿ ರಾಹುಲ್ ದ್ರಾವಿಡ್ ತಂಡದ ನಾಯಕರಾಗಿದ್ದರು. ಐದು ಏಕದಿನ ಪಂದ್ಯಗಳಲ್ಲಿ ಭಾರತವು 4-1ರಿಂದ ಸರಣಿ ತನ್ನದಾಗಿಸಿಕೊಂಡಿತ್ತು.

ಹೈಬ್ರಿಡ್ ಮೋಡ್‌ಗೆ ಪಾಕ್!

ಕರಾಚಿ: ಚಾಂಪಿಯನ್ಸ್ ಟ್ರೋಫಿ ಆಯೋಜನೆಯ ವಿಷಯದಲ್ಲಿ ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ) ತನ್ನ ಬಿಗಿ ನಿಲುವು ಸಡಿಲಿಸಿ ಹೊಂದಾಣಿಕೆ ಮಾಡಿಕೊಳ್ಳಲು ಮುಂದಾಗಿದೆ. ಟೂರ್ನಿಯನ್ನು ಹೈಬ್ರಿಡ್ ಮಾದರಿಯಲ್ಲಿ ಆಯೋಜಿಸಲು ಮುಂದಾಗಲಿದೆ ಎನ್ನಲಾಗುತ್ತಿದೆ.

ಮುಂದಿನ ವರ್ಷ ಪಾಕಿಸ್ತಾನದಲ್ಲಿ ನಡೆಯಲಿರುವ ಚಾಂಪಿಯನ್ಸ್ ಟ್ರೋಫಿ ಟೂರ್ನಿಗೆ ತನ್ನ ತಂಡ ಕಳುಹಿಸಲು ಭಾರತ ಸರಕಾರವು ನಿರಾಸಕ್ತಿ ತೋರಿಸಿತ್ತು. ಭಾರತ ಮತ್ತು ಪಾಕ್ ದೇಶಗಳ ನಡುವಣ ರಾಜತಾಂತ್ರಿಕ ಭಿನ್ನಾಭಿಪ್ರಾಯವಿದೆ. ಅದರಿಂದಾಗಿ ಭಾರತ ತಂಡವು ಪಾಕ್‌ಗೆ ಹೋಗದಿರುವ ಸಾಧ್ಯತೆ ಹೆಚ್ಚಿದೆ. ಆದ್ದರಿಂದ ಭಾರತ ತಂಡವು ಆಡುವ ಪಂದ್ಯಗಳನ್ನು ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ)ನಲ್ಲಿ ಆಯೋಜಿಸುವ ಕುರಿತು ಪಾಕ್ ಸಮ್ಮತಿಸುವ ಸಾಧ್ಯತೆ ದಟ್ಟವಾಗಿದೆ.

2023ರ ಏಷ್ಯಾ ಕಪ್ ಆಯೋಜನೆಯ ಸಂದರ್ಭದಲ್ಲಿಯೂ ಇಂತಹದೇ ಬಿಕ್ಕಟ್ಟು ಎದುರಾಗಿತ್ತು. ಆಗ ಪಿಸಿಬಿಯು ಹೈಬ್ರಿಡ್ ಮಾದರಿಗೆ ಒಪ್ಪಿತ್ತು. ಭಾರತ ತಂಡದ ಪಂದ್ಯಗಳನ್ನು ಶ್ರೀಲಂಕಾದಲ್ಲಿ ಆಯೋಜಿಸಿತ್ತು.

ಮಹಿಳಾ ಐಪಿಎಲ್: 5 ಆಟಗಾರ್ತಿಯರನ್ನು ಉಳಿಸಿಕೊಂಡ ಆರ್‌ಸಿಬಿ

ಆರ್‌ಸಿಬಿಯಲ್ಲೇ ಸ್ಮೃತಿ, ಎಲಿಸ್, ಶ್ರೇಯಾಂಕಾ

ದೆಹಲಿ: ಮಹಿಳಾ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ತನ್ನ ಪ್ರಮುಖ ಆಟಗಾರ್ತಿಯರನ್ನು ಉಳಿಸಿಕೊಂಡಿದೆ. ಅದರಲ್ಲಿ ನಾಯಕಿ ಸ್ಮೃತಿ ಮಂದಾನ, ಎಲಿಸ್ ಪೆರಿ, ಕನ್ನಡತಿ ಶ್ರೇಯಾಂಕಾ ಪಾಟೀಲ ಹಾಗೂ ವಿಕೆಟ್‌ಕೀಪರ್ ರಿಚಾ ಘೋಷ್ ಅವರಿದ್ದಾರೆ. ಒಟ್ಟು ಐವರು ಆಟಗಾರ್ತಿಯರನ್ನು ಬಿಡುಗಡೆ ಮಾಡಿದೆ.

ಆರ್‌ಸಿಬಿಯು ದಿಶಾ ಕಾಸಾತ್, ಇಂದ್ರಾಣಿ ರಾಯ್, ಶ್ರದ್ಧಾ ಪೊಕಾರ್ಕರ್, ಶುಭಾ ಸತೀಶ್ ಮತ್ತು ಸಿಮ್ರಾನ್ ಬಹದ್ದೂರ್ ಅವರು ಬಿಡುಗಡೆಯಾಗಿದ್ದಾರೆ. ಗುರುವಾರ ಆರ್ಸಿ ಬಿಯು ಫ್ರಾಂಚೈಸಿ 6 ವಿದೇಶಿ ಆಟಗಾರ್ತಿ ಯರು ಸೇರಿದಂತೆ 14 ಮಂದಿಯನ್ನು ಉಳಿಸಿಕೊಂಡಿದೆ.

ಆರ್‌ಸಿಬಿಯು ಶೋಭನಾ, ಡೇನಿಯಲ್ ವೈಟ್, ಏಕ್ತಾ ಬಿಸ್ಟ್, ಎಲಿಸ್ ಪೆರಿ, ಜಾರ್ಜಿಯಾ ವರ್ರೆಹ್ಯಾಮ್, ಕನ್ನಿಕಾ ಅಹುಜಾ, ಕೇಟ್ ಕ್ರಾಸ್, ರೇಣುಕಾ ಸಿಂಗ್, ರಿಚಾ ಘೋಷ್, ಎಸ್. ಮೇಘನಾ, ಶ್ರೇಯಾಂಕಾ ಪಾಟೀಲ, ಸ್ಮೃತಿ ಮಂದಾನ, ಸೋಫಿ ಡಿವೈನ್ ಮತ್ತು ಸೋಫಿ ಮಾಲಿನೆ ಅವರನ್ನು ಉಳಿಸಿಕೊಂಡಿದೆ.

ಡೆಲ್ಲಿ ಕ್ಯಾಪಿಟಲ್ಸ್ ತಂಡವೂ ತನ್ನ ಬಳಗದ ಪಟ್ಟಿ ಪ್ರಕಟಿಸಿದೆ. ಶಫಾಲಿ ವರ್ಮಾ, ಜೆಮಿಮಾ ರಾಡ್ರಿಗಸ್, ರಾಧಾ ಯಾದವ್ ಮತ್ತು ಅರುಂಧತಿ ರೆಡ್ಡಿ ಅವರನ್ನು ಉಳಿಸಿಕೊಂಡಿದೆ. ಮುಂಬೈ ಇಂಡಿಯನ್ಸ್ ತಂಡವೂ 14 ಆಟಗಾರ್ತಿಯರನ್ನ ರಿಟೇನ್ ಮಾಡಿಕೊಂಡಿದೆ. ಹರ್ಮನ್ಪ್ರೀತ್ ಕೌರ್, ನಾಟ್ ಶಿವರ್ ಬ್ರಂಟ್ ಉಳಿದ ಆಟಗಾರ್ತಿಯರಾಗಿದ್ದಾರೆ.

ಇಸ್ರೇಲ್ ಅಭಿಮಾನಿಗಳ ಮೇಲೆ ದಾಳಿ

ಆಮ್‌ಸ್ಟರ್‌ಡ್ಯಾಮ್ (ನೆದರ್ಲೆಂಡ್ಸ್): ಯುರೋಪಾ ಲೀಗ್‌ನಲ್ಲಿ ಆಡುವ ಇಸ್ರೇಲ್‌ನ 'ಮಕ್ಕಾಡಿ ಟೆಲ್ ಅವಿವ್' ಫುಟ್ಬಾಲ್ ಕ್ಲಬ್‌ನ ನೂರಾರು ಅಭಿಮಾನಿಗಳ ಮೇಲೆ ಆಮ್‌ಸ್ಟರ್‌ಡ್ಯಾಮ್‌ನಲ್ಲಿ ಗುರುವಾರ ರಾತ್ರಿ ದಾಳಿ ನಡೆದಿದೆ.

ನೆದರ್ಲೆಂಡ್ಸ್‌ನ 'ಎಎಫ್ಸಿ ಅಜಕ್ಸ್' ತಂಡವು ಮಕ್ಕಾಡಿ ಟೆಲ್ ಅವಿವ್ ಎದುರು 5-0 ಗೋಲುಗಳ ಅಂತರದಿಂದ ಜಯಿ ಸಿತ್ತು. ಅದಾದ ನಂತರ, ದಾಳಿ ನಡೆದಿದೆ.

ದಾಳಿಕೋರರು ಪ್ಯಾಲೆಸ್ಟೀನ್ ಧ್ವಜಗಳನ್ನು ಹಿಡಿದಿರುವುದು ಹಾಗೂ 'ಫ್ರೀ ಪ್ಯಾಲೆಸ್ತೀನ್' ಘೋಷಣೆಗಳನ್ನು ಕೂಗುತ್ತಿರುವ ವಿಡಿಯೊಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿವೆ. ಪ್ಯಾಲೆಸ್ತೀನ್ ಪರ ಘೋಷಣೆ ಕೂಗುವಂತೆ ಹಲ್ಲೆಗೊಳಗಾದ ಇಸ್ರೇಲ್ ಅಭಿಮಾನಿಗಳನ್ನು ಒತ್ತಾಯಿಸಿರುವುದೂ ಸೆರೆಯಾಗಿದೆ. ಅಮೆರಿಕದಲ್ಲಿರುವ ಇಸ್ರೇಲ್ ರಾಯಭಾರ ಕಚೇರಿಯು ಈ ವಿಡಿಯೊವನ್ನು ಹಂಚಿಕೊಂಡಿದೆ. ಇಸ್ರೇಲ್ ವಿದೇಶಾಂಗ ಸಚಿವ ಇಸ್ರೇಲ್ ಕಾಟ್ಜ್ ಅವರು, ಇಸ್ರೇಲಿಗಳು ಸುರಕ್ಷಿತವಾಗಿ ದೇಶದಿಂದ ಹೊರಗೆ ಬರಲು ನೆರವಾಗುವಂತೆ ನೆದರ್ಲೆಂಡ್ಸ್ ಸಚಿವರ ನೆರವು ಕೋರಿದ್ದಾರೆ.

ಆಮ್‌ಸ್ಟರ್‌ಡ್ಯಾಮ್ ಪ್ರಕರಣವನ್ನು 'ಅತ್ಯಂತ ಹಿಂಸಾತ್ಮಕ ದಾಳಿ' ಎಂದು ಖಂಡಿಸಿರುವ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು, ತಮ್ಮ ನಾಗರಿಕರ ನೆರವಿಗೆ ತಕ್ಷಣವೇ ಎರಡು ಸೇನಾ ವಿಮಾನಗಳನ್ನು ಕಳುಹಿಸಲು ನಿರ್ದೇಶನ ನೀಡಿದ್ದಾರೆ.

ನೆದರ್ಲೆಂಡ್ಸ್ ಸರಕಾರದ ಸಹಕಾರದೊಂದಿಗೆ ರಕ್ಷಣಾ ಕಾರ್ಯಾಚರಣೆಗೆ ಸಿದ್ಧತೆ ನಡೆಸುತ್ತಿರುವುದಾಗಿ ಇಸ್ರೇಲ್ ಸೇನೆ ಶುಕ್ರವಾರ ತಿಳಿಸಿದೆ.

ರಣಜಿ: ಕರ್ನಾಟಕಕ್ಕೆ ಮೊದಲ ಇನ್ನಿಂಗ್ಸ್‌ನಲ್ಲಿ ಹಿನ್ನಡೆ

ಬೆಂಗಳೂರು: ಇಲ್ಲಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬಂಗಾಳ ವಿರುದ್ಧ ನಡೆಯುತ್ತಿರುವ ರಣಜಿ ಟ್ರೋಫಿ ಪಂದ್ಯದಲ್ಲಿ ಕರ್ನಾಟಕ ಮೊದಲ ಇನ್ನಿಂಗ್ಸ್‌ನಲ್ಲಿ 221 ರನ್‌ಗಳಿಗೆ ಆಲೌಟ್ ಆಗಿದೆ.

ಇದರೊಂದಿಗೆ ಮೊದಲ ಇನಿಂಗ್ಸ್‌ನಲ್ಲಿ 80 ರನ್‌ಗಳ ಹಿನ್ನಡೆ ಅನುಭವಿಸಿದೆ.

ಎರಡನೇ ದಿನದ ಅಂತ್ಯಕ್ಕೆ ಕರ್ನಾಟಕ ಐದು ವಿಕೆಟ್ ನಷ್ಟಕ್ಕೆ 155 ರನ್ ಗಳಿಸಿ ಸಂಕಷ್ಟದಲ್ಲಿತ್ತು. ಮೂರನೇ ದಿನದಾಟದಲ್ಲೂ ಬಂಗಾಳದ ಬೌಲರ್‌ಗಳು ಮೇಲುಗೈ ಸಾಧಿಸಿದರು.

ದಿಟ್ಟ ಹೋರಾಟ ತೋರಿದ ಅಭಿನವ್ ಮನೋಹರ್ ಗರಿಷ್ಠ 55 ರನ್ ಗಳಿಸಿದರು. ಇನ್ನುಳಿದಂತೆ ಶ್ರೇಯಸ್ ಗೋಪಾಲ್ 28, ವಿದ್ಯಾಧರ್ ಪಾಟೀಲ್ 33 ರನ್ ಗಳಿಸಿ ಔಟ್ ಆದರು.ಬಂಗಾಳದ ಪರ ಇಶಾನ್ ಪೊರೆಲ್ ನಾಲ್ಕು, ಸೂರಜ್ ಸಿಂಧು ಜೈಸ್ವಾಲ್ ಮೂರು ಮತ್ತು ರಿಷಭ್ ವಿವೇಕ್ ಎರಡು ವಿಕೆಟ್ ಗಳಿಸಿ ಮಿಂಚಿದರು.

ಬಂಗಾಳ ತಂಡದ ನಾಯಕ ಅನುಸ್ಟುಪ್ ಮಜುಂದಾರ್ ಶತಕದ (101) ನೆರವಿನಿಂದ ಬಂಗಾಳ ಮೊದಲ ಇನ್ನಿಂಗ್ಸ್‌ನಲ್ಲಿ 301 ರನ್ ಗಳಿಸಿತ್ತು. ಕರ್ನಾಟಕದ ಪರ ವಿ. ಕೌಶಿಕ್ ಐದು ವಿಕೆಟ್ ಗಳಿಸಿದರು.

ಎಲೈಟ್ 'ಸಿ' ಗುಂಪಿನಲ್ಲಿ ಕರ್ನಾಟಕ ಈವರೆಗೆ ಮೂರು ಪಂದ್ಯಗಳಲ್ಲಿ ಒಂದು ಗೆಲುವು ಎರಡು ಡ್ರಾ ಫಲಿತಾಂಶದೊಂದಿಗೆ ಒಟ್ಟು ಎಂಟು ಅಂಕದೊಂದಿಗೆ ಮೂರನೇ ಸ್ಥಾನದಲ್ಲಿದೆ.

ವಿಟಾಕೀಸ್

ಆಸ್ಕರ್ ಅಂಗಳದಲ್ಲಿ ಸೂರ್ಯಕಾಂತಿ ಹೂ

ಮುಂದೆ ಒಳ್ಳೆಯ ಸಿನಿಮಾ ನಿರ್ದೇಶನ ಮಾಡುವ ಹಂಬಲವಿದೆ. ಅದಕ್ಕಾಗಿ ಕಥೆಯೂ ಸಿದ್ಧವಾಗಿದ್ದು, ಶೀಘ್ರದಲ್ಲಿ ಸಿನಿಮಾವೂ ಸೆಟ್ಟೇರಲಿದೆ.

ಕನ್ನಡದ ಜಾನಪದ ಕಥೆಯನ್ನು ಆಧರಿಸಿ ಸಿದ್ಧವಾದ ಸೂರ್ಯಕಾಂತಿ ಹೂಗೆ ಮೊದಲು ಗೊತ್ತಾಗಿದ್ದು ಕಿರುಚಿತ್ರ, ಈಗಾಗಲೇ ಪ್ರತಿಷ್ಠಿತ ಕಾನ್ ಫೆಸ್ಟಿವಲ್‌ನಲ್ಲಿ ಪ್ರಶಸ್ತಿ ಪಡೆದಿದೆ. ಈಗ ಆಸ್ಕರ್ ಪ್ರಶಸ್ತಿಯ ಸುತ್ತಿಗೂ ಅರ್ಹತೆ ಪಡೆದಿದ್ದೂ ಇದು ಕನ್ನಡಕ್ಕೆ ಹೆಮ್ಮೆ ತಂದಿದೆ. ತಮ್ಮ ಕಿರುಚಿತ್ರದ ಕುರಿತಂತೆ ನಿರ್ದೇಶಕ ಚಿದಾನಂದ್ ನಾಯಕ್ ವಿ.ಸಿನಿಮಾಸ್ ನೊಂದಿಗೆ ಮಾತನಾಡಿದ್ದಾರೆ.

ವಿ.ಸಿನಿಮಾಸ್ : ಕಿರುಚಿತ್ರದ ಶೀರ್ಷಿಕೆಯೇ ವಿಶೇಷವಾಗಿದೆಯಲ್ಲ ?

ಚಿದಾನಂದ್ ನಾಯಕ್: ಇದು ಅಜ್ಜಿ ಮತ್ತು ಕೋಳಿ ಹುಂಜದ ಜಾನಪದ ಕಥೆಯನ್ನು ಆಧರಿಸಿದೆ. ಈ ಕಥೆಗೆ ಕಾಲಘಟ್ಟದ ಎಲ್ಲೆ ಇಲ್ಲ, ಎಲ್ಲಾ ಸಮಯಕ್ಕೂ ಹೊಂದುವ ಕಥೆಯಿದು. ಹಿಂದೆ ನಮ್ಮ ಹಿರಿಯರು ಹೇಳಿದ ಕಥೆಯನ್ನು ಪ್ರಸ್ತುತ ಸಂದರ್ಭಕ್ಕೆ ಹೊಂದುವಂತೆ ಕಟ್ಟಿಕೊಡಲಾಗಿದೆ.

ವಿ.ಸಿ : ಜಾನಪದ ಕಥೆಯನ್ನು ಆಯ್ದುಕೊಳ್ಳಲು ಕಾರಣ ?

ಚಿದಾನಂದ್ : ಎಫ್‌ಟಿಐನಲ್ಲಿ ತರಬೇತಿ ಪಡೆಯುತ್ತಿದ್ದೆ, ಆ ವೇಳೆ ಕಿರುಚಿತ್ರ ನಿರ್ದೇಶಿಸಬೇಕು ಎಂದಾಗ ಹೊಳೆದಿದ್ದೆ ಅಜ್ಜಿಯ ಕಥೆ. ಜಾನಪದ ಸೊಗಡಿನ ಈ ಸ್ಟೋರಿ ಹಳತಾದರೂ ಅದರಲ್ಲಿ ಸಂದೇಶ ಮತ್ತು ವಿಚಾರ ಎಲ್ಲಾ ಕಾಲಕ್ಕೂ ಪ್ರಸ್ತುತ. ಹಾಗಾಗಿ ಇದೇ ಜಾನಪದ ಕಥೆಯನ್ನು ಆಯ್ದುಕೊಂಡೆ. ಎಲ್ಲರಿಗೂ ಇಷ್ಟವಾಗುವಂತೆ ಚಿತ್ರಕಥೆ ಹೆಣೆದು ನಿರ್ದೇಶನ ಮಾಡಿದ್ದೇನೆ, ನಮ್ಮ ಶ್ರಮಕ್ಕೆ ಪ್ರತಿಷ್ಠಿತ ಕಾನ್ ಪ್ರಶಸ್ತಿಯೂ ಲಭಿಸಿದೆ. ಜತೆಗೆ ಆಸ್ಕರ್ ಪ್ರಶಸ್ತಿಯ ಸುತ್ತಿಗೂ ಅರ್ಹತೆ ಪಡೆದಿರುವುದು ಹೆಮ್ಮೆ ತರಿಸಿದೆ.

ವಿ.ಸಿ : ಕಲಾವಿದರ ಬಳಗದ ಬಗ್ಗೆ?

ಚಿದಾನಂದ್ : ಇಲ್ಲಿ ಅಜ್ಜಿ, ಮಗ, ಮೊಮ್ಮಗನ ಪಾತ್ರಗಳು ಪ್ರಮುಖವಾಗಿ ಸಾಗುತ್ತವೆ. ಅಂತೆಯೇ ಇತರ ಪಾತ್ರಗಳು ಕಥೆಗೆ ಪೂರಕವಾಗಿವೆ. ಚಿತ್ರಕಥೆ ಬರೆಯುವಾಗಲೇ ಯಾರು ಈ ಕಿರುಚಿತ್ರದಲ್ಲಿ ನಟಿಸಿದರೆ ಚೆನ್ನಾಗಿರುತ್ತದೆ ಎನ್ನಿಸಿತು. ಆಗ ನಟ ಜಹಾಂಗೀರ್ ನೆನಪಾದರು. ಅವರು ನಟಿಸಲು ಸಂತಸದಿಂದಲೇ ನಟಿಸಲು ಸಮ್ಮತಿಸಿದರು. ಅಜ್ಜಿಯಾಗಿ ಹಿರಿಯ ನಟಿ ವಸುಧಾ, ಮಗನ ಪಾತ್ರದಲ್ಲಿ ಜಹಾಂಗೀರ್ ಹಾಗೂ ಮೊಮ್ಮಗನ ಪಾತ್ರದಲ್ಲಿ ವಿಶ್ವ ನಟಿಸಿದ್ದಾರೆ.

ವಿ.ಸಿ : ವೈದ್ಯ ವೃತ್ತಿಯಿಂದ ನಿರ್ದೇಶನದತ್ತ ಒಲವು ತಾಳಿದ್ದು?

ಚಿದಾನಂದ್ : ವಿದ್ಯಾರ್ಥಿಯಾಗಿದ್ದಾಗಿನಿಂದಲೂ ನನಗೆ ಸಿನಿಮಾ ಪ್ರೀತಿ ಇತ್ತು. ಆಗ ನಿರ್ದೇಶಕರ ಕಲ್ಪನೆಯೇ ನನಗಿರಲಿಲ್ಲ, ತೆರೆಯಲ್ಲಿ ಕಾಣುವ ಕಲಾವಿದರಷ್ಟೇ ನನ್ನ ಮನದಲ್ಲಿ ಉಳಿಯುತ್ತಿದ್ದರು. ಆ ಬಳಿಕ ಒಂದಷ್ಟು ಸಂದರ್ಶಗಳನ್ನು ನೋಡುತ್ತಾ, ಸಿನಿಮಾಗಳ ಹಿಂದೆ ನಿರ್ದೇಶಕರ ಶ್ರಮವಿದೆ ಎಂದು ತಿಳಿಯಿತು. ನಾನು ಯಾಕೆ ಒಳ್ಳೆಯ ಸಿನಿಮಾವನ್ನು ನಿರ್ದೇಶನ ಮಾಡಬಾರದು ಎಂದುಕೊಂಡೆ. ಇದರ ಜತೆಗೆ ವೈದ್ಯನಾಗಿ ಸೇವೆ ಸಲ್ಲಿಸುತ್ತಿರುವಾಗ ರೋಗಿಗಳು ಅವರ ಸಂಬಂಧಿಕರ ಎಮೋಷನ್ಸ್ ಅರ್ಥವಾಗುತ್ತಿತ್ತು. ಹಾಗಾಗಿ ಎಮೋಷನ್ಸ್ ಸೆಂಟಿಮೆಂಟ್ ಬೆರೆತ ಚಿತ್ರವನ್ನು ನಿರ್ದೇಶನ ಮಾಡಬೇಕು ಎಂಬ ಆಸೆಯಿತ್ತು. ಎಫ್‌ಟಿಐ ಸೇರಿದ ಮೇಲೆ ನಿರ್ದೇಶನದ ಕನಸು ನನಸಾಯಿತು.

ಜೂನ್‌ನಲ್ಲಿ ಥಗ್ ಲೈಫ್ ರಿಲೀಸ್

ಖ್ಯಾತ ನಿರ್ದೇಶಕ ಮಣಿರತ್ನಂ ಮತ್ತು ಕಮಲ್ ಹಾಸನ್ ಮೂವತ್ತೇಳು ವರ್ಷಗಳ ಬಳಿಕ ಒಂದಾಗಿದ್ದು, ಅದ್ದೂರಿ ಸಿನಿಮಾವನ್ನು ಸಿನಿಪ್ರಿಯರಿಗೆ ನೀಡಲಿದ್ದಾರೆ. ಥಗ್ ಲೈಫ್ ಶೀರ್ಷಿಕೆಯಲ್ಲಿ ಸಿನಿಮಾ ಮೂಡಿಬರುತ್ತಿದ್ದು, ಸದ್ಯ ಬಿಡುಗಡೆಗೂ ಸಿದ್ಧವಾಗಿದೆ. ಪೋಸ್ಟರ್, ಟೀಸರ್ ಮೂಲಕ ನಿರೀಕ್ಷೆ ದುಪ್ಪಟ್ಟು ಮಾಡಿದ್ದ ಥಗ್ ಆಫ್ ಲೈಫ್ ಮುಂದಿನ ವರ್ಷದ ಜೂನ್ 5ರಂದು ವಿಶ್ವಾದ್ಯಂತ ಬಿಡುಗಡೆಯಾಗಲಿದೆ. ಕಮಲ್ ಹಾಸನ್ ಅವರ ಹುಟ್ಟುಹಬ್ಬದ ಸಂಭ್ರಮದಲ್ಲಿ ರಿಲೀಸ್ ದಿನಾಂಕವನ್ನು ಘೋಷಿಸಲಾಗಿದೆ. ಸಿಲಂಬರಸನ್, ತ್ರಿಷಾ, ಅಶೋಕ್ ಸೆಲ್ವನ್, ಐಶ್ವರ್ಯಾ ಲಕ್ಷ್ಮಿ, ಜೋಜು ಜಾರ್ಜ್, ಅಭಿರಾಮಿ, ನಾಸರ್ ಹೀಗೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿದೆ. ಈ ಚಿತ್ರದ ಕಥೆ ಹಾಗೂ ಚಿತ್ರಕಥೆಯನ್ನು ಮಣಿರತ್ನಂ ಮತ್ತು ಕಮಲ್ ಹಾಸನ್ ಬರೆದಿದ್ದು, ಮಣಿರತ್ನಂ ನಿರ್ದೇಶನ ಮಾಡಿದ್ದಾರೆ. ದಿಗ್ಗಜರ ಬಹು ನಿರೀಕ್ಷಿತ ಚಿತ್ರಕ್ಕೆ ಎ.ಆರ್.ರೆಹಮಾನ್ ಸಂಗೀತ ಸಂಯೋಜಿಸಿದ್ದಾರೆ. ರವಿ ಆರ್ ಚಂದ್ರನ್ ಛಾಯಾಗ್ರಹಣ ಈ ಚಿತ್ರಕ್ಕಿದೆ. ರಾಜ್ ಕಮಲ್ ಫಿಲಂಸ್ ಇಂಟರ್ ನ್ಯಾಷನಲ್ ಮತ್ತು ಮದ್ರಾಸ್ ಟಾಕೀಸ್ ಬ್ಯಾನರ್‌ನಲ್ಲಿ ಈ ಚಿತ್ರ ಅದ್ದೂರಿಯಾಗಿ ನಿರ್ಮಾಣವಾಗಿದೆ.

ಹೊಂಬಾಳೆಯ ಹ್ಯಾಟ್ರಿಕ್ ಸಿನಿಮಾ

> ಹೊಂಬಾಳೆ ಫಿಲಂಸ್ ಮೂಲಕ ನಾವು ಅದ್ಭುತ ಕಥೆಯ ಸಿನಿಮಾಗಳನ್ನು ನಿರ್ಮಿಸಲು ಸಿದ್ಧವಾಗಿದ್ದೇವೆ. ಸಲಾರ್ ಜತೆಗೆ ಪ್ರಭಾಸ್ ಅವರೊಂದಿಗೆ ಮತ್ತೆರಡು ಸಿನಿಮಾಗಳನ್ನು ನಿರ್ಮಿಸಲು ಉತ್ಸುಕರಾಗಿದ್ದೇವೆ. ನಮ್ಮ ಸಂಸ್ಥೆಯ ಬ್ಯಾನರ್‌ನಲ್ಲಿ ಪ್ರಭಾಸ್ ನಟಿಸಲಿರುವ ಮುಂದಿನ ಮೂರು ಸಿನಿಮಾಗಳು ಅದ್ದೂರಿಯಾಗಿ ಮೂಡಿಬರಲಿವೆ.
>
> -ವಿಜಯ್ ಕಿರಗಂದೂರು
> ನಿರ್ಮಾಪಕ

ರಾಜಕುಮಾರ, ಕೆಜಿಎಫ್, ಕಾಂತಾರದಂತಹ ಸಾಲು ಸಾಲು ಹಿಟ್ ಸಿನಿಮಾಗಳನ್ನು ನಿರ್ಮಿಸಿರುವ ಹೊಂಬಾಳೆ ಫಿಲಂಸ್, ಪರಭಾಷೆ ಸಿನಿಮಾಗಳಿಗೂ ಬಂಡವಾಳ ಹೂಡುವ ಮೂಲಕ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದೆ. ಹೊಂಬಾಳೆ ಫಿಲಂಸ್, ಕಾಂತಾರ ಮೂಲಕ ರಾಷ್ಟ್ರ ಪ್ರಸ್ತಿಯನ್ನೂ ಮುಡಿಗೇರಿಸಿಕೊಂಡಿದೆ. ಇದೀಗ ಮತ್ತೊಂದು ಮಹೋನ್ನತ ಸಿನಿಮಾ ಬಗ್ಗೆ ದೊಡ್ಡ ಅಪ್‌ಡೇಟ್ ನೀಡಿದ್ದಾರೆ ಹೊಂಬಾಳೆ ಫಿಲಂಸ್‌ನ ವಿಜಯ್ ಕಿರಗಂದೂರು. ಹೌದು ಪ್ರಭಾಸ್ ನಟನೆಯ ಹ್ಯಾಟ್ರಿಕ್ ಸಿನಿಮಾಗಳನ್ನು ನಿರ್ಮಿಸುವ ಬಗ್ಗೆ ಘೋಷಣೆ ಮಾಡಿದೆ. ಸಲಾರ್ ಪಾರ್ಟ್ 2 ಸೇರಿದಂತೆ ಒಟ್ಟು ಮೂರು ಸಿನಿಮಾಗಳನ್ನು ನಿರ್ಮಾಣ ಮಾಡಲು ತಯಾರಿ ನಡೆಸಿದೆ. ಈಗಾಗಲೇ ಸಲಾರ್ 1 ಬಿಡುಗಡೆ ಆಗಿದೆ. ಸಲಾರ್ ಪಾರ್ಟ್ 2 ಕೆಲಸಗಳು ಭರದಿಂದ ಸಾಗಿವೆ. ಈಗ ಇದೇ ಪ್ರಭಾಸ್ ಜತೆಗೆ ಇನ್ನೂ ಎರಡು ಸಿನಿಮಾ ಮಾಡಲು ಹೊಂಬಾಳೆ ನಿರ್ಧರಿಸಿದೆ. ಆ ಮೂಲಕ ದೊಡ್ಡ ಪರದೆಯ ಮೇಲೆ ಅಷ್ಟೇ ದೊಡ್ಡ ಸದ್ದು ಮಾಡಲು ಈ ಜೋಡಿ ಮತ್ತೆ ಸಿದ್ಧವಾಗಿದೆ. ಬಹುಕೋಟಿ ಬಜೆಟ್‌ನಲ್ಲಿ ಈ ಸಿನಿಮಾಗಳು ನಿರ್ಮಾಣವಾಗಲಿವೆ.

ಭಾರತೀಯ ಚಿತ್ರರಂಗದಲ್ಲಿ ಬೇಡಿಕೆ ನಟರಾಗಿರುವ ಪ್ರಭಾಸ್, ಸಲಾರ್ 2, ರಾಜಾ ಸಾಬ್, ಸ್ಪಿರಿಟ್, ಕಲ್ಕಿ 2 ಮತ್ತು ಫೌಜಿ ಸೇರಿದಂತೆ ಹಲವು ಸಿನಿಮಾಗಳಲ್ಲಿ ಬ್ಯುಸಿಯಾಗಿದ್ದಾರೆ. ಹೀಗಿರುವಾಗಲೇ ಇದೇ ಲಿಸ್ಟ್‌ಗೆ ಇನ್ನೂ ಎರಡು ಸಿನಿಮಾಗಳು ಸೇರ್ಪಡೆಯಾಗಲಿವೆ.



ವಿದ್ಯಾಪತಿಯ ಕಿತಾಪತಿ

ಡಾಲಿ ಧನಂಜಯ್ ನಿರ್ಮಾಣದ ವಿದ್ಯಾಪತಿ ಸಿನಿಮಾ ಬಿಡುಗಡೆಗೂ ಮೊದಲೇ ನಿರೀಕ್ಷೆ ಹೆಚ್ಚಿಸಿದೆ. ಟೀಸರ್, ಮೇಕಿಂಗ್‌ನಿಂದಲೇ ಗಮನಸೆಳೆದಿರುವ ಈ ಚಿತ್ರದ ಮೊದಲ ಹಾಡು ಬಿಡುಗಡೆಯಾಗಿದೆ. ಕರಾಟೆ ತರಗತಿಯಲ್ಲಿ ವಿದ್ಯಾಪತಿಯ ತಲೆಹರಟೆಯ ಹಾಡಿಗೆ ನವರಸ ನಾಯಕ ಜಗ್ಗೇಶ್ ದನಿಯಾಗಿದ್ದಾರೆ. ಅಯ್ಯೋ ವಿಧಿಯೇ... ಎಂದು ಶುರುವಾಗುವ ಹಾಡಿಗೆ ಸುಜಿತ್ ವೆಂಕಟರಾಮಯ್ಯ ಸಾಹಿತ್ಯ ರಚಿಸಿದ್ದು, ದಾಸ್ಮೋಡ್ ಸಂಗೀತ ಸಂಯೋಜಿಸಿದ್ದಾರೆ. ಈ ಗೀತೆಯಲ್ಲಿ ರಂಗಾಯಣ ರಘು ಕೂಡ ಹೆಜ್ಜೆ ಹಾಕಿರುವುದು ವಿಶೇಷ. ಟಗರು ಪಲ್ಯ ಪ್ರೇಕ್ಷಕರನ್ನು ರಂಜಿಸಿದ್ದ ನಾಗಭೂಷಣ್ ಈ ಚಿತ್ರದಲ್ಲಿ ನಾಯಕನಾಗಿ ನಟಿಸಿದ್ದಾರೆ. ಕರಾಟೆ ಕಿಂಗ್ ಗೆಟಪ್‌ನಲ್ಲಿ ನಾಗಭೂಷಣ್ ಕಾಣಿಸಿಕೊಳ್ಳುತ್ತಿದ್ದು, ಹಿರಿಯ ನಟ ರಂಗಾಯಣ ರಘು ಕರಾಟೆ ಮಾಸ್ಟರ್ ಆಗಿ ಅಭಿನಯಿಸಿದ್ದಾರೆ. ಕಿರುತೆರೆ ಬೆಡಗಿ ಮಲೈಕಾ ವಸೂಪಾಲ್ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಈ ಹಿಂದೆ ಇಕ್ಕಟ್ ಸಿನಿಮಾ ಮೂಲಕ ಭರವಸೆ ಮೂಡಿಸಿದ್ದ ಇಶಾಂ ಮತ್ತು ಹಸೀಂ ಖಾನ್, ಚಿತ್ರದ ಕಥೆ, ಚಿತ್ರಕಥೆ ಬರೆದು ವಿದ್ಯಾಪತಿ ಸಿನಿಮಾವನ್ನು ನಿರ್ದೇಶಿಸಿದ್ದಾರೆ. ಜತೆಗೆ ಸಂಕಲನದ ಜವಾಬ್ದಾರಿಯನ್ನೂ ತಾವೇ ಹೊತ್ತುಕೊಂಡಿದ್ದಾರೆ. ಲವಿತ್ ಛಾಯಾಗ್ರಹಣ, ದಾಸ್ಮೋಡ್ ಸಂಗೀತ ನಿರ್ದೇಶನ, ಮುರುಳಿ ನೃತ್ಯ ನಿರ್ದೇಶನ, ಸುಜಿತ್ ವೆಂಕಟರಾಮಯ್ಯ ಸಾಹಿತ್ಯ, ಅರ್ಜುನ್ ಸಾಹಸ ನಿರ್ದೇಶನ ವಿದ್ಯಾಪತಿ ಸಿನಿಮಾಗಿದೆ.